ಬುಧವಾರ, ಸೆಪ್ಟೆಂಬರ್ 10, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 251 | ಪುಟ 16

prajavani.net prajavani ● www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಭಿಲಾಷ್‌ಗೆ ಐದು ವಿಕೆಟ್

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ ಮಧ್ಯಪ್ರದೇಶದ ಎದುರು ಐದು ವಿಕೆಟ್ ಗಳಿಸಿದ ಕೆಎಸ್‌ಸಿಎ ಇಲೆವನ್ ತಂಡದ ಅಭಿಲಾಷ್

ಕೋರ್ಟ್ ಮೆಟ್ಟಿಲೇರಿದ ಐಶ್ವರ್ಯ

ಎಐ ಆಧಾರಿತ ಅಶ್ಲೀಲ ದೃಶ್ಯಗಳಲ್ಲಿ ತಮ್ಮ ಫೋಟೊ ಬಳಸುತ್ತಿರುವುದಕ್ಕೆ ಕಡಿವಾಣ ಹಾಕುವಂತೆ ಕೋರಿ ನಟಿ ಐಶ್ವರ್ಯ ರೈ ಅವರು ಮಂಗಳವಾರ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ

ಸೆನ್ಸೆಕ್ಸ್ 81,101 | ನಿಫ್ಟಿ 24,868 | $/₹ 88.15 | ಚಿನ್ನ (Std. 10g) ₹1,14,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,32,700 (ಬೆಂಗಳೂರು)

ನೇಪಾಳ ನಿಗಿ ಕೆಂಡ, ಓಲಿ ತಲೆದಂಡ

‘ಜೆನ್–ಝಿ’ ಪಡೆಯ ಪ್ರತಿಭಟನೆ ತೀವ್ರ

● ರಾಜಕೀಯ ನಾಯಕರ ಮನೆಗಳು ಧ್ವಂಸ

ಬೇಡಿಕೆಗಳೇನು?

- ರಾಷ್ಟ್ರೀಯ ಸರ್ಕಾರ ರಚಿಸಬೇಕು
- ಭ್ರಷ್ಟ ರಾಜಕಾರಣಿಗಳ ವಿರುದ್ಧ ಕ್ರಮ ಜರುಗಿಸಬೇಕು
- ಅಭಿವ್ಯಕ್ತಿ ಸ್ವಾತಂತ್ರ್ಯ ಖಾತ್ರಿಪಡಿಸಬೇಕು
- ರಾಜಕೀಯ ಹುದ್ದೆಗಳಲ್ಲಿ ಇರುವವರಿಗೂ ನಿವೃತ್ತಿ ವಯಸ್ಸು ನಿಗದಿ ಮಾಡಿ, ಜಾರಿಗೊಳಿಸಬೇಕು

ಕಠ್ಮಂಡು (ಪಿಟಿಐ/ಎಎಫ್‌ಪಿ): ದೇಶದಲ್ಲಿ ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಿದ ಕ್ರಮ ವಿರೋಧಿಸಿ ಹಾಗೂ ಭ್ರಷ್ಟಾಚಾರ ತಡೆಯುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ದೇಶವ್ಯಾಪಿ ನಡೆಯುತ್ತಿರುವ ಪ್ರತಿಭಟನೆಗಳು ತೀವ್ರ ಸ್ವರೂಪ ಪಡೆದ ಬೆನ್ನಲ್ಲೇ ನೇಪಾಳ ಪ್ರಧಾನಿ ಕೆ.ಪಿ.ಶರ್ಮಾ ಓಲಿ ಮಂಗಳವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

‘ಪೊಲೀಸರು ಕೈಗೊಂಡ ಕ್ರಮದಿಂದಾಗಿ ಸೋಮವಾರ 19 ಪ್ರತಿಭಟನಕಾರರು ಮೃತಪಟ್ಟ ಕಾರಣಕ್ಕೆ ಓಲಿ ಅವರು ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿ ಸಾವಿರಾರು ಪ್ರತಿಭಟನಕಾರರು ಅವರ ನಿವಾಸಕ್ಕೆ ನುಗ್ಗಿ, ಘೋಷಣೆಗಳನ್ನೂ ಹಾಕಿದರು. ಇದಾದ ಸ್ವಲ್ಪ ಹೊತ್ತಿನ ಬಳಿಕ ಓಲಿ ಅವರು ತಮ್ಮ ರಾಜೀನಾಮೆ ಘೋಷಿಸಿದರು.

ಪ್ರಧಾನಿ ಓಲಿ ಅವರು ರಾಜೀನಾಮೆ ನೀಡುವುದಕ್ಕೂ ಮುನ್ನ, ಬಾಲ್ಕೋಟ್‌ನಲ್ಲಿರುವ ಅವರ ಖಾಸಗಿ ನಿವಾಸಕ್ಕೆ ನುಗ್ಗಿದ ಪ್ರತಿಭಟನಕಾರರು, ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ನಿಷೇಧಾಜ್ಞೆ ಉಲ್ಲಂಘಿಸಿ, ಭಾರಿ ಭದ್ರತೆ ಏರ್ಪಡಿಸಿದ್ದ ಭದ್ರತಾ ಪಡೆಗಳ ಬೇಲಿಯನ್ನು ಭೇದಿಸಿದ ಪ್ರತಿಭಟನಕಾರರು, ಪ್ರಮುಖ ರಾಜಕಾರಣಿಗಳ ಮನೆಗಳು, ರಾಜಕೀಯ ಪಕ್ಷಗಳ ಕಚೇರಿಗಳು ಸೇರಿ ವಿವಿಧ ಕಟ್ಟಡಗಳಿಗೆ ಬೆಂಕಿ ಹಚ್ಚಿದರು. ಮಾಜಿ ಪ್ರಧಾನಿ ಪುಷ್ಪ ಕಮಲ್ ದಹಲ್, ಸಂವಹನ ಸಚಿವ ಪೃಥ್ವಿ ಸುಬ್ಬ ಗುರುಂಗ, ಮಾಜಿ ಗೃಹ ಸಚಿವ ರಮೇಶ್ ಲೇಖಕ್ ಅವರ ಮನೆಗಳನ್ನು ಧ್ವಂಸ ಮಾಡಿದರು.

▶12

ಕಠ್ಮಂಡುವಿನಲ್ಲಿ ಪ್ರತಿಭಟನಕಾರರು ಸಂಸತ್ ಭವನಕ್ಕೆ ನುಗ್ಗಿ, ಕಟ್ಟಡಕ್ಕೆ ಬೆಂಕಿ ಹಚ್ಚಿದ ನಂತರ ಹೊಗೆ ದಟ್ಟೈಸಿತ್ತು ಪಿಟಿಐ ಚಿತ್ರ

‘ಸಂಸತ್ ಭವನಕ್ಕೆ ಬೆಂಕಿ’

‘ಪ್ರತಿಭಟನಕಾರರು ಸಂಸತ್ ಭವನಕ್ಕೆ ನುಗ್ಗಿ, ಕಟ್ಟಡಕ್ಕೆ ಬೆಂಕಿ ಹಚ್ಚಿದ್ದಾರೆ’ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಸರ್ಕಾರ ವಿರೋಧಿ ಪ್ರತಿಭಟನೆ ಬಳಿಕ ಓಲಿ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ನಂತರ ಈ ಬೆಳವಣಿಗೆ ನಡೆದಿದೆ ಎಂದು ಸಚಿವಾಲಯದ ವಕ್ತಾರ ಏಕರಾಮ್ ಗಿರಿ ಹೇಳಿದ್ದಾರೆ.

‘ನೂರಾರು ಪ್ರತಿಭಟನಕಾರರು ಸಂಸತ್ ಭವನದೊಳಗೆ ನುಗ್ಗಿದರಲ್ಲದೇ, ಮುಖ್ಯ ಕಟ್ಟಡಕ್ಕೆ ಬೆಂಕಿ ಹಚ್ಚಿದರು’ ಎಂದು ಗಿರಿ ತಿಳಿಸಿದ್ದಾರೆ.

ಗಡಿಯಲ್ಲಿ ಭಾರಿ ಭದ್ರತೆ

ಬಲರಾಮಪುರ (ಉತ್ತರ ಪ್ರದೇಶ): ನೇಪಾಳದಲ್ಲಿನ ಅಸ್ಥಿರತೆ ಕಾರಣದಿಂದ ನೆರೆಯ ರಾಷ್ಟ್ರಕ್ಕೆ ಹೊಂದಿಕೊಂಡಿರುವ ಗಡಿ ಉದ್ದಕ್ಕೂ ಭದ್ರತೆಯನ್ನು ಹೆಚ್ಚಿಸಲಾಗಿದೆ.

ನೇಪಾಳವು ಭಾರತದೊಂದಿಗೆ 1,751 ಕಿ.ಮೀ ಗಡಿ ಹಂಚಿಕೊಂಡಿದ್ದು, ಇದಕ್ಕೆ ಯಾವುದೇ ಬೇಲಿ ಅಳವಡಿಸಲಾಗಿಲ್ಲ. ಈಗ, ಸಶಸ್ತ್ರ ಸೀಮಾ ಬಲ (ಎಸ್‌ಎಸ್‌ಬಿ) ಯೋಧರನ್ನು ಗಡಿಯಲ್ಲಿ ನಿಯೋಜಿಸಲಾಗಿದೆ.

‘ಎಸ್‌ಎಸ್‌ಬಿಯ 22 ಹೊರ ಠಾಣೆಗಳಲ್ಲಿ ಹೆಚ್ಚುವರಿ ಯೋಧರನ್ನು ನಿಯೋಜಿಸಲಾಗಿದೆ. ಗಡಿಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿನ ಐದು ಪೊಲೀಸ್ ಠಾಣೆಗಳ ಸಿಬ್ಬಂದಿ ಡ್ರೋನ್ ಬಳಸಿ, ಕಣ್ಗಾವಲು ಇರಿಸಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕಾಸ್ ಕುಮಾರ್ ಹೇಳಿದ್ದಾರೆ.

> **ಅಧಿಕಾರಸ್ಥ ರಾಜಕಾರಣಿಗಳು ಹೊಂದಿರುವ ಸ್ವತ್ತುಗಳ ಕುರಿತ ತನಿಖೆಗೆ ಭ್ರಷ್ಟಾಚಾರ ವಿರೋಧಿ ಸಂಸ್ಥೆ ಸ್ಥಾಪಿಸಿ, ಕಠಿಣ ಕ್ರಮ ಕೈಗೊಳ್ಳಬೇಕು**
> **ಅರ್ಜುನ್ ನರಸಿಂಗ್ ಕೆಸಿ**
> ನೇಪಾಳಿ ಕಾಂಗ್ರೆಸ್‌ನ ಹಿರಿಯ ನಾಯಕ

39 ಕನ್ನಡಿಗರನ್ನು ಕರೆತರಲು ಸೂಚನೆ

ಬೆಂಗಳೂರು: ನೇಪಾಳದ ಕಠ್ಮಂಡು ವಿಮಾನ ನಿಲ್ದಾಣದಲ್ಲಿ ಸಿಲುಕಿರುವ 39 ಮಂದಿ ಕನ್ನಡಿಗರನ್ನು ರಾಜ್ಯಕ್ಕೆ ಕರೆತರಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚನೆ ನೀಡಿದ್ದಾರೆ.

ನೇಪಾಳದಲ್ಲಿ ಯುವಜನ ಬೃಹತ್ ಪ್ರತಿಭಟನೆ ನಡೆಸುತ್ತಿರುವ ಕಾರಣ ನೇಪಾಳ ದೇಶದಲ್ಲಿ ಪ್ರಕ್ಷುಬ್ಧ ವಾತಾವರಣ ಸೃಷ್ಟಿಯಾಗಿದೆ. ನೇಪಾಳಕ್ಕೆ ಹೋಗಿದ್ದ ಕನ್ನಡಿಗರು ಕಠ್ಮಂಡು ವಿಮಾನ ನಿಲ್ದಾಣದಲ್ಲಿ ಸಿಲುಕಿದ್ದಾರೆ. ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ಮುಖ್ಯ ಕಾರ್ಯದರ್ಶಿ ಅವರು ಸಂಬಂಧಪಟ್ಟ ಅಧಿಕಾರಿಗಳ ಜತೆ ಚರ್ಚಿಸಿ ಅಗತ್ಯ ಕ್ರಮಕ್ಕೆ ಮುಂದಾಗಿದ್ದಾರೆ ಎಂದು ಸಚಿವಾಲಯದ ಮೂಲಗಳು ಹೇಳಿವೆ.

ಎನ್‌ಡಿಎಯ ರಾಧಾಕೃಷ್ಣನ್ ದೇಶದ 15ನೇ ಉಪರಾಷ್ಟ್ರಪತಿ

ನವದೆಹಲಿ (ಪಿಟಿಐ): ಜಗದೀಪ್ ಧನಕರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಉಪರಾಷ್ಟ್ರಪತಿ ಹುದ್ದೆಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಎನ್‌ಡಿಎ ಅಭ್ಯರ್ಥಿ ಸಿ.ಪಿ.ರಾಧಾಕೃಷ್ಣನ್ ಅವರು ನಿರೀಕ್ಷೆಯಂತೆ ಗೆಲುವು ಸಾಧಿಸಿದರು. ಅವರು, ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿ ಬಿ.ಸುದರ್ಶನ ರೆಡ್ಡಿ ಅವರಿಗಿಂತ 152 ಹೆಚ್ಚು ಮತಗಳನ್ನು ಪಡೆದು ದೇಶದ 15ನೇ ಉಪ ರಾಷ್ಟ್ರಪತಿಯಾಗಿ ಚುನಾಯಿತರಾದರು.

ಇಬ್ಬರೂ ಅಭ್ಯರ್ಥಿಗಳ ನಡುವೆ ಸ್ಪರ್ಧೆ ಇದ್ದರೂ ಎನ್‌ಡಿಎ ಮೈತ್ರಿಕೂಟದ ಬಳಿ ಬಹುಮತ ಇದ್ದ ಕಾರಣ ರಾಧಾಕೃಷ್ಣನ್ ಗೆಲುವು ಬಹುತೇಕ ಖಚಿತವಾಗಿತ್ತು.

ರಾಧಾಕೃಷ್ಣನ್ ಅವರ ಪರವಾಗಿ ಒಟ್ಟು 452 ಮತಗಳು ಚಲಾವಣೆಯಾಗಿದ್ದರೆ, ಪ್ರತಿಸ್ಪರ್ಧಿ ಸುದರ್ಶನ ರೆಡ್ಡಿ ಅವರಿಗೆ 300 ಮತಗಳು ಬಂದಿವೆ ಎಂದು ಚುನಾವಣಾ ಅಧಿಕಾರಿ ಪಿ.ಸಿ. ಮೋದಿ ಅವರು ಪ್ರಕಟಿಸಿದರು.

‘ಒಟ್ಟು 767 ಸಂಸದರು (ಶೇ 98.2) ಮತಚಲಾಯಿಸಿದ್ದು, ಅವುಗಳಲ್ಲಿ 752 ಮತಗಳು ಮಾನ್ಯಗೊಂಡಿವೆ ಮತ್ತು 15 ಮತಗಳು ಅಮಾನ್ಯಗೊಂಡಿವೆ. ಅಂಚೆ ಮತಪತ್ರ ಸಲ್ಲಿಸಿದ್ದ ಸಂಸದರೊಬ್ಬರು ‘ಅದನ್ನು ಪರಿಗಣಿಸಬೇಡಿ’ ಎಂದು ಆನಂತರ ಹೇಳಿದ್ದರಿಂದ ಅದನ್ನು ಪರಿಗಣಿಸಿಲ್ಲ’ ಎಂದು ಅವರು ವಿವರಿಸಿದರು.

‘ರಾಧಾಕೃಷ್ಣನ್ ಅವರು ಭಾರತದ ಉಪರಾಷ್ಟ್ರಪತಿ ಹುದ್ದೆಗೆ ಚುನಾಯಿತರಾಗಿದ್ದಾರೆ ಎಂದು ನಾನು ಪ್ರಕಟಿಸುತ್ತಿದ್ದೇನೆ. ಈ ಫಲಿತಾಂಶವನ್ನು ಚುನಾವಣಾ ಆಯೋಗದ ಜತೆ ಹಂಚಿಕೊಳ್ಳುತ್ತೇನೆ’ ಎಂದು ಅವರು ಹೇಳಿದರು.

ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಯಿತು. ಹೊಸ ಸಂಸತ್ ಭವನದಲ್ಲಿ ಸಂಸದರು ಸರಣಿಯಲ್ಲಿ ನಿಂತು ಮತಚಲಾಯಿಸಿದರು. ಮಧ್ಯಾಹ್ನ 3 ಗಂಟೆಯ ವೇಳೆಗೆ ಶೇ 96ರಷ್ಟು ಸದಸ್ಯರು ಮತದಾನ ಮಾಡಿದ್ದರು.

ಬಿಜೆಡಿ, ಬಿಆರ್‌ಎಸ್ ತಟಸ್ಥ: ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಬಿಜು ಜನತಾದಳ (ಬಿಜೆಡಿ), ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್), ಶಿರೋಮಣಿ ಅಕಾಲಿದಳ ಪಕ್ಷಗಳ ಸದಸ್ಯರು ಹಾಗೂ ಇಬ್ಬರು ಪಕ್ಷೇತರರು ಮತ ಚಲಾವಣೆಯಿಂದ ದೂರ ಉಳಿದು, ತಟಸ್ಥ ನಿಲುವು ತಾಳಿದರು. ಸಂಸತ್ತಿನಲ್ಲಿ ಬಿಜೆಡಿ ಏಳು, ಬಿಆರ್‌ಎಸ್ ನಾಲ್ಕು, ಅಕಾಲಿದಳ ಒಬ್ಬ ಸದಸ್ಯರನ್ನು ಹೊಂದಿವೆ.

ಬಿಜೆಡಿ, ಬಿಆರ್‌ಎಸ್, ಅಕಾಲಿದಳದ ಸದಸ್ಯರು ತಟಸ್ಥವಾಗಿ ಉಳಿಯುವ ಮೂಲಕ ಆಡಳಿತಾರೂಢ ಬಿಜೆಪಿಗೆ ಅನುಕೂಲವಾಗುವಂತೆ ಮಾಡಿದ್ದಾರೆ ಎಂದು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ವ್ಯಂಗ್ಯವಾಡಿದ್ದಾರೆ.

▶9

> **ಉಪರಾಷ್ಟ್ರಪತಿ ಆಗಿ ಆಯ್ಕೆಯಾದ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಅಭಿನಂದನೆಗಳು. ಸಾರ್ವಜನಿಕ ಜೀವನದಲ್ಲಿನ ನಿಮ್ಮ ದಶಕಗಳ ಅನುಭವವು ದೇಶದ ಪ್ರಗತಿಗೆ ಮಹತ್ವದ ಕಾಣಿಕೆ ನೀಡಲು ನೆರವಾಗಲಿ**
> **ದ್ರೌಪದಿ ಮುರ್ಮು**
> ರಾಷ್ಟ್ರಪತಿ

781	ಒಟ್ಟು ಮತದಾರರು
767	ಚಲಾವಣೆಯಾದ ಮತಗಳು
14	ಮತದಾನದಿಂದ ದೂರ ಉಳಿದವರು
752	ಮಾನ್ಯಗೊಂಡ ಮತಗಳು
15	ಅಮಾನ್ಯಗೊಂಡ ಮತಗಳು

ಎನ್‌ಡಿಎ ಅಭ್ಯರ್ಥಿ	ವಿಪಕ್ಷಗಳ ಅಭ್ಯರ್ಥಿ
452 ಸಿ.ಪಿ.ರಾಧಾಕೃಷ್ಣನ್ ಪಡೆದ ಮತಗಳು	ಬಿ. ಸುದರ್ಶನ ರೆಡ್ಡಿ ಪಡೆದ ಮತಗಳು 300

ಹುಲಿ ಹಿಡಿಯದ ಸಿಟ್ಟು ಸಿಬ್ಬಂದಿಗೇ ಬೋನು

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ‘ಹುಲಿ ಸೆರೆ ಹಿಡಿಯಲು ಸಿಬ್ಬಂದಿ ವಿಫಲರಾಗಿದ್ದಾರೆ’ ಎಂದು ಸಿಟ್ಟಿಗೆದ್ದ ತಾಲ್ಲೂಕಿನ ಬೊಮ್ಮಲಾಪುರ ಗ್ರಾಮದ ರೈತರು ಮಂಗಳವಾರ ಒಟ್ಟುಗೂಡಿ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನೇ ಬೋನಿನೊಳಗೆ ಕೂಡಿ ಹಾಕಿ ದಿಗ್ಬಂಧನ ವಿಧಿಸಿದರು.

‘ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದಂಚಿನ ಗ್ರಾಮಗಳಲ್ಲಿ ಹುಲಿಗಳ ಉಪಟಳ ಹೆಚ್ಚಾಗಿದೆ. ಸೆರೆ ಹಿಡಿಯಲು ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ಹೀಗಾಗಿ, ಅಧಿಕಾರಿಗಳನ್ನೇ ಬೋನಿನೊಳಗೆ ಕೂಡಿ ಹಾಕಿದ್ದೇವೆ’ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

‘ಬೊಮ್ಮಲಾಪುರದ ರೈತ ಗಂಗಪ್ಪನವರ ಜಮೀನಿನ ಸುತ್ತಮುತ್ತ ಹುಲಿ ಹಾಗೂ ಚಿರತೆಗಳ ಉಪಟಳ ಹೆಚ್ಚಾಗಿದೆ. ಜಾನುವಾರುಗಳನ್ನು ಕೊಂದಿವೆ. ರೈತರ ಒತ್ತಾಯಕ್ಕೆ ಮಣಿದು ಬೋನು ಇರಿಸಿದ ಅಧಿಕಾರಿಗಳು ಮತ್ತೆ ಈ ಕಡೆ ಸುಳಿದಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಮೂರು ದಿನಗಳ ಹಿಂದೆ ಹುಲಿ ದಾಳಿಗೆ ಕರುವೊಂದು ಸತ್ತಿದೆ. ಆಗಲೂ ಸಿಬ್ಬಂದಿ ಸ್ಥಳಕ್ಕೆ ಬಂದಿರಲಿಲ್ಲ’ ಎಂದು ರೈತರು ದೂರಿದರು.

▶5

ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ಅಭಯಾರಣ್ಯದಂಚಿನಲ್ಲಿರುವ ಬೊಮ್ಮಲಾಪುರದಲ್ಲಿ ಮಂಗಳವಾರ ಗ್ರಾಮಸ್ಥರು ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಬೋನಿನಲ್ಲಿ ಕೂಡಿಹಾಕಿದ್ದರು

‘ಕೈ’ ಶಾಸಕ ಸೈಲ್ ಬಂಧನ

ಅದಿರು ಕಳ್ಳತನ –ಅಕ್ರಮ ಸಾಗಣೆ ಪ್ರಕರಣದಲ್ಲಿ ಇ.ಡಿ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬಿಣದ ಅದಿರು ಕಳ್ಳತನ ಮತ್ತು ಅಕ್ರಮ ಸಾಗಣೆ ಪ್ರಕರಣದಲ್ಲಿ ಕಾರವಾರ–ಅಂಕೋಲಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬಂಧಿಸಿದ್ದಾರೆ.

ಸತೀಶ್ ಸೈಲ್

ಉತ್ತರ ಕನ್ನಡ ಜಿಲ್ಲೆಯ ಬೇಲೇಕೇರಿ ಬಂದರಿನಲ್ಲಿ ವಶಕ್ಕೆ ಪಡೆದು ಸಂಗ್ರಹಿಸಲಾಗಿದ್ದ ಸಾವಿರಾರು ಟನ್‌ಗಳಷ್ಟು ಕಬ್ಬಿಣದ ಅದಿರನ್ನು ಕದ್ದು, ಅಕ್ರಮವಾಗಿ ಸಾಗಣೆ ಮಾಡಿದ ಪ್ರಕರಣದಲ್ಲಿ ಶಾಸಕ ಸತೀಶ್ ಸೈಲ್‌ಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಏಳು ವರ್ಷ ಜೈಲು ಶಿಕ್ಷೆ ವಿಧಿಸಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಸಿಐಆರ್ ದಾಖಲಿಸಿಕೊಂಡಿದ್ದ ಇ.ಡಿ ಸಹ ತನಿಖೆ ಆರಂಭಿಸಿತ್ತು. ಇದೇ ಆಗಸ್ಟ್ 13 ಮತ್ತು 14ರಂದು ಸತೀಶ್ ಅವರ ಕಾರವಾರ ಮತ್ತು ಬೆಂಗಳೂರಿನ ಮನೆಗಳ ಮೇಲೆ ದಾಳಿ ನಡೆಸಿತ್ತು. ಈ ವೇಳೆ ₹13 ಕೋಟಿಯಷ್ಟು ನಗದು ಮತ್ತು ಚಿನ್ನಾಭರಣ ವಶಕ್ಕೆ ಪಡೆದಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಸತೀಶ್ ಅವರಿಗೆ ಹಲವು ಬಾರಿ ಸಮನ್ಸ್ ನೀಡಲಾಗಿತ್ತು. ಅವರು ವಿಚಾರಣೆಗೆ ಹಾಜರಾಗಿರಲಿಲ್ಲ. ಜತೆಗೆ ಹಾಜರಾಗದೇ ಇರಲು ಕಾರಣ ತಿಳಿಸಿರಲಿಲ್ಲ ಮತ್ತು ಸಮಯವನ್ನೂ ಕೇಳಿರಲಿಲ್ಲ. ಪದೇ ಪದೇ ವಿಚಾರಣೆಗೆ ಬರದೇ ಇದ್ದ ಕಾರಣಕ್ಕೆ ಅವರನ್ನು ಬಂಧಿಸಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಸತೀಶ್ ಅವರನ್ನು ಬಂಧಿಸಿದ ಅಧಿಕಾರಿಗಳು ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಕರೆತಂದರು. ಅಲ್ಲಿ ಕೆಲಕಾಲ ವಿಚಾರಣೆ ನಡೆಸಿ, ಬೌರಿಂಗ್ ಆಸ್ಪತ್ರೆಗೆ ಕರೆತಂದರು. ವೈದ್ಯಕೀಯ ಪರೀಕ್ಷೆಯ ನಂತರ ಜನಪ್ರತಿ ನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಎದುರು ಹಾಜರುಪಡಿಸಲಾಗುತ್ತದೆ ಎಂದು ಮೂಲಗಳು ಮಾಹಿತಿ ನೀಡಿವೆ.

‘ಶಾಂತ ಸ್ಥಿತಿ’ಯತ್ತ ಮದ್ದೂರು

ಮದ್ದೂರು (ಮಂಡ್ಯ ಜಿಲ್ಲೆ): ಗಣೇಶನ ಮೂರ್ತಿ ವಿಸರ್ಜನೆ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆದು, ಎರಡು ದಿನದಿಂದ ಕೋಮು ದಳ್ಳುರಿಯಲ್ಲಿ ಬೆಂದಿದ್ದ ಪಟ್ಟಣ ಮಂಗಳವಾರ ಶಾಂತ ಸ್ಥಿತಿಗೆ ಮರಳಿತು. ಬಿಜೆಪಿ, ಬಜರಂಗದಳ ಮತ್ತು ಹಿಂದುತ್ವ ಪರ ಸಂಘಟನೆಗಳು ಕರೆ ನೀಡಿದ್ದ ‘ಮದ್ದೂರು ಬಂದ್’ಗೆ ವರ್ತಕರಿಂದ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಬುಧವಾರ ಬೆಳಿಗ್ಗೆವರೆಗೂ ನಿಷೇಧಾಜ್ಞೆ ಮುಂದುವರಿಯಲಿದೆ.

ವಿವರ ▶6

‘ನನಗೆ ವಿಷ ಕೊಡಿಸಿ’

ಅಲವತ್ತುಕೊಂಡ ದರ್ಶನ್

ಪ್ರಜಾವಾಣಿ ವಾರ್ತೆ

ದರ್ಶನ್

ಬೆಂಗಳೂರು: ‘ಜೈಲಿನಲ್ಲಿ ಕನಿಷ್ಠ ಮೂಲ ಸೌಲಭ್ಯಗಳನ್ನೂ ನೀಡುತ್ತಿಲ್ಲ. ಬ್ಯಾರಕ್‌ನಿಂದ ಹೊರಗೆ ಬರುವುದಕ್ಕೂ ಬಿಡುತ್ತಿಲ್ಲ. ಮೈಮೇಲೆ ಬಿಸಿಲು ಬಿದ್ದು 25 ದಿನಗಳೇ ಆಗಿವೆ. ಕೈಯಲ್ಲಿ ಫಂಗಸ್ ಕಾಣಿಸಿಕೊಂಡಿದೆ (ಚರ್ಮದ ಅಲರ್ಜಿ). ಬೇರೆ ಯಾರಿಗೂ ಬೇಡ; ನನಗೆ ಮಾತ್ರ ವಿಷ ನೀಡಲಿ. ಈ ಸಂಬಂಧ ಕೋರ್ಟ್ ಆದೇಶ ನೀಡಲಿ...’

ಹೀಗೆ ನ್ಯಾಯಾಧೀಶರ ಎದುರು ಅಲವತ್ತುಕೊಂಡಿದ್ದು ರೇಣುಕಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ, ನಟ ದರ್ಶನ್.

‘ದರ್ಶನ್ ಅವರನ್ನು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಬೇಕು’ ಎಂದು ಪ್ರಾಸಿಕ್ಯೂಷನ್ ಪರವಾಗಿ ವಕೀಲರು 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಧೀಶರು ಆದೇಶವನ್ನು ಕಾಯ್ದಿರಿಸಿದ್ದರು. ಮಂಗಳವಾರ ಆದೇಶ ಪ್ರಕಟಿಸುವುದಕ್ಕೂ ಮುನ್ನ ದರ್ಶನ್ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಧೀಶರ ಎದುರು ಹಾಜರುಪಡಿಸಿದರು.

▶5

ಜಿಬಿಎ: ಮೂರು ಅಂತಸ್ತಿನ ಕಟ್ಟಡಗಳಿಗೆ ಒಸಿ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ 1,200 ಚದರ ಅಡಿವರೆಗಿನ ನಿವೇಶನದಲ್ಲಿ ನಿರ್ಮಿಸಿರುವ ಮೂರು ಅಂತಸ್ತಿನ ಕಟ್ಟಡಕ್ಕೆ ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024ರ ಕಲಂ 241(7)ರಂತೆ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದ ಅನ್ವಯ ಈ ವಸತಿ ಕಟ್ಟಡಗಳಿಗೆ ಒಸಿಯಿಂದ ವಿನಾಯಿತಿ ನೀಡಿ ಮಂಗಳವಾರ ಆದೇಶ ಹೊರಡಿಸಲಾಗಿದೆ.

1,200 ಚದರ ಅಡಿ ನಿವೇಶನದಲ್ಲಿ ನೆಲ ಹಾಗೂ 2 ಅಂತಸ್ತು ಅಥವಾ ಸ್ಟಿಲ್ಟ್ + ಮೂರು ಅಂತಸ್ತಿನ ಕಟ್ಟಡಗಳಿಗೆ ಒಸಿಯಿಂದ ವಿನಾಯಿತಿ ನೀಡಲಾಗಿದೆ. ಜಿಬಿಎ ಮುಖ್ಯ ಆಯುಕ್ತರ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಸಣ್ಣ ಪ್ರಮಾಣದ ಕಟ್ಟಡಗಳಿಗೆ ಒಸಿ ವಿನಾಯಿತಿ ನೀಡುವುದರಿಂದ, ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆ ಒದಗಿಸಲು ಸಹಕಾರಿಯಾದಂತಾಗುತ್ತದೆ ಎಂದು ನಗರಾಭಿವೃದ್ಧಿ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಪ್ರತಿ ವರ್ಷ 1,200 ಚದರಡಿಗಿಂತ ಕಡಿಮೆ ವಿಸ್ತೀರ್ಣದ ನಿವೇಶನಗಳಲ್ಲಿ ಸುಮಾರು ನಾಲ್ಕು ಸಾವಿರ ಕಟ್ಟಡಗಳಿಗೆ ನಕ್ಷೆ ಮಂಜೂರು ಮಾಡಲಾಗುತ್ತಿದೆ.

▶4

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಮಹದಾಯಿ–ಕೋಟಿಗಾಂವ್ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆ ಕೂಡದು’

ಯೋಜನೆಗಳಿಗೆ ‘ಸುಪ್ರೀಂ’ ನಿರ್ಬಂಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ–ಕೋಟಿಗಾಂವ್ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಚಟುವಟಿಕೆ ಅಥವಾ ಯೋಜನೆಗಳನ್ನು ಕೈಗೊಳ್ಳಬಾರದು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

ಉತ್ತರ ಗೋವಾದಲ್ಲಿರುವ ಮಹದಾಯಿ ವನ್ಯಜೀವಿ ಧಾಮವು ಕಾಳಿ ಹುಲಿ ಮೀಸಲು ಪ್ರದೇಶ, ಭೀಮಘಡ ವನ್ಯಜೀವಿಧಾಮ ಮತ್ತು ಭಗವಾನ್ ಮಹಾವೀರ ರಾಷ್ಟ್ರೀಯ ಉದ್ಯಾನ ಒಳಗೊಂಡಂತೆ ಭೌಗೋಳಿಕವಾಗಿ ಕರ್ನಾಟಕದ ಜೊತೆಗೆ ಬೆಸೆದುಕೊಂಡಿದೆ.

ವನ್ಯಜೀವಿಧಾಮದಲ್ಲಿ ವಾಣಿಜ್ಯ ಯೋಜನೆಗಳಿಗೆ ಅನುಮತಿ ನೀಡಿರುವುದನ್ನು ಆಕ್ಷೇಪಿಸಿ ಗೋವಾ ಫೌಂಡೇಷನ್ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಪೀಠ ಈ ನಿರ್ದೇಶನ ನೀಡಿತು.

ಮಹದಾಯಿ ವನ್ಯಜೀವಿ ಅಭಯಾರಣ್ಯ ಮತ್ತು ಪಕ್ಕದ ಪ್ರದೇಶಗಳನ್ನು ಹುಲಿ ಸಂರಕ್ಷಿತ ಪ್ರದೇಶವೆಂದು ಅಧಿಸೂಚನೆ ಹೊರಡಿಸುವ ಸಂಬಂಧ ಕೇಂದ್ರ ಉನ್ನತಾಧಿಕಾರ ಸಮಿತಿಯು (ಸಿಇಸಿ) ಆರು ವಾರಗಳಲ್ಲಿ ವರದಿ ಸಲ್ಲಿಸಬೇಕು ಎಂದು ಪೀಠ ನಿರ್ದೇಶಿಸಿದೆ. ಬಳಿಕ ವಿಚಾರಣೆಯನ್ನು ಎಂಟು ವಾರ ಮುಂದೂಡಿದೆ.

ಮಹದಾಯಿ ವನ್ಯಜೀವಿಧಾಮ ಹಾಗೂ ಆಸುಪಾಸಿನ ಪ್ರದೇಶಗಳನ್ನು ‘ಹುಲಿ ಸಂರಕ್ಷಣಾ ಮೀಸಲು ಅರಣ್ಯ’ವೆಂದು ಮೂರು ತಿಂಗಳಲ್ಲಿ ಅಧಿಸೂಚನೆ ಹೊರಡಿಸಬೇಕು ಎಂದು ಬಾಂಬೆ ಹೈಕೋರ್ಟ್‌ನ ಗೋವಾ ಪೀಠವು ಗೋವಾ ಸರ್ಕಾರಕ್ಕೆ 2023ರಲ್ಲಿ ನಿರ್ದೇಶನ ನೀಡಿತ್ತು.

ವನ್ಯಜೀವಿಧಾಮ ಹಾಗೂ ಸಮೀಪದ ಅರಣ್ಯ ಭಾಗದಲ್ಲಿ ಜನವಸತಿಗಳಿವೆ ಹಾಗೂ ಹುಲಿ ಗೋವಾದ ಸ್ಥಳೀಯ ವನ್ಯಜೀವಿಯಲ್ಲ ಎಂಬ ಕಾರಣ ನೀಡಿ ಮೀಸಲು ಅರಣ್ಯವಾಗಿ ಘೋಷಿಸಲು ಗೋವಾ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು.

ಕರ್ನಾಟಕ, ಮಹಾರಾಷ್ಟ್ರದ ಪಶ್ಚಿಮ ಘಟ್ಟದ ಅರಣ್ಯ ಭಾಗಗಳ ಜೊತೆಗೆ ಭೌಗೋಳಿಕವಾಗಿ ಬೆಸೆದುಕೊಂಡಿರುವ ಮಹದಾಯಿ ವನ್ಯಜೀವಿ ಧಾಮದಲ್ಲಿ ಕೆಲವು ಹುಲಿಗಳು ಕಾಣಿಸಿಕೊಂಡಿದ್ದವು. ಇದನ್ನು ಹುಲಿ ಮೀಸಲು ಪ್ರದೇಶವಾಗಿ ಘೋಷಿಸಬೇಕು ಎಂಬ ಬೇಡಿಕೆ ಎದ್ದಿತ್ತು. ಕೆಲವು ವರ್ಷಗಳ ಹಿಂದೆ ಮಹದಾಯಿ ವನ್ಯಜೀವಿ ಧಾಮದಲ್ಲಿ ನಾಲ್ಕು ಹುಲಿಗಳ ಹತ್ಯೆಯಾಗಿತ್ತು.

ಈ ಪ್ರದೇಶವು ಹುಲಿ ಸಂತತಿ ವೃದ್ಧಿಗೆ ಸೂಕ್ತವಾದ ಪ್ರದೇಶವಾಗಿದೆ. ಇದನ್ನು ಮೀಸಲು ಅರಣ್ಯವಾಗಿ ಘೋಷಿಸಬೇಕು ಎಂದು ಎನ್‌ಟಿಸಿಎ ಸಲಹೆ ನೀಡಿತ್ತು.

‘ರಾಜ್ಯಕ್ಕೆ ಪರಿಣಾಮ ಇಲ್ಲ’

ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳು ಮಹದಾಯಿಯಲ್ಲಿ ತಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವ ಹಕ್ಕು ಹೊಂದಿವೆ. ಆದರೆ, ಅದಕ್ಕೆ ಪರಿಸರ ಮತ್ತು ಅರಣ್ಯ ಅನುಮತಿಗಳನ್ನು ಪಡೆಯಬೇಕಿದೆ. ಗೋವಾ ಸರ್ಕಾರ ಮತ್ತು ಅಲ್ಲಿನ ಪರಿಸರವಾದಿಗಳ ನಡುವಿನ ಹೋರಾಟವು ಕರ್ನಾಟಕದ ಮೇಲೆ ನೇರ ಪರಿಣಾಮ ಬೀರುವುದಿಲ್ಲ

ಮೋಹನ್ ಕಾತರಕಿ, ಸುಪ್ರೀಂ ಕೋರ್ಟ್ ಹಿರಿಯ ವಕೀಲ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಸರ್ಕಾರಿ ಶಾಲೆಗೆ ಮೇಜು, ಬೆಂಚು

ಶಾಲಾ ಶಿಕ್ಷಣ ಇಲಾಖೆ– ಬೆಂಗಳೂರು ರೋಟರಿ ಕ್ಲಬ್ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಿಗೆ ಮೇಜು, ಬೆಂಚುಗಳ ಜೊತೆಗೆ ಇಂಟರಾಕ್ಟಿವ್ ಎಲ್ಇಡಿ ಬೋರ್ಡ್‌ಗಳನ್ನು ಒದಗಿಸಲು ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರ ಸಮ್ಮುಖದಲ್ಲಿ ಬೆಂಗಳೂರು ರೋಟರಿ ಕ್ಲಬ್ (ಆರ್‌ಸಿಬಿ) ಮತ್ತು ಶಾಲಾ ಶಿಕ್ಷಣ ಇಲಾಖೆ ನಡುವೆ ಒಡಂಬಡಿಕೆಗೆ ಸಹಿ ಹಾಕಲಾಯಿತು.

ರೋಟರಿ ಇಂಟರಾಕ್ಟಿವ್ ಲರ್ನಿಂಗ್ 2025-26 ಹೆಸರಿನ ಈ ಯೋಜನೆಯಡಿ ಟ್ರಸ್ಟ್ ಮುಖಾಂತರ ರಾಜ್ಯದ 100 ಸರ್ಕಾರಿ ಶಾಲಾ ತರಗತಿಗಳಿಗೆ ಬೆಂಚು-ಮೇಜುಗಳ ಜೊತೆಗೆ 75 ಇಂಚಿನ ಇಂಟರಾಕ್ಟಿವ್ ಬೋರ್ಡ್‌ಗಳನ್ನು ಯುಪಿಎಸ್ ಸೌಲಭ್ಯ ಸಹಿತ ಒದಗಿಸಲಿದೆ.

> **ರೋಟರಿ ಪಾಲ್ಗೊಳ್ಳುವಿಕೆಯಿಂದ ಶಾಲೆಗಳ ಮೂಲಸೌಕರ್ಯ ಬಲಪಡಿಸುವಲ್ಲಿ ಹೆಚ್ಚಿನ ಸಮುದಾಯ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆ**
> **ಮಧು ಬಂಗಾರಪ್ಪ**
> ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ

ಸುಮಾರು ₹3.5 ಕೋಟಿ ವೆಚ್ಚದಲ್ಲಿ ಯೋಜನೆ ಜಾರಿಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ರೋಟರಿ ಕ್ಲಬ್ ಅಧ್ಯಕ್ಷ ಸುಖೇನ್ ಮಾತನಾಡಿ, 'ಕನಿಷ್ಠ 1,000 ಮೇಜು, ಬೆಂಚುಗಳು ಮತ್ತು ಸ್ಮಾರ್ಟ್ ಬೋರ್ಡ್‌ಗಳನ್ನು ಸರ್ಕಾರಿ ಶಾಲೆಗಳಲ್ಲಿ ಒದಗಿಸುವ ಉದ್ದೇಶವನ್ನು ಕ್ಲಬ್ ಹೊಂದಿದೆ' ಎಂದು ಹೇಳಿದರು.

ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಶಾಲಾ ಶಿಕ್ಷಣ ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕ್ ಚಂದ್ರ, ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ಕೆ.ವಿದ್ಯಾ ಕುಮಾರಿ, ರೋಟರಿ ಜಿಲ್ಲಾ ಗವರ್ನರ್ ಎಲಿಜಬೆತ್ ಚೆರಿಯನ್ ಹಾಗೂ ಹಿರಿಯ ಅಧಿಕಾರಿಗಳು ಮತ್ತು ರೋಟರಿ ಸದಸ್ಯರು ಉಪಸ್ಥಿತರಿದ್ದರು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ರೋಟರಿ ಕ್ಲಬ್ ಪದಾಧಿಕಾರಿಗಳು ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಕಾರಿಗಳು ಒಡಂಬಡಿಕೆಗೆ ಸಹಿ ಹಾಕಿದರು

ವಿಶ್ವನಾಥ್, ಶ್ರೀವತ್ಸಗೆ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಪಿ.ಕೆ.ನಾರಾಯಣ ಸಾಹಿತ್ಯ ದತ್ತಿ ಪ್ರಶಸ್ತಿ'ಗೆ ಬರಹಗಾರ ಸಂಪಟೂರು ವಿಶ್ವನಾಥ್ ಮತ್ತು ಸಂಶೋಧಕ ಶ್ರೀವತ್ಸ ಎಸ್. ವಟಿ ಆಯ್ಕೆಯಾಗಿದ್ದಾರೆ.


ವಿಶ್ವನಾಥ್


ಶ್ರೀವತ್ಸ ಎಸ್.

ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ. ಟಿ. ಶ್ರೀನಿವಾಸ ಅವರ ಸ್ಮರಣಾರ್ಥ ಬರಹಗಾರ್ತಿ ವರದಾ ಶ್ರೀನಿವಾಸ್ ಅವರು ಈ ದತ್ತಿಯನ್ನು ಕಸಾಪದಲ್ಲಿ ಸ್ಥಾಪಿಸಿದ್ದಾರೆ. 2024ನೇ ಸಾಲಿಗೆ ಆಯ್ಕೆಯಾಗಿರುವ ಬೆಂಗಳೂರಿನ ಸಂಪಟೂರು ವಿಶ್ವನಾಥ್ ಅವರ ಐದು ಸಾವಿರಕ್ಕೂ ಅಧಿಕ ಲೇಖನಗಳು ಕನ್ನಡದ ವಿವಿಧ ವಾರ ಹಾಗೂ ದಿನಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶ್ರೀವತ್ಸ ಎಸ್. ವಟಿ, ಪುರಾತತ್ವ ಅಧ್ಯಯನದಲ್ಲಿ ಹಲವು ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಕೋಲ್ಕತ್ತ ರೇಸ್

ಪಂಟಾಜಿ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಕೋಲ್ಟ್ಸ್ ಟ್ರಯಲ್ ಸ್ಟೇಕ್ಸ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪಂಟಾಜಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸಿಟಿ ಆಫ್ ಜಾಯ್ 5, ಲಾಹಿನ 4, ಡೈಮಂಡ್ ಗೋಲ್ಡ್ 7
2ನೇ ರೇಸ್: ಕೂಲ್ ಡ್ಯಾಡಿ 4, ದಿ ಪ್ರೆಸೆನ್ಸ್ 2, ಹಾರ್ಟ್ 1
3ನೇ ರೇಸ್: ಗ್ರೇಟ್ ಗನ್ಸ್ 2, ಮೈನ್ ಸ್ಟ್ರೀಟ್ 3, ಮಲ್ಟಿವರ್ಸ್ 4
4ನೇ ರೇಸ್: ಪಂಟಾಜಿ 3, ಗೋಲ್ಡ್ ಎಂಪೈರ್ 2, ವಿಕ್ಟೋರಿಯಾ ಕ್ರಾಸ್ 4
5ನೇ ರೇಸ್: ದುಬೈ ಪ್ರಿನ್ಸೆಸ್ 5, ವಿನ್ಸೆಂಟ್ ವ್ಯಾನ್ ಗೋಗ್ 4, ಹೈ ಕಮಾಂಡ್ 3
6ನೇ ರೇಸ್: ಸೆಲ್ಟಿಕ್ ಹಾರ್ಲೆಕ್ವಿನ್ 5, ಮಾತಾಂಗಿ 1, ಲೈಟ್ ದಿ ವರ್ಲ್ಡ್ 2
7ನೇ ರೇಸ್: ಟ್ರಿಲಿಯನೇರ್ 8, ದೊನ ಸಿಯೆನ್ನ 4, ಕ್ಯಾಟ್ ವಿಸ್ಕರ್ಸ್ 6

ಉತ್ತಮ ಬೆಟ್: ಸಿಟಿ ಆಫ್ ಜಾಯ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ. 19/SBC/25, ದಿನಾಂಕ: 28.08.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗ: ಉಪ-ಕಾಮಗಾರಿ-1:** ಬಂಗಾರಪೇಟೆ (ಬಿಡಬ್ಲ್ಯೂಟಿ) ನಿಲ್ದಾಣದಲ್ಲಿ ತ್ವರಿತ ವಾಟರಿಂಗ್ ವ್ಯವಸ್ಥೆ. **ಉಪ-ಕಾಮಗಾರಿ-2: ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ):** ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ) ನಿಲ್ದಾಣದಲ್ಲಿ ನೀರಿನ ಲೈನುಗಳಲ್ಲಿ ಪ್ರಸ್ತಾವಿತ ನೀರಿನ ಮೀಟರ್‌ಗಳ ಸ್ಥಾಪನೆ. ನಿರ್ವಹಣೆಯ ಅವಧಿ: 06 ತಿಂಗಳುಗಳು.	ರೂ. 1,85,25,287/-
2	**ಬೆಂಗಳೂರು-ಜೋಲಾರಪೇಟೆ ವಿಭಾಗ: ಉಪ ಕಾಮಗಾರಿ-1:** ಸಹಾಯಕ ವಿಭಾಗೀಯ ಇಂಜಿನಿಯರ್/ಬಂಗಾರಪೇಟೆ ಉಪ ವಿಭಾಗದಲ್ಲಿ ಕಿಮೀ. 246/100-200 (ಈಗಿರುವ ಸ್ಪಾನ್ 2x12.20 ಅಪ್ ಮತ್ತು ಡೌನ್) ರಲ್ಲಿ ಬ್ರಿಡ್ಜ್ ನಂ. 683 ಮೇಲಿನ ಸ್ಟೀಲ್ ಗಿರ್ಡರ್‌ಅನ್ನು ಪಿಎಸ್‌ಸಿ ಸ್ಲಾಬ್‌ಗಳಿಂದ ಬದಲಾವಣೆ ಮಾಡುವುದು. **ಉಪ ಕಾಮಗಾರಿ-2:** ಬೆಂಗಳೂರು ಪೂರ್ವ (ಬಿಎನ್‌ಸಿಇ) – ಬೈಯಪ್ಪನಹಳ್ಳಿ (ಬಿವೈಪಿಎಲ್) ನಿಲ್ದಾಣಗಳ ನಡುವೆ ಕಿಮೀ. 347/500-600 ರಲ್ಲಿ ಬ್ರಿಡ್ಜ್ ನಂ. 838/ಬಿ ಅಪ್ ಮತ್ತು ಡೌನ್ ಲೈನಿನಲ್ಲಿ ಸ್ಟೀಲ್ ಗಿರ್ಡರ್‌ಅನ್ನು ಪಿಎಸ್‌ಸಿ ಸ್ಲಾಬ್‌ಗಳಿಂದ (1x11.52ಮೀ.) ಬದಲಾವಣೆ ಮಾಡುವುದು. ನಿರ್ವಹಣೆಯ ಅವಧಿ: 06 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಇವುಗಳಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 2,18,10,489/-
3	**ಬೆಂಗಳೂರು-ಜೋಲಾರಪೇಟೆ ವಿಭಾಗ: ಉಪ ಕಾಮಗಾರಿ-1:** ಎಸ್‌ಎಸ್‌ಇ/ಪಿ.ವೇ/ಬೆಂಗಳೂರು ವಿಭಾಗದಲ್ಲಿ ಬೆಂಗಳೂರು (ಎಸ್‌ಬಿಸಿ) ಯಾರ್ಡ್‌ನ ರೋಡ್ ನಂ. 5, 6, 7, 14, 15 ಮತ್ತು 16ರಲ್ಲಿ 8.042 ಕಿಮೀ. ಉದ್ದಕ್ಕೆ ಸ್ಲೀಪರ್‌ಗಳ ಸಾಂದ್ರತೆಯನ್ನು 1310 ರಿಂದ 1540 ವರೆಗೆ ಹೆಚ್ಚಿಸುವುದು. **ಉಪ ಕಾಮಗಾರಿ-2: ಬೆಂಗಳೂರು-ಜೋಲಾರಪೇಟೆ ವಿಭಾಗ:** ಕಿಮೀ. 303/200-304/900 ರಿಂದ ಡೌನ್ ಲೈನಿನಲ್ಲಿ 1.7 ಕಿಮೀ. ದೂರಕ್ಕೆ ಈಗಿರುವ 60 ಕೆಜಿ. ರೈಲ್‌ಗಳನ್ನು 60 ಕೆಜಿ/110 ಯುಟಿಎಸ್ ಕ್ಲಾಸ್ 1 ರೈಲ್‌ಗಳನ್ನಾಗಿ ಥ್ರೂ ರೈಲ್ ರಿನ್ಯೂವಲ್ (ಪಿ) ಕಾಮಗಾರಿ. **ಉಪ ಕಾಮಗಾರಿ-3: ಬೆಂಗಳೂರು-ಜೋಲಾರಪೇಟೆ ವಿಭಾಗ:** ಎಸ್‌ಎಸ್‌ಇ/ಪಿ.ವೇ/ಕೋಲಾರ ವಿಭಾಗದಲ್ಲಿ 311/500-296/500 ರಿಂದ ಡೌನ್ ಲೈನಿನಲ್ಲಿ 15 ಕಿಮೀ. ಉದ್ದಕ್ಕೆ ಥ್ರೂ ಫಿಟಿಂಗ್ ರಿನ್ಯೂವಲ್ (ಟಿಎಫ್‌ಆರ್) ಕಾಮಗಾರಿಗಳು.	ರೂ. 1,41,62,524/-
4	**ಕೆಎಸ್‌ಆರ್ ಬೆಂಗಳೂರು:** ಬೆಂಗಳೂರಿನಲ್ಲಿ ಟ್ರೆಪೆಜಾಯಿಡಲ್ ಶೀಟ್ ಅನ್ನು ಒದಗಿಸುವ ಮೂಲಕ ಟೈಪ್-4 ಮತ್ತು ಟೈಪ್-2 ಕ್ವಾರ್ಟರುಗಳಲ್ಲಿ (ಕ್ವಾರ್ಟರ್ ಸಂ. 178, 194, 196, 197, 199, 201, 202, 203, 204, 207, 209, 210 & 242 ಬ್ಲಾಕ್‌ಗಳು) ಛಾವಣಿ ಮೇಲಿನ ಸೋರಿಕೆಯನ್ನು ದುರಸ್ತಿ ಮಾಡುವುದು. ನಿರ್ವಹಣೆಯ ಅವಧಿ: 06 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಇವುಗಳಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 82,01,605/-
5	**ಬೆಂಗಳೂರು – ಮೈಸೂರು ವಿಭಾಗ: ಉಪ ಕಾಮಗಾರಿ-1:** ಕಿಮೀ. 43/600-65/390, 91/760-93/570 ಮತ್ತು 99/650-101/200 (ಡೌನ್ ಲೈನ್) ಮತ್ತು 43/600-45/210, 54/610-55/000 (ಅಪ್ ಲೈನ್) ನಿಂದ 27.15 ಕಿಮೀ. ದೂರಕ್ಕೆ ಥ್ರೂ ಫಿಟಿಂಗ್ ರಿನ್ಯೂವಲ್ (ಟಿಎಫ್‌ಆರ್) ಕಾಮಗಾರಿ. **ಉಪ ಕಾಮಗಾರಿ-2: ಬೆಂಗಳೂರು-ಮೈಸೂರು ವಿಭಾಗ:** ನಾಯಂಡಹಳ್ಳಿ, ಕೆಂಗೇರಿ ಮತ್ತು ಹೆಜ್ಜಾಲ ಯಾರ್ಡ್‌ಗಳಲ್ಲಿ ಈಗಿರುವ 52ಕೆಜಿ. ಕರ್ವ್ಡ್ ಸ್ವಿಚ್ ಮತ್ತು ಸಿಎಂಎಸ್ ಕ್ರಾಸಿಂಗ್‌ಅನ್ನು 60 ಕೆಜಿ. ಕರ್ವ್ಡ್ ಸ್ವಿಚ್ ಮತ್ತು ಸಿಎಂಎಸ್ ಕ್ರಾಸಿಂಗ್‌ಗಳಿಂದ ಥ್ರೂ ಟರ್ನ್‌ಔಟ್ ರಿನ್ಯೂವಲ್ (ಟಿಟಿಆರ್) ಕಾಮಗಾರಿ – ಒಟ್ಟು 10 ಸೆಟ್‌ಗಳು (8.5 ರಲ್ಲಿ 1). **ಉಪ ಕಾಮಗಾರಿ-3: ಬೆಂಗಳೂರು-ಮೈಸೂರು ವಿಭಾಗ:** ರಾಮನಗರಂ, ಚನ್ನಪಟ್ಟಣ, ಮದ್ದೂರು ಮತ್ತು ಮಂಡ್ಯ ಯಾರ್ಡ್‌ಗಳಲ್ಲಿ ಈಗಿರುವ 52ಕೆಜಿ. ಕರ್ವ್ಡ್ ಸ್ವಿಚ್ ಮತ್ತು ಸಿಎಂಎಸ್ ಕ್ರಾಸಿಂಗ್‌ಅನ್ನು 60 ಕೆಜಿ. ಕರ್ವ್ಡ್ ಸ್ವಿಚ್ ಮತ್ತು ಸಿಎಂಎಸ್ ಕ್ರಾಸಿಂಗ್‌ಗಳಿಂದ ಥ್ರೂ ಟರ್ನ್‌ಔಟ್ ರಿನ್ಯೂವಲ್ (ಟಿಟಿಆರ್) – ಒಟ್ಟು 09 ಸೆಟ್‌ಗಳು (12 ರಲ್ಲಿ 1).	ರೂ. 91,63,857/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **24.09.2025, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

PUB/434/AAF/PRB/SWR/2025-26 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 009.
ದೂ: 080-22341230/35 ಇ-ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ-02/15/2024-25/902 ದಿನಾಂಕ: 09.09.2025

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಎಸ್.ಮುನಿರಾಜು ಬಿನ್ ಲೇ॥ ಎನ್.ಶ್ರೀನಿವಾಸ ಇವರು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, **ಬಿಲ್ಲಕೆಂಪನಹಳ್ಳಿ** ಗ್ರಾಮದ ಸರ್ವೆ ನಂ.48/1 ರಲ್ಲಿ 1ಎ-31ಗುಂ, ಸ.ನಂ.48/2 ರಲ್ಲಿ 2ಎ-22ಗುಂ, ಸ.ನಂ.48/3 ರಲ್ಲಿ 0ಎ-03ಗುಂ, ಸ.ನಂ.48/9 ರಲ್ಲಿ 0ಎ-03ಗುಂ, ಸ.ನಂ.48/17 ರಲ್ಲಿ 0ಎ-39ಗುಂ. **ಒಟ್ಟು 5ಎಕರೆ-18ಗುಂಟೆ** ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಅನುಮೋದಿತ ಮಹಾಯೋಜನೆಯಲ್ಲಿ **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1) ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ.
4) ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ-ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾಪ್ರ/2710/ಎಂಎಎ /25-26

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಖಾದಿ ಗ್ರಾಮೋದ್ಯೋಗ ವಿಭಾಗ,
ಉಪ ನಿರ್ದೇಶಕರು (ಖಾ.ಗ್ರಾ.)ರವರ ಕಛೇರಿ 1ನೇ ಮಹಡಿ,
ಕೆ.ಎಸ್.ಟಿ.ಐ.ಡಿ.ಸಿ.ಎಲ್. ಗಾರ್ಮೆಂಟ್ ಕಟ್ಟಡ, ಬಾಂಬೆ ರೇಯನ್ ಫ್ಯಾಕ್ಟರಿ ಬಳಿ,
ಕೆ.ಐ.ಎ.ಡಿ.ಬಿ. ಅಪರೇಲ್ ಪಾರ್ಕ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೊಡ್ಡಬಳ್ಳಾಪುರ – 561 203.

ಸಂಖ್ಯೆ: ಉ.ನಿ.(ಖಾ.ಗ್ರಾ.)/ಬೆಂ.ಗ್ರಾ..ಜಿ.ಪಂ./ವಿ.ಸಿ.ಉ/25-26 ದಿನಾಂಕ: 08-09-2025

ಟೆಂಡರ್ ಪ್ರಕಟಣೆ

2025-26 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮೀಣ ಭಾಗದ ಅರ್ಹ ವಿವಿಧ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ವಿದ್ಯುತ್ ಚಾಲಿತ ಹಾಗೂ ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡುವ ನೊಂದಾಯಿತ ಅರ್ಹ ಮತ್ತು ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಸುರಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಟೆಂಡರ್ ಡಾಕ್ಯುಮೆಂಟ್‌ಗಳನ್ನು Government of Karnataka E-Procurement Portal Website : https://kppp.karnataka.gov.in ಮುಖಾಂತರ (IC/2025-26/IND0112, Date : 25-09-2025) ಡೌನ್‌ಲೋಡ್ ಮಾಡಿಕೊಳ್ಳಬಹುದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 25-09-2025 ರ ಸಂಜೆ 5.00 ಗಂಟೆಯವರೆಗೆ.

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಬಹುದು.

ಸಹಿ/- ಉಪ ನಿರ್ದೇಶಕರು, (ಖಾ.ಗ್ರಾ.),
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಬೆಂಗಳೂರು.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/2711/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂ: ಬಿಡಿಎ/ಇಇ-ಎನ್‌ಪಿಕೆಎಲ್/ವರ್ಕ್-ಟೆಂಡರ್-01/2025-26 ದಿನಾಂಕ: 06.09.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)

(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ http://kppp.karnataka.gov.in ಮೂಲಕ)

ಆಯುಕ್ತರು, ಬಿಡಿಎ, ಬೆಂಗಳೂರು, ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಬಿಡಿಎ, ಬೆಂಗಳೂರು, ಇವರು ಕೆಳಕಂಡ ಕಾಮಗಾರಿಗಳಿಗೆ 3ನೇ ದರ್ಜೆ ಮತ್ತು ಮೇಲ್ಪಟ್ಟು ಗುತ್ತಿಗೆದಾರರು ಅಥವಾ ತತ್ಸಮಾನ ಕೆಪಿಡಬ್ಲ್ಯೂಡಿ/ಬಿಡಿಎ/ಎನ್‌ಹೆಚ್/ಎಂಇಎಸ್/ರೈಲ್ವೇಸ್‌ನಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರುಗಳಿಂದ ಇ-ಪ್ರೊಕ್ಯೂರ್‌ಮೆಂಟ್ (https://kppp.karnataka.gov.in) ಟೆಂಡರಿಂಗ್ ಪದ್ಧತಿಯ ಮೂಲಕ ಐಟಂ ದರದ ಟೆಂಡರುಗಳನ್ನು ಆಹ್ವಾನಿಸಿದ್ದಾರೆ. **ಕಾಮಗಾರಿ ಹೆಸರು:** (1) ಎನ್‌ಪಿಕೆಎಲ್‌ನಲ್ಲಿ ಮಂಗನಹಳ್ಳಿ ಗ್ರಾಮದ ಬ್ಲಾಕ್-1ರ ಸರ್ವೆ ನಂ.30 (ಬಿ1-ಸಿಎ ಟಿಬಿ 3 & 4)ರಲ್ಲಿ ಕಾಯ್ದಿರಿಸಿದ ಸಿಎ ಪ್ರದೇಶಕ್ಕೆ ಚೈನ್ ಲಿಂಕ್ ಬೇಲಿ ಒದಗಿಸುವುದು. (ವರ್ಕ್_ಇಂಡೆಂಟ್_ಸಂ.: ಬಿಡಿಎ/2025-26/ಓಡಬ್ಲ್ಯೂ/ವರ್ಕ್_ಇಂಡೆಂಟ್149). ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ. 40.70 ಲಕ್ಷಗಳು**. ಇಎಂಡಿ: **ರೂ. 0.82 ಲಕ್ಷಗಳು. (2)** ಎನ್‌ಪಿಕೆಎಲ್‌ನಲ್ಲಿ ಬ್ಲಾಕ್-9ರ ಕಣ್ಣಳ್ಳಿ ಸರ್ವೆ ನಂ.97ರಲ್ಲಿ ಕಾಯ್ದಿರಿಸಿದ ಸಿಎ ಪ್ರದೇಶಕ್ಕೆ ಚೈನ್ ಲಿಂಕ್ ಬೇಲಿ ಒದಗಿಸುವುದು. (ವರ್ಕ್_ಇಂಡೆಂಟ್_ಸಂ.: ಬಿಡಿಎ/2025-26/ಓಡಬ್ಲ್ಯೂ/ವರ್ಕ್_ಇಂಡೆಂಟ್161). ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ. 35.17 ಲಕ್ಷಗಳು.** ಇಎಂಡಿ: **ರೂ. 0.70 ಲಕ್ಷಗಳು. (3)** ಎನ್‌ಪಿಕೆಎಲ್‌ನಲ್ಲಿ ಬ್ಲಾಕ್-3 ರಾಮಸಂದ್ರ ಗ್ರಾಮದ ಸರ್ವೆ ನಂ.175 ಮತ್ತು 83 (ಬಿ3-ಸಿಎ-3)ರಲ್ಲಿ ಕಾಯ್ದಿರಿಸಿದ ಸಿಎ ಪ್ರದೇಶಕ್ಕೆ ಚೈನ್ ಲಿಂಕ್ ಬೇಲಿ ಒದಗಿಸುವುದು. (ವರ್ಕ್_ಇಂಡೆಂಟ್_ಸಂ.: ಬಿಡಿಎ/2025-26/ಓಡಬ್ಲ್ಯೂ/ವರ್ಕ್_ಇಂಡೆಂಟ್150). ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ. 25.59 ಲಕ್ಷಗಳು.** ಇಎಂಡಿ: **ರೂ. 0.52 ಲಕ್ಷಗಳು. (4)** ಎನ್‌ಪಿಕೆಎಲ್‌ನಲ್ಲಿ ಬ್ಲಾಕ್-2 ಮಂಗನಹಳ್ಳಿ ಗ್ರಾಮದ ಸರ್ವೆ ನಂ.10/3 (ಬಿ2-ಪಿ6)ರಲ್ಲಿ ಕಾಯ್ದಿರಿಸಿದ ಉದ್ಯಾನವನ ಪ್ರದೇಶಕ್ಕೆ ಚೈನ್ ಲಿಂಕ್ ಬೇಲಿ ಒದಗಿಸುವುದು. (ವರ್ಕ್_ಇಂಡೆಂಟ್_ಸಂ.: ಬಿಡಿಎ/2025-26/ಓಡಬ್ಲ್ಯೂ/ವರ್ಕ್_ಇಂಡೆಂಟ್143). ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ. 35.86 ಲಕ್ಷಗಳು.** ಇಎಂಡಿ: **ರೂ. 0.72 ಲಕ್ಷಗಳು.** ಪ್ರತೀ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಶುಲ್ಕ: **ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಕಾಲಾವಧಿ: **ತಲಾ 3 ತಿಂಗಳು (ಮಳೆಗಾಲ ಸೇರಿದಂತೆ).** ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 24.09.2025, ಸಂಜೆ 4.00 ಗಂಟೆವರೆಗೆ.** ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಲಾಗ್ ಇನ್ ಆಗಬಹುದು ಅಥವಾ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ **080-22371090/22340060** ಮೊಬೈಲ್: **9980244677**ಗೆ ಕರೆ ಮಾಡಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಎನ್‌ಪಿಕೆಎಲ್ ವಿಭಾಗ, ಬೆಂಅಪ್ರಾ, ಬೆಂಗಳೂರು

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: Auto_Sig_CSDR-PKD ಗೆ ತಿದ್ದುಪಡಿ ಸಂ. 3 ದಿನಾಂಕ: 11.08.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ತಿದ್ದುಪಡಿ ಸಂ. 3, ಬೆಂಗಳೂರು ವಿಭಾಗದ ಚನ್ನಸಂದ್ರ-ಪೇಣುಕೊಂಡ ವಿಭಾಗದ ನಡುವೆ ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆಯ ಕೆಲಸಕ್ಕಾಗಿ ಫಲಾನುಭವಿಗೆ ದಸ್ತಾವೇಜುಗಳನ್ನು ಸೇರಿಸಲಾಗಿದೆ ಹಾಗೂ ಬಿಜಿಯ ಭೌತಿಕ ಸಲ್ಲಿಕೆಗಾಗಿ ವಿಳಾಸವನ್ನು ಸೇರಿಸಲಾಗಿದೆ. (ವಿವರಗಳನ್ನು ಈಗಾಗಲೇ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ)	ರೂ. 1,39,40,69,610.88

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **22.09.2025, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ನಿರ್ಮಾಣ/ಬೆಂಗಳೂರು ದಂಡು

PUB/438/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

PUBLIC NOTICE

My Clients, Dr. A. Manjunath and Mrs. Chitra Manjunath are desirous of Purchasing Property, A Residential House No. 2477, 15th Cross, 27th Main, HSR Layout, Sector-1, Bangalore belonging to Mr. Vasuki, Son of Late M.H. Sreekantaiah.

Any Person/s having Claim on the Schedule property may contact the undersigned within 15 days from the date of this public notice with supporting documents of their Claim. In the absence of any Claim or Objection my clients Dr. A. Manjunath and Mrs. Chitra Manjunath may proceed with the purchase of the Schedule Property.

SCHEDULE OF THE PROPERTY

All that piece and parcel of Property, a house built on Site No. 2477, 15th Cross, 27th Main, HSR Layout, Sector-1, Bangalore, measuring East to West 40'.0" Feet, North to South 61'0" Feet, in all measuring 2440 Sq. Feet coming under the administrative jurisdiction of Bruhat Bangalore Mahanagara Palike and bearing Property ID No. 4042117690 in Ward No. 174, HSR Layout Range, Bengaluru ,with all rights, appurtenances whatsoever and bounded as follows:

EAST BY : Site No. 2478
WEST BY : Site No. 2476
NORTH BY : Site No. 2484,2485 and 2486
SOUTH BY : Road

Shridhara Murthy, Advocate
No. 79/80, 1st Floor, Kothanur Dinne Main Road, Opp: Smartbazar, JP Nagar, 7th Phase, Bengaluru – 560 078
M: 99864 94684 | +91 98440 24808

PUBLIC NOTICE

The General public are hereby notified that, my clients have agreed to purchase the Schedule property from its Owners **Sri.N.D.RAMESH and Sri.N.D.RAVIKUMAR both sons of late Dodda Kempanna**, residing at Neraganahalli Village, Kundana Hobli, Devanahalli Taluk, Devanahalli.

Apart from the said Owners, if any other person/s have any manner of right, title, interest or claim over the Schedule property or any part thereof by way of sale, lease, sub-lease, mortgage, gift, lien, charge, trust, maintenance, easement, pre-emption or otherwise howsoever, they are hereby called upon to file their objection/s or claims with the undersigned (along with the photocopies of the documents based on which they rely for asserting their rights), **within 14 days** from the date of publication of this notice. Objection/s received thereafter will not be binding on my clients.

SCHEDULE

Item No.1 property owned by Sri.N.D.Ramesh: All that piece and parcel of the Agricultural Land bearing Sy.No.97/2 measuring 1 Acre, situated at Neraganahalli Village, Kundana Hobli, Devanahalli Taluk, Devanahalli and bounded on the:

East by : Land bearing Sy.No.97/3 belonging to Sri.N.D.Ravikumar
West by : Land bearing Sy.No.97/1
North by : Muniyappa's land
South by : Road

Item No.2 property owned by Sri.N.D.Ravikumar: All that piece and parcel of the Agricultural Land bearing Sy.No.97/3 measuring 1 Acre, situated at Neraganahalli Village, Kundana Hobli, Devanahalli Taluk, Devanahalli and bounded on the:

East by : Subbarayappa's land
West by : Land bearing Sy.No.97/2 belonging to Sri.N.D.Ramesh
North by : Muniyappa's land
South by : Road

Sd/- **S.F. GOUTAM CHAND**, Advocate,
GOUTAM ASSOCIATES,
No.60, 2nd Floor, Old Kanakapura Road, Basavanagudi, Bengaluru - 560004

ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

This is to inform the General public that our clients intend to get the sale deed in their names pursuant to entering into Agreement of Sale in respect of house property bearing Nos.15 and 26, in Sy.No.12/4, Doddanagamangala Village, Begur Hobli, Bengaluru South Taluk, within Municipal Council, Konappana Agrahara limits, measuring East-West : 40 feet, North – South : 60 feet, in all 2400 square feet, together with the existing building with all amenities and bounded on East :Site Nos.16 & 27, West : Site Nos.14 & 25, North : Road, South : Road. Any person/s asserting any kind of right, title, interest or claims of any sort towards the sale transaction may file their objections or claims with documentary proof thereof with the undersigned within SEVEN days from the date of this publication, failing which our client will proceed to complete the transaction without being liable for any claims put forth thereof.

PRAROOP LAW
K R PRADEEP, ADVOCATE
31/9, NCP Tower, 1st floor, 1st main, Mount Joy Extension, Hanumanthnagar, Bengaluru -560 004.
E-mail : prarooplaw1@gmail.com
Ph : 9886012455 / 9916326682
Bengaluru, Dated: 08-09-2025

JOB OPPORTUNITIES

General

WANTED TELE CALLERS Experienced female. Accommodation also available. Basaveshwaranagara Bangalore. 8217593354/ 9964617174

VACANCY FOR FEMALE Office Assistant, Fresher with Basic Computer Knowledge. Contact 080-40977319/ +91 99450-67762.

WANTED HELPERS BOYS for Automobile Company J.C. Road, Bangalore Contact: 9844008922/ 9611728254 (11am to 5pm)

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

Manager

JAMES BOND Dry cleaners requires store Managers (Candidates with minimum 2 years experience in Dry cleaning only) Salary: 18,000 to 25,000 + incentives Location: Konankunte or Indiranagar or Gandhi Bazaar, Bangalore Timings: 9:30am to 9pm, Call: 8050666007

Marketing & Sales

WANTED MANAGERS, Sales Executives, Telecallers to work different parts of Bangalore earn 20,000-30,000: 8867627879

Teachers/ Professors

HIGH SCHOOL Social Science Teacher needed for CHITRAKOOTA CBSE SCHOOL in Nagarbhavi, KENGERI RING ROAD. Immediately. Call: 6361522604

REQUIRES TRAINED/ Untrained Teacher for English & Social Studies. Contact immediately with certificates. Principal CAMLIN ENGLISH SCHOOL, 4th cross, near 7th Main Bus Stop, Hampinagar, Bangalore-560104. Phone: 080-23301363

HRD & Admin

ADMISSION COUNSELLOR having Min. 3 yrs. Exp. in admissions, student counselling, with excellent communication & computer skills. Staying within 10 km of the ISME campus. Send resume to hr@isme.in. 080-28019800. ISME Sarjapur Road

Wanted

CUSTOMER SUPPORT Executives with Computer and Communication Skills Location Yeshwanthpur/ Mahalakshmi Layout 2-3 Years experience Email: chandrashekar@synergics.in / Mob: 9341856562

BANGALORE TURF CLUB LTD.

Post Box No. 5038, Race Course Road, Bangalore-560001.
EPABX:22262391/2/3 Extn:482,225,480.
GST No:29AABCB6217G1ZT. CIN: U99999KA1962PLC001449.
Email:secretary@btcraces.com/ceo@btcraces.com

TENDER NOTICE - 10/09/2025

Sealed tenders are invited separately for below mentioned services in the Bangalore Turf Club Ltd premises:
(1) Turf Blend Organic Manure Powder Form
(2) Turf Blend Organic Manure Pellets Form
Details are available on website **www.bangaloreraces.com**
Last date for receipt of Tender is on **Wednesday, 17th September 2025.**

SD/- CEO & Secretary

DH Classifieds – More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com
BOOK NOW
Book your ad with us now! For more details contact:
9845114560 | 9886213331

BHARATHI ENTERPRISES

Speech & Hearing Centre
Hearing Aid Sales & Service
Special Offer Week!

Now Open at **MATHIKERE**
#1067, 1st Floor, Ramaiah College Bus Stop Gokula 1st Stage, 2nd Phase, H.M.T Main Road
Locate us on Google
Ph.: 080-49743235, 9686664867
FRAZER TOWN, Coles Road, Mob: 9980682527
KAMMANAHALLI, KEB Road, Mob: 9901487270
KASTURI NAGAR, Channasandra Main Road, Mob: 9686664867
www.bharathiehearingcarecentre.com | bharathihearing@gmail.com

LEARN ARTIFICIAL INTELLIGENCE

WHATEVER YOU DO, DO IT BETTER WITH AI. WHETHER YOU RUN A BUSINESS, HAVE A JOB, OR WANT PART-TIME INCOME.
HANDS-ON CLASSROOM COACHING
CREATE WEBSITES,
CATALOGUES, YOUTUBE VIDEOS, FACEBOOK, INSTAGRAM POSTS, REELS & MORE..
BUILD AI ASSISTANTS
AI CHATBOTS, VIRTUAL RECEPTIONIST
DESIGN AI TOOLS &
WORKFLOW AUTOMATIONS
WITHOUT ANY CODING KNOWLEDGE OR IT SKILLS
YOU CAN DO IT IN MINUTES
EXPLORE THE MAGIC OF AI
ATTEND A FREE 2 HOUR DEMO CLASS
TODAY OR TOMORROW 6.20 PM
Hotel Paraag, Raj Bhavan Rd, opp GPO, Bengaluru-01
Call: 9403893162 | www.bootcampsindia.com
SCAN TO REGISTER

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Udupi

PLOT FOR SALE
1.03 Acres Empty plot at Malpe Beach Udupi, Karnataka
- Second plot from Beach Front.
- Litigation Free.
- Single Owner.

CONTACT
+91 99453 73934
+91 761-9581509
+91 70905 20216

BUSINESS

Business Offers

Finance

MSME LOANS Available for Any Startup Companies,Any Existing Companies NOTE:Also one Approved Loan Available Contact-7204995189

Business to Business

Business

COLLATERALS/ JOINT VENTURES/ Finance for big Projects/ Take Overs/ Buying/ Selling/ Any Other Good Projects. Vamshadhara Projects And Services. Dr.Swamy Naidu:- 9342247637.

PERSONAL

Change of Name

I, KIRANA KUMAR K N S/o.NANJUNDAPPA K C Residing at No.49,Y T Road, Goragondanahalli Post, Tiptur, Tumkur-572201 have changed my name to KIRAN KUMAR K N vide Affidavit date 19.08.2025 sworn before notary Vanajakshi.R, Bengaluru.

I, SABIRA BEE Residing at #1392, 2nd Cross, Railway Station Raod, Charmarajpete, Chickballapur- 562101, have changed my name to SABEERA BEE vide affidavit dated 08/09/2025, before notary K.H. Venkatappa, Chickaballapur.

I, HASHAM Pasha Residing at #1392, 2nd Cross, Railway Station Raod, Charmarajpete, Chickballapur- 562101, have changed my daughter's name from AYRA FATIMA HASHAM PASHA to AYRA FATIMA vide affidavit dated 06/09/2025, before notary K.H. Venkatappa, Chickaballapur.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Lost

DOCUMENT LOST
I, Harish Kumar Andhavarapu, S/o Mr Prasad Rao R/a Jeypore, Orissa have lost my original registered Agreement of Sale bearing document No. SHV-1-08050-2022-23 in BOOK I CD No SHVD1290 dated 29/12/2022 executed between Godrej Properties Ltd and myself for purchase of 2 BHK S 7th floor apartment bearing Unit No D 0705 with one car park at 'Godrej SPLENDOUR', Bangalore. Since I have lost it in my home town, Jeypore Town I have lodged a police complaint on 13-08-2025 before Jeypore Town Police Station which is recorded in station dairy No 005. If anyone finds it please contact 9008443650/9177463701 or handover it to the nearest police station.

PROPERTY
To Place your Classified Ads Contact
9845114560

ಅಪಾರ್ಟ್‌ಮೆಂಟ್‌ಗಳಲ್ಲಿ ಕನ್ನಡ ಕಲಿಕೆಗೆ ಹೆಚ್ಚಿದ ಒಲವು

36 ಗಂಟೆಗಳ ಬೋಧನೆಗೆ ಉತ್ತಮ ಸ್ಪಂದನೆ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ನೆಲಸಿರುವ ಅನ್ಯಭಾಷಿಕರಿಗೆ ಉಚಿತವಾಗಿ ಕನ್ನಡ ಕಲಿಸುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಯೋಜನೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಈಗ ವೈದ್ಯಕೀಯ ಶಿಕ್ಷಣ ಸಂಸ್ಥೆ, ಅಪಾರ್ಟ್‌ಮೆಂಟ್‌ಗಳಲ್ಲಿಯೂ ಕನ್ನಡ ಬೋಧನೆ ತರಗತಿಗಳನ್ನು ಪ್ರಾಧಿಕಾರ ನಡೆಸಲಾರಂಭಿಸಿದೆ.

ಈಗಾಗಲೇ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ನರ್ಸಿಂಗ್ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕಾ ತರಗತಿಯನ್ನು ಪ್ರಾಧಿಕಾರ ನಡೆಸುತ್ತಿದೆ. 160 ವಿದ್ಯಾರ್ಥಿಗಳು ಕನ್ನಡ ಕಲಿಯುತ್ತಿದ್ದಾರೆ. ವರ್ತೂರಿನಲ್ಲಿರುವ ಬ್ರಿಗೇಡ್ ಅಪಾರ್ಟ್‌ಮೆಂಟ್, ಕುಂಬಳಗೋಡಿನಲ್ಲಿರುವ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ನಿವಾಸಿಗಳಿಗೂ ಕನ್ನಡ ಬೋಧಿಸಲಾಗುತ್ತಿದೆ. ಇಲ್ಲಿರುವ ನಿವಾಸಿಗಳಲ್ಲಿ ಹೆಚ್ಚಿನವರು ಅನ್ಯಭಾಷಿಕರಾಗಿದ್ದು, ಕನ್ನಡ ಕಲಿಯಲು ಆಸಕ್ತಿ ತೋರಿದ್ದಾರೆ.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಕಂಪನಿ (ಎಚ್‌ಎಎಲ್) ಹಾಗೂ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಕಂಪನಿ ಉದ್ಯೋಗಿಗಳಿಗೂ ಕನ್ನಡ ಕಲಿಸಲಾಗುತ್ತಿದೆ. ಭಾರತೀಯ ಜನಗಣತಿ ಕಚೇರಿ, ಅಕೌಂಟೆಂಟ್ ಜನರಲ್ ಕಚೇರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗೂ ಕನ್ನಡ ಬೋಧನಾ ತರಗತಿಯನ್ನು ಪ್ರಾಧಿಕಾರ ನಡೆಸುತ್ತಿದೆ. ಈ ಕಲಿಕೆಯು ಕನ್ನಡ ಭಾಷೆಯಲ್ಲಿ ಸಂವಹನ ಹಾಗೂ ವ್ಯವಹರಿಸಲು ನೆರವಾಗುತ್ತಿದೆ.

36 ಗಂಟೆಗಳ ಕಲಿಕೆ: ಅನ್ಯಭಾಷಿಕರಿಗೆ ವಾರದಲ್ಲಿ 3 ದಿನಗಳಂತೆ 3 ತಿಂಗಳು ತರಗತಿಗಳನ್ನು ನಡೆಸಲಾಗುತ್ತಿದೆ. ಈ ಸಂಬಂಧ ಪ್ರತ್ಯೇಕ ಪಠ್ಯವನ್ನು ಸಿದ್ಧಪಡಿಸಲಾಗಿದೆ. 36 ಗಂಟೆಗಳ ತರಗತಿ ಇದಾಗಿದ್ದು, ಸಂವಹನಕ್ಕೆ ಸಹಕಾರಿಯಾದ ಸರಳ ಕನ್ನಡದ ಪಠ್ಯ ಇದಾಗಿದೆ. ಪದಕೋಶಗಳನ್ನು ಆಯಾ ಉದ್ಯೋಗ ಕ್ಷೇತ್ರಕ್ಕೆ ಅನುಗುಣವಾಗಿ ಮಾರ್ಪಾಡು ಮಾಡಲಾಗುತ್ತಿದೆ. ಕನ್ನಡ ವರ್ಣಮಾಲೆಯಿಂದ ಆರಂಭವಾಗುವ ಕಲಿಕೆ, ಸರ್ವನಾಮ, ನಾಮಪದ, ವಿಭಕ್ತಿ ಒಳಗೊಂಡು ಸಂಪೂರ್ಣ ವ್ಯಾಕರಣ ಬೋಧಿಸಲಾಗುತ್ತದೆ. ಕಲಿಕೆಗೆ ಪೂರಕವಾದ ಪಠ್ಯ ಹಾಗೂ ವಿಡಿಯೊ ಲಿಂಕ್‌ಗಳನ್ನು ಒದಗಿಸಲಾಗುತ್ತದೆ. ಕಲಿಕೆ ಪೂರ್ಣಗೊಂಡ ಬಳಿಕ ಪರೀಕ್ಷೆಯನ್ನೂ ನಡೆಸಿ, ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತದೆ.

‘ಸಂವಹನಕ್ಕೆ ಸಹಕಾರಿಯಾದ ಸರಳ ಕನ್ನಡದ ಪಠ್ಯ ರೂಪಿಸಲಾಗಿದೆ. ಸಂಜೆ 6ರಿಂದ 7 ಗಂಟೆಯ ಅವಧಿಯಲ್ಲಿ ತರಗತಿಗಳು ನಡೆಯಲಿವೆ. ಕನ್ನಡಿಗರ ಜತೆಗೆ ವ್ಯವಹರಿಸಲು, ನಾಮಫಲಕಗಳನ್ನು ಓದಲು ಈ ಕಲಿಕೆ ಸಹಕಾರಿಯಾಗಿದೆ. ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಈ ಕಲಿಕಾ ತರಗತಿ ನಡೆಸಲಾಗುತ್ತಿದೆ’ ಎಂದು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

> ಕನ್ನಡ ಕಲಿಯುವವರು ಯಾವ ಕ್ಷೇತ್ರದಿಂದ ಬಂದಿದ್ದಾರೆ ಎಂದು ತಿಳಿದು, ಅಲ್ಲಿನ ಉದಾಹರಣೆ ಸಹಿತ ಕನ್ನಡ ಕಲಿಸಲಾಗುತ್ತಿದೆ. ಆದ್ದರಿಂದ ಕಲಿಕೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ
> **ಪುರುಷೋತ್ತಮ ಬಿಳಿಮಲೆ,** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

> ಉದ್ಯೋಗ, ಶಿಕ್ಷಣ ಸಂಬಂಧ ಹೆಚ್ಚಿನ ಸಂಖ್ಯೆಯಲ್ಲಿ ಅನ್ಯಭಾಷಿಕರು ನಗರಕ್ಕೆ ಬರುತ್ತಿದ್ದು, ಅವರಿಗೆ ಕನ್ನಡ ಕಲಿಸುವ ಕೆಲಸ ನಡೆದಿದೆ. ಅಪಾರ್ಟ್‌ಮೆಂಟ್‌ಗಳಲ್ಲೂ ಕಲಿಕೆ ನಡೆಯುತ್ತಿದೆ
> **ಸಂತೋಷ ಹಾನಗಲ್ಲ,** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ

ಪ್ರಾಧಿಕಾರದಿಂದಲೇ ಶಿಕ್ಷಕರು

ಕನ್ನಡ ಕಲಿಕೆಗೆ ಸಂಬಂಧಿಸಿದಂತೆ ಪ್ರಾಧಿಕಾರವೇ ಶಿಕ್ಷಕರನ್ನು ಒದಗಿಸಲಿದೆ. ಸಂಘ–ಸಂಸ್ಥೆಗಳು ತರಗತಿಗಳಿಗೆ ಸ್ಥಳಾವಕಾಶವನ್ನು ಗುರುತಿಸಿ, ಕಲಿಕೆಗೆ ಅವಕಾಶ ಮಾಡಿಕೊಡಬೇಕಿದೆ. 36 ಗಂಟೆಗಳ ತರಗತಿಗೆ ₹30 ಸಾವಿರ ಗೌರವ ಸಂಭಾವನೆಯನ್ನು ಶಿಕ್ಷಕರಿಗೆ ನೀಡಲಾಗುತ್ತದೆ. ಸಂಘ–ಸಂಸ್ಥೆಗಳಿಗೆ ಈ ಗೌರವಧನ ಭರಿಸಲು ಸಾಧ್ಯವಾಗದಿದ್ದಲ್ಲಿ ಪ್ರಾಧಿಕಾರವೇ ನೀಡಲಿದೆ.

ಕನ್ನಡ ಕಲಿಕಾ ಕೇಂದ್ರಗಳನ್ನು ನಡೆಸಲು ಇಚ್ಛಿಸುವವರು ಪ್ರಾಧಿಕಾರದ ಕಚೇರಿ ದೂರವಾಣಿ ಸಂಖ್ಯೆ 080-22286773 ಅಥವಾ ಕಾರ್ಯದರ್ಶಿ ಸಂತೋಷ ಹಾನಗಲ್ಲ (95357 25499) ಅವರನ್ನು ಸಂಪರ್ಕಿಸಬಹುದು.

5 ಸಾವಿರಕ್ಕೂ ಅಧಿಕ ಮಂದಿ ಕಲಿಕೆ

ಕನ್ನಡೇತರರಿಗೆ ಕನ್ನಡ ಕಲಿಸುವ ಸಂಬಂಧ ಪ್ರಾಧಿಕಾರವು ಕಳೆದ ವರ್ಷ ಸಂವಹನ ಕೇಂದ್ರಿತವಾದ ಹೊಸ ಪಠ್ಯಕ್ರಮವನ್ನು ಸಿದ್ಧಪಡಿಸಿ, ಕಲಿಕಾ ತರಗತಿಗಳನ್ನು ಪ್ರಾರಂಭಿಸಿತ್ತು. ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಪ್ರಾದೇಶಿಕ ಕಚೇರಿಯಲ್ಲಿ ಅಧಿಕಾರಿಗಳಿಗೆ ಕಳೆದ ವರ್ಷ ತರಗತಿ ನಡೆಸಲಾಗಿತ್ತು. ಅಲ್ಲಿನ ಅಧಿಕಾರಿಗಳು ಕನ್ನಡ ಕಲಿತಿದ್ದರು. ಮಲೆಯಾಳ ಮಿಷನ್‌ನ ಸಹಯೋಗದಲ್ಲಿ 2 ಸಾವಿರಕ್ಕೂ ಅಧಿಕ ಮಲೆಯಾಳಿಗಳಿಗೆ ಕನ್ನಡ ಕಲಿಸಲಾಗಿದೆ. ಈಗಾಗಲೇ ನಗರದಲ್ಲಿ 5 ಸಾವಿರಕ್ಕೂ ಅಧಿಕ ಅನ್ಯಭಾಷಿಕರು ಪ್ರಾಧಿಕಾರದ ನೆರವಿನಿಂದ ಕನ್ನಡ ಕಲಿತಿದ್ದಾರೆ.

ನಗರದ ಹೋಟೆಲ್‌ಗಳಲ್ಲಿ ಅನ್ಯಭಾಷಿಕರು ಹೆಚ್ಚಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ, ಹೋಟೆಲ್‌ಗಳ ಸಂಘದ ಸಹಯೋಗದಲ್ಲಿ ಹೋಟೆಲ್‌ಗಳಲ್ಲಿನ ಕನ್ನಡೇತರ ಸಿಬ್ಬಂದಿಗೂ ಕನ್ನಡ ಕಲಿಸಲು ಪ್ರಾಧಿಕಾರ ಚಿಂತನೆ ನಡೆಸಿದೆ.

ನಗರದಲ್ಲಿ ಇತ್ತೀಚೆಗೆ ನಡೆದ ಕರ್ನಾಟಕ ವ್ಯಂಗ್ಯ ಚಿತ್ರಕಾರರ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ವ್ಯಂಗ್ಯ ಚಿತ್ರಕಾರ ಉಡುಪಿಯ ಜೀವನ್ ಶೆಟ್ಟಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ವಿ.ಆರ್‌.ಸಿ.ಶೇಖರ್, ವ್ಯಂಗ್ಯ ಚಿತ್ರಕಾರ ಎಂ.ವಿ.ಶಿವರಾಂ, ನಂಜುಂಡಸ್ವಾಮಿ, ಸುಬ್ರಹ್ಮಣ್ಯ ಉಪಸ್ಥಿತರಿದ್ದರು

ನಗರದಲ್ಲಿ ಇಂದು

ವಿಶ್ವ ಆತ್ಮಹತ್ಯೆ ತಡೆ ದಿನ: ಭಾಗವಹಿಸುವವರು: ಡಾ.ಎನ್. ಜನಾರ್ದನ್, ಡಾ.ಅನಿಶ್ ವಿ. ಚೆರಿಯನ್, ಉಮಾ ಮಹದೇವನ್, ಡಾ.ರಜನಿ ಪಾರ್ಥಸಾರಥಿ, ಅಧ್ಯಕ್ಷತೆ: ಡಾ.ಪ್ರತಿಮಾ ಮೂರ್ತಿ, ಆಯೋಜನೆ: ನಿಮ್ಹಾನ್ಸ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10

ಭಗವಾನ್ ಮಹಾವೀರ, ಭಗವಾನ್ ಬುದ್ಧ ಪ್ರಾಕೃತ ಮತ್ತು ಪಾಲಿ ಭಾಷಾ ಕೇಂದ್ರಗಳ ‘ಪಟ್ಟಾವಣ ಮಹೋತ್ಸವ’: ಉದ್ಘಾಟನೆ: ವಿಶ್ವೇಶ್ವರ ಭಟ್, ಅತಿಥಿಗಳು: ಮನೋಜ್ ಜೈನ್, ರಾಮಚಂದ್ರ ಜಿ. ಭಟ್, ಉಪಸ್ಥಿತಿ: ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ: ಅಹಲ್ಯಾ ಎಸ್., ಆಯೋಜನೆ ಮತ್ತು ಸ್ಥಳ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 11

ನೃತ್ಯ ವೈಭವ, ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಪ್ರದಾನ: ವಾಸವಿ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5

ಬಿ.ಡಿ. ಜತ್ತಿ ಅವರ ಜಯಂತಿ, ಸಂಸ್ಥಾಪನಾ ದಿನಾಚರಣೆ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ವಿ. ಸೋಮಣ್ಣ, ಅತಿಥಿ: ವೀರಪ್ಪ ಮೊಯಿಲಿ, ಅಧ್ಯಕ್ಷತೆ: ಅರವಿಂದ ಜತ್ತಿ, ‘ಬಸವ ವಿಭೂಷಣ’ ಪ್ರಶಸ್ತಿ: ಗೊ.ರು. ಚನ್ನಬಸಪ್ಪ, ‘ಬಸವಶ್ರೀ’ ಪ್ರಶಸ್ತಿ: ಸಿ.ಎಂ. ಚಂದ್ರಶೇಖರ್, ಎಸ್. ಪಿನಾಕಪಾಣಿ, ಆಯೋಜನೆ ಮತ್ತು ಸ್ಥಳ: ಅನುಭವ ಮಂಟಪ ಸಭಾಂಗಣ, ಬಸವ ಸಮಿತಿ, ಬಸವೇಶ್ವರ ರಸ್ತೆ, ಬೆಳಿಗ್ಗೆ 11.30



ಬಿ.ಡಿ ಜತ್ತಿ

ಡಿಸಿಎಂ ಕ್ಷಮೆಗೆ ವಕೀಲರ ಆಗ್ರಹ

ಬಾಗಲಕೋಟೆ: ವಕೀಲರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿ ವಕೀಲರ ಸಂಘದ ಸದಸ್ಯರು ಮಂಗಳವಾರ ಕಲಾಪದಿಂದ ದೂರ ಉಳಿದರು.

ಸಂಘದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಿ, ‘ಶಿವಕುಮಾರ್ ಅವರನ್ನು ಸಂಪುಟದಿಂದ ವಜಾಗೊಳಿಸಲು ಹಾಗೂ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಸೂಚಿಸಬೇಕು’ ಎಂದು ರಾಜ್ಯಪಾಲರಿಗೆ, ಜಿಲ್ಲಾಧಿಕಾರಿ ಮೂಲಕ ಮನವಿ ಸಲ್ಲಿಸಿದರು.

‘ವಕೀಲರು ರೈತರನ್ನು ತಪ್ಪು ದಾರಿಗೆ ಎಳೆಯಲು ಪ್ರಯತ್ನಿಸುತ್ತಿದ್ದಾರೆ’ ಎಂದು ಶಿವಕುಮಾರ್ ಹೇಳಿದ್ದಾರೆ. ಇದರಿಂದ ವಕೀಲರ ಗೌರವಕ್ಕೆ ಧಕ್ಕೆಯಾಗಿದೆ. ಕ್ಷಮೆ ಕೇಳುವವರೆಗೆ ನಿತ್ಯ ಬೆಳಿಗ್ಗೆ 10.30 ರಿಂದ ಒಂದು ಗಂಟೆ ಕಾಲ ಪ್ರತಿಭಟನೆ ಮಾಡಲಾಗುವುದು’ ಎಂದು ಸಂಘದ ಅಧ್ಯಕ್ಷ ಬಸವರಾಜ ಗದ್ದಿ ಹೇಳಿದರು.

ನಿಧನ ವಾರ್ತೆ

ಜಗನ್ನಾಥ

ಬೆಂಗಳೂರು: ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ (ಟಿಪಿಎಂಎಲ್) ಪ್ರೊಡಕ್ಷನ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಗನ್ನಾಥ (56) ಅವರು ಮಂಗಳವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರಿನಲ್ಲಿ ಬುಧವಾರ ಮಧ್ಯಾಹ್ನ 12 ಗಂಟೆಗೆ ಜಗನ್ನಾಥ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಗಿರೀಶ್‌ಗೌಡ

ದಾಬಸ್‌ಪೇಟೆ: ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಎನ್.ಸಿ. ಗಿರೀಶ್‌ಗೌಡ (29) ಸೋಮವಾರ ಬೆಳಗಿನ ಜಾವ ನಿಧನರಾದರು. ಅವರು ಅನಾರೋಗ್ಯದಿಂದ ಬಳಲುತ್ತಿದ್ದರು.

ಗಿರೀಶ್ ಅವರು ನರಸೀಪುರದ ಚೆನ್ನಕೇಶವಯ್ಯ ಹಾಗೂ ಸರೋಜಮ್ಮ ಅವರ ಹಿರಿಯ ಪುತ್ರ.

ಸೋಮವಾರ ರಾತ್ರಿ ಪಾಳಿ ಕೆಲಸಕ್ಕೆ ಹೋಗಿದ್ದು, ಈ ವೇಳೆ ಅಸ್ವಸ್ಥಗೊಂಡಿದ್ದರು. ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯೆ ಮೃತಪಟ್ಟರು ಎಂದು ಮೂಲಗಳು ಹೇಳಿವೆ. ಸ್ವಗ್ರಾಮ ನರಸೀಪುರದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರು ಕೆಳಗೆ ಉಲ್ಲೇಖಿಸಲಾದ ಮತ್ತು ವಿವರಿಸಲಾದ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು (“TDR”) ಖರೀದಿಸಲು ಉದ್ದೇಶಿಸಿದ್ದಾರೆ, ಇದು ಖಾಸಗಿ ಲಿಮಿಟೆಡ್ ಕಂಪನಿಯಾದ **ಮೆಸರ್ಸ್ ಸುಮಧುರ ಬಿಲ್ಡ್‌ವೆಲ್ ಪ್ರೈವೇಟ್ ಲಿಮಿಟೆಡ್‌ನಿಂದ,** ಇದು ನಂ. 14 & 158, ಪಟ್ಟಂದೂರು ಅಗ್ರಹಾರ, ವೈಟ್‌ಫೀಲ್ಡ್, ಬೆಂಗಳೂರು – 560 066 (“ಮಾಲೀಕರು”) ನಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದೆ. ಮಾಲೀಕರು ತಾವು TDR ನ ಸಂಪೂರ್ಣ ಮಾಲೀಕರು ಮತ್ತು ಅದು ಎಲ್ಲಾ ಹೊರೆಗಳು, ಅಡಮಾನ, ಶುಲ್ಕ, ಹಕ್ಕುದಾರಿಕೆ ಅಥವಾ ಮೊಕದ್ದಮೆಗಳಿಂದ ಮುಕ್ತವಾಗಿದೆ ಮತ್ತು TDR ವರ್ಗಾವಣೆಗೆ ಯಾವುದೇ ರೀತಿಯ ಒಪ್ಪಂದ/MOU/ಡೀಡ್‌ಗಳು ಇತ್ಯಾದಿಗಳನ್ನು ಮಾಡಿಕೊಂಡಿಲ್ಲ ಎಂದು ಪ್ರತಿನಿಧಿಸುತ್ತಾರೆ. ಮಾರಾಟ, ಮಾರಾಟ ಒಪ್ಪಂದ, ಉಡುಗೊರೆ, ಸಾಗಣೆ, ಸ್ವಾಧೀನ, ವಿಭಜನೆ, ವರ್ಗಾವಣೆ, ತಿಳುವಳಿಕೆ ಪತ್ರ, ವಿನಿಮಯ, ಅಡಮಾನ, ಪ್ರತಿಜ್ಞೆ, ಶುಲ್ಕ, ಹೊರೆ, ಉತ್ತರಾಧಿಕಾರ, ಗುತ್ತಿಗೆ, ಸುಲಭೀಕರಣ ಅಥವಾ ಬೇಡಿಕೆ ಅಥವಾ ಯಾವುದೇ ರೀತಿಯ ಆಕ್ಷೇಪಣೆಗಳು ಅಥವಾ ಹಕ್ಕುಗಳ ಮೂಲಕ TDR ಅಥವಾ ಅದರ ಯಾವುದೇ ಭಾಗ ಅಥವಾ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ, ಹಕ್ಕು, ಹಕ್ಕು, ಶೀರ್ಷಿಕೆ ಮತ್ತು / ಅಥವಾ ಆಸಕ್ತಿಯನ್ನು ಹೊಂದಿರುವ ಯಾವುದೇ ವ್ಯಕ್ತಿ / ವ್ಯಕ್ತಿಗಳು ಪ್ರಸ್ತಾವಿತ ವಹಿವಾಟಿಗೆ ತಮ್ಮ ಹಕ್ಕು(ಗಳು) / ಆಕ್ಷೇಪಣೆ(ಗಳು) / ಬೇಡಿಕೆ(ಗಳನ್ನು) ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ **ಹದಿನೈದು (15) ದಿನಗಳ** ಒಳಗೆ ದಾಖಲೆ ಪುರಾವೆಗಳಿಂದ ಬೆಂಬಲಿತವಾದ ಕೆಳಗೆ ಸಹಿ ಮಾಡಿದವರೊಂದಿಗೆ ಸಲ್ಲಿಸಬೇಕು, ಇಲ್ಲದಿದ್ದರೆ, ನನ್ನ ಕಕ್ಷಿದಾರರು ಪ್ರಸ್ತಾವಿತ ವಹಿವಾಟಿಗೆ ಯಾವುದೇ ಹಕ್ಕು(ಗಳು) / ಆಕ್ಷೇಪಣೆ(ಗಳು) / ಬೇಡಿಕೆ(ಗಳು) ಇಲ್ಲ ಎಂಬಂತೆ ಮೇಲೆ ತಿಳಿಸಿದ ವಹಿವಾಟನ್ನು ಮುಂದುವರಿಸಬೇಕು.

ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳ ವಿವರಣೆ

I	ಆಸ್ತಿ	: ಅಭಿವೃದ್ಧಿ ಹಕ್ಕು ಪ್ರಮಾಣಪತ್ರ		
	ಪ್ರಮಾಣಪತ್ರ ಸಂಖ್ಯೆ ಮತ್ತು ದಿನಾಂಕ ಮತ್ತು ಫೋಲಿಯೊ ಸಂಖ್ಯೆ	: ಪ್ರಮಾಣಪತ್ರ ಸಂಖ್ಯೆ 211, ದಿನಾಂಕ 31/05/2025 ಲೆಡ್ಜರ್ ಫೋಲಿಯೊ ಸಂಖ್ಯೆ ಬಿಡಿಎ/ಟಿಡಿಆರ್ ಸೆಲ್/ಡಿಆರ್‌ಸಿ/211/2025-26.		
	ಮೂಲ	: ಸರ್ವೆ ಸಂಖ್ಯೆ	:	55/2A1
		ಶರಣಾದ ಭೂಮಿಯ ವಿಸ್ತೀರ್ಣ	:	433.90 ಚದರ ಮೀಟರ್
		ಗ್ರಾಮ	:	ಪಣತ್ತೂರು
		ಹೋಬಳಿ	:	ವರ್ತೂರು
		ತಾಲ್ಲೂಕು	:	ಬೆಂಗಳೂರು ಪೂರ್ವ ತಾಲ್ಲೂಕು
	ಟಿಡಿಆರ್	: 867.80 ಚದರ ಮೀಟರ್		
	ವಿತರಣಾ ಪ್ರಾಧಿಕಾರ	: ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ		
II	ಆಸ್ತಿ	: ಅಭಿವೃದ್ಧಿ ಹಕ್ಕು ಪ್ರಮಾಣಪತ್ರ		
	ಪ್ರಮಾಣಪತ್ರ ಸಂಖ್ಯೆ ಮತ್ತು ದಿನಾಂಕ ಮತ್ತು ಫೋಲಿಯೊ ಸಂಖ್ಯೆ	: ಪ್ರಮಾಣಪತ್ರ ಸಂಖ್ಯೆ 213, ದಿನಾಂಕ 31/05/2025 ಲೆಡ್ಜರ್ ಫೋಲಿಯೊ ಸಂಖ್ಯೆ ಬಿಡಿಎ/ಟಿಡಿಆರ್ ಸೆಲ್/ಡಿಆರ್‌ಸಿ/213/2025-26.		
	ಮೂಲ	: ಸರ್ವೆ ಸಂಖ್ಯೆ	:	55/2C
		ಶರಣಾದ ಭೂಮಿಯ ವಿಸ್ತೀರ್ಣ	:	1382.40 ಚದರ ಮೀಟರ್
		ಗ್ರಾಮ	:	ಪಣತ್ತೂರು
		ಹೋಬಳಿ	:	ವರ್ತೂರು
		ತಾಲ್ಲೂಕು	:	ಬೆಂಗಳೂರು ಪೂರ್ವ ತಾಲ್ಲೂಕು
	ಟಿಡಿಆರ್ ನೀಡಲಾಗಿದೆ	: 2764.80 ಚದರ ಮೀಟರ್		
	ವಿತರಣಾ ಪ್ರಾಧಿಕಾರ	: ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ		
III	ಆಸ್ತಿ	: ಅಭಿವೃದ್ಧಿ ಹಕ್ಕು ಪ್ರಮಾಣಪತ್ರ		
	ಪ್ರಮಾಣಪತ್ರ ಸಂಖ್ಯೆ ಮತ್ತು ದಿನಾಂಕ ಮತ್ತು ಫೋಲಿಯೊ ಸಂಖ್ಯೆ	: ಪ್ರಮಾಣಪತ್ರ ಸಂಖ್ಯೆ: 212, ದಿನಾಂಕ 31/05/2025 ಲೆಡ್ಜರ್ ಫೋಲಿಯೊ ಸಂಖ್ಯೆ ಬಿಡಿಎ/ಟಿಡಿಆರ್ ಸೆಲ್/ಡಿಆರ್‌ಸಿ/212/2025-26.		
	ಮೂಲ	: ಸರ್ವೆ ಸಂಖ್ಯೆ	:	110
		ಶರಣಾದ ಭೂಮಿಯ ವಿಸ್ತೀರ್ಣ	:	2055.60 ಚದರ ಮೀಟರ್
		ಗ್ರಾಮ	:	ಪಾಣತ್ತೂರು
		ಹೋಬಳಿ	:	ವರ್ತೂರು
		ತಾಲ್ಲೂಕು	:	ಬೆಂಗಳೂರು ಪೂರ್ವ ತಾಲ್ಲೂಕು
	ಟಿಡಿಆರ್ ನೀಡಲಾಗಿದೆ	: 4111.20 ಚದರ ಮೀಟರ್		
	ವಿತರಣಾ ಪ್ರಾಧಿಕಾರ	: ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ		

ಸ್ಥಳ: ಬೆಂಗಳೂರು,
ದಿನಾಂಕ: 09/09/2025

ವಿನಯ್ ಕೆ.ಎಸ್.
ವಕೀಲರು,
ವಿನಯ್ ಕಡೆಮನೆ & ಅಸೋಸಿಯೇಟ್ಸ್,
307, 3ನೇ ಮಹಡಿ, ಪ್ರೆಸ್ಟೀಜ್ ಸೆಂಟರ್ ಪಾಯಿಂಟ್,
ಸಂಖ್ಯೆ 7/49, ಎಡ್ವರ್ಡ್ ರಸ್ತೆ,
ಬೆಂಗಳೂರು – 560 001.
ದೂರವಾಣಿ ಸಂಖ್ಯೆ: 080-2286 3885 / 4976 3233
vinay@vinaykademane.in



ಚಿಟಿಕೆ ಸುದ್ದಿ

‘ನಾಮದೇವ ಸಿಂಪಿ’ ಎಂದೇ ನಮೂದಿಸಿ

ಬೆಂಗಳೂರು: ‘ನಾಮದೇವ ಸಿಂಪಿ ಸಮಾಜದವರು ಜಾತಿ ಜನಗಣತಿ ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ಹಿಂದೂ ಎಂದು, ಜಾತಿ ಕಾಲಂನಲ್ಲಿ ನಾಮದೇವ ಸಿಂಪಿ ಎಂದೇ ನಮೂದಿಸಬೇಕು’ ಎಂದು ಕರ್ನಾಟಕ ರಾಜ್ಯ ನಾಮದೇವ ಸಿಂಪಿ ಸಮಾಜ ತಿಳಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ನಾರಾಯಣ್ ವಿ. ಕೊಪರ್ಡೆ, ‘ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯ ಕುರಿತು ನಿಖರ ಮಾಹಿತಿ ಪಡೆದುಕೊಳ್ಳಲು ಸಮೀಕ್ಷೆ ನಡೆಸಲಾಗುತ್ತಿದೆ. ಇದರಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳಬೇಕು. ಕುಲಕಸುಬು ಕಾಲಂನಲ್ಲಿ ದರ್ಜಿ, ನೇಕಾರಿಕೆ ಎಂದು ನಮೂದಿಸಬೇಕು. ಸಮೀಕ್ಷೆಯಲ್ಲಿ ಸಮುದಾಯದ ಪ್ರತಿಯೊಬ್ಬರೂ ನೈಜ ಜಾತಿಯನ್ನು ಬರೆಸಬೇಕು’ ಎಂದು ಮನವಿ ಮಾಡಿದರು.

ರಾಷ್ಟ್ರೀಯ ಸಮ್ಮೇಳನ ನಾಳೆಯಿಂದ

ಬೆಂಗಳೂರು: ಕ್ರೈಸ್ಟ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಸೈನ್ಸಸ್ ಮತ್ತು ಭಾಷಾ ವಿಭಾಗದ ವತಿಯಿಂದ ಇದೇ 11 ಮತ್ತು 12ರಂದು ಹೊಸೂರು ರಸ್ತೆಯಲ್ಲಿರುವ ವಿಶ್ವವಿದ್ಯಾಲಯದ ಆವರಣದಲ್ಲಿ ‘ವೈಬ್ರಂಟ್ ಅಡ್ವೊಕೆಸಿ ಫಾರ್ ಅಡ್ವಾನ್ಸ್‌ಮೆಂಟ್ ಆ್ಯಂಡ್ ನರ್ಚರಿಂಗ್ ಆಫ್ ಇಂಡಿಯನ್ ಲ್ಯಾಂಗ್ವೇಜಸ್’ ಶೀರ್ಷಿಕೆಯಡಿ ರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ಈ ಸಮ್ಮೇಳನವು ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ತಾಂತ್ರಿಕ ಶಿಕ್ಷಣ ಹಾಗೂ ಸಂಶೋಧನೆಯನ್ನು ಉತ್ತೇಜಿಸುವ ಗುರಿ ಹೊಂದಿದೆ. ಮಾತೃ ಭಾಷೆಗಳ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಗ್ಗೆ ಆಳವಾದ ಅರಿವು ಪಡೆದುಕೊಳ್ಳುವ ಬಗ್ಗೆ ಚರ್ಚಿಸಲಾಗುತ್ತದೆ. ಸುಸ್ಥಿರತೆ, ಕೃತಕ ಬುದ್ಧಿಮತ್ತೆ (ಎಐ), ನವೀಕೃತ ಶಕ್ತಿ, ಹವಾಮಾನ ಬದಲಾವಣೆ, ಕ್ವಾಂಟಂ ತಂತ್ರಜ್ಞಾನಗಳು ಸೇರಿದಂತೆ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಪ್ರಬಂಧ ಮಂಡನೆ ಮತ್ತು ಚರ್ಚೆಗಳು ನಡೆಯಲಿವೆ.

ಈ ಸಮ್ಮೇಳನವನ್ನು ಕ್ರೈಸ್ಟ್ ವಿಶ್ವವಿದ್ಯಾಲಯದ ಕುಲಸಚಿವ ಅನಿಲ್ ಜೋಸೆಫ್ ಪಿಂಟೊ ಉದ್ಘಾಟಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ವತಿಯಿಂದ 2025ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಜೈನಾಲಜಿ, ಪ್ರಾಕೃತ, ಜೈನಾಗಮ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ, ಮಹಾಪುರಾಣದಲ್ಲಿ ಅಂತರ್ಗತ ವಿಭಿನ್ನ ವಿಷಯಗಳ ಬಗ್ಗೆ ಸಂಶೋಧನೆ ನಡೆಸುತ್ತಿರುವ, ಕನ್ನಡ, ಸಂಸ್ಕೃತ, ಪ್ರಾಕೃತ ವಿಷಯಗಳಲ್ಲಿ ಎಂ.ಎ ವ್ಯಾಸಂಗ ಮಾಡುತ್ತಿರುವ ಹಾಗೂ ಸಂಗೀತ, ಭಜನೆ, ಜಿನಭಕ್ತಿ ಗೀತಗಾಯನ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳು ಇದೇ 20ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಟ್ರಸ್ಟ್‌ನ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಳಾಸ: ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್, ಶಾಂತಿ, 369, 42ನೇ ಅಡ್ಡರಸ್ತೆ, ಜಯನಗರ, 8ನೇ ಬ್ಲಾಕ್, ಬೆಂಗಳೂರು.

ಮಾಹಿತಿಗೆ: 88844 15109.

‘ರಸ್ತೆ : ಗುತ್ತಿಗೆದಾರರ ನೇಮಿಸಿಕೊಳ್ಳಿ’

ಐದು ನಗರ ಪಾಲಿಕೆಗಳ ಆಯುಕ್ತರಿಗೆ ಜಿಬಿಎ ಮುಖ್ಯ ಆಯುಕ್ತರ ಸೂಚನೆ

ಪ್ರಜಾವಾಣಿ ವಾರ್ತೆ

ಮಹೇಶ್ವರ್ ರಾವ್ ಅವರು ಐದು ನಗರ ಪಾಲಿಕೆಗಳ ಆಯುಕ್ತರೊಂದಿಗೆ ಮಂಗಳವಾರ ಸಭೆ ನಡೆಸಿದರು

ಬೆಂಗಳೂರು: ಐದು ನಗರ ಪಾಲಿಕೆಗಳಲ್ಲಿ ರಸ್ತೆಗಳು ಹಾಗೂ ಬೃಹತ್ ನೀರುಗಾಲುವೆಗಳ ನಿರ್ವಹಣೆಗಾಗಿ ಕೂಡಲೇ ಗುತ್ತಿಗೆದಾರರನ್ನು ನೇಮಿಸಿಕೊಳ್ಳಬೇಕು ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ನಗರ ಪಾಲಿಕೆಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಆಯುಕ್ತರೊಂದಿಗೆ ಮಂಗಳವಾರ ಸಭೆ ನಡೆಸಿದ ಅವರು, ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ ಕೇಂದ್ರೀಕೃತವಾಗಿ ಕಾರ್ಯನಿರ್ವಹಿಸುತ್ತಿದ್ದ ನಿರ್ವಹಣಾ ತಂಡಗಳನ್ನು ರದ್ದುಪಡಿಸಬೇಕು. ಆಯಾ ಪಾಲಿಕೆಗಳ ವ್ಯಾಪ್ತಿಗೆ ಅನುಗುಣವಾಗಿ ಹೊಸ ಗುತ್ತಿಗೆದಾರರನ್ನು ನೇಮಿಸಿಕೊಳ್ಳಬೇಕು ಎಂದರು.

ರಸ್ತೆ ಮೂಲಸೌಕರ್ಯ, ಕಟ್ಟಡಗಳು, ಬೃಹತ್ ನೀರುಗಾಲುವೆ, ಕೆರೆಗಳು ಸೇರಿದಂತೆ ವಿವಿಧ ವಿಭಾಗಗಳ ಕೇಂದ್ರೀಕೃತ ಕಚೇರಿಗಳಿಂದ ಕಡತಗಳನ್ನು ಸಂಬಂಧಪಟ್ಟ ಆಯಾ ನಗರ ಪಾಲಿಕೆಗಳಿಗೆ ಹಸ್ತಾಂತರ ಮಾಡುವ ಸಲುವಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ, ತ್ವರಿತವಾಗಿ ಕಡತಗಳನ್ನು ವಿಲೇವಾರಿ ಮಾಡಬೇಕು ಎಂದರು.

ಮುಖ್ಯಾಂಶಗಳು

- ಪಾಲಿಕೆಗಳು ಸಹಾಯವಾಣಿ ಪ್ರಕಟಿಸಬೇಕು
- ರಸ್ತೆ ಗುಂಡಿ ದುರಸ್ತಿಗೆ ಕ್ರಮ ಕೈಗೊಳ್ಳಬೇಕು
- ಕೇಂದ್ರೀಕೃತ ಕಚೇರಿಗಳಿಂದ ಕಡತ ಪಡೆಯಲು ಸೂಚನೆ

ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಲು ಸಹಾಯವಾಣಿ 1533 ಅನ್ನು ಜಿಬಿಎ ನಿರ್ವಹಿಸಲಿದೆ. ಐದು ನಗರ ಪಾಲಿಕೆಗಳ ಕೇಂದ್ರ ಕಚೇರಿ, ನಿಯಂತ್ರಣ ಕೊಠಡಿಗಳ ಬಗ್ಗೆ ನಾಗರಿಕರಿಗೆ ಮಾಹಿತಿ ನೀಡಬೇಕು ಎಂದು ಐದೂ ನಗರ ಪಾಲಿಕೆಗಳ ಆಡಳಿತಾಧಿಕಾರಿಯೂ ಆಗಿರುವ ಮಹೇಶ್ವರ್ ಸೂಚಿಸಿದರು.

ಆಯಾ ನಗರ ಪಾಲಿಕೆಗಳ ಕಚೇರಿಗಳಿಗಾಗಿ ಕಟ್ಟಡಗಳನ್ನು ನಿರ್ಮಿಸಲು ಸೂಕ್ತ ಖಾಲಿ ಜಾಗಗಳನ್ನು ಗುರುತಿಸಬೇಕು. ಆ ಬಳಿಕ ಲಭ್ಯವಿರುವ ಜಾಗ ಮತ್ತು ಕಚೇರಿ ಸ್ಥಳದ ಅವಶ್ಯಕತೆ ಆಧರಿಸಿ, ಹೊಸ ಪಾಲಿಕೆ ಕಟ್ಟಡಗಳ ವಿನ್ಯಾಸಗಳನ್ನು ಅಂತಿಮಗೊಳಿಸಬೇಕು ಎಂದರು.

ಜಿಬಿಎ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಸುಮಾರು 35,000 ಮಕ್ಕಳನ್ನು ಗುರುತಿಸಲಾಗಿದ್ದು, ಆಯಾ ನಗರ ಪಾಲಿಕೆಗಳಲ್ಲಿ ಎಷ್ಟು ಮಕ್ಕಳು ಬರಲಿದ್ದಾರೆ ಎಂಬ ಪಟ್ಟಿಯನ್ನು ನೀಡಲಾಗುವುದು. ಅದಕ್ಕಾಗಿ ವಾರ್ಡ್ ಹಾಗೂ ಪಾಲಿಕೆಗಳಲ್ಲಿ ಕಾರ್ಯಪಡೆ ರಚಿಸಿ, ಎಲ್ಲರನ್ನು ಪುನಃ ಶಾಲೆಗೆ ಕಳುಹಿಸಲು ಕ್ರಮ ಕೈಗೊಳ್ಳಬೇಕು ಎಂದು ಪಾಲಿಕೆ ಆಯುಕ್ತರಿಗೆ ಸೂಚಿಸಿದರು.

ನಗರ ಪಾಲಿಕೆಗಳ ಆಯುಕ್ತರಾದ ರಾಜೇಂದ್ರ ಚೋಳನ್, ಡಿ.ಎಸ್. ರಮೇಶ್, ಪೊಮ್ಮಲ ಸುನೀಲ್ ಕುಮಾರ್, ಕೆ.ಎನ್. ರಮೇಶ್, ಡಾ. ಕೆ.ವಿ. ರಾಜೇಂದ್ರ ಉಪಸ್ಥಿತರಿದ್ದರು.

ಜಿಬಿಎ ಆಯುಕ್ತರ ಸೂಚನೆಗಳು

- ನಗರ ಪಾಲಿಕೆಗಳ ಪ್ರಮುಖ ರಸ್ತೆಗಳು ಹಾಗೂ ವಾರ್ಡ್ ರಸ್ತೆಗಳಲ್ಲಿ ಗುಂಡಿ ದುರಸ್ತಿ ಪಡಿಸಲು ಹೊಸದಾಗಿ ಟೆಂಡರ್ ಕರೆಯಬೇಕು
- ಅನಧಿಕೃತ ಒ.ಎಫ್.ಸಿ ಹಾವಳಿ ತಪ್ಪಿಸಬೇಕು
- ಇಂದಿರಾ ಕ್ಯಾಂಟೀನ್ ಹಾಗೂ ಅಡುಗೆ ಕೋಣೆಗಳನ್ನು ಆಯಾ ನಗರ ಪಾಲಿಕೆಗಳು ವಹಿಸಿಕೊಳ್ಳಬೇಕು
- ಕಲ್ಯಾಣ ಕಾರ್ಯಕ್ರಮಗಳಡಿ ಫಲಾನುಭವಿಗಳಿಗೆ ಸೌಲಭ್ಯಗಳು ತಲುಪುವಂತೆ ಮಾಡಬೇಕು
- ಟ್ರಾಫಿಕ್ ಎಂಜಿನಿಯರಿಂಗ್ ಸೆಲ್ ವಿಭಾಗದಡಿ ಇದ್ದ ಜವಾಬ್ದಾರಿಗಳನ್ನು ನಗರ ಪಾಲಿಕೆಗಳು ವಹಿಸಿಕೊಳ್ಳಬೇಕು

- ಬೀದಿ ನಾಯಿಗಳ ನಿಯಂತ್ರಣಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು

ಸುದ್ದಿ 2 ನಿಮಿಷ

ದೋಹಾದಲ್ಲಿದ್ದ ಹಮಾಸ್ ಮುಖಂಡರ ಮೇಲೆ ದಾಳಿ

ದೋಹಾ (ಎಎಫ್‌ಪಿ/ ರಾಯಿಟರ್ಸ್): ಕತಾರ್ ರಾಜಧಾನಿ ದೋಹಾದಲ್ಲಿ ನೆಲಸಿರುವ ಹಮಾಸ್ ಸಂಘಟನೆಯ ನಾಯಕರನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಸೇನೆ ಮಂಗಳವಾರ ಹೇಳಿದೆ.

ಕತಾರ್ ಸೇರಿದಂತೆ ಹಲವು ದೇಶಗಳು ಇಸ್ರೇಲ್ ದಾಳಿಯನ್ನು ಖಂಡಿಸಿವೆ. ಹಮಾಸ್‌ನ ರಾಜಕೀಯ ನಾಯಕರ ನಿವಾಸಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ಕತಾರ್ ಹೇಳಿದೆ. ದಾಳಿಯ ಗುರಿ ಈಡೇರಿದೆಯೇ ಎಂಬ ಬಗ್ಗೆ ಇಸ್ರೇಲ್ ಯಾವುದೇ ಹೇಳಿಕೆ ನೀಡಿಲ್ಲ.

ಐವರು ಸದಸ್ಯರ ಸಾವು: ದೋಹಾದಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ತನ್ನ ಐದು ಸದಸ್ಯರು ಮೃತಪಟ್ಟಿದ್ದಾರೆ ಎಂದು ಹಮಾಸ್ ಹೇಳಿದೆ. ಇದರಲ್ಲಿ ಹಮಾಸ್ ನಾಯಕ ಖಲೀಲ್ ಅಲ್-ಹಯ್ಯಾ ಅವರ ಮಗನೂ ಸೇರಿದ್ದಾರೆ.

ಆದರೆ ಕದನ ವಿರಾಮ ಮಾತುಕತೆ ನಡೆಸಲು ತಾನು ನಿಯೋಜಿಸಿರುವ ತಂಡದ ಸದಸ್ಯರನ್ನು ಹತ್ಯೆ ಮಾಡುವ ಇಸ್ರೇಲ್ ಪ್ರಯತ್ನ ವಿಫಲವಾಗಿದೆ ಎಂದಿದೆ.

ಕತಾರ್‌ನಲ್ಲಿ ಆಶ್ರಯ ಪಡೆದಿರುವ ಹಮಾಸ್ ಸಂಘಟನೆಯ ಉನ್ನತ ನಾಯಕರಲ್ಲಿ ಪ್ರಮುಖ ಸಂಧಾನಕಾರ ಖಲೀಲ್ ಅಲ್-ಹಯ್ಯಾ ಮತ್ತು ರಾಜಕೀಯ ಬ್ಯೂರೊ ಮುಖ್ಯಸ್ಥ ಖಾಲಿದ್ ಮೆಶಾಲ್ ಸೇರಿದ್ದಾರೆ.

ಕತಾರ್‌ನಲ್ಲಿ ಕಾರ್ಯಾಚರಣೆ ನಡೆಸುವ ಬಗ್ಗೆ ಇಸ್ರೇಲ್ ತನಗೆ ಮುಂಚಿತವಾಗಿ ಮಾಹಿತಿ ನೀಡಿತ್ತು ಎಂದು ಅಮೆರಿಕ ಹೇಳಿದೆ.

ಜೆರುಸಲೇಂನಲ್ಲಿ ಸೋಮವಾರ ನಡೆದ ಗುಂಡಿನ ದಾಳಿಗೆ ಪ್ರತೀಕಾರವಾಗಿ ಈ ಕಾರ್ಯಾಚರಣೆ ನಡೆಸಲು ಸೇನೆಗೆ ಆದೇಶಿಸಿದ್ದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ. ಜೆರುಸಲೇಂನಲ್ಲಿ ಬಂದೂಕುಧಾರಿಯೊಬ್ಬ ಆರು ಮಂದಿಯನ್ನು ಹತ್ಯೆಗೈದಿದ್ದ. ದಾಳಿಯ ಹೊಣೆಯನ್ನು ಹಮಾಸ್ ಹೊತ್ತುಕೊಂಡಿತ್ತು.

ಆರ್.ಟಿ. ನಗರ: ಆಸ್ತಿ ವಶ

ಬೆಂಗಳೂರು: ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರೆಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ), ಮಂಗಳವಾರ ನಡೆದ ಕಾರ್ಯಾಚರಣೆಯಲ್ಲಿ ಆರ್.ಟಿ. ನಗರ ಬಡಾವಣೆಯಲ್ಲಿ ₹12.50 ಕೋಟಿ ಮೌಲ್ಯದ ಆಸ್ತಿ ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಕಸಬಾ ಹೋಬಳಿಯ ಮಠದ ಹಳ್ಳಿ ಗ್ರಾಮದ ಸರ್ವೆ ನಂಬರ್ 10/1ರಲ್ಲಿನ ಸುಮಾರು 585 ಚದರ ಮೀಟರ್ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ 4 ಶೆಡ್ ಮತ್ತು ಕಾಂಪೌಂಡ್ ಅನ್ನು ಜೆಸಿಬಿ ಮೂಲಕ ತೆರವುಗೊಳಿಸಿ, ₹ 12.50 ಕೋಟಿ ಮೌಲ್ಯದ ಪ್ರದೇಶವನ್ನು ಪ್ರಾಧಿಕಾರ ವಶಪಡಿಸಿಕೊಂಡಿತು.

ಅವಶೇಷಗಳನ್ನು ತೆರವುಗೊಳಿಸಿ, ಈ ಜಾಗದ ಸುತ್ತಲೂ ಬೇಲಿ ಹಾಕಿ, ರಕ್ಷಣೆ ಮಾಡಲಾಗಿದೆ. ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ನಡೆದ ಕಾರ್ಯಾಚರಣೆಯಲ್ಲಿ, ಪ್ರಾಧಿಕಾರದ ಕಾರ್ಯಪಡೆಯ ಇನ್‌ಸ್ಪೆಕ್ಟರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಬಾಗಿ , ಎಂಜಿನಿಯರ್ ಮಲ್ಲಿಕಾರ್ಜುನ ಸ್ವಾಮಿ ಭಾಗವಹಿಸಿದ್ದರು.

15 ತಿಂಗಳಲ್ಲಿ 14.33 ಲಕ್ಷ ಸಂಪರ್ಕಗಳಿಗೆ ಏರಿಯೇಟರ್ ಅಳವಡಿಕೆ

ನಿತ್ಯ 90 ಎಂಎಲ್‌ಡಿ ನೀರು ಉಳಿತಾಯ

• ಉಮೇಶ ಭಟ್ಟ ಪಿ. ಎಚ್

ಅಂಕಿ ಅಂಶ

5 ಲಕ್ಷ	ಅಪಾರ್ಟ್‌ಮೆಂಟ್‌ಗಳು
4 ಸಾವಿರ	ಸರ್ಕಾರಿ ಕಚೇರಿಗಳು
32,998	ಮನೆಗಳು
90 ಎಂಎಲ್‌ಡಿ	ನಿತ್ಯ ನೀರಿನ ಉಳಿತಾಯ

ಬೆಂಗಳೂರು: ನೀರಿನ ಅತಿಯಾದ ಬಳಕೆಯ ಮೇಲೆ ಮಿತಿ ಹೇರಲೆಂದೇ ನಗರದಲ್ಲಿ ಮೊದಲ ಬಾರಿಗೆ ಪರಿಚಯಿಸಿರುವ ಏರಿಯೇಟರ್‌ಗಳ ಅಳವಡಿಕೆಯಿಂದ ಬೆಂಗಳೂರು ಜಲಮಂಡಳಿಗೆ ನಿತ್ಯ 90 ಎಂಎಲ್‌ಡಿ ನೀರು ಉಳಿತಾಯವಾಗುತ್ತಿದೆ.

15 ತಿಂಗಳ ಅವಧಿಯಲ್ಲಿ 14,33,316 ಏರಿಯೇಟರ್‌ಗಳನ್ನು ಅಳವಡಿಸಲಾಗಿದೆ. ಈ ಮೂಲಕ ನೀರಿನ ಬಳಕೆಯನ್ನು ಮಿತಿಗೊಳಿಸಿ, ವ್ಯರ್ಥವಾಗುವುದನ್ನು ತಪ್ಪಿಸಿದ್ದರಿಂದ ನಗರದಲ್ಲಿ ನೀರಿನ ಬೇಡಿಕೆ ಶೇಕಡ 30ರಷ್ಟು ತಗ್ಗಿದೆ. ಅಲ್ಲದೆ ಹೆಚ್ಚಿನ ಗ್ರಾಹಕರಿಗೆ ನೀರು ಲಭ್ಯವಾಗುತ್ತಿದ್ದು ದೂರುಗಳು ಕಡಿಮೆಯಾಗಿವೆ.

ಸದ್ಯ ಅಪಾರ್ಟ್‌ಮೆಂಟ್, ಸರ್ಕಾರಿ ಕಚೇರಿಗಳು, ಹೋಟೆಲ್, ಮಾಲ್‌ಗಳ ನಲ್ಲಿಗಳಿಗೆ ಬಳಕೆಯಾಗುತ್ತಿರುವ ಏರಿಯೇಟರ್‌ಗಳನ್ನು ಪ್ರತಿ ಮನೆಗೂ ಅಳವಡಿಸಬೇಕು ಎನ್ನುವುದು ಜಲಮಂಡಳಿಯ ಉದ್ದೇಶ. ಈ ನಿಟ್ಟಿನಲ್ಲಿ ಪ್ರಯತ್ನ ಆರಂಭವಾಗಿದ್ದು ಹಂತ ಹಂತವಾಗಿ ವಿಸ್ತರಣೆ ಮಾಡಲಾಗುತ್ತದೆ.

‘ನೀರಿನ ಸಂರಕ್ಷಣೆಯ ಭಾಗವಾಗಿ ಏರಿಯೇಟರ್‌ಗಳನ್ನು ಅಳವಡಿಸಿದ್ದೇವೆ. ನಮ್ಮ ನಿರೀಕ್ಷೆಯಂತೆ ನೀರಿನ ಬಳಕೆಯಲ್ಲಿ ಗಮನಾರ್ಹ ಇಳಿಕೆಯಾಗಿರುವುದು ಕಂಡು ಬಂದಿದೆ. ಇದು ಜಲ ಸಂರಕ್ಷಣೆ ಹಾಗೂ ಪರಿಸರದ ಮೇಲೆ ಬೀರುವ ಪರಿಣಾಮವನ್ನು ತಪ್ಪಿಸುವ ಕ್ರಮವೂ ಹೌದು’ ಎನ್ನುತ್ತಾರೆ ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್.

> ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಏರಿಯೇಟರ್ ಅಳವಡಿಸಿದ್ದರಿಂದ ನೀರಿನ ಬಳಕೆ ಪ್ರಮಾಣ ತಗ್ಗಿದೆ. ನಿರಂತರ ಪ್ರಯತ್ನ ಫಲಪ್ರದವಾಗಿದೆ.
> **ರಾಮ್‌ಪ್ರಸಾತ್ ಮನೋಹರ್,** ಅಧ್ಯಕ್ಷರು, ಜಲಮಂಡಳಿ

ನಗರದಲ್ಲಿನ ಅಪಾರ್ಟ್‌ಮೆಂಟ್‌ಗಳು, ರೆಸ್ಟೋರೆಂಟ್, ಸ್ಟಾರ್ ಹೋಟೆಲ್‌ಗಳು, ಮಾಲ್‌ಗಳು, ಸರ್ಕಾರಿ ಕಚೇರಿಗಳು, ವಾಣಿಜ್ಯ ಕಟ್ಟಡಗಳು, ಧಾರ್ಮಿಕ ಸ್ಥಳಗಳನ್ನು ಗುರುತಿಸಿ ಅಲ್ಲಿ ಬಳಸುವ ನಲ್ಲಿಗಳಿಗೆ ಏರಿಯೇಟರ್‌ಗಳ ಅಳವಡಿಕೆ ಮಾಡಲಾಯಿತು. ಆರಂಭದಲ್ಲಿ ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ಮಾತ್ರ ಇದ್ದ ಏರಿಯೇಟರ್‌ಗಳ ಬಳಕೆಯನ್ನು, ಕ್ರಮೇಣ ಎಲ್ಲ ಕಡೆ ಕಡ್ಡಾಯವಾಗಿ ಬಳಸುವಂತೆ ತಾಕೀತು ಮಾಡಲಾಗಿದೆ.

ಉಳಿತಾಯ ಹೇಗೆ?

ಒಂದು ನಲ್ಲಿಗೆ ಏರಿಯೇಟರ್ ಅಳವಡಿಸಿದರೆ ಒಂದು ನಿಮಿಷಕ್ಕೆ ಮೂರು ಲೀಟರ್‌ವರೆಗೂ ನೀರು ಪಡೆಯಬಹುದು. ಏರಿಯೇಟರ್ ಅಳವಡಿಸದೇ ಇದ್ದರೆ ಹತ್ತು ಲೀಟರ್ ನೀರನ್ನು ಪಡೆಯಬಹುದಿತ್ತು. ಈ ಕ್ರಮದಿಂದ ಬಳಸುವ ಪ್ರಮಾಣದಲ್ಲಿ ಶೇ 30ರಷ್ಟು ಉಳಿತಾಯವಾಗಿದೆ ಎನ್ನುವುದು ಜಲಮಂಡಳಿ ವಿವರಣೆ.

‘2024ರ ಮಾರ್ಚ್ ಕೊನೆಯ ವಾರದೊಳಗೆ ಏರಿಯೇಟರ್ ಅಳವಡಿಸಿಕೊಳ್ಳದೇ ಇದ್ದವರಿಗೆ ₹5,000 ದಂಡ ವಿಧಿಸುವ ಜತೆಗೆ ಶೇ 50ರಷ್ಟು ನೀರು ಸರಬರಾಜು ಕಡಿಮೆ ಮಾಡುವುದಾಗಿ ಎಚ್ಚರಿಕೆ ನೀಡಲಾಯಿತು. ಆರಂಭದಲ್ಲಿ ಈ ಯೋಜನೆಗೆ ಅಷ್ಟಾಗಿ ಪ್ರತಿಕ್ರಿಯೆ ಸಿಗಲಿಲ್ಲ. ಜಲಮಂಡಳಿಯು ನಿರಂತರವಾಗಿ ಜಾಗೃತಿ ಮೂಡಿಸಿ, ದಂಡ ಪ್ರಯೋಗದ ಎಚ್ಚರಿಕೆ ನೀಡಿದ್ದರಿಂದ ಏರಿಯೇಟರ್ ಬಳಸುವವರ ಪ್ರಮಾಣ ಹೆಚ್ಚಾಯಿತು. ಮುಂದಿನ ಬೇಸಿಗೆ ವೇಳೆಗೆ ಇನ್ನಷ್ಟು ಹೆಚ್ಚುವ ನಿರೀಕ್ಷೆ ಇದೆ’ ಎಂದು ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

‘ಇದುವರೆಗೆ ಏರಿಯೇಟರ್ ಅಳವಡಿಕೆ ಮಾಡಿಕೊಳ್ಳದವರ ಸಂಖ್ಯೆ ಬಹಳಷ್ಟಿದೆ. ಅಂತಹವರಿಗೆ ಬಿಲ್‌ನೊಂದಿಗೆ ಸೂಚನೆ ನೀಡಲಾಗುತ್ತಿದೆ. ಹೊಸದಾಗಿ ಜಲಮಂಡಳಿಯ ನೀರಿನ ಸಂಪರ್ಕ ಪಡೆಯಲು ಬಂದವರಿಗೆ ಕಡ್ಡಾಯವಾಗಿ ಏರಿಯೇಟರ್ ಅಳವಡಿಸುವಂತೆ ನಿರ್ದೇಶನ ನೀಡಲಾಗುತ್ತಿದೆ’ ಎಂದು ಜಲಮಂಡಳಿಯ ಮುಖ್ಯ ಎಂಜಿನಿಯರ್ ಬಿ.ಎಸ್. ದಲಾಯತ್ ಹೇಳಿದರು.

ಜಲಮಂಡಳಿ ಕಾಯ್ದೆ 1964ರ ಸೆಕ್ಷನ್ 109ರ ಅಡಿಯಲ್ಲಿ ನೀರಿನ ಬಳಕೆ ಮಿತಗೊಳಿಸಲೆಂದೇ ಏರಿಯೇಟರ್‌ಗಳನ್ನು ಅಳವಡಿಸುವ ಯೋಜನೆ ರೂಪಿಸಲಾಗಿದೆ. ಜನರು ಅನಗತ್ಯವಾಗಿ ನೀರು ವ್ಯಯ ಮಾಡುವುದನ್ನು ತಪ್ಪಿಸಬೇಕು. ನೀರಿನ ಬಳಕೆ ಕುರಿತು ಜಾಗೃತಿ ಮೂಡಿಸಬೇಕು ಎನ್ನುವುದು ಜಲಮಂಡಳಿಯ ಆಶಯವಾಗಿದೆ.

ಹಳದಿ ಮಾರ್ಗ: ಇಂದಿನಿಂದ 4ನೇ ರೈಲು ಸಂಚಾರ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಬುಧವಾರದಿಂದ ಪ್ರತಿ 19 ನಿಮಿಷಕ್ಕೊಮ್ಮೆ ರೈಲುಗಳು ಸಂಚರಿಸಲಿವೆ.

ಹಳದಿ ಮಾರ್ಗದಲ್ಲಿ ನಾಲ್ಕನೇ ರೈಲಿನ ಸಂಚಾರ ಬುಧವಾರ ಆರಂಭವಾಗಲಿದೆ. ಇದರಿಂದಾಗಿ ಪ್ರತಿ ಟ್ರಿಪ್‌ನ ಅಂತರ 25 ನಿಮಿಷದಿಂದ 19 ನಿಮಿಷಕ್ಕೆ ಇಳಿಯಲಿದೆ.

ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 6.30ರ ಬದಲು 6 ಗಂಟೆಯಿಂದಲೇ ಸಂಚಾರ ಶುರುವಾಗಲಿದೆ. ಭಾನುವಾರ ಮಾತ್ರ ಬೆಳಿಗ್ಗೆ 7ಕ್ಕೆ ರೈಲುಗಳ ಸಂಚಾರ ಆರಂಭವಾಗಲಿದೆ. ನಾಲ್ಕನೇ ರೈಲು ಸಂಚಾರ ಆರಂಭವಾಗುವುದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

15ರಿಂದ 3 ದಿನ ನೀರು ಪೂರೈಕೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿಯು ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಸೆ.15ರಿಂದ ಮೂರು ದಿನ ನಗರದಲ್ಲಿ ಕಾವೇರಿ ನೀರು ಸರಬರಾಜಿನಲ್ಲಿ ವ್ಯತ್ಯಯ ಆಗಲಿದೆ.

ನೀರು ಸರಬರಾಜು ಯೋಜನೆಯ ವಿವಿಧ ಹಂತಗಳ ಜಲರೇಚಕ ಯಂತ್ರಾಗಾರಗಳನ್ನು ಮೂರು ದಿನಗಳ ಕಾಲ ಸ್ಥಗಿತಗೊಳಿಸಲಾಗುತ್ತದೆ. ನೀರು ಪೂರೈಕೆಯಲ್ಲಿ ವ್ಯತ್ಯಯ ಆಗುವುದರಿಂದ ಮೊದಲೇ ಸಂಗ್ರಹ ಮಾಡಿಕೊಳ್ಳಬೇಕು ಎಂದು ಜಲಮಂಡಳಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಕಾವೇರಿ 5ನೇ ಹಂತದ ಜಲರೇಚಕ ಯಂತ್ರಾಗಾರಗಳನ್ನು ಸೆ.15ರಂದು ಬೆಳಿಗ್ಗೆ 1ರಿಂದ ಸೆ.17ರ ಮಧ್ಯಾಹ್ನ 1ರವರೆಗೆ, ಕಾವೇರಿ ಹಂತ-1, ಹಂತ-2, ಹಂತ-3, ಹಂತ-4 ಹಾಗೂ 1ನೇ ಘಟ್ಟ ಮತ್ತು 2ನೇ ಘಟ್ಟಗಳ ಜಲರೇಚಕ ಯಂತ್ರಾಗಾರಗಳನ್ನು ಸೆ.16ರ ಬೆಳಿಗ್ಗೆ 6ರಿಂದ ಸೆ.17ರ ಬೆಳಿಗ್ಗೆ 6ರವರೆಗೆ ಸ್ಥಗಿತಗೊಳಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಮಂಡ್ಯ ನಿವೇಶನ ಹಗರಣ: ಸಿಬಿಐ ಮೇಲ್ಮನವಿ ವಜಾ

ನವದೆಹಲಿ: ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಗರಣದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರನ್ನು ದೋಷಮುಕ್ತರನ್ನಾಗಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

‘ಪ್ರಾಧಿಕಾರವು 107 ನಿವೇಶನಗಳನ್ನು ನಿಯಮಬಾಹಿರವಾಗಿ ಹಂಚಿಕೆ ಮಾಡಿದೆ‘ ಎಂದು ಸಾಮಾಜಿಕ ಹೋರಾಟಗಾರ ಕೆ.ಆರ್.ರವೀಂದ್ರ ಹಾಗೂ ಕೆಪಿಸಿಸಿ ಸದಸ್ಯ ಟಿ.ಎಸ್.ಸತ್ಯಾನಂದ ಆರೋಪಿಸಿದ್ದರು. 2011ರ ಅ.17ರಂದು ಈ ಹಗರಣ ಬೆಳಕಿಗೆ ಬಂದಿತ್ತು. ಸರ್ಕಾರ ಇದನ್ನು ಸಿಬಿಐ ತನಿಖೆಗೆ ವಹಿಸಿತ್ತು.

ಕಟ್ಟಡಗಳಿಗೆ ಒಸಿ ವಿನಾಯಿತಿ

ಒಂದನೇ ಪುಟದಿಂದ...

ಜಿಬಿಎ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆಯನ್ನು ಇದೀಗ ‘ನಂಬಿಕೆ ನಕ್ಷೆ’ ವ್ಯವಸ್ಥೆಯಡಿ ‘ಆಟೊಮೇಟೆಡ್ ಆನ್‌ಲೈನ್ ತಂತ್ರಾಂಶ’ದ ಮೂಲಕ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ಅರ್ಜಿ ಸಲ್ಲಿಸಿದ ದಿನದಂದೇ ಕರಡು ನಕ್ಷೆ ಮತ್ತು 15 ದಿನದಲ್ಲಿ ಅಂತಿಮ ನಕ್ಷೆ ಮಂಜೂರು ಮಾಡಿ, ಸಾರ್ವಜನಿಕರಿಗೆ ಪಾರದರ್ಶಕ ಹಾಗೂ ಕಾಲಮಿತಿಯಲ್ಲಿ ನಕ್ಷೆ ಮಂಜೂರು ಮಾಡಲಾಗುತ್ತಿದೆ.

ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆಯು ಸ್ಥಳ ಪರಿಶೀಲನೆ, ನಿರ್ಮಾಣ ಮಾಡಿರುವ ಕಟ್ಟಡ ಹಾಗೂ ಅನುಮೋದಿತ ಕಟ್ಟಡ ನಕ್ಷೆಯ ತುಲನಾತ್ಮಕ ಪರಿಶೀಲನೆಯನ್ನು ಒಳಗೊಂಡಿರುತ್ತದೆ. ಇದರಿಂದ ಸ್ಥಳೀಯ ಸಂಸ್ಥೆಗಳ ಮೇಲೆ ಹೆಚ್ಚಿನ ಕೆಲಸದ ಹೊರೆ ಉಂಟಾಗುತ್ತದೆ. ಅಲ್ಲದೆ, ಸಾರ್ವಜನಿಕರಿಗೆ ಸೇವೆ ನೀಡುವಲ್ಲಿ ವಿಳಂಬವಾಗುವ ಸಾಧ್ಯತೆಗಳಿವೆ. ‘ನಂಬಿಕೆ ನಕ್ಷೆ’ ವ್ಯವಸ್ಥೆಯಲ್ಲಿ ತ್ವರಿತವಾಗಿ ನಕ್ಷೆ ಮಂಜೂರು ಮಾಡುವುದನ್ನು ಗಮನದಲ್ಲಿರಿಸಿಕೊಂಡು ಸಣ್ಣ ಪ್ರಮಾಣದ ಕಟ್ಟಡಗಳಿಗೆ ಒಸಿಯಿಂದ ವಿನಾಯಿತಿ ನೀಡುವುದು ಸೂಕ್ತವಾಗಿರುತ್ತದೆ ಎಂದು ಪ್ರಸ್ತಾವದಲ್ಲಿ ಮುಖ್ಯ ಆಯುಕ್ತರು ವಿವರಿಸಿದ್ದರು.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024ರಲ್ಲಿ ‘ಸ್ವಾಧೀನಾನುಭವ ಪ್ರಮಾಣ ಪತ್ರದಿಂದ ವಿನಾಯಿತಿ ಪಡೆಯುವ ಕಟ್ಟಡಗಳ ವರ್ಗವನ್ನು ಸರ್ಕಾರ ಅಧಿಸೂಚಿಸಬಹುದು’ ಎಂದು ಹೇಳಲಾಗಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ ಅಧ್ಯಾಯ 7ರ ನಿಬಂಧನೆಗಳನ್ವಯ ಕಟ್ಟಡ ಮತ್ತು ನಗರ ಯೋಜನಾ ನಿಯಮಗಳ ನಿಯಂತ್ರಣ, ಮೇಲ್ವಿಚಾರಣೆಗಳನ್ನು ಕಾರ್ಯಗತಗೊಳಿಸಲು ಕಾರ್ಯಪಡೆಯೊಂದಿಗೆ ಆಡಳಿತ ರಚನೆಯನ್ನು ಜಿಬಿಎ ಮುಖ್ಯ ಆಯುಕ್ತರು ವಿನ್ಯಾಸಗೊಳಿಸಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ವಿದ್ಯುತ್ ಸಂಪರ್ಕಕ್ಕೆ ಅವಕಾಶ

‘ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಇಲ್ಲದೆ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡುವಂತಿಲ್ಲ ಎಂಬ ಆದೇಶ 2025ರ ಏಪ್ರಿಲ್‌ನಿಂದ ಜಾರಿಯಾಗಿತ್ತು. ಈಗ ಸಣ್ಣ ಪ್ರಮಾಣದ ಕಟ್ಟಡಗಳಿಗೆ ಒಸಿಯಿಂದ ವಿನಾಯಿತಿ ನೀಡಿರುವುದರಿಂದ ಅವರಿಗೆ ವಿದ್ಯುತ್ ಸಂಪರ್ಕ ಸಿಗಲಿದೆ. ಜಿಬಿಎ ವ್ಯಾಪ್ತಿಯಲ್ಲೇ ಸುಮಾರು 50 ಸಾವಿರ ಕಟ್ಟಡಗಳು ಒಸಿ ಇಲ್ಲದೆ ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗಿರಲಿಲ್ಲ. ಕಟ್ಟಡ ನಕ್ಷೆ ಮಂಜೂರಾಗಿದ್ದರೆ ಒಸಿಯಿಂದ ವಿನಾಯಿತಿ ಸಿಗಲಿದೆ’ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದರು.



ಹಿಟಾಚಿ ಕನ್‌ಸ್ಟ್ರಕ್ಷನ್ ಮಷಿನರಿ ಕಂಪನಿಯ ಪ್ರತಿನಿಧಿಯೊಂದಿಗೆ ಸಚಿವ

‘ಧಾರವಾಡದಲ್ಲಿ ಹಿಟಾಚಿ ಘಟಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಪಾನಿನ ಹಿಟಾಚಿ ಕನ್‌ಸ್ಟ್ರಕ್ಷನ್ ಮಷಿನರಿ ಕಂಪನಿಯು ಧಾರವಾಡದಲ್ಲಿ ನಿರ್ಮಾಣ ಯಂತ್ರೋಪಕರಣಗಳ ವಿನ್ಯಾಸ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪಿಸಲಿದೆ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ತಿಳಿಸಿದ್ದಾರೆ.

ಜಪಾನ್ ಪ್ರವಾಸದಲ್ಲಿರುವ ಅವರು ಹಿಟಾಚಿ ಕಂಪನಿಯ ಪ್ರತಿನಿಧಿಗಳ ಭೇಟಿಯ ನಂತರ ಹೊರಡಿಸಿದ ಪ್ರಕಟಣೆಯಲ್ಲಿ ಈ ಮಾಹಿತಿ ನೀಡಿದ್ದಾರೆ.

‘ಧಾರವಾಡದಲ್ಲಿ ಈ ಕೇಂದ್ರವು 2027ರ ವೇಳೆಗೆ ಕಾರ್ಯಾರಂಭ ಮಾಡಲಿದೆ. ವಾಹನಗಳ ಏರ್‌ಬ್ಯಾಗ್‌ನ ಬಿಡಿ ಭಾಗಗಳ ತಯಾರಿಕಾ ಕಂಪನಿ ಅಸಾಹಿ ಕಸೆಯಿ ಅಡ್ವಾನ್ಸ್ಡ ಬೆಂಗಳೂರಿನಲ್ಲಿ ಬಿಡಿ ಭಾಗಗಳ ತಯಾರಿಕಾ ಘಟಕ ಸ್ಥಾಪಿಸುವುದಾಗಿ ಹೇಳಿದೆ’ ಎಂದಿದ್ದಾರೆ.

ಜಿಕೆವಿಕೆ: ನವೆಂಬರ್ 13ರಿಂದ 16ರವರೆಗೆ ನಡೆಯುವ ಕೃಷಿ ಮೇಳದಲ್ಲಿ ಬಿಡುಗಡೆ

ಐದು ಹೊಸ ತಳಿಗಳ ಅಭಿವೃದ್ಧಿ

• ಖಲೀಲಅಹ್ಮದ ಶೇಖ

ಬೆಂಗಳೂರು: ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ರೈತರಿಗಾಗಿ ಈ ಬಾರಿ ಐದು ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದೆ. ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ‘ಕೃಷಿ ಮೇಳ’ಕ್ಕೆ ಭರದ ಸಿದ್ಧತೆ ನಡೆಯುತ್ತಿದ್ದು, ಹೊಸ ತಳಿಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ಪರಿಚಯಿಸಲಾಗುತ್ತಿದೆ. ಮೇಳಕ್ಕೆ ಬರುವ ರೈತರು ಇದನ್ನು ವೀಕ್ಷಿಸಬಹುದು.

ನವೆಂಬರ್ 13ರಿಂದ 16ರವರೆಗೆ ನಡೆಯುವ ಕೃಷಿ ಮೇಳದಲ್ಲಿ ಧಾನ್ಯ ಜೋಳ (ಸಿಎನ್‌ಜಿಎಸ್–1), ಸೂರ್ಯಕಾಂತಿ (ಕೆಬಿಎಸ್‌ಎಚ್–88), ಹರಳು (ಬಿಸಿಎಚ್–162), ಕಪ್ಪು ಅರಿಶಿಣ (ಸಿಎಚ್‌ಎನ್‌ಬಿಟಿ–1) ಹಾಗೂ ಅರಿಶಿಣ (ಐಐಎಸ್‌ಆರ್ ಪ್ರತಿಭಾ) ಎಂಬ ಐದು ತಳಿಗಳನ್ನು ಬಿಡುಗಡೆಗೊಳಿಸಲಾಗುತ್ತದೆ.

‘ಈ ಎಲ್ಲ ತಳಿಗಳು ಹಿಂದಿನ ತಳಿಗಳಿಗಿಂತ ಹೆಚ್ಚು ಇಳುವರಿ ನೀಡುವ ಸಾಮರ್ಥ್ಯ ಹೊಂದಿದ್ದು, ರೋಗಗಳಿಗೆ ಹೆಚ್ಚು ತುತ್ತಾಗುವುದಿಲ್ಲ. ಈ ತಳಿಗಳನ್ನು ಬೆಳೆಯುವುದರಿಂದ ರೈತರಿಗೆ ಸಮಸ್ಯೆಗಳು ಕಡಿಮೆ ಮತ್ತು ಹೆಚ್ಚು ಲಾಭ ಪಡೆಯಬಹುದು. ಬೇಸಾಯ ಪದ್ಧತಿಯ ಎರಡು ಹೊಸ ತಾಂತ್ರಿಕತೆಗಳು ಹಾಗೂ 28 ಮೌಲ್ಯವರ್ಧಿತ ಉತ್ಪನ್ನಗಳನ್ನು ಪರಿಚಯಿಸಲಾಗುತ್ತದೆ’ ಎಂದು ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ‘ಎಸ್.ವಿ. ಸುರೇಶ ‘ಪ್ರಜಾವಾಣಿ’ಗೆ ತಿಳಿಸಿದರು.

‘ಧಾನ್ಯ ಜೋಳದ ತಳಿಯು 100ರಿಂದ 105 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಇದು ಪ್ರತಿ ಹೆಕ್ಟೇರಿಗೆ 39ರಿಂದ 40 ಕ್ವಿಂಟಲ್ ಇಳುವರಿ ಹಾಗೂ 30 ಟನ್‌ನಿಂದ 33 ಟನ್‌ವರೆಗೆ ಮೇವಿನ ಇಳುವರಿ ನೀಡುತ್ತದೆ. ಇದರ ಗಿಡ ಕಟಾವಿನ ಸಂದರ್ಭದಲ್ಲೂ ಹಸಿರಿನಿಂದ ಇರುವುದರಿಂದ ಹಸಿರು ಮೇವಿನ ಕೊರತೆಗೆ ಪರಿಹಾರ ಸಿಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಕಪ್ಪು ಅರಿಶಿಣ ತಳಿಯಲ್ಲಿ ಹೆಚ್ಚಿನ ಎಲೆಗಳು ಹಾಗೂ ಉತ್ತಮ ಹರವು ಇದ್ದು, ಉತ್ತಮ ಭೌತಿಕ ಗುಣ ಲಕ್ಷಣಗಳನ್ನು ಹೊಂದಿದೆ. ಇದರ ಗೆಡ್ಡೆಯು ದಪ್ಪವಾಗಿದ್ದು, ತಿರುಳು ಉತ್ಕೃಷ್ಟ ನೀಲಿ ಬಣ್ಣದಿಂದ ಕೂಡಿದೆ. ಒಂದು ಹೆಕ್ಟೇರ್‌ಗೆ 8 ಟನ್‌ನಿಂದ 10 ಟನ್ ಇಳುವರಿ ನೀಡುತ್ತದೆ. ಇದು ಸುಮಾರು 255ರಿಂದ 265 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಪ್ರತಿಭಾ ಅರಿಶಿಣ ತಳಿಯು 240ರಿಂದ 245 ದಿನಗಳಲ್ಲಿ ಕಟಾವಿಗೆ ಬರಲಿದ್ದು, ಪ್ರತಿ ಹೆಕ್ಟೇರ್‌ಗೆ 34 ಟನ್‌ನಿಂದ 36 ಟನ್ ಇಳುವರಿ ನೀಡುತ್ತದೆ’ ಎಂದರು.

‘ಅಧಿಕ ಎಣ್ಣೆ ಅಂಶ ಹೊಂದಿದ ಸೂರ್ಯಕಾಂತಿ, ಹರಳು’

‘ಸೂರ್ಯಕಾಂತಿ ಸಂಕರಣ ತಳಿಯು 84ರಿಂದ 86 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಇದು ಕೇದಿಗೆ ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. ಈ ಸಂಕರಣ ತಳಿಯು ಶೇಕಡ 19ರಷ್ಟು ಅಧಿಕ ಬೀಜದ ಇಳುವರಿ ಹೊಂದಿದ್ದು, ಒಂದು ಹೆಕ್ಟೇರ್‌ಗೆ 22 ರಿಂದ 24 ಕ್ವಿಂಟಲ್ ಇಳುವರಿ ಬರುತ್ತದೆ. ಇದರಲ್ಲಿ ಶೇ 28ರಷ್ಟು ಅಧಿಕ ಎಣ್ಣೆಯ ಇಳುವರಿ ನೀಡುತ್ತದೆ’ ಎಂದು ಎಸ್.ವಿ. ಸುರೇಶ ಹೇಳಿದರು.

‘ಹರಳು ಸಂಕರಣ ತಳಿಯು ಒಣ ಬೇಸಾಯಕ್ಕೆ ಸೂಕ್ತವಾಗಿದೆ. ಇದು ಪ್ರತಿ ಕ್ವಿಂಟಲ್‌ಗೆ 15ರಿಂದ 20 ಕ್ವಿಂಟಲ್ ಇಳುವರಿ ಹಾಗೂ ಶೇ 48ರಷ್ಟು ಎಣ್ಣೆ ಅಂಶವನ್ನು ಹೊಂದಿದೆ. ಪ್ರಥಮ ಗೊಂಚಲು ಮಾಗಲು 95ರಿಂದ 100 ದಿನಗಳನ್ನು ತೆಗೆದುಕೊಳ್ಳುತ್ತದೆ’ ಎಂದರು.

ಬಿಸಿಎಚ್–162 ಹರಳಿನ ಬೀಜಗಳು

ಜಿಕೆವಿಕೆಯಲ್ಲಿ ಬೆಳೆದಿರುವ ಸೂರ್ಯಕಾಂತಿ ಪ್ರಾತ್ಯಕ್ಷಿಕೆ

ಕಪ್ಪು ಅರಿಶಿಣದ ಗೆಡ್ಡೆ

> ಹವಾಮಾನ ವೈಪರೀತ್ಯದಿಂದ ಆಗುವ ಬದಲಾವಣೆಗೆ ತಕ್ಕಂತೆ ಬೆಳೆಯುವ ತಳಿಗಳನ್ನು ಸಂಶೋಧನೆ ಮಾಡುತ್ತಿದ್ದೇವೆ. ಇವುಗಳಿಂದ ರೈತರಿಗೆ ಹೆಚ್ಚು ಆದಾಯ ಸಿಗಲಿದೆ
> **ಎಸ್.ವಿ. ಸುರೇಶ,** ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ

ಜೋಳದ ಬೆಳೆಯ ಪ್ರಾತ್ಯಕ್ಷಿಕೆ

‘ನಾಗರಿಕ ಸೇವೆ ಗುಣಮಟ್ಟದ ಕಡೆ ಗಮನಹರಿಸಲಿ’

ಪ್ರಜಾವಾಣಿ ವಾರ್ತೆ

ಎಸ್‌.ಸುರೇಶ್ ಕುಮಾರ್

ಬೆಂಗಳೂರು: ‘ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ಕೆ–ರೇರಾ) ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎಂಬ ಅರ್ಥಹೀನ ಮತ್ತು ದಿಕ್ಕು ತಪ್ಪಿಸುವ ವಾದ ಮುಂದುವರಿಸುವ ಬದಲು, ನಾಗರಿಕ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವ ಕಡೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಗಮನಹರಿಸಬೇಕು’ ಎಂದು ಶಾಸಕ ಎಸ್.ಸುರೇಶ್ ಕುಮಾರ್ ಸಲಹೆ ನೀಡಿದ್ದಾರೆ.

ಈ ಸಂಬಂಧ ರೇರಾ ಅಧ್ಯಕ್ಷ ರಾಕೇಶ್ ಸಿಂಗ್ ಅವರಿಗೆ ಪತ್ರ ಬರೆದಿರುವ ಅವರು, ‘ಆಧುನಿಕ ನಗರವನ್ನು ನಿರ್ಮಿಸುವ ಅಥವಾ ಯೋಜನೆಗಳನ್ನು ರೂಪಿಸುವ ಅಥವಾ ವಸತಿ ಬಡಾವಣೆಗಳನ್ನು ನಿರ್ಮಿಸುವ ಕಾರ್ಯವನ್ನು ನಿಸ್ಸಂಶಯವಾಗಿ ನಿರ್ವಹಿಸುತ್ತಿದೆಯೇ? ಎಂಬುದರ ಬಗ್ಗೆ ಜನರಿಗೆ ಸ್ಪಷ್ಟಪಡಿಸಬೇಕು’ ಎಂದು ಬಿಡಿಎ ಅನ್ನು ಒತ್ತಾಯಿಸಿದ್ದಾರೆ.

‘ಬಿಡಿಎನ ನಿವೇಶನ ಮತ್ತು ಫ್ಲಾಟ್‌ಗಳ ಬೆಲೆಯು ಖಾಸಗಿ ಡೆವಲಪರ್‌ಗಳು ಅಭಿವೃದ್ಧಿಪಡಿಸಿದ ನಿವೇಶನಗಳ ಬೆಲೆಗೆ ಸಮಾನವಾಗಿರುತ್ತದೆ. ಕೆಲವೊಮ್ಮ ಖಾಸಗಿ ನಿವೇಶನಗಳ ದರಕ್ಕಿಂತಲೂ ಹೆಚ್ಚು’ ಎಂದಿದ್ದಾರೆ.

‘ಬಿಡಿಎ ಸರ್ಕಾರಿ ಸಂಸ್ಥೆ ಎಂಬ ನೆಪ ಹೇಳಿ ಕಾನೂನು ಮೀರಿ ಸವಲತ್ತು ಪಡೆಯುವುದು ಹಿತವಲ್ಲ. ಬಿಎಸ್‌ಎನ್‌ಎಲ್ ಅನ್ನು ಟ್ರಾಯ್ ನಿಯಂತ್ರಿಸುತ್ತದೆ. ಯುನೈಟೆಡ್, ಓರಿಯಂಟಲ್, ನ್ಯೂ ಇಂಡಿಯಾ ಅಶ್ಯೂರೆನ್ಸ್‌ನಂತಹ ಸಾರ್ವಜನಿಕ ವಲಯದ ಕಂಪನಿಗಳು ಐಆರ್‌ಡಿಎಐ ನಿಯಮಗಳ ಅಡಿ ನಿಯಂತ್ರಿಸಲ್ಪಡುತ್ತವೆ. ರೇರಾ ಕಾಯ್ದೆಯಿಂದ ವಿನಾಯಿತಿ ನೀಡುವಂತೆ ಒತ್ತಾಯಿಸುವ ಮೊದಲು ಇದನ್ನು ತಿಳಿದುಕೊಳ್ಳಬೇಕು’ ಎಂದಿದ್ದಾರೆ.

‘ಆಕ್ರಮಣಕಾರಿ ಕಾರ್ಯ ಯೋಜನೆ’

‘ನಗರವನ್ನು ವಿಸ್ತರಿಸುವ ಭರದಲ್ಲಿ ಬಿಡಿಎ ಆಕ್ರಮಣಕಾರಿ ಕಾರ್ಯ ಯೋಜನೆ ಹಾಕಿಕೊಂಡು ಹೊಸ ಬಡಾವಣೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ಆದರೆ, ಈ ರೀತಿ ಅಭಿವೃದ್ಧಿಪಡಿಸುವ ಬಡಾವಣೆಗಳಲ್ಲಿ ಮೂಲ ಸೌಕರ್ಯ ಒದಗಿಸುವಲ್ಲಿ ವಿಫಲವಾಗಿದೆ. ಉದಾಹರಣೆಗೆ ಬಿಎಸ್‌ಕೆ 6ನೇ ಹಂತ, ಅರ್ಕಾವತಿ ಮತ್ತು ಕೆಂಪೇಗೌಡ ಬಡಾವಣೆಗಳ ವಸತಿ ಯೋಜನೆ ಅಭಿವೃದ್ಧಿಪಡಿಸುವಲ್ಲಿ ವಿಫಲವಾಗಿದೆ. ಇಲ್ಲಿ ನಿವೇಶನ ಪಡೆದವರು ಹಕ್ಕು ಸ್ವಾಮ್ಯದ ವಿವಾದ, ಅರಣ್ಯ ಇಲಾಖೆ ಆಕ್ಷೇಪಣೆಗಳು, ರಸ್ತೆಗಳ ಕೊರತೆ, ಒಳಚರಂಡಿ ಮತ್ತು ಕುಡಿಯುವ ನೀರು ಸೇರಿ ಹಲವು ಸಮಸ್ಯೆ ಎದುರಿಸುತ್ತಿದ್ದಾರೆ. ಇದನ್ನು ಕೊನೆಗಾಣಿಸಲು ಮನಸ್ಸು ಮಾಡುತ್ತಿಲ್ಲ’ ಎಂದು ಶಾಸಕ ಎಸ್.ಸುರೇಶ್ ಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ.

₹1.50 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಇಬ್ಬರು ವಿದೇಶಿ ಡ್ರಗ್ಸ್ ಪೆಡ್ಲರ್‌ಗಳೂ ಸೇರಿ 9 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಏಳು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು, ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಡೆಸಿ ಇಬ್ಬರು ವಿದೇಶಿ ಪೆಡ್ಲರ್‌ಗಳೂ ಸೇರಿ 9 ಮಂದಿಯನ್ನು ಬಂಧಿಸಿ ₹1.50 ಕೋಟಿ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಬಂಧಿತರಿಂದ 506 ಗ್ರಾಂ ಎಂಡಿಎಂಎ ಕ್ರಿಸ್ಟಲ್, 50 ಎಲ್‌ಎಸ್‌ಡಿ ಸ್ಟ್ರಿಪ್ಸ್, 85 ಗ್ರಾಂ ಕೊಕೇನ್, 56 ಗ್ರಾಂ ಹೈಡ್ರೊ ಗಾಂಜಾ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ತ್ಯಾಗರಾಜನಗರದ ಶ್ರೇಯಸ್ (23) ಹಾಗೂ ಅಶ್ವತ್ಥನಗರದ ರಕ್ಷಿತ್(24) ಎಂಬುವವರನ್ನು ಬಂಧಿಸಿ 6 ಲಕ್ಷ ಮೌಲ್ಯದ 50 ಎಲ್‌ಎಸ್‌ಡಿ ಸ್ಟ್ರಿಪ್ಸ್ ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

‘ಆರೋಪಿಗಳಿಬ್ಬರೂ ಖಾಸಗಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆಯುತ್ತಿದ್ದರು. ಅಪರಿಚಿತರಿಂದ ಕಡಿಮೆ ಬೆಲೆಗೆ ಮಾದಕ ವಸ್ತು ಖರೀದಿಸಿ, ಪರಿಚಯಸ್ಥರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಬಂದ ಹಣವನ್ನು ಮೋಜು–ಮಸ್ತಿಗೆ ಬಳಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬಿಎಸ್‌ಆರ್ ಲೇಔಟ್‌ನಲ್ಲಿ ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ನೈಜೀರಿಯಾ ದೇಶದ ಒಸ್‌ಬೆಂಜೊ ಮರೆಮ್ ಮಾರೆ ಎಂಬಾಕೆಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಆಕೆಯಿಂದ ₹2 ಲಕ್ಷ ಮೌಲ್ಯದ ಕೊಕೇನ್ ವಶಕ್ಕೆ ಪಡೆದಿದ್ದಾರೆ. 2024ರಲ್ಲಿ ವೈದ್ಯಕೀಯ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಮಹಿಳೆ, ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದಳು. ವಿದೇಶದ ಪೆಡ್ಲರ್‌ಗಳಿಂದ ಕಡಿಮೆ ಬೆಲೆಗೆ ಡ್ರಗ್ಸ್ ಖರೀದಿಸಿ, ಪರಿಚಯಸ್ಥರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಳು. ಖಚಿತ ಮಾಹಿತಿ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಹೆಬ್ಬಗೋಡಿ ವ್ಯಾಪ್ತಿಯ ವಿನಾಯಕ ಲೇಔಟ್‌ನಲ್ಲಿ ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ಕೇರಳದ ರೆಹನ್ ಮಂಗಟಿಲ್ (35) ಎಂಬಾತನನ್ನು ಬಂಧಿಸಲಾಗಿದೆ. ಈತ, ಎಲೆಕ್ಟ್ರಾನಿಕ್ ಸಿಟಿಯಲ್ಲಿ ನೆಲಸಿದ್ದ. ಮೊಬೈಲ್ ಸರ್ವಿಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಕೆಲಸ ಮುಗಿದ ಬಳಿಕ ಡ್ರಗ್ಸ್ ಮಾರಾಟ ಮಾಡುತ್ತಿದ್ದ. ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿ, ಹೆಚ್ಚಿನ ಬೆಲೆಗೆ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಸಿಲ್ಕ್ ಬೋರ್ಡ್ ಜಂಕ್ಷನ್‌ನ ಹೋಟೆಲ್‌ನಲ್ಲಿ ಎಂಡಿಎಂಎ ಕ್ರಿಸ್ಟಲ್ ದಾಸ್ತಾನು ಮಾಡಿಕೊಂಡು ಮಾರಾಟ ಮಾಡುತ್ತಿದ್ದ ಮತ್ತೊಬ್ಬ ಆರೋಪಿಯನ್ನು ಬಂಧಿಸಿ, ₹36 ಲಕ್ಷ ಮೌಲ್ಯದ ಎಂಡಿಎಂಎ ಕ್ರಿಸ್ಟಲ್ ಜಪ್ತಿ ಮಾಡಲಾಗಿದೆ. ಹೆಬ್ಬಗೋಡಿ ಹಾಗೂ ರಾಮಮೂರ್ತಿನಗರದ ಲಾಡ್ಜ್‌ಗಳ ಮೇಲೂ ದಾಳಿ ನಡೆಸಿ, ಇಬ್ಬರು ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ. ಬಂಧಿತರಿಂದ ಎಂಡಿಎಂಎ ಕ್ರಿಸ್ಟಲ್, ಕೊಕೇನ್, ಸಿರಿಂಜ್‌ಗಳು, ನೀಡಲ್, ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

₹28 ಲಕ್ಷ ಮೌಲ್ಯದ ಹೈಡ್ರೊ ಗಾಂಜಾ ಜಪ್ತಿ

ಮತ್ತೊಂದು ಪ್ರಕರಣದಲ್ಲಿ ಅಮೃತಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಹೈಡ್ರೊ ಗಾಂಜಾ ಮಾರಾಟ ಮಾಡುತ್ತಿದ್ದ ಲುಂಬಿನಿ ಗಾರ್ಡನ್‌ನ ನಿವಾಸಿ ಲೋಕೇಶ್ ತಿಮ್ಮಪ್ಪ ಎಂಬಾತನನ್ನು ಬಂಧಿಸಲಾಗಿದೆ. ಆರೋಪಿಯಿಂದ ₹28 ಲಕ್ಷ ಮೌಲ್ಯದ ಹೈಡ್ರೊ ಗಾಂಜಾ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕದ್ದ ವಾಹನದಲ್ಲಿ ವ್ಹೀಲಿ; ಭಯದಿಂದ ಆಟೊದಲ್ಲೇ ಆರೋಪಿ ವಾಸ್ತವ್ಯ

₹18 ಲಕ್ಷ ಮೌಲ್ಯದ 20 ದ್ವಿಚಕ್ರ ವಾಹನ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿ ವ್ಹೀಲಿ ಮಾಡುತ್ತಿದ್ದ ಆರೋಪಿಯನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಲ್ಸನ್ ಗಾರ್ಡನ್ ನಿವಾಸಿ ಸಲೀಂ ಪಾಷಾ (24) ಎಂಬಾತನನ್ನು ಬಂಧಿಸಿ, ₹18 ಲಕ್ಷ ಮೌಲ್ಯದ 20 ದ್ವಿಚಕ್ರ ವಾಹನ ಹಾಗೂ ಆಟೊ ವಶಪಡಿಸಿಕೊಳ್ಳಲಾಗಿದೆ.

ಜಯನಗರ 2ನೇ ಬ್ಲಾಕ್‌ನ ಆರ್. ವಿ. ಟೀಚರ್ಸ್ ಕಾಲೊನಿಯಲ್ಲಿ ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನವಾಗಿತ್ತು. ಮಾಲೀಕ ನೀಡಿದ್ದ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ವಿವಿಧ ಆಯಾಮಗಳಲ್ಲಿ ಹಾಗೂ ಬಾತ್ಮೀದಾರರಿಂದ ಮಾಹಿತಿ ಸಂಗ್ರಹಿಸಿ ಸೋಮೇಶ್ವರ ನಗರದ ಟ್ಯಾಂಕ್ ಗಾರ್ಡನ್ ಬಳಿ ವಾಹನದ ಸಮೇತ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಪಡಿಸಿದರು.

ನಗರದ ವಿವಿಧೆಡೆ ದ್ವಿಚಕ್ರ ವಾಹನ ಹಾಗೂ ಆಟೊ ಕಳವು ಮಾಡಿರುವುದಾಗಿ ಆರೋಪಿ ಒಪ್ಪಿಕೊಂಡ ಎಂದು ಪೊಲೀಸರು ತಿಳಿಸಿದರು.

ದ್ವಿಚಕ್ರ ವಾಹನಗಳ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದ. ಬಳಿಕ ಅವುಗಳಲ್ಲಿ ವ್ಹೀಲಿ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತಿದ್ದ. ನಂತರ ವಾಹನಗಳನ್ನು ಅಜ್ಞಾತ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ. ಮನೆಗೆ ಹೋದರೆ ಪೊಲೀಸರು ಹುಡುಕಿಕೊಂಡು ಬರಬಹುದು ಎಂಬ ಭಯದಿಂದ ಆಟೊದಲ್ಲಿಯೇ ವಾಸ್ತವ್ಯ ಹೂಡಿದ್ದ ಎಂದು ಪೊಲೀಸರು ತಿಳಿಸಿದರು.

ಠಾಣಾ ವ್ಯಾಪ್ತಿಯ ಗುಂಡಪ್ಪ ಕೊಳಗೇರಿ, ಪಂಪ್ ಹೌಸ್, ವಿಲ್ಸನ್ ಗಾರ್ಡನ್, ವಿನಾಯಕ ನಗರದ ಖಾಲಿ ಜಾಗದಲ್ಲಿ ನಿಲ್ಲಿಸಿದ್ದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿ ಬಂಧನದಿಂದ ಕೆ. ಆರ್. ಪುರ, ವಿಲ್ಸನ್ ಗಾರ್ಡನ್, ಅಶೋಕನಗರ, ಆಡುಗೋಡಿ, ಕೆಂಗೇರಿ, ಡಿ.ಜೆ.ಹಳ್ಳಿ, ಕುಂಬಳಗೋಡು, ತಿಲಕ್ ನಗರ, ಬ್ಯಾಟರಾಯನಪುರ, ಚಾಮರಾಜಪೇಟೆ, ಜಯನಗರ, ಪೀಣ್ಯ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಪ್ರಕರಣಗಳು ಪತ್ತೆಯಾಗಿವೆ. 18 ದ್ವಿಚಕ್ರ ವಾಹನಗಳ ಹಾಗೂ ಆಟೊ ರಿಕ್ಷಾ ಕಳವು ಪ್ರಕರಣ ಪತ್ತೆಯಾಗಿವೆ. ಉಳಿದ ಎರಡು ವಾಹನಗಳ ವಾರಸುದಾರರು ಪತ್ತೆಯಾಗಬೇಕಿದ್ದು, ತನಿಖೆ ಮುಂದುವರಿದಿದೆ ಎಂದು ಹೇಳಿದರು.

ಕದ್ದ ವಾಹನಗಳೊಂದಿಗೆ ಆರೋಪಿ

ನ್ಯಾಯಾಧೀಶರಿಗೆ ₹ 12 ಸಾವಿರ ವಂಚನೆ

ಬೆಂಗಳೂರು: ನಗರದ ಕುಮಾರ ಕೃಪಾ ಅತಿಥಿ ಗೃಹದಲ್ಲಿ ಕೊಠಡಿ ಕಾಯ್ದಿರಿಸುವ ನೆಪದಲ್ಲಿ ಪಂಜಾಬ್ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಿಗೆ ₹12 ಸಾವಿರ ವಂಚನೆ ಮಾಡಿರುವ ಪ್ರಕರಣ ವರದಿಯಾಗಿದೆ.

ಸೆಪ್ಟೆಂಬರ್ 2ರಂದು ನ್ಯಾಯಾಧೀಶರು ಕೊಠಡಿ ಕಾಯ್ದಿರಿಸುವ ಸಲುವಾಗಿ ತಮಗೆ ಪರಿಚಯದ ಪೊಲೀಸ್ ಅಧಿಕಾರಿಯೊಬ್ಬರಿಗೆ ಕರೆ ಮಾಡಿದ್ದರು. ಅಧಿಕಾರಿಯ ಆಪ್ತ ಸಹಾಯಕ ಆನ್‌ಲೈನ್‌ನಲ್ಲಿ ಪರಿಶೀಲಿಸಿ, ನಕಲಿ ನಂಬರ್ ನೀಡಿದ್ದರು. ನ್ಯಾಯಾಧೀಶರು ಆ ನಂಬರ್‌ಗೆ ಕರೆ ಮಾಡಿ ಕೊಠಡಿ ಕಾಯ್ದಿರಿಸುವಂತೆ ಹೇಳಿದಾಗ, ಆತ ₹12 ಸಾವಿರ ಪಾವತಿಸುವಂತೆ ಹೇಳಿದ್ದಾನೆ. ಇದನ್ನು ನಂಬಿ ಅವರು ಹಣ ಪಾವತಿಸಿದ್ದಾರೆ.

ಕೊಠಡಿ ಬುಕ್ ಆಗಿದೆ ಎಂದು ನಂಬಿ ನ್ಯಾಯಾಧೀಶರು, ಸೆಪ್ಟೆಂಬರ್ 6ರಂದು ನಗರಕ್ಕೆ ಬಂದಿಳಿದು ನೇರವಾಗಿ ಕುಮಾರ ಕೃಪಾ ಅತಿಥಿ ಗೃಹಕ್ಕೆ ಬಂದು ವಿಚಾರಿಸಿದ್ದಾರೆ. ಆಗ ಅವರ ಹೆಸರಲ್ಲಿ ಯಾವುದೇ ಕೊಠಡಿ ಕಾಯ್ದಿರಿಸದೇ ಇರುವುದು ಗೊತ್ತಾಗಿದೆ. ಕೂಡಲೇ ನ್ಯಾಯಾಧೀಶರು ಆ ವ್ಯಕ್ತಿಯ ನಂಬರ್‌ಗೆ ಕರೆ ಮಾಡಿದಾಗ ಸ್ವಿಚ್ ಆಫ್ ಬಂದಿದೆ. ವಂಚನೆಗೆ ಒಳಗಾಗಿರುವುದು ಗೊತ್ತಾಗಿ ದೂರು ನೀಡಿದ್ದಾರೆ.

ಪರಿಶುದ್ಧ ಚಿನ್ನ ನೀಡುವುದಾಗಿ ವಂಚನೆ

ಬೆಂಗಳೂರು: 21 ಕ್ಯಾರೆಟ್ ಚಿನ್ನದ ಆಭರಣಗಳನ್ನು ಪಡೆದು ಅದರ ಬದಲಿಗೆ 24 ಕ್ಯಾರೆಟ್ ಚಿನ್ನದ ಗಟ್ಟಿಗಳನ್ನು ನೀಡುವುದಾಗಿ ನಂಬಿಸಿ ವಂಚಿಸಿದ್ದ ಆರೋಪಿಯನ್ನು ಹಲಸೂರು ಗೇಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸರ್ಜಾಪುರ ರಸ್ತೆಯ ಮಾಲೂರು ಗ್ರಾಮದ ಮೋಹನ್ ಲಾಲ್ (32) ಬಂಧಿತ ಆರೋಪಿ.

ನಗರ್ತಪೇಟೆಯ ನಿವಾಸಿ ಹುಸೇನ್ ಅಲಿ ಅವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ನಗರ್ತಪೇಟೆಯಲ್ಲಿ ಹುಸೇನ್ ಅಲಿ ಅವರು ಚಿನ್ನದ ಆಭರಣ ತಯಾರಿಸುವ ಅಂಗಡಿ ಇಟ್ಟುಕೊಂಡಿದ್ದಾರೆ. ಅವರಿಗೆ ಮೂರು ತಿಂಗಳ ಹಿಂದೆ ಆರೋಪಿ ಪರಿಚಯವಾಗಿದ್ದ. ಆತ ಚಿನ್ನದ ಸಗಟು ವ್ಯಾಪಾರ ನಡೆಸುವುದಾಗಿ ತಿಳಿಸಿದ್ದ. ತಮ್ಮಲ್ಲಿರುವ 21 ಕ್ಯಾರೆಟ್‌ನ (916 ಗೋಲ್ಡ್) ಚಿನ್ನಾಭರಣ ನೀಡಿದರೆ ಅದೇ ತೂಕದ 24 ಕ್ಯಾರೆಟ್ (999 ಗೋಲ್ಡ್) ಪರಿಶುದ್ಧವಾದ ಚಿನ್ನದ ಗಟ್ಟಿಯನ್ನು ನೀಡುವುದಾಗಿ ಆರೋಪಿ ನಂಬಿಸಿದ್ದ. ಆತನ ಮಾತು ನಂಬಿದ್ದ ದೂರುದಾರರು, 1 ಕೆಜಿ 537 ಗ್ರಾಂ ತೂಕದ 21 ಕ್ಯಾರೆಟ್ ಚಿನ್ನಾಭರಣ ನೀಡಿದ್ದರು. ಚಿನ್ನಾಭರಣ ಪರಿಶೀಲಿಸಿ, ತರುವುದಾಗಿ ಹೇಳಿ ಆರೋಪಿ ಸ್ಥಳದಿಂದ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ವೇಶ್ಯಾವಾಟಿಕೆ: ಬಾಂಗ್ಲಾ ಮಹಿಳೆ ರಕ್ಷಣೆ

ಬೆಂಗಳೂರು: ಮಾನವ ಕಳ್ಳಸಾಗಣೆಯಾಗಿ ವೇಶ್ಯಾವಾಟಿಕೆಯಲ್ಲಿ ಸಿಲುಕಿದ್ದ ಬಾಂಗ್ಲಾದೇಶದ 30 ವರ್ಷದ ಮಹಿಳೆಯನ್ನು ನಗರ ಪೊಲೀಸರು ರಕ್ಷಿಸಿದ್ದಾರೆ. ಸಹಾಯ ಕೋರಿ ಹುಳಿಮಾವು ಪೊಲೀಸ್ ಠಾಣೆಗೆ ಮಹಿಳೆ ಭಾನುವಾರ ಬಂದಿದ್ದರು ಎಂದು ಮೂಲಗಳು ಹೇಳಿವೆ.

‘ಉತ್ತಮ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ ಭಾರತಕ್ಕೆ ಕರೆತರಲಾಗಿತ್ತು. ನಗರಕ್ಕೆ ಕರೆತಂದು ವೇಶ್ಯಾವಾಟಿಕೆಗೆ ತಳ್ಳಿದ್ದರು. ಆರಂಭದಲ್ಲಿ ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ ಕೊಡಿಸಿದ್ದರು. ತಿಂಗಳಿಗೆ ₹ 20 ಸಾವಿರ ಸಂಬಳವನ್ನೂ ನೀಡಿದ್ದರು. ಬಳಿಕ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಒಂದು ಮನೆಯಲ್ಲಿ ಇರಿಸಿ ವೇಶ್ಯಾವಾಟಿಕೆಗೆ ತಳ್ಳಿದರು’ ಎಂದು ಪೊಲೀಸರ ಎದುರು ಮಹಿಳೆ ಹೇಳಿಕೊಂಡಿದ್ದಾರೆ.

ಡಿಜಿಟಲ್ ಅರೆಸ್ಟ್: ಮಾಜಿ ಶಾಸಕಗೆ ₹30 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಮಾಜಿ ಶಾಸಕ ಗುಂಡಪ್ಪ ವಕೀಲ್ ಅವರನ್ನು ಬೆದರಿಸಿದ ವಂಚಕರು ₹30.99 ಲಕ್ಷ ದೋಚಿರುವ ಘಟನೆ ನಡೆದಿದೆ.

ಬೀದರ್ ಜಿಲ್ಲೆಯ ಔರಾದ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಗುಂಡಪ್ಪ ವಕೀಲ್ ಅವರ ದೂರಿನ ಮೇರೆಗೆ ಸಿಐಡಿಯ ಸೈಬರ್ ಕ್ರೈಂ ಠಾಣೆಯಲ್ಲಿ ಸಂದೀಪ್ ಕುಮಾರ್ ಮತ್ತು ನೀರಜ್ ಕುಮಾರ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಆಗಸ್ಟ್ 12ರಂದು ಗುಂಡಪ್ಪ ವಕೀಲ್ ಅವರಿಗೆ ಕರೆ ಮಾಡಿದ್ದ ಅಪರಿಚಿತ ವ್ಯಕ್ತಿ, ತಾನು ಸಿಬಿಐ ಅಧಿಕಾರಿಯೆಂದು ಪರಿಚಯಿಸಿಕೊಂಡಿದ್ದ. ಬಳಿಕ, ‘ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನವಾಗಿರುವ ಆರೋಪಿಯ ಬಳಿ ನಿಮ್ಮ ಬ್ಯಾಂಕ್ ಖಾತೆಯ ದಾಖಲೆಗಳು, ಎಟಿಎಂ ಕಾರ್ಡ್ ದೊರೆತಿವೆ. ಹಾಗಾಗಿ ನಿಮ್ಮನ್ನು ಬಂಧಿಸುತ್ತಿದ್ದೇವೆ’ ಎಂದು ಬೆದರಿಸಿದ್ದಾನೆ. ಗುಂಡಪ್ಪ ಅವರು ತಪ್ಪಿತಸ್ಥರಲ್ಲ ಎಂದು ಮುಚ್ಚಳಿಕೆ ಬರೆಯಿಸಿಕೊಂಡು, ವಿಡಿಯೊ ಕಾನ್ಫರೆನ್ಸ್ ಮೂಲಕ ನಕಲಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದಾರೆ. ಆಸ್ತಿಯ ಬಗ್ಗೆ ತನಿಖೆ ನಡೆಸಲು ಆರ್‌ಟಿಜಿಎಸ್ ಮೂಲಕ ಬ್ಯಾಂಕ್ ಖಾತೆಗೆ ₹10 ಲಕ್ಷ ವರ್ಗಾಯಿಸಲು ಸೂಚಿಸಿದ್ದಾರೆ. ಈ ಹಣವನ್ನು ತನಿಖೆ ಪೂರ್ಣವಾದ ನಂತರ ಮರಳಿಸಲಾಗುವುದು ಎಂದು ಹೇಳಿ, 8 ದಿನಗಳಲ್ಲಿ ಆರೋಪಿಗಳು ಒಟ್ಟು ₹30.99 ಲಕ್ಷ ಪಡೆದಿದ್ದಾರೆ.

ನಗ್ನವಾಗಿ ಬಂದು ಮನೆಯ ಬಾಗಿಲು ಬಡಿದ ವ್ಯಕ್ತಿ

ಬೆಂಗಳೂರು: ನಗ್ನವಾಗಿ ಬಂದ ವ್ಯಕ್ತಿಯೊಬ್ಬ ಮಹಿಳೆಯರಿದ್ದ ಮನೆಯೊಂದರ ಬಾಗಿಲು ಬಡಿದು ಒಳಗೆ ನುಗ್ಗಲು ಯತ್ನಿಸಿದ ಘಟನೆ ಬೆಂಗಳೂರು ಪೂರ್ವ ತಾಲ್ಲೂಕಿನ ಚೀಮಸಂದ್ರದ ಕೆಆರ್ ಡಿಫೆನ್ಸ್ ಬಡಾವಣೆಯಲ್ಲಿ ನಡೆದಿದೆ. ಸೆ.3ರಂದು ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಬಳಿಕ ಆತನನ್ನು ವಶಕ್ಕೆ ಪಡೆದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಕ್ಯಾನ್ಸರ್ ಚಿಕಿತ್ಸೆಗೆ ಕಿದ್ವಾಯಿಗೆ ದಾಖಲು; ಪರಾರಿ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ

ಆಸ್ಪತ್ರೆಗೆ ದಾಖಲಾಗಿದ್ದ ಕೈದಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಾಗಿದ್ದ ಸಜಾಬಂದಿ ಚೇತನ್ ಕಲ್ಯಾಣಿ (34) ಎಂಬಾತ ಸೆಪ್ಟೆಂಬರ್ 8ರಂದು ಪರಾರಿಯಾಗಿದ್ದು, ಈ ದೃಶ್ಯಾವಳಿ ಆಸ್ಪತ್ರೆಯ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ.



ಚೇತನ್ ಕಲ್ಯಾಣಿ

ಕ್ಯಾನ್ಸರ್ ಚಿಕಿತ್ಸೆಗೆಂದು ಕಿದ್ವಾಯಿ ಆಸ್ಪತ್ರೆಗೆ ಸಜಾಬಂದಿಯನ್ನು ದಾಖಲಿಸಲಾಗಿತ್ತು.

ವಿಜಯಪುರ ಜಿಲ್ಲೆಯ ಚೇತನ್ ಕಲ್ಯಾಣಿ, ಕಳವು ಪ್ರಕರಣದಲ್ಲಿ ಮೂರು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದ. ವಿಜಯಪುರ ಜಿಲ್ಲಾ ಕಾರಾಗೃಹದಲ್ಲಿದ್ದ ಆತನನ್ನು ಆಗಸ್ಟ್ 3ರಂದು ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿತ್ತು.

ಚೇತನ್, ಬಾಯಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಕಾರಣಕ್ಕೆ ಜೈಲಿನ ವೈದ್ಯರ ಸಲಹೆ ಮೇರೆಗೆ ಆತನನ್ನು ಹೆಚ್ಚಿನ ಚಿಕಿತ್ಸೆಗಾಗಿ ಕಿದ್ವಾಯಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದ ಚೇತನ್, ಸೋಮವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಆಸ್ಪತ್ರೆಯಿಂದ ಪರಾರಿ ಆಗಿದ್ದಾನೆ ಎಂದು ಮೂಲಗಳು ಹೇಳಿವೆ.

ಪರಪ್ಪನ ಅಗ್ರಹಾರ ಜೈಲಿನ ವಾರ್ಡನ್ ರಘು ಅವರನ್ನು ಕಿದ್ವಾಯಿ ಆಸ್ಪತ್ರೆಯಲ್ಲಿ ಚೇತನ್‌ನ ಕಾವಲಿಗೆ ನಿಯೋಜಿಸಲಾಗಿತ್ತು. ರಘು ಅವರು ಚೇತನ್‌ನ ವೈದ್ಯಕೀಯ ದಾಖಲೆಗಳನ್ನು ವೈದ್ಯರಿಗೆ ತೋರಿಸಲು ವಾರ್ಡ್‌ನಿಂದ ಹೊರಗೆ ಹೋಗಿದ್ದರು. ಆಗ ಚೇತನ್ ವಾರ್ಡ್‌ನಿಂದ ಪರಾರಿ ಆಗಿದ್ದಾನೆ ಎಂದು ಮೂಲಗಳು ಹೇಳಿವೆ.

ಕೈದಿ ಚೇತನ್ ಪರಾರಿಯಾಗಲು ಜೈಲಿನ ವಾರ್ಡನ್ ರಘು ಅವರ ನಿರ್ಲಕ್ಷ್ಯವೇ ಕಾರಣ. ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಚೇತನ್‌ನ ಪತ್ತೆ ಕಾರ್ಯ ಮುಂದುವರಿದಿದೆ. ಕಿದ್ವಾಯಿ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರ
- ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದ ಚೇತನ್

ಪಾದಚಾರಿ ಸ್ನೇಹಿ ರಸ್ತೆಗೆ ಅಭಿಯಾನ

ಉತ್ತಮ ರಸ್ತೆ ನಿರ್ಮಿಸಿ: ಜನ ಅರ್ಬನ್ ಸ್ಪೇಸ್ ಫೌಂಡೇಷನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಬಹುತೇಕ ರಸ್ತೆಗಳು ಅಸುರಕ್ಷಿತವಾಗಿದ್ದು ವಿನ್ಯಾಸ ಸರಿ ಇಲ್ಲ. ಪಾದಚಾರಿ ಮಾರ್ಗಗಳು ಹದಗೆಟ್ಟಿವೆ. ಗುಂಡಿ ಮುಚ್ಚಲು ಸೀಮಿತವಾಗದೆ, ಉತ್ತಮ ರಸ್ತೆ ನಿರ್ಮಿಸಲು ಗಮನಹರಿಸಬೇಕು' ಎಂದು ಜನ ಅರ್ಬನ್ ಸ್ಪೇಸ್ ಫೌಂಡೇಷನ್ ಹೇಳಿದೆ.

ನಗರದಲ್ಲಿ ಟೆಂಡರ್ ಶ್ಯೂರ್ ರಸ್ತೆಗಳ ಬಗ್ಗೆ ಜನ ಅರ್ಬನ್ ಸ್ಪೇಸ್ ಫೌಂಡೇಷನ್ ನಡೆಸಿರುವ ಅಧ್ಯಯನದ ಪ್ರಕಾರ, ಪಾದಚಾರಿಗಳ ಓಡಾಟ, ಸುರಕ್ಷತೆ, ಮಹಿಳೆಯರ ಸಂಚಾರ ಮತ್ತು ನಿರ್ವಹಣೆಯಲ್ಲಿ ಸುಧಾರಣೆ ಕಂಡುಬಂದಿದೆ ಎಂದು ಜನಾಗ್ರಹದ ಸಿಇಒ ಆಗಿರುವ ಫೌಂಡೇಷನ್‌ನ ಕಾರ್ಯನಿರ್ವಾಹಕ ನಿರ್ದೇಶಕ ಶ್ರೀಕಾಂತ್ ವಿಶ್ವನಾಥ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

'ಸರ್ಕಾರವು ನಗರದ ರಸ್ತೆಗಳನ್ನು ರೂಪಾಂತರಿಸಲು 'ನಡೆದಾಡಲು ಯೋಗ್ಯವಾದ ಬೆಂಗಳೂರು ಅಭಿಯಾನ'ವನ್ನು ನಡೆಸಬೇಕು ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿಯವರಿಗೆ ಪತ್ರ ಬರೆಯಲಾಗಿದೆ. ನಗರದ ಅನೇಕ ಕಡೆ ಮೂಲಸೌಕರ್ಯ ಕಾಮಗಾರಿಗಳಲ್ಲಿ ಸಮನ್ವಯದ ಕೊರತೆ, ಎಲ್ಲೆಂದರಲ್ಲಿ, ಪ್ರವಾಹದ ಸ್ಥಿತಿ ಉಂಟಾಗಿದ್ದು, ಮಹಿಳೆಯರು, ಮಕ್ಕಳು, ವೃದ್ಧರು ಸುರಕ್ಷಿತವಾಗಿ ಓಡಾಡಲು ಸಾಧ್ಯವಿಲ್ಲದಂತಾಗಿದೆ ಎಂಬುದನ್ನು ಅವರಿಗೆ ವಿವರಿಸಲಾಗಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ರಸ್ತೆಗಳು ಗುಂಡಿ ಮುಕ್ತ,ಸುರಕ್ಷಿತ ಆಗಬೇಕು
- ಸಮನ್ವಯ ಕೊರತೆಯಿಂದ ಗುಂಡಿ, ಪ್ರವಾಹದ ಪರಿಸ್ಥಿತಿ
- *ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಅಧ್ಯಯನ ವರದಿ ಸಲ್ಲಿಕೆ

'ನಗರದಲ್ಲಿ ಒಟ್ಟು 13 ಸಾವಿರ ಕಿ.ಮೀ ಉದ್ದದ ರಸ್ತೆಗಳಲ್ಲಿ 150 ಕಿ.ಮೀ. ನಷ್ಟಿರುವ ಟೆಂಡರ್ ಶ್ಯೂರ್ ರಸ್ತೆಗಳು ಉತ್ತಮ ಸೌಲಭ್ಯಗಳನ್ನು ಹೊಂದಿವೆ. ಈ ರಸ್ತೆಗಳಲ್ಲಿ ಸಮಸ್ಯೆಗಳು ಕಡಿಮೆ. ಹೀಗಾಗಿ, ನಾಗರಿಕರಿಗೆ ಯೋಗ್ಯವಾದ ರಸ್ತೆಗಳನ್ನು ರೂಪಿಸಲು ಯುದ್ಧೋಪಾದಿಯಲ್ಲಿ ಕಾಮಗಾರಿ ನಡೆಸಬೇಕು. ಪ್ರತಿವರ್ಷ 1,500 ಕಿ.ಮೀ ಉದ್ದದ ರಸ್ತೆಯನ್ನು ಟೆಂಡರ್ ಶ್ಯೂರ್ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಬೇಕು. ಹೀಗಾದರೆ, ಮುಂದಿನ ಹತ್ತು ವರ್ಷದಲ್ಲಿ ನಗರ ಶೇ 100ರಷ್ಟು ಯೋಗ್ಯ ರಸ್ತೆಗಳನ್ನು ಹೊಂದುತ್ತದೆ' ಎಂದು ಜನ ಅರ್ಬನ್ ಸ್ಪೇಸ್ ಫೌಂಡೇಷನ್‌ನ ಯೋಜನಾ ನಿರ್ದೇಶಕಿ ನಿತ್ಯಾ ರಮೇಶ್ ಹೇಳಿದರು.

'ಇತರೆ ರಸ್ತೆಗಳಿಗಿಂತ ಶೇ 228ರಷ್ಟು ಹೆಚ್ಚು ಪ್ರಮಾಣದಲ್ಲಿ ಟೆಂಡರ್ ಶ್ಯೂರ್ ರಸ್ತೆಗಳನ್ನು ಪಾದಚಾರಿಗಳು ಬಳಸುತ್ತಾರೆ. ಇದರಲ್ಲಿ ಶೇ 117ರಷ್ಟು ಮಹಿಳೆಯರಿದ್ದಾರೆ. ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ನಡಿಗೆಗೆ ಉತ್ತಮ ವ್ಯವಸ್ಥೆ ಇದೆ ಎಂದು ಶೇ 90ರಷ್ಟು ನಾಗರಿಕರು ಹೇಳಿದ್ದಾರೆ. ಶೇ 74ರಷ್ಟು ಮಂದಿ ಟೆಂಡರ್ ಶ್ಯೂರ್ ರಸ್ತೆಗಳು ವಾಹನ ಸಂಚಾರಕ್ಕೆ ಉತ್ತಮವಾಗಿವೆ ಎಂದು ಹೇಳಿದ್ದು, ಶೇ 20ರಷ್ಟು ಮಂದಿ ಇತರೆ ರಸ್ತೆಗಳು ಚೆನ್ನಾಗಿವೆ ಎಂದಿದ್ದಾರೆ' ಎಂದು ವರದಿಯ ಮಾಹಿತಿಯನ್ನು ನೀಡಿದರು.



ಟೆಂಡರ್ ಶ್ಯೂರ್ ರಸ್ತೆ

ಅಭಿಯಾನಕ್ಕೆ ಸಲಹೆಗಳು

- ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಕೇಂದ್ರಿತ ಕ್ರಿಯಾಯೋಜನೆ ಜೊತೆಗೆ ಸಂಪರ್ಕ ರಸ್ತೆಗಳಿಗೂ ಯೋಜನೆ ರೂಪಿಸಬೇಕು
- 60 ಕಿ.ಮೀ ಉದ್ದದ ಹೊರ ವರ್ತುಲ ರಸ್ತೆಯನ್ನು ಟೆಂಡರ್ ಶ್ಯೂರ್ ರಸ್ತೆಯ ವಿನ್ಯಾಸದಂತೆ, ಪಾದಚಾರಿ ಮಾರ್ಗ, ವಾಹನ ಸಂಚಾರ, ಸುರಕ್ಷಿತ–ಪರಿಣಾಮಕಾರಿಯಾದ ಮಳೆ ನೀರು ಹರಿಸುವಿಕೆ ವ್ಯವಸ್ಥೆಯ ಜನಸ್ನೇಹಿ ಕಾರಿಡಾರ್ ಆಗಿ ಪರಿವರ್ತಿಸಬೇಕು
- ನಗರದ ಎಲ್ಲ ರಸ್ತೆಗಳ ಅಭಿವೃದ್ಧಿಯಲ್ಲಿ ಟೆಂಡರ್ ಶ್ಯೂರ್ ಮಾರ್ಗಸೂಚಿಗಳನ್ನೇ ಅಳವಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಬೇಕು
- ರಸ್ತೆಗಳ ಕಾರ್ಯಾಚರಣೆ, ನಿರ್ವಹಣೆಯಲ್ಲಿ ಎಂಜಿನಿಯರ್‌ಗಳ ಜೊತೆಗೆ ನಗರ ವಿನ್ಯಾಸಕರು, ಯೋಜಕರು, ವಲಯ ತಜ್ಞರನ್ನು ನೇಮಿಸಬೇಕು
- ರಸ್ತೆ ಕಾಮಗಾರಿಯ ಅನುಷ್ಠಾನವನ್ನು ಸಂಘಟಿಸಲು ಬಿ–ಸ್ಮೈಲ್‌ನಲ್ಲಿ ಪ್ರತ್ಯೇಕ ತಾಂತ್ರಿಕ ತಂಡ ಸ್ಥಾಪಿಸಬೇಕು

ನ್ಯಾಯಾಂಗ ಬಡಾವಣೆ ತುಂಬೆಲ್ಲಾ ಗುಂಡಿ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಕನಕಪುರ ರಸ್ತೆ ತಲಘಟ್ಟಪುರದ ಬಳಿ ಇರುವ ನ್ಯಾಯಾಂಗ ಬಡಾವಣೆಯ ರಸ್ತೆಗಳು ಗುಂಡಿಮಯವಾಗಿದ್ದು, ಸಂಚಾರಕ್ಕೆ ಅಡ್ಡಿಯಾಗಿದೆ. ಬಡಾವಣೆಯಲ್ಲಿನ 13 ಮುಖ್ಯ ರಸ್ತೆಗಳೂ ಗುಂಡಿಮಯವಾಗಿವೆ. ಮಳೆ ನೀರು ನಿಂತು ರಸ್ತೆಗಳು ಹೊಳೆಯಂತಾಗಿವೆ. ಈ ರಸ್ತೆಗಳು, ದೊಡ್ಡ ಅಪಾರ್ಟ್‌ಮೆಂಟ್ ಸಮುಚ್ಚಯ ಮತ್ತು ಹಲವು ಶಾಲೆಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಗುಂಡಿಗಳಿಂದಾಗಿ ಶಾಲಾ ವಾಹನಗಳ ಸಂಚಾರಕ್ಕೂ ಅಡ್ಡಿಯಾಗಿದೆ ಎಂದು ನಿವಾಸಿಗಳು ದೂರಿದ್ದಾರೆ.

ಮುಖ್ಯಾಂಶಗಳು

- ಬಡಾವಣೆಯಲ್ಲಿನ 13 ಮುಖ್ಯ ರಸ್ತೆಗಳೂ ಗುಂಡಿಮಯ
- ಶಾಲಾ ವಾಹನಗಳ ಸಂಚಾರಕ್ಕೆ ಅಡ್ಡಿ

'ಜಲಮಂಡಳಿ, ಬೆಸ್ಕಾಂ ಮತ್ತು ಕೆಪಿಟಿಸಿಎಲ್‌ನವರು ವಿವಿಧ ಕಾಮಗಾರಿ ಗಳಿಗಾಗಿ ರಸ್ತೆ ಅಗೆದು, ದುರಸ್ತಿ ಗೊಳಿಸದೇ ಹೋಗಿದ್ದಾರೆ. ಈ ಬಗ್ಗೆ ನಗರ ಪಾಲಿಕೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ, ಜತೆಗೆ ಇಲ್ಲಿನ ಶಾಸಕರಿಗೂ ಮನವಿ ಮಾಡಲಾಗಿದೆ. ಹೀಗಿದ್ದರೂ ಯಾರೂಇತ್ತ ತಿರುಗಿ ನೋಡಿಲ್ಲ' ಎಂದು ಇಲ್ಲಿನ ನಿವಾಸಿ ಎಚ್.ಎನ್.ಹರಿ ದೂರಿದ್ದಾರೆ.

'ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ನಿವೃತ್ತ ನ್ಯಾಯಮೂರ್ತಿ ಗಳು, ಜಿಲ್ಲಾ ನ್ಯಾಯಾಧೀಶರು ಇಲ್ಲಿ ವಾಸ ಇದ್ದಾರೆ. ತಾತ್ಕಾಲಿಕವಾಗಿಯಾದರೂ ಗುಂಡಿಗಳನ್ನು ಮುಚ್ಚಿ ಎಂದು ಪಾಲಿಕೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ' ಎಂದು ನಿವಾಸಿಗಳ ಸಂಘದ ಮುಖ್ಯಸ್ಥ ಮೂರ್ತಿ ತಿಳಿಸಿದರು.

ಕಾರ್ಯಪಾಲಕ ಎಂಜಿನಿಯರ್ ಚಾಮರಾಜ್ ಪ್ರತಿಕ್ರಿಯಿಸಿ, 'ನಿವಾಸಿಗಳ ದೂರಿನ ಮೇರೆಗೆ ಸ್ಥಳ ಪರಿಶೀಲನೆ ಮಾಡಿದ್ದೇನೆ. ರಸ್ತೆ ದುರಸ್ತಿಗಾಗಿ ಅನುದಾನ ಬಿಡುಗಡೆ ಮಾಡಬೇಕೆಂದು ಮುಖ್ಯ ಎಂಜಿನಿಯರ್ ಅವರನ್ನು ಕೋರಲಾಗಿದೆ. ಅನುದಾನ ಬಂದ ಕೂಡಲೇ ಆದ್ಯತೆ ಮೇಲೆ ದುರಸ್ತಿ ಕಾರ್ಯ ಕೈಗೊಳ್ಳುತ್ತೇವೆ' ಎಂದರು.

ಮದ್ದೂರು: ಬಿಜೆಪಿ ಸತ್ಯಶೋಧನಾ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ದೂರು ಗಲಭೆಗೆ ಸಂಬಂಧಿಸಿದಂತೆ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್ ನೇತೃತ್ವದಲ್ಲಿ ಸತ್ಯಶೋಧನಾ ತಂಡ ರಚಿಸಿದ್ದು, ಘಟನೆ ನಡೆದ ಸ್ಥಳಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ವರದಿ ನೀಡಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಮತ್ತು ಗೃಹ ಸಚಿವರು ತಮ್ಮ ಧೋರಣೆಯನ್ನು ಸರಿಪಡಿಸಿಕೊಳ್ಳದಿದ್ದರೆ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಡುತ್ತದೆ. ಇದಕ್ಕೆ ಸರ್ಕಾರವೇ ಹೊಣೆ ಹೊರಬೇಕಾಗುತ್ತದೆ. ಗಣಪತಿ ಮೆರವಣಿಗೆಯಲ್ಲಿ ಕೇಸರಿ ಶಾಲು ಹಾಕಿ ನರ್ತಿಸಿದ ಪಿಎಸ್‌ಐ ಒಬ್ಬರನ್ನು ಅಮಾನತು ಮಾಡಿದ ಸುದ್ದಿ ಇದೆ. ನಾವೇನು ಪಾಕಿಸ್ತಾನದಲ್ಲಿ ಇದ್ದೇವಾ' ಎಂದು ಅವರು ಪ್ರಶ್ನಿಸಿದರು.

'ಮುಖ್ಯಮಂತ್ರಿಗಳು ತಮ್ಮ ಸುತ್ತ ಅಯೋಗ್ಯರನ್ನೇ ಇಟ್ಟುಕೊಂಡಂತಿದೆ. ಇವರ ಸಲಹೆಯಿಂದಾಗಿ ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ನಡೆದಿದೆ. ಇದರ ಪರಿಣಾಮ ಹಿಂದೂಗಳು ಗಣಪತಿ ಹಬ್ಬ ಸೇರಿದಂತೆ ಯಾವುದೇ ಹಬ್ಬಗಳನ್ನು ಸಂಭ್ರಮದಿಂದ ಆಚರಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ' ಎಂದು ವಿಜಯೇಂದ್ರ ಟೀಕಿಸಿದರು.

ಮದ್ದೂರಿನಲ್ಲಿ ಪೊಲೀಸ್ ಇಲಾಖೆಯ ಸಂಪೂರ್ಣ ವೈಫಲ್ಯ ಎದ್ದು ಕಾಣುತ್ತಿದೆ. ಕರ್ನಾಟಕದಲ್ಲಿ ತುಘಲಕ್ ದರ್ಬಾರ್ ನಡೆದಿದೆ. ನಿಜಾಮರ ಆಡಳಿತವನ್ನು ನೆನಪು ಮಾಡಿಕೊಡುತ್ತಿದೆ

ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ರಾಜ್ಯದಲ್ಲಿ ಆರ್‌ಎಸ್‌ಎಸ್, ಹಿಂದೂ ಸಂಘಟನೆಗಳು ಮತ್ತು ಹಿಂದೂ ಕಾರ್ಯಕರ್ತರನ್ನು ತಡೆಯಲು ಇವರು ಯಾರು? ಮುಂಡಿ ಬೆಟ್ಟಕ್ಕೆ, ಧರ್ಮಸ್ಥಳಕ್ಕೆ ಅಥವಾ ಗಣಪತಿ ಮೆರವಣಿಗೆ ತಡೆಯಲು ಇವರು ಯಾರು? ತಾಕತ್ತಿದ್ದರೆ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗುವವರನ್ನು ಒದ್ದು ಒಳಗೆ ಹಾಕಲಿ. ಇಲ್ಲವೇ, ಕಾಂಗ್ರೆಸ್ ಸರ್ಕಾರ ಹಿಂದೂಗಳ ಪರ ಇಲ್ಲ ಎಂಬುದನ್ನು ಬಹಿರಂಗವಾಗಿ ಘೋಷಿಸಲಿ' ಎಂದು ಅವರು ಸವಾಲು ಹಾಕಿದರು.

'ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣ ಸ್ವಾಮಿ, ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ಇತರ ನಾಯಕರ ಜತೆ ಬುಧವಾರ ಬೆಳಿಗ್ಗೆ ಮದ್ದೂರಿಗೆ ಭೇಟಿ ನೀಡಲಿದ್ದೇವೆ' ಎಂದು ಹೇಳಿದರು.

ಜೈಲರ್ ಮೇಲೆ ಕೈದಿಗಳಿಂದ ಹಲ್ಲೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಇಲ್ಲಿನ ಜಿಲ್ಲಾ ಕಾರಾಗೃಹದ ವಿಚಾರಣಾಧೀನ ಕೈದಿಗಳು ಕಾರಾಗೃಹದ ಜೈಲರ್, ಸಹಾಯಕ ಜೈಲರ್ ಹಾಗೂ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ.

ಸಹಾಯಕ ಜೈಲರ್ ಮಲ್ಲಿಕಾರ್ಜುನಪ್ಪ ಟಿ. ಅವರನ್ನು ಸೋಮವಾರ ಸಂಜೆ ದಾಸ್ತಾನು ಕೊಠಡಿಯಲ್ಲಿ ಕೂಡಿ ಹಾಕಿದ ಕುಖ್ಯಾತ ರೌಡಿ ಬಾಂಬೆ ಸಲೀಂ ಹಾಗೂ ಆತನ ಎಂಟು ಮಂದಿ ಸಹಚರರು ಹಲ್ಲೆ ನಡೆಸಿದ್ದಾರೆ. ಕಾರಾಗೃಹ ಇಲಾಖೆ ಡಿಐಜಿ ಭೇಟಿ ನೀಡಿ ಪರಿಶೀಲಿಸಿದರು.

ಸರ್ಕಾರಿ ಆಸ್ತಿಗೆ ನಷ್ಟ ಮತ್ತು ಕಾರಾಗೃಹದ ಭದ್ರತೆಗೆ ಭಂಗ ಉಂಟು ಮಾಡಿರುವ ಆರೋಪದ ಮೇಲೆ 9 ಮಂದಿ ವಿರುದ್ಧ ಕಾರಾಗೃಹದ ಅಧೀಕ್ಷಕ ಸುನೀಲ್ ಡಿ.ಗಲ್ಲೆ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆಯಲ್ಲಿ ಮಂಗಳವಾರ ದೂರು ದಾಖಲಿಸಿದ್ದಾರೆ.

ಬಾಗೇಪಲ್ಲಿ ಪ್ರಕರಣಕ್ಕೆ ಸಂಬಂಧಿಸಿ ಬಾಂಬೆ ಸಲೀಂ, ಆತನ ಸಹಚರರು ವಿಚಾರಣಾಧೀನ ಕೈದಿಗಳಾಗಿ ಕಾರಾಗೃಹದಲ್ಲಿದ್ದಾರೆ.

ಕಮಲಾಕ್ಷಿ ಸಹಕಾರ ಸಂಘದ ವಿರುದ್ಧ ದೂರು

ಬೆಂಗಳೂರು: ಗ್ರಾಹಕರಿಂದ ₹32.73 ಕೋಟಿ ಠೇವಣಿ ಸಂಗ್ರಹಿಸಿ ಬಡ್ಡಿಯನ್ನೂ ನೀಡದೆ, ಠೇವಣಿಯನ್ನೂ ಹಿಂತಿರುಗಿಸದೆ ವಂಚಿಸಿದ ಪ್ರಕರಣದಲ್ಲಿ ಕಮಲಾಕ್ಷಿ ವಿವಿಧೋದ್ದೇಶ ಸಹಕಾರ ಸಂಘದ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ. ಸಂಘದ ಅಧ್ಯಕ್ಷರಾಗಿದ್ದ ಬಿ.ವಿ. ಲಕ್ಷ್ಮೀನಾರಾಯಣ, ಅವರ ಪತ್ನಿ ರಾಧಿಕಾ ಮತ್ತು ಸಂಘದ ವ್ಯವಸ್ಥಾಪಕಿಯಾಗಿದ್ದ ಆಶಾ ರಾವ್ ವಿರುದ್ಧವೂ ಮಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದಲ್ಲಿ ಇ.ಡಿ ದೂರು ದಾಖಲಿಸಿದೆ.

ಲಂಚ: ಕಾರ್ಮಿಕ ಅಧಿಕಾರಿ ಬಂಧನ

ಬೆಂಗಳೂರು: ಕಾರ್ಮಿಕ ಚೀಟಿ ನೀಡಲು ₹10,000 ಲಂಚ ಪಡೆಯುತ್ತಿದ್ದ ವೇಳೆ ಕಾರ್ಮಿಕ ಅಧಿಕಾರಿ ಶ್ಯಾಮರಾವ್ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್.ಪುರ ನಿವಾಸಿ ವೆಂಕಟಾಚಲಪತಿ ಅವರು ಕಾರ್ಮಿಕ ಚೀಟಿಗಾಗಿ, ಕಾರ್ಮಿಕ ಇಲಾಖೆಯ ಬೆಂಗಳೂರು ನಗರ ವಿಭಾಗ–05ರ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಕಚೇರಿಯ ಕಾರ್ಮಿಕ ಅಧಿಕಾರಿ ₹10,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಈ ಸಂಬಂಧ ವೆಂಕಟಾಚಲಪತಿ ದೂರು ನೀಡಿದ್ದರು.

ಹಿತಚಿಂತನಾ,ರಕ್ಷಾ ಚಾರಿಟಬಲ್, ಅಕ್ಷಯ್ ಐ ಕೇರ್ ಸಹಭಾಗಿತ್ವದಲ್ಲಿ ಕಣ್ಣು ತಪಾಸಣೆ

ವಾರ್ಷಿಕ ಸಭೆಯಲ್ಲಿ ಸೀಮಂತ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಗೋಪಾಲಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ 2024- 25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ, 16 ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ ನಡೆಯಿತು.

ಗರ್ಭಿಣಿಯರಿಗೆ ಮಡಿಲು ತುಂಬಿ, ಹೊಸಕೆ ಶಾಸ್ತ್ರ, ಆರತಿ ಮಾಡಿ ಸೀಮಂತ ಕಾರ್ಯ ನೆರವೇರಿಸಲಾಯಿತು.

'ಸಂಘದ ಬಂಡವಾಳದಿಂದ ಆಭರಣ ಸಾಲ, ಅಡಮಾನ ಸಾಲ, ವ್ಯಾಪಾರ ಸಾಲ ನೀಡಲಾಗಿದೆ ರೈತರು ಮತ್ತು ಸ್ತ್ರೀ ಶಕ್ತಿ ಸಂಘಗಳು ಸಂಘದ ವತಿಯಿಂದ ದೊರೆಯುವ ಸಾಲ ಸೌಲಭ್ಯಗಳನ್ನು ಪಡೆಯಬೇಕು' ಎಂದು ಸಂಘದ ಅಧ್ಯಕ್ಷ ವಿ.ರಾಮಸ್ವಾಮಿ ಹೇಳಿದರು.

2024- 25 ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಗಳು, ಲೆಕ್ಕಪರಿಶೋಧನಾ ವರದಿ, 2025- 26ನೇ ಸಾಲಿನ ಆಯವ್ಯಯ ಇನ್ನಿತರ ವಿಷಯಗಳನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬೈಲಮೂರ್ತಿ ಜಿ. ಸಭೆಯಲ್ಲಿ ಮಂಡಿಸಿದರು.

ಮುಖ್ಯಾಂಶಗಳು

- 2025- 26ನೇ ಸಾಲಿನ ಆಯವ್ಯಯ ಕುರಿತು ಚರ್ಚೆ
- ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಹಿತಚಿಂತನಾ ಚಾರಿಟಬಲ್ ಟ್ರಸ್ಟ್ ಮತ್ತು ರಕ್ಷಾ ಚಾರಿಟಬಲ್ ಟ್ರಸ್ಟ್ ಹಾಗೂ ಅಕ್ಷಯ್ ಐ ಕೇರ್ ಸಹಭಾಗಿತ್ವದಲ್ಲಿ ಉಚಿತ ಕಣ್ಣು ತಪಾಸಣಾ ಶಿಬಿರ ಆಯೋಜನೆ ಮಾಡಲಾಗಿತ್ತು. ಡಾ. ಮಂಜುನಾಥ್ ಮತ್ತು ಡಾ. ಟಿ.ಎಸ್.ಸ್ವಾಮಿ ರೋಗಿಗಳ ತಪಾಸಣೆ ನಡೆಸಿದರು.

ಸಂಘಕ್ಕೆ ಎರಡು ನಿವೇಶನ ದಾನ ನೀಡಿದಂತಹ ನಾಗರಾಜ್ ರಾವ್ ಅವರನ್ನು ಸಭೆಯಲ್ಲಿ ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್ ಮತ್ತು ಪಿಯುಸಿಯಲ್ಲಿ ಶೇಕಡ 85ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಸಂಘದ ಉಪಾಧ್ಯಕ್ಷ ಜಿ. ಕೆಂಪರಾಜು, ಹಿತಚಿಂತನಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಪುಟ್ಟಮ್ಮ ವೆಂಕಟರಾಮಯ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೇಲ್ವಿಚಾರಕಿ ಮಹಾನಂದ ಕುಂಬಾರ್ ಸಂಘದ ನಿರ್ದೇಶಕರಾದ ರಾಜಗೋಪಾಲ್, ಮಹಾದೇವಯ್ಯ, ಜಯಮ್ಮ, ಜಯಲಕ್ಷ್ಮಿ, ಗೋಪಾಲಕೃಷ್ಣ ಟಿ ಸಿ,ರಾಮಾಂಜನೇಯ, ಭಾಗ್ಯಮ್ಮ ನಾಗರತ್ನಮ್ಮ ಉಪಸ್ಥಿತರಿದ್ದರು.

ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ ನಡೆಯಿತು

ಅಪರೂಪದ ಶಾಸನ ಪತ್ತೆ

ಸಂಡೂರು (ಬಳ್ಳಾರಿ): ತಾಲ್ಲೂಕಿನ ನಾರಿಹಳ್ಳ ಜಲಾಶಯದ ಹಿನ್ನೀರಿನ ತಟದಲ್ಲಿನ ಗಂಡಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಇಲ್ಲಿನ ಉಭಯ ದೇವರುಗಳ ಆರಾಧನೆಯನ್ನು ಉಲ್ಲೇಖಿಸುವ ಅಪರೂಪದ ಅಪ್ರಕಟಿತ ಮ್ಯಾಂಗನೀಸ್ ಶಾಸನ ಪತ್ತೆಯಾಗಿದೆ.

10 ಅಡಿ ಎತ್ತರವಿರುವ ಮ್ಯಾಂಗನೀಸ್ ಬಂಡೆಯಲ್ಲಿ 3 ಅಡಿ ಎತ್ತರ 3 ಅಡಿ ಅಗಲದಲ್ಲಿ ಆರು ಸಾಲುಗಳಲ್ಲಿ ಶಾಸನ ಕೆತ್ತಲಾಗಿದೆ.

'ಮರುಜನ್ಮ ಮತ್ತು ಮೋಕ್ಷಕ್ಕೆ ಸಂಬಂಧಿಸಿದ ಶಾಸನ ಇದಾಗಿದ್ದು ಮಾನವನಿಗೆ ನೀತಿ ಬೋಧಿಸುವ ಪ್ರತೀಕವಾಗಿದೆ' ಎಂದು ಕೃಷ್ಣದೇವರಾಯ ವಿಶ್ವಾವಿದ್ಯಾಲಯದ ಪ್ರೊ.ತಿಪ್ಪೇಸ್ವಾಮಿ ತಿಳಿಸಿದ್ದಾರೆ.

ಪತ್ತೆಯಾದ ಶಾಸನ

ದೇಗುಲದ ಅರ್ಚಕ ಎಂ.ಎನ್. ವೀರಯ್ಯಸ್ವಾಮಿ, ಇತಿಹಾಸ ಉಪನ್ಯಾಸಕ ತಿಪ್ಪೇರುದ್ರ, ನಾಗಭೂಷಣ ಅವರ ಸಹಕಾರದಿಂದ ವಿಜಯನಗರ ತಿರುಗಾಟ ಸಂಶೋಧನ ತಂಡದ ಪ್ರೊ.ತಿಪ್ಪೇಸ್ವಾಮಿ, ಗೋವಿಂದ, ಕೃಷ್ಣೆಗೌಡ, ತಿಮ್ಮಲಾಪುರದ ನರಸಿಂಹ, ವೀರಾಂಜಿನಯ್ಯ, ವೀರಭದ್ರಗೌಡ, ಎಚ್.ರವಿ ಶಾಸನ ಪತ್ತೆ ಹಚ್ಚಿದ್ದಾರೆ.

10ನೇ ಶತಮಾನದ ಶಾಸನ

'ಈ ಶಾಸನದ ಕಾಲಾವಧಿ ಉಲ್ಲೇಖವಾಗಿಲ್ಲ. ಲಿಪಿಯ ಶೈಲಿ ಹಾಗೂ ದುರ್ಮುಖಿ ಸಂವತ್ಸರದ ಮಾರ್ಗಶಿರಾ ಕಾರ್ತಿಕ ಎಂದು ಉಲೇಖವಾಗಿದ್ದು, ಇದು ಕ್ರಿಸ್ತ ಶಕ 10ನೇ ಶತಮಾನದ ಶಾಸನ ಇರಬಹುದು' ಎಂದು ಕನ್ನಡ ವಿಶ್ವ-ವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ಡಾ.ಗೋವಿಂದ ತಿಳಿಸಿದ್ದಾರೆ.

ವಿಷ ಕೊಡಿಸಿ: ಅಲವತ್ತುಕೊಂಡ ದರ್ಶನ್

ಒಂದನೇ ಪುಟದಿಂದ...

ಆಗ, ದರ್ಶನ್ ಅವರು 'ನನ್ನದೊಂದು ಮನವಿ ಇದೆ. ದಯವಿಟ್ಟು ಆಲಿಸಿ. ಜೈಲಧಿಕಾರಿಗಳಿಗೆ ಸೂಚಿಸಬೇಕು' ಎಂದು ಅಳಲು ತೋಡಿಕೊಂಡರು. ಆಗ ನ್ಯಾಯಾಧೀಶರು ಏನು ಎಂದು ಪ್ರಶ್ನಿಸಿದಾಗ, 'ನನಗೆ ವಿಷ ನೀಡಲಿ' ಎಂಬುದಾಗಿ ದರ್ಶನ್ ಕೇಳಿಕೊಂಡರು. ಅದಕ್ಕೆ ನ್ಯಾಯಾಧೀಶರು, 'ನೀವು ಹಾಗೆ ಹೇಳುವಂತಿಲ್ಲ. ಜೈಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಯಾವ ಸೂಚನೆ ನೀಡಬೇಕೆಂಬುದನ್ನು ನ್ಯಾಯಾಲಯ ಪರಿಶೀಲಿಸಲಿದೆ' ಎಂದು ಹೇಳಿದರು.

'ಬ್ಯಾರಕ್ ಎದುರು ಓಡಾಟ ನಡೆಸುವುದಕ್ಕೂ ಬಿಡುತ್ತಿಲ್ಲ. ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದೆ' ಎಂದು ದರ್ಶನ್ ಕಣ್ಣೀರು ಹಾಕಿದರು.

ಈ ಹಿಂದೆ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾಗ ವಿಶೇಷ ಆತಿಥ್ಯ ಪಡೆದಿದ್ದ ಆರೋಪ ದರ್ಶನ್ ಮೇಲಿತ್ತು. ಬ್ಯಾರಕ್ ಎದುರು ಕುರ್ಚಿಯ ಮೇಲೆ ಕುಳಿತು ಸಿಗರೇಟ್ ಸೇದುತ್ತಾ ಹರಟೆ ಹೊಡೆಯುತ್ತಿದ್ದ ಫೋಟೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅದಾದ ಮೇಲೆ ದರ್ಶನ್ ಅವರನ್ನು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರ ಮಾಡಲಾಗಿತ್ತು. ಬಳಿಕ ದರ್ಶನ್ ಅವರಿಗೆ ಷರತ್ತುಬದ್ಧ ಜಾಮೀನು ಸಿಕ್ಕಿತ್ತು. ಹೈಕೋರ್ಟ್ ನೀಡಿದ್ದ ಜಾಮೀನು ಆದೇಶವನ್ನು ಸುಪ್ರಿಂ ಕೋರ್ಟ್ ರದ್ದು ಮಾಡಿದ್ದರಿಂದ ಏಳು ಆರೋಪಿಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾರೆ. ಜೈಲಿನಲ್ಲಿ ಈಗ ಹೆಚ್ಚುವರಿ ಸೌಲಭ್ಯ ನೀಡುತ್ತಿಲ್ಲ ಎಂಬುದಾಗಿ ದರ್ಶನ್ ಪರ ವಕೀಲರು ನ್ಯಾಯಾಲಯದ ಗಮನಕ್ಕೆ ತಂದಿದ್ದರು.

'ಒಂದು ಕೊಠಡಿಯಲ್ಲಿ ಒಬ್ಬರೇ ಇರುವಂತೆ ದರ್ಶನ್ ಅವರಿಗೆ ಶಿಕ್ಷೆ ನೀಡಲಾಗುತ್ತಿದೆ. ಜೈಲಿನಲ್ಲಿ ಅಮಾನವೀಯವಾಗಿ ನಡೆಸಿಕೊಳ್ಳ-ಲಾಗುತ್ತಿದೆ. ಬೇರೆ ಕೈದಿಗಳಿಗೆ ಸೌಲಭ್ಯ ನೀಡಲಾಗುತ್ತಿದೆ. ಶಿಕ್ಷೆಯಾದವರಿಗೂ ಸೌಲಭ್ಯ ನೀಡಲಾಗುತ್ತಿದೆ. ಆದರೆ, ದರ್ಶನ್ ಅವರಿಗೆ ಯಾವುದೇ ಸೌಲಭ್ಯ ನೀಡುತ್ತಿಲ್ಲ' ಎಂದು ಅವರ ಪರ ವಕೀಲರು ನ್ಯಾಯಾಲಯದ ಗಮನಕ್ಕೆ ತಂದಿದ್ದರು.

ಹಾಸಿಗೆ, ದಿಂಬು ಕೊಡಲು ಸೂಚನೆ

ಹೆಚ್ಚುವರಿ ಹಾಸಿಗೆ, ದಿಂಬು ನೀಡುವಂತೆ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ, ಜೈಲಿನ ಕೈಪಿಡಿಯಲ್ಲಿರುವ ನಿಯಮಗಳನ್ನು ಅನುಸರಿಸಬೇಕು. ವಿಚಾರಣಾಧೀನ ಕೈದಿ ಹೆಚ್ಚುವರಿ ಹಾಸಿಗೆ, ದಿಂಬು ಕೇಳಿದರೆ ಕೊಡಬಹುದು ಎಂದು ಜೈಲಧಿಕಾರಿಗಳಿಗೆ ಸೂಚಿಸಿದೆ.

'ಬ್ಯಾರಕ್ ಎದುರು ಓಡಾಟ ನಡೆಸಲು ಅನುವು ಮಾಡಿಕೊಡಬಹುದು. ಆರೋಗ್ಯ ಸಮಸ್ಯೆಯಾದರೆ ಜೈಲಿನ ವೈದ್ಯರನ್ನು ಭೇಟಿ ಮಾಡಬಹುದು. ಸ್ವಂತ ಹಣದಿಂದ ಕಾರಾಗೃಹದಲ್ಲಿ ಇರುವ ಅಂಗಡಿಗಳಲ್ಲಿ ತಿಂಡಿ–ತಿನಿಸುಗಳನ್ನು ಖರೀದಿಸಲು ಅವಕಾಶವಿದೆ' ಎಂದು ನ್ಯಾಯಾಲಯ ಹೇಳಿತು.

ಸ್ಥಳಾಂತರ ಇಲ್ಲ

ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲು ನ್ಯಾಯಾಲಯ ನಿರಾಕರಿಸಿದೆ. 'ಆರೋಪಿಯನ್ನು ಬಳ್ಳಾರಿ ಜೈಲಿಗೆ ವರ್ಗಾವಣೆ ಮಾಡುವ ಸಂಬಂಧ ಆದೇಶಿಸಲು ಸಕಾರಣ ಇಲ್ಲ. ಜೈಲು ನಿಯಮ ಉಲ್ಲಂಘನೆ ಕಂಡುಬಂದರೆ ಜೈಲಿನ ಹಿರಿಯ ಅಧಿಕಾರಿಗಳು ವರ್ಗಾವಣೆಗೆ ಕ್ರಮ ಕೈಗೊಳ್ಳಬಹುದು ಎಂದು ನ್ಯಾಯಾಲಯ ಹೇಳಿದೆ.

ಕರ್ನಾಟಕ ಬಿಜೆಪಿ ಕಾರ್ಯಕರ್ತನಿಂದ ಇ.ಡಿ. ಮುಂದೆ ಹೇಳಿಕೆ ದಾಖಲು

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬ್ರಿಟಿಷ್ ನಾಗರಿಕ ಎಂದು ಅಲಹಾಬಾದ್ ಹೈಕೋರ್ಟ್‌ನಲ್ಲಿ ಪ್ರತಿಪಾದಿಸಿದ್ದ ಕರ್ನಾಟಕದ ಬಿಜೆಪಿ ಕಾರ್ಯಕರ್ತ ಎಸ್. ವಿಘ್ನೇಶ್ ಶಿಶಿರ್ ಅವರು ಮಂಗಳವಾರ ಜಾರಿ ನಿರ್ದೇಶನಾಲಯದ ಮುಂದೆ ಹೇಳಿಕೆ ದಾಖಲಿಸಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

'ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಸೆಕ್ಷನ್ 37ರ ಅಡಿಯಲ್ಲಿ ದೆಹಲಿ-ಯಲ್ಲಿರುವ ತನಿಖಾ ಸಂಸ್ಥೆ ಕಚೇರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿತ್ತು' ಎಂದು ವಿಘ್ನೇಶ್ ಮಾಧ್ಯಮಗಳಿಗೆ ತಿಳಿಸಿದರು.

ರಾಹುಲ್ ಗಾಂಧಿ ಅವರು ಬ್ರಿಟಿಷ್ ಪ್ರಜೆ ಎಂಬುದರ ಕುರಿತು ಹೊಂದಿರುವ ದಾಖಲೆ ಹಾಗೂ ಸಾಕ್ಷ್ಯಗಳನ್ನು ನೀಡುವಂತೆ ವಿಘ್ನೇಶ್ ಅವರಿಗೆ ಅಧಿಕಾರಿಗಳು ಸೂಚಿಸಿದರು. ಈ ಸಂಬಂಧ ಹಲವು ಪ್ರಶ್ನೆಗಳನ್ನು ಕೇಳಿ, ಫೆಮಾ ಕಾಯ್ದೆ ಅಡಿಯಲ್ಲಿ ಹೇಳಿಕೆ ದಾಖಲಿಸಿ ಕೊಂಡಿದ್ದಾರೆ ಎಂದು ಗೊತ್ತಾಗಿದೆ.

ರಾಹುಲ್

'ನನ್ನ ಬಳಿ ಬಲವಾದ ಸಾಕ್ಷ್ಯ, ಮಾಹಿತಿ, ದಾಖಲೆಗಳಿವೆ' ಎಂದು ವಿಘ್ನೇಶ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಈ ಕುರಿತು ಕಾಂಗ್ರೆಸ್ ಪಕ್ಷವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ರಾಹುಲ್ ಗಾಂಧಿ ಅವರು ಬ್ರಿಟಿಷ್ ಪ್ರಜೆಯಾಗಿದ್ದು, ಅವರು ದೇಶದಲ್ಲಿ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರು ಎಂದು ಘೋಷಿಸುವಂತೆ ಕೋರಿ ವಿಘ್ನೇಶ್ ಅವರು ಅಲಹಾಬಾದ್ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದರು.

'ಸಂಪುಟ ಒಪ್ಪಿದರೆ ಸುಗ್ರೀವಾಜ್ಞೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಕಡ್ಡಾಯಗೊಳಿಸುವ ಉದ್ದೇಶದಿಂದ ಕಾನೂನು ತಿದ್ದುಪಡಿ ಮಾಡಿ ನಿಯಮಗಳನ್ನು ರಚಿಸಲು ನಿರ್ಧರಿಸಿದ್ದೇವೆ. ಸಚಿವ ಸಂಪುಟ ಒಪ್ಪಿದರೆ ಸುಗ್ರೀವಾಜ್ಞೆ ಹೊರಡಿಸುತ್ತೇವೆ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಕಾಯ್ದೆಗಳ ತಿದ್ದುಪಡಿಗೆ ಕರಡು ಮಸೂದೆ ಸಿದ್ಧವಾಗಿದೆ. ಇದೇ 11ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಚರ್ಚೆ ಮಾಡುತ್ತೇವೆ' ಎಂದರು.

'ಸುಗ್ರೀವಾಜ್ಞೆಗೆ ರಾಜ್ಯಪಾಲರು ಅನುಮೋದನೆ ನೀಡುವ ವಿಶ್ವಾಸವಿದೆ' ಎಂದ ಅವರು, 'ಮತಪತ್ರ ಕಡ್ಡಾಯ-ಗೊಳಿಸುವುದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬ ಆಗುವುದಿಲ್ಲ. ಆ ಉದ್ದೇಶವೂ ಸರ್ಕಾರಕ್ಕೆ ಇಲ್ಲ' ಎಂದರು.

ಮದ್ದೂರು ಗಲಭೆಯ ಕುರಿತು ಪ್ರ-ತಿಕ್ರಿಯಿಸಿದ ಅವರು, 'ಬಿಜೆಪಿಯವರು ಧರ್ಮ ಸಂಘರ್ಷ ಉಂಟು ಮಾಡುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ಸಮಾಜದಲ್ಲಿ ಒಡಕು ಮೂಡಿಸುತ್ತಿದ್ದಾರೆ' ಎಂದು ಆರೋಪಿಸಿದರು.

ಜೈಲರ್ ಮೇಲೆ ಕೈದಿಗಳಿಂದ ಹಲ್ಲೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಇಲ್ಲಿನ ಜಿಲ್ಲಾ ಕಾರಾಗೃಹದ ವಿಚಾರಣಾಧೀನ ಕೈದಿಗಳು ಕಾರಾಗೃಹದ ಜೈಲರ್, ಸಹಾಯಕ ಜೈಲರ್ ಹಾಗೂ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ.

ಸಹಾಯಕ ಜೈಲರ್ ಮಲ್ಲಿಕಾರ್ಜು-ನಪ್ಪ ಟಿ. ಸೋಮವಾರ ಸಂಜೆ ದಾಸ್ತಾನು ಕೊಠಡಿಯಲ್ಲಿ ಕೂಡಿ ಹಾಕಿದ ಕುಖ್ಯಾತ ರೌಡಿ ಬಾಂಬೆ ಸಲೀಂ ಹಾಗೂ ಆತನ ಎಂಟು ಮಂದಿ ಸಹಚರರು ಹಲ್ಲೆ ನಡೆಸಿದ್ದಾರೆ. ಕಾರಾಗೃಹ ಇಲಾಖೆ ಡಿಐಜಿ ಭೇಟಿ ನೀಡಿ ಪರಿಶೀಲಿಸಿದರು.

ಸರ್ಕಾರಿ ಆಸ್ತಿಗೆ ನಷ್ಟ ಮತ್ತು ಕಾರಾಗೃಹದ ಭದ್ರತೆಗೆ ಭಂಗ ಉಂಟು ಮಾಡಿರುವ ಆರೋಪದ ಹಿನ್ನೆಲೆಯಲ್ಲಿ 9 ಮಂದಿ ವಿರುದ್ಧ ಕಾರಾಗೃಹದ ಅಧೀಕ್ಷಕ ಸುನೀಲ್ ಡಿ.ಗಲ್ಲೆ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆಯಲ್ಲಿ ಮಂಗಳವಾರ ದೂರು ದಾಖಲಿಸಿದ್ದಾರೆ.

ಬಾಗೇಪಲ್ಲಿ ಪ್ರಕರಣಕ್ಕೆ ಸಂಬಂಧಿಸಿ ಬಾಂಬೆ ಸಲೀಂ, ಆತನ ಸಹಚರರು ವಿಚಾರಣಾಧೀನ ಕೈದಿಗಳಾಗಿ ಕಾರಾಗೃಹ ಸೇರಿದ್ದಾರೆ. ತಕ್ಷಣ ಕಾರಾಗೃಹದ ಅಧೀಕ್ಷಕರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಸ್ಥಳೀಯ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಸಿಬ್ಬಂದಿ ಪರಿಸ್ಥಿತಿ ಹತೋಟಿಗೆ ತಂದಿದ್ದಾರೆ.

'ಚಾಮುಂಡಿ ಬೆಟ್ಟ ಚಲೊ' ವಿಫಲ

ಒಂದನೇ ಪುಟದಿಂದ...

ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಎಸ್.ರಾಜೇಶ್ ಅವರನ್ನು ವೃತ್ತದ ಬಳಿ ವಶಕ್ಕೆ ಪಡೆದರು. ನಂತರ ಹಿಂದುಳಿದ ವರ್ಗಗಳ ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮು ನೇತೃತ್ವದ ತಂಡವೂ ಬಂದು ಜಾಥಾಗೆ ಅವಕಾಶ ಸಿಗದೆ ವಾಪಸಾಯಿತು.

ಪ್ರತಿಭಟನಕಾರರನ್ನು ತಡೆಯಲು ಕುರುಬರಹಳ್ಳಿಯ ಸಂಗೊಳ್ಳಿ ರಾಯಣ್ಣ ವೃತ್ತ ಹಾಗೂ ತಾವರೆಕೆರೆಯಲ್ಲಿ ಐನೂರಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗಿತ್ತು. ನಗರ ಪೊಲೀಸ್, ನಗರ ಸಶಸ್ತ್ರ ಪಡೆ, ಕಮಾಂಡೊ ದಳ, ಚಾಮುಂಡಿ ಪಡೆಯ ಸಿಬ್ಬಂದಿ ಬೆಳಿಗ್ಗೆ 7 ರಿಂದ ದಿನವಿಡೀ ಭದ್ರತೆ ಒದಗಿಸಿದರು.

ಬೆಟ್ಟಕ್ಕೆ ಹಾಗೂ ಕುರುಬರಹಳ್ಳಿ ವೃತ್ತಕ್ಕೆ ಸಂಪರ್ಕಿಸುವ ರಸ್ತೆಗಳಿಗೆ ಬ್ಯಾರಿಕೇಡ್ ಅಳವಡಿಸಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಚಾಮುಂಡಿ ಬೆಟ್ಟಕ್ಕೆ ತೆರಳಲು ಸಂಜೆ ಬಳಿಕವಷ್ಟೇ ಭಕ್ತರಿಗೆ ಅವಕಾಶ ದೊರಕಿತು.

ಭಕ್ತರಿಗೂ ತಟ್ಟಿದ ಬಿಸಿ -ಕಣ್ಣೀರಿಟ್ಟ ಗೃಹಿಣಿ

ಪ್ರತಿಭಟನನಿರತರನ್ನು ತಡೆಯುವ ಭರದಲ್ಲಿ ಪೊಲೀಸರು, ಹೊರಗಿನಿಂದ ಬಂದಿದ್ದ ಭಕ್ತರಿಗೂ ಬೆಟ್ಟಕ್ಕೆ ತೆರಳಲು ಅವಕಾಶ ನೀಡದಿದ್ದುದು ಜನಾಕ್ರೋಶಕ್ಕೆ ದಾರಿ ಮಾಡಿತ್ತು.

ಪೂಜೆ ಸಲ್ಲಿಸಲು ಬೆಟ್ಟಕ್ಕೆ ತೆರಳುತ್ತಿದ್ದ ತಮ್ಮನ್ನು ತಡೆದರು ಎಂದು ಭಕ್ತೆಯೊಬ್ಬರು ಮಹಿಳಾ ಪೊಲೀಸರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

'ಪತಿ ಜೊತೆ ಬಂದಿದ್ದೇನೆ, ದೇವಸ್ಥಾನಕ್ಕೆ ಏಕೆ ಬಿಡುತ್ತಿಲ್ಲ' ಎಂದು ಪ್ರಶ್ನಿಸಿದರು. ಆಗ ಡಿಸಿಪಿ ಬಿಂದುರಾಣಿ ಹಾಗೂ ಸಿಬ್ಬಂದಿ ಅವರ ವಿಚಾರಣೆ ನಡೆಸದೇ ಪೊಲೀಸ್ ವಾಹನಕ್ಕೆ ಹತ್ತಿಸಲು ಯತ್ನಿಸಿದರು. ನೂಕುನುಗ್ಗಲಿಗೆ ಬೇಸತ್ತ ಮಹಿಳೆ, 'ಸಂದರ್ಶನಕ್ಕೆ ತೆರಳಿರುವ ಮಗಳಿಗೆ ಒಳಿತು ಕೋರಿ ದೇಗುಲಕ್ಕೆ ಬಂದರೆ ಜೈಲಿಗೆ ಕಳಿಸುತ್ತಿದ್ದೀರಾ' ಎಂದು ಕಣ್ಣೀರು ಹಾಕಿದರು. ನಂತರ ಪತಿಯ ಜೊತೆಗೂಡಿ ದೇಗುಲಕ್ಕೆ ತೆರಳಿದರು.

ಹುಲಿ ಹಿಡಿಯದ ಸಿಟ್ಟು–ಸಿಬ್ಬಂದಿಗೆ ಬೋನು

ಒಂದನೇ ಪುಟದಿಂದ...

'ಹಾಗಾಗಿ, ಗ್ರಾಮಕ್ಕೆ ಬಂದ ಅಧಿಕಾರಿಗಳನ್ನೇ ಬೋನಿನಲ್ಲಿ ಕೂಡಿ ಹಾಕಬೇಕಾಯಿತು' ಎಂದು ರೈತರು ತಮ್ಮ ಸಿಟ್ಟಿನ ನಡೆ ಸಮರ್ಥಿಸಿಕೊಂಡರು.

ಕಾರ್ಯಾಚರಣೆ: ಸಿಬ್ಬಂದಿಗೆ ದಿಗ್ಬಂಧನ ಸುದ್ದಿ ತಿಳಿಯುತ್ತಿದ್ದಂತೆ ಗುಂಡ್ಲುಪೇಟೆ ಎಸಿಎಫ್ ಸುರೇಶ್ ಹಾಗೂ ಬಂಡೀಪುರ ಎಸಿಎಫ್ ನವೀನ್ ಕುಮಾರ್ ಸ್ಥಳಕ್ಕೆ ಧಾವಿಸಿ ರೈತರ ಮನವೊಲಿಸಲು ಯತ್ನಿಸಿದರು. ಸಾಕಾನೆ ಬಳಸಿ ಹುಲಿ ಸೆರೆಗೆ ಕೂಂಬಿಂಗ್ ಮಾಡುವುದಾಗಿ ಭರವಸೆ ನೀಡಿದ ಬಳಿಕ ಸಿಬ್ಬಂದಿಯನ್ನು ಬೋನಿನಿಂದ ಮುಕ್ತಗೊಳಿಸಲಾಯಿತು.

ರೈತ ಸಂಘಟನೆ ಆಕ್ರೋಶ: 'ಹುಲಿ ಸೆರೆಗೆ ಕ್ರಮ ವಹಿಸದಿದ್ದರೆ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಲಾಗುವುದು' ಎಂದು ಸಾಮೂಹಿಕ ನಾಯಕತ್ವದ ರೈತ ಸಂಘದ ಮುಖಂಡ ಹೊನ್ನೂರು ಪ್ರಕಾಶ್ ಎಚ್ಚರಿಸಿದ್ದಾರೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಅಭಿವೃದ್ಧಿಯ ಸದಾವಕಾಶ ಕೆಳಕಂಡ ಯೋಜನೆಗಳಿಗೆ ಅರ್ಜಿ ಅಹ್ವಾನ

ಚರ್ಮ ಕುಶಲಕರ್ಮಿಗಳ ಕುಟುಂಬಗಳ ಯುವಜನರಿಗೆ ಹೊಸ ತಂತ್ರಜ್ಞಾನ, ವಿನ್ಯಾಸಗಳು ಹಾಗೂ ಮಾರುಕಟ್ಟೆ ಬೇಡಿಕೆಗಳ ಬಗ್ಗೆ ದೆಹಲಿ, ತಮಿಳುನಾಡು, ಮಹಾರಾಷ್ಟ್ರ, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ತರಬೇತಿ ಪಡೆಯಲು ಅಧ್ಯಯನ ಪ್ರವಾಸ ಯೋಜನೆ.

ಚರ್ಮಕಾರರ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ನೇರ ಸಾಲ ಯೋಜನೆ

ಕಚ್ಚಾ ಮಾಲು ಖರೀದಿ, ಚರ್ಮೋತ್ಪನ್ನಗಳ ಉತ್ಪಾದನೆ, ರಿಪೇರಿ ಮತ್ತು ಮಾರಾಟ ಮಾಡುವ ಅಂಗಡಿ ತೆರೆಯುವುದು/ಲಘು ವಾಹನದ ಮೂಲಕ ವ್ಯಾಪಾರ ಮಾಡುವವರಿಗೆ ಇತ್ಯಾದಿ. ಘಟಕದ ವೆಚ್ಚ ರೂ. 1,00,000/- (ರೂ. 50,000/- ಸಹಾಯಧನ ಮತ್ತು ರೂ. 50,000/- ಸಾಲ)

ಚರ್ಮಕಾರರ ವಸತಿ ಯೋಜನೆ

ಚರ್ಮ ಕುಶಲಕರ್ಮಿಗಳು ಖಾಲಿ ನಿವೇಶನ ಹೊಂದಿದ್ದಲ್ಲಿ ಚರ್ಮಕಾರರಿಗೆ ವಾಸಕ್ಕೆ ಮತ್ತು ಉದ್ಯೋಗ ಮುಂದುವರೆಸಲು ಅನುಕೂಲ ವಾಗುವಂತೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಳ್ಳಲು ನಿಗಮದ ಮೂಲಕ ರೂ.2.20 ಲಕ್ಷ ಧನಸಹಾಯ. (ಮೆ. ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಯೋಜನೆಯ ಜಾರಿ)

ವಿಶೇಷ ಸೂಚನೆ: ಈ ಹಿಂದಿನ ಸಾಲಿನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಗ್ರಾಮ ಒನ್ | KARNATAKA One | BANGALORE One

ಅರ್ಜಿಗಳನ್ನು https://sevasindhu.karnataka.gov.in / https://sevasindhuservices.karnataka.gov.in ಪೋರ್ಟಲ್ ಮೂಲಕ ಸಲ್ಲಿಸುವುದು. ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಗ್ರಾಮ ಒನ್ ಕೇಂದ್ರಗಳಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಿಗಮದ ಎಲ್ಲಾ ಜಿಲ್ಲೆಯ ಜಿಲ್ಲಾ ಸಂಯೋಜಕರುಗಳ ಕಛೇರಿ ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ/ಎಸ್.ಟಿ ಸಹಾಯವಾಣಿ 9482300400 ಸಂಪರ್ಕಿಸುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 08-10-2025

ವಿಶೇಷ ಸೂಚನೆ: ನಿಗಮದ ವಿವೇಚನಾ ಕೋಟಾ ಅಥವಾ ಸರ್ಕಾರದ ಸಾಂಸ್ಥಿಕ ಕೋಟಾದಡಿ ಸ್ವೀಕರಿಸುವ ಅರ್ಜಿಗಳನ್ನು ಸಹ ಸೇವಾಸಿಂಧು ಪೋರ್ಟಲ್ ಮೂಲಕವೇ ಸಲ್ಲಿಸುವುದು

ಪ್ರಕಟಣೆ :
ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಮಾನ್ಯ ಸಚಿವರೊಡನೆ ನಿಗಮದ ಅಧ್ಯಕ್ಷರಾದ ಶ್ರೀ ಮುಂಡ್ರಗಿ ನಾಗರಾಜ್ ರವರು ಫಲಾನುಭವಿಗಳಿಗೆ ಸವಲತ್ತು ವಿತರಿಸುತ್ತಿರುವುದು.

ಉದ್ಯೋಗ ವಾಣಿ

BANGALORE TURF CLUB LTD.
Post Box No. 5038, Race Course Road, Bangalore-560001.
EPABX:22262391/2/3 Extn:482,225,480. GST No:29AABCB6217G1ZT.
CIN: U99999KA1962PLC001449. Email:secretary@btcraces.com/ceo@btcraces.com

APPOINTMENTS - 10/09/2025

HEAD- FINANCE & ACCOUNTS
1) **Minimum Qualification:** Charted Accountant (CA)
Experience: Minimum 5 Years in Financial management and accounting

STENOGRAPHER
2) **Minimum Qualification:** Diploma in Stenography or Graduate
Experience: Minimum 10 years in relevant administrative support roles
Interested candidates may email their CV and testimonials to :
ceo@btcraces.com/secretary@btcraces.com
Last Date: Sunday, **Wednesday, 17th September 2025**
SD/- CEO & Secretary

BMS EDUCATIONAL TRUST®

Late B.M.Sreenivasaiah
Founder

Late B.S.Narayan
Former Donor Trustee

Invites Applications from eligible candidates for the post of
DIRECTOR
BMS COLLEGE OF ARCHITECTURE, DESIGN & PLANNING, BENGALURU
(An affiliated Institution to VTU, Belagavi, Recognised by Council of Architecture, New Delhi and AICTE, New Delhi).
Educational Qualifications and Experience: As per Council of Architecture, New Delhi Norms with Ph.D.
Desirable: ❖ Five years' experience as Professor
❖ Experience in Administration at responsible position
Applicants should be less than 55 years of age as on 01 Jan 2026. Eligible candidates may apply along with Passport size photograph and all credentials with detailed CV to the following address:

The Director (Administration),
BMS Educational Trust, Bull Temple Road,
Basavangudi, Bangalore-560019.

The sealed cover containing the application shall be superscribed "Application for the Post of Director, BMSCA D&P" must be received on or before 24th Sep 2025
Applicants can also apply online at director.admin@bmsce.ac.in

ಪ್ರಜಾವಾಣಿ



ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
ಮೊ: 96069 12220

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.in
Invites applications for the following posts:

The MES Group of Institutions, established in 1958 under the Mysore Education Society, is a reputed educational network in Bengaluru managing schools, PU colleges, degree colleges, and research centers. Renowned for academic excellence, value-based education, and holistic development, MES is inviting applications from qualified and dynamic professionals for the following positions:

POSTS & ELIGIBILITY	JOB DESCRIPTION
Post: 1. Chief Executive Officer **Educational Qualification:** Ph.D. in Arts / Commerce / Science / Technology. Proven track record in academic administration with leadership responsibilities. **Age:** Below 60 years.	The CEO will serve as the executive head of the MES Group of Institutions, providing strategic direction, academic leadership, and operational oversight. Responsibilities include institutional excellence, financial sustainability, governance, regulatory compliance, and stakeholder engagement.
Post: 2. Principal **Educational Qualification:** Ph.D. degree in Arts, Commerce, Science, or allied disciplines, with a consistently good academic record. **Experience:** At least 15 years of teaching/research experience in a recognized institution of higher education, with a minimum of 10 years in leadership/administrative roles such as HoD, Vice-Principal, Dean, or equivalent. **Research & Academic Credentials:** Significant publications in peer-reviewed journals, participation in national/international conferences, and experience in securing research grants will be an added advantage. **Age:** Below 60 years at the time of application.	The principal will be the academic and administrative head of MES College of Arts, Commerce & Science, providing visionary leadership in curriculum development, research promotion, quality assurance, and student-centric initiatives. The role includes ensuring compliance with UGC, State Government, and University regulations, enhancing the academic profile of the institution, promoting faculty development, fostering industry and community engagement, and driving NAAC/NIRF/Accreditation excellence.
Post: 3. Placement Officer **Educational Qualification:** Postgraduate degree in Management / Commerce / Science / Arts or related field. 5–10 years of experience in placement coordination / career services. **Age:** Below 45 years. Strong communication, ICT and networking skills.	The Placement Officer at MES College of Arts, Science & Commerce / MES Institute of Management will be responsible for building strong industry–academia linkages to create meaningful career opportunities for students. The role involves coordinating campus placements, internships, and career guidance sessions while ensuring students are well-prepared for the job market. In addition, the Placement Officer will organize training programs focused on soft skills, interview preparation, and aptitude development. A key responsibility will also be to maintain comprehensive placement records and actively engage with the alumni network to strengthen career support initiatives.

The Remuneration for all the posts will be commensurate with qualifications, skillset & Experience

1. Applications for the post of Chief Executive Officer with CV and copies of certificates of their qualifications and experience etc., Should reach the Secretary, MES at the above address on or before 24.09.2025 duly superscribing the envelope with **"Application for the post of CHIEF EXECUTIVE OFFICER".**
2. Applications for the post of Principal, Placement Officer with CV and copies of certificates of their qualifications and experience etc., Should reach the Chief Executive, MES at the above address on or before 24.09.2025 duly superscribing the envelope with "Application for the post of **PRINCIPAL / PLACEMENT OFFICER".**
3. Candidates with experience are preferred.
4. Decision of the selection committee is final.
5. Resorting to any sort of influence will be deemed as a disqualification of the candidature.
6. Download the application form from the MES website: **https://mesinstitutions.in**

Advt. No. MES/19/ADM-1/2025 - Dated 07.09.2025 **CHIEF EXECUTIVE**

‘ತಪ್ಪಿತಸ್ಥರ ವಿರುದ್ಧ ಕ್ರಮ: ಸಿ.ಎಂ’

ಬೆಂಗಳೂರು: ‘ಮದ್ದೂರಿನಲ್ಲಿ ನಡೆದ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ 21 ಜನರನ್ನು ಈಗಾಗಲೇ ಬಂಧಿಸಲಾಗಿದ್ದು, ಯಾವುದೇ ಜಾತಿ, ಧರ್ಮ ಪರಿಗಣಿಸದೇ ತಪ್ಪು ಮಾಡಿದವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಸಮಾಜದಲ್ಲಿ ಶಾಂತಿ ಕದಡುವುದೇ ಬಿಜೆಪಿಯ ಉದ್ದೇಶ’ ಎಂದು ದೂರಿದರು.

‘ಆರ್‌ಎಸ್‌ಎಸ್ ಸಂಘಟನೆಯವರು, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಚಾಮರಾಜನಗರದಿಂದ ಜನರನ್ನು ಚಾಮುಂಡಿ ಬೆಟ್ಟ ಚಲೊ ರ್‍ಯಾಲಿಗೆ ಕರೆಸಿ ಶಾಂತಿ ಕದಡುವ ಕೆಲಸ ಮಾಡುತ್ತಾರೆಂಬ ಕಾರಣಕ್ಕೆ ಆ ಕಾರ್ಯಕ್ರಮಕ್ಕೆ ಪೊಲೀಸರು ಅನುಮತಿ ನೀಡಲಿಲ್ಲ’ ಎಂದು ಮುಖ್ಯಮಂತ್ರಿ ಸಮರ್ಥನೆ ನೀಡಿದರು. ‘ಗಲಭೆಯಲ್ಲಿ ಯಾವುದೇ ಪಕ್ಷ, ಸಮುದಾಯವರು ನಿರತರಾಗಿದ್ದರೂ, ಅಂಥವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿಯವರು ಧ್ವನಿ ಎತ್ತುವುದಿಲ್ಲ: ‘ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆ’ ಎಂದು ಬಿಜೆಪಿಯವರು ಕೇಂದ್ರ ಗೃಹ ಸಚಿವರಿಗೆ ದೂರು ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ರಾಜ್ಯ ಸರ್ಕಾರದ್ದು. ಕೇಂದ್ರದಲ್ಲಿ ರೈತ ಚಳವಳಿಯಲ್ಲಿ ಅನೇಕ ರೈತರು ಪ್ರಾಣ ಕಳೆದುಕೊಂಡ ಸಂದರ್ಭದಲ್ಲಿ ಬಿಜೆಪಿಯವರು ಎಲ್ಲಿದ್ದರು? ಮಣಿಪುರದಲ್ಲಿ ನಡೆದ ಹಿಂಸಾಚಾರದ ಬಗ್ಗೆ ಬಿಜೆಪಿಯ ಯಾರೊಬ್ಬರೂ ಧ್ವನಿ ಎತ್ತಲಿಲ್ಲ ಏಕೆ? ಅದನ್ನೆಲ್ಲ ನೀವು ಬರೆಯಲ್ಲ’ ಎಂದರು.

‘ಶಾಂತ ಸ್ಥಿತಿ’ಯತ್ತ ಮದ್ದೂರು

‘ಮದ್ದೂರು ಬಂದ್’ಗೆ ವರ್ತಕರ ಬೆಂಬಲ, ಕಲಾಪ ಬಹಿಷ್ಕರಿಸಿದ ವಕೀಲರು

• ಸಿದ್ದು ಆರ್.ಜಿ.ಹಳ್ಳಿ

ಮದ್ದೂರು (ಮಂಡ್ಯ ಜಿಲ್ಲೆ): ಗಣೇಶನ ಮೂರ್ತಿ ವಿಸರ್ಜನೆ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆದು, ಎರಡು ದಿನದಿಂದ ಕೋಮು ದಳ್ಳುರಿಯಲ್ಲಿ ಬೆಂದಿದ್ದ ಪಟ್ಟಣ ಮಂಗಳವಾರ ಶಾಂತ ಸ್ಥಿತಿಗೆ ಮರಳಿತ್ತು.

ಬಿಜೆಪಿ, ಬಜರಂಗದಳ ಮತ್ತು ಹಿಂದುತ್ವ ಪರ ಸಂಘಟನೆಗಳು ಕರೆ ನೀಡಿದ್ದ ‘ಮದ್ದೂರು ಬಂದ್’ಗೆ ವರ್ತಕರಿಂದ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಬುಧವಾರ ಬೆಳಿಗ್ಗೆವರೆಗೂ ನಿಷೇಧಾಜ್ಞೆ ಮುಂದುವರಿಯಲಿದೆ. ಪಟ್ಟಣದಲ್ಲಿ ಮದ್ಯ ಮಾರಾಟಕ್ಕೂ ನಿರ್ಬಂಧ ವಿಧಿಸಲಾಗಿದೆ.

‘22 ಆರೋಪಿಗಳನ್ನು ಬಂಧಿಸಿದ್ದು, ನಾಲ್ವರಿಗಾಗಿ ಹುಡುಕಾಟ ನಡೆದಿದೆ. ಮಸೀದಿಯಿಂದ ಕಲ್ಲು ತೂರಲಾಗಿದೆ ಎಂಬುದಕ್ಕೆ ವಿಡಿಯೊ ಸಾಕ್ಷ್ಯ ಸಿಕ್ಕಿಲ್ಲ. ರಾಮನಗರ ಜಿಲ್ಲೆಯ ಇಬ್ಬರು ಕೃತ್ಯದಲ್ಲಿ ಭಾಗವಹಿಸಿರುವುದು ಗೊತ್ತಾಗಿದೆ. ಘಟನೆಯಲ್ಲಿ ಯಾರ ಕೈವಾಡವಿದೆ? ಇದು ಪೂರ್ವನಿಯೋಜಿತವೇ ಎಂಬುದು ತನಿಖೆಯಿಂದ ಗೊತ್ತಾಗಲಿದೆ’ ಎಂದು ಐಜಿಪಿ ಬೋರಲಿಂಗಯ್ಯ ತಿಳಿಸಿದ್ದಾರೆ.

ಅಂಗಡಿ ಮತ್ತು ವಾಣಿಜ್ಯ ಮಳಿಗೆಗಳನ್ನು ವರ್ತಕರು ಸ್ವಯಂ ಪ್ರೇರಿತರಾಗಿ ಮುಚ್ಚಿದ್ದರು. ಮದ್ದೂರು ತಾಲ್ಲೂಕಿನ ಭಾರತೀನಗರ, ಕೊಪ್ಪ, ಕೆಸ್ತೂರು, ಬೆಸಗರಹಳ್ಳಿ ಭಾಗದಲ್ಲೂ ಉತ್ತಮ ಪ್ರತಿಕ್ರಿಯೆ ದೊರೆಯಿತು.

ಕೆಎಸ್‌ಆರ್‌ಟಿಸಿ ಬಸ್ ಮತ್ತು ಆಟೊಗಳಿದ್ದರೂ ಪ್ರಯಾಣಿಕರು ಕಡಿಮೆ ಇದ್ದರು. ಜನ ಸಂಚಾರ ವಿರಳವಾಗಿತ್ತು. ಕಲ್ಲು ತೂರಾಟ ನಡೆದ ಸ್ಥಳ, ಮಸೀದಿ, ಪ್ರಮುಖ ವೃತ್ತಗಳಲ್ಲಿ ಪೊಲೀಸರು ಠಿಕಾಣಿ ಹೂಡಿದ್ದು, ಪಟ್ಟಣವನ್ನು ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಂಡಿದ್ದರು.

ಜಿಲ್ಲಾಧಿಕಾರಿ ಕುಮಾರ, ಐಜಿಪಿ ಬೋರಲಿಂಗಯ್ಯ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರು ಪಟ್ಟಣದಲ್ಲೇ ಎರಡು ದಿನದಿಂದ ಮೊಕ್ಕಾಂ ಹೂಡಿದ್ದಾರೆ. ಶಾಲಾ–ಕಾಲೇಜು, ಸರ್ಕಾರಿ ಕಚೇರಿ, ಆಸ್ಪತ್ರೆ, ಮೆಡಿಕಲ್ ಶಾಪ್, ಬ್ಯಾಂಕ್, ಹಾಲಿನ ಮಳಿಗೆ, ತರಕಾರಿ ಅಂಗಡಿ, ಪೆಟ್ರೋಲ್ ಬಂಕ್ ಎಂದಿನಂತೆ ತೆರೆದಿದ್ದವು.

ಕಲ್ಲು ತೂರಾಟ ಪ್ರಕರಣದ ಆರೋಪಿಗಳ ಪರ ವಕಾಲತ್ತು ವಹಿಸದಂತೆ ಮದ್ದೂರು ವಕೀಲರ ಸಂಘದ ಸದಸ್ಯರು ನಿರ್ಧರಿಸಿ, ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ, ಬಂದ್‌ಗೆ ಬೆಂಬಲ ಸೂಚಿಸಿದರು.

ಮುಖ್ಯಾಂಶಗಳು

- ಪಟ್ಟಣದಲ್ಲಿ ಪೊಲೀಸರ ಸರ್ಪಗಾವಲು
- ತಲೆಮರೆಸಿಕೊಂಡ ನಾಲ್ವರಿಗೆ ಹುಡುಕಾಟ
- ಬುಧವಾರ ಬೆಳಿಗ್ಗೆವರೆಗೆ ನಿಷೇಧಾಜ್ಞೆ

ಬಿಜೆಪಿ ನಿಯೋಗ ಭೇಟಿ ಇಂದು

ಪಟ್ಟಣಕ್ಕೆ ಸೆ.10ರಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಸೇರಿದಂತೆ ರಾಜ್ಯ ಮಟ್ಟದ ನಾಯಕರ ನಿಯೋಗ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಲಿದೆ.

ಕಲ್ಲು ತೂರಾಟ ನಡೆದ ಮದ್ದೂರಿನ ರಾಮ್ ರಹೀಂ ಬಡಾವಣೆಯ ಮಸೀದಿ ಸುತ್ತ ಪೊಲೀಸ್ ಬಿಗಿ ಬಂದೋಬಸ್ತ್ ಒದಗಿಸಲಾಗಿತ್ತು – ಪ್ರಜಾವಾಣಿ ಚಿತ್ರ

500 ಆರೋಪಿಗಳ ವಿರುದ್ಧ ಎಫ್‌ಐಆರ್

ಕಲ್ಲು ತೂರಾಟದ ಪ್ರಮುಖ ಆರೋಪಿ ಎನ್ನಲಾದ ಜಾಫರ್ ತಲೆಮರೆಸಿ-ಕೊಂಡಿದ್ದು ಪೊಲೀಸರು ಹುಡುಕಾಟ ನಡೆಸಿದ್ದಾರೆ. ಕಲ್ಲು ತೂರಾಟ ಖಂಡಿಸಿ ನಡೆದಿದ್ದ ಪ್ರತಿಭಟನೆ ವೇಳೆ ಕಲ್ಲು ತೂರಾಟ, ಬಾವುಟ, ಬಂಟಿಂಗ್ಸ್ ಕಿತ್ತೆಸೆದವರ ವಿರುದ್ಧ ಎರಡು ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಮಸೀದಿಗೆ ನುಗ್ಗಲು ಯತ್ನ, ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಆರೋಪದ ಮೇರೆಗೆ ಗಿರೀಶ್, ಸೌಮ್ಯ, ರಮ್ಯಾ, ಪಲ್ಲವಿ ಸೇರಿದಂತೆ ಒಟ್ಟು 500 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

28 ಮೂರ್ತಿಗಳ ವಿಸರ್ಜನೆ ಇಂದು

ಮದ್ದೂರು ಪಟ್ಟಣದಲ್ಲಿ ಸೆ.10ರಂದು 28 ಗಣೇಶ ಮೂರ್ತಿಗಳ ಸಾಮೂಹಿಕ ವಿಸರ್ಜನೆ ಕಾರ್ಯ ನಡೆಯಲಿದೆ. ಬಿಗಿ ಭದ್ರತೆ ಒದಗಿಸಲು ಪೊಲೀಸ್ ಅಧಿಕಾರಿಗಳು ನಿರ್ಧರಿಸಿದ್ದಾರೆ.

‘ಮೆರವಣಿಗೆಯಲ್ಲಿ 20 ಸಾವಿರ ಮಂದಿ ಭಾಗವಹಿಸುವ ಅಂದಾಜು ಇದೆ. ಮಾರ್ಗದ ಬಗ್ಗೆ ಪೊಲೀಸರ ಜೊತೆ ಚರ್ಚಿಸಲಾಗಿದೆ’ ಎಂದು ಬಿಜೆಪಿ ಮುಖಂಡ ಎಸ್.ಪಿ.ಸ್ವಾಮಿ ತಿಳಿಸಿದ್ದಾರೆ.

ಶಾಂತಿ ಸಭೆಗೆ ಬಿಜೆಪಿ ಮುಖಂಡರ ಗೈರು

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ಪಟ್ಟಣದಲ್ಲಿ ಮಂಗಳವಾರ ಸಂಜೆ ಕರೆದಿದ್ದ ‘ಶಾಂತಿ ಸಭೆ’ಗೆ ಬಿಜೆಪಿ, ಹಿಂದುತ್ವ ಪರ ಮುಖಂಡರು ಗೈರಾದರು.

ಕಲ್ಯಾಣ ಮಂಟಪದಲ್ಲಿ ನಡೆದ ಸಭೆಯು ಮುಸ್ಲಿಂ ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರು, ಅಧಿಕಾರಿಗಳಿಗೆ ಸೀಮಿತವಾಗಿತ್ತು. ಕಲ್ಲು ತೂರಾಟ ಖಂಡಿಸಿ ಪ್ರತಿಭಟಿಸಿದ್ದ ಯಾರೊಬ್ಬರೂ ಸಭೆಗೆ ಬರಲಿಲ್ಲ.

ಸಚಿವರು ಮಾತನಾಡಿ, ‘ಸಭೆಗೆ ಬಿಜೆಪಿ ಮುಖಂಡರು ಬಂದಿದ್ದರೆ ಚೆನ್ನಾಗಿರುತ್ತಿತ್ತು. ಅವರು ಬಾರದೆ, ತಮಗೆ ಶಾಂತಿ ಬೇಕಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಅವರು ಮೂರು ಸತ್ಯಶೋಧನಾ ಸಮಿತಿ ಮಾಡಿದ್ದಾರೆ’ ಎಂದರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಪಾಲ್ಗೊಂಡಿದ್ದರು.

ಸಭೆಗೆ ಹೋಗಲ್ಲ: ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಇಂದ್ರೇಶ್ ಅವರು, ‘ಒಂದೆರಡು ಕಲ್ಲು ಎಸೆಯಲಾಗಿದೆ ಎಂದು ಉಸ್ತುವಾರಿ ಸಚಿವರು ಹೇಳಿದರೆ, ಗೃಹ ಸಚಿವ ಪರಮೇಶ್ವರ, ‘ಸಣ್ಣ ಘಟನೆ’ ಅಂತಾರೆ. ಹೀಗಾಗಿ ನಾವು ಸಭೆಗೆ ಹೋಗಿಲ್ಲ’ ಎಂದರು.

‘ಪ್ರತಿಭಟಿಸಿದವರ ವಿರುದ್ಧ ಪ್ರಕರಣ ದಾಖಲಿಸುತ್ತಾರೆಂದು ಗೊತ್ತಿತ್ತು. 500 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಬಿಜೆಪಿ ಲೀಗಲ್ ಟೀಂ ಅವರ ಜೊತೆ ಇರುತ್ತದೆ’ ಎಂದು ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ಮಹಿಳೆ, ಮಕ್ಕಳ ನೆರವಿಗೆ ‘ಅಕ್ಕಾ’ ಪಡೆ: ಸಚಿವೆ ಲಕ್ಷ್ಮೀ ಹೆಬ್ಬಾಳಕರ

ಬೆಳಗಾವಿ: ‘ಸಂಕಷ್ಟದಲ್ಲಿ ಇರುವಂಥ ಮಕ್ಕಳು ಮತ್ತು ಮಹಿಳೆಯರಿಗೆ ನೆರವಾಗಲು ‘ಅಕ್ಕಾ ಪಡೆ’ಗಳನ್ನು ಸ್ಥಾಪಿಸುತ್ತಿದ್ದೇವೆ. ಬೆಂಗಳೂರಿನಲ್ಲಿ ನ.19ರಂದು ಚಾಲನೆ ನೀಡಲಾಗುವುದು’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ‘ಮೈಸೂರು, ಉಡುಪಿ ಮತ್ತು ಬೆಳಗಾವಿಯಲ್ಲಿ ಅಕ್ಕಾ ಪಡೆಗಳು ಪ್ರಾಯೋಗಿಕವಾಗಿ ಜಾರಿಗೆ ಬರಲಿವೆ. 10 ರಿಂದ 15 ಜನರ ತಂಡ ಇರಲಿದ್ದು, ಎನ್‌ಸಿಸಿ ಹಿರಿಯ ಕೆಡೆಟ್‌ಗಳು ಮತ್ತು ಮಹಿಳಾ ಪೊಲೀಸ್ ಸಿಬ್ಬಂದಿ ಒಳಗೊಂಡಿರಲಿವೆ’ ಎಂದರು.

‘ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅಧಿಕಾರವಧಿಯಲ್ಲಿ ಆರಂಭಗೊಂಡಿದ್ದ ಅಂಗನವಾಡಿ ಕೇಂದ್ರಗಳು 50 ವರ್ಷ ಪೂರೈಸಿವೆ. ನವೆಂಬರ್ 19ರಂದು ಇಂದಿರಾ ಗಾಂಧಿ ಅವರ ಜನ್ಮದಿನವಿದೆ. ಬೆಂಗಳೂರಿನಲ್ಲಿ ಅಂದೇ ಅಂಗನವಾಡಿ ಕೇಂದ್ರಗಳ ಸುವರ್ಣ ಮಹೋತ್ಸವ ಕಾರ್ಯಕ್ರಮ ಆಯೋಜಿಸುತ್ತಿದ್ದೇವೆ’ ಎಂದರು.

‘ಗೃಹಲಕ್ಷ್ಮಿ ಯೋಜನೆಯಡಿ ರಾಜ್ಯದಲ್ಲಿ 21 ಕಂತಿನ ಹಣವನ್ನು ಈವರೆಗೆ ಬಿಡುಗಡೆ ಮಾಡಲಾಗಿದ್ದು, ಬಾಕಿ ಹಣ ಶೀಘ್ರ ಬಿಡುಗಡೆ ಮಾಡಲಾಗುವುದು’ ಎಂದು ಹೇಳಿದರು.

3 ಸಾವಿರ ಲೈನ್‌ಮನ್ ನೇಮಕಾತಿ ಶೀಘ್ರ ಪೂರ್ಣ: ಕೆ.ಜೆ.ಜಾರ್ಜ್

ಧಾರವಾಡ: ‘ರಾಜ್ಯದಲ್ಲಿ ಮೂರು ಸಾವಿರ ಲೈನ್‌ಮನ್‌ಗಳ ನೇಮಕಾತಿ ಪ್ರಕ್ರಿಯೆ ಶೀಘ್ರದಲ್ಲಿ ಪೂರ್ಣಗೊಳ್ಳಲಿದೆ’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಇಲ್ಲಿ ಮಂಗಳವಾರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು, ‘ಲೈನ್‌ಮನ್‌ಗಳಾಗಿ ಆಯ್ಕೆಯಾದವರು 10 ವರ್ಷ ಒಂದೇ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಬೇಕು ಎಂಬ ನಿಯಮ ರೂಪಿಸಲಾಗಿದೆ’ ಎಂದರು.

‘ಶರಾವತಿ ವಿದ್ಯುತ್ ಘಟಕದಲ್ಲಿ ‘ಪಂಪ್ ಸ್ಟೋರೇಜ್’ ಸ್ಥಾಪಿಸಲು 52 ಹೆಕ್ಟೇರ್ ಜಾಗ ಬೇಕು. ಪಂಪ್ ಸ್ಟೋರೇಜ್‌ನಿಂದ ಎರಡು ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಹೆಚ್ಚಲಿದೆ’ ಎಂದು ತಿಳಿಸಿದರು.

‘ಸಿ.ಸಿ’ (ಕಟ್ಟಡ ನಿರ್ಮಾಣ ಅನುಮತಿ ಪತ್ರ) ಹಾಗೂ ‘ಒ.ಸಿ’ (ಕಟ್ಟಡ ಸ್ವಾಧೀನಾನುಭವ ಪತ್ರ) ಇಲ್ಲದ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಸಂಪುಟ ಸಭೆ ನಿರ್ಧರಿಸಲಿದೆ’ ಎಂದರು.

ಎಸ್‌ಐಟಿ ವಿಚಾರಣೆ ಇನ್ನಷ್ಟು ಚುರುಕು

ಧರ್ಮಸ್ಥಳ ಬೆಳವಣಿಗೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿವೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹ-ಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ವಿಚಾರಣೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಹಲವರನ್ನು ಮಂಗಳವಾರ ವಿಚಾರಣೆಗೆ ಒಳಪಡಿಸಿದರು.

ಕೇರಳದ ಯೂಟ್ಯೂಬರ್ ಮುನಾಫ್, ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಜಯಂತ್ ಟಿ., 'ಯುನೈಟೆಡ್ ಮಿಡಿಯಾ' ಯೂಟ್ಯೂಬ್ ಚಾನೆಲ್‌ನ ಅಭಿಷೇಕ್, ಸಾಕ್ಷಿ ದೂರುದಾರ ಪೊಲೀಸರಿಗೆ ಒಪ್ಪಿಸಿದ್ದ ಕಾಡಿನಲ್ಲಿ ಬುರುಡೆ ತೆಗೆದಿದ್ದ ಜಾಗ ತೋರಿಸಿದ್ದ ವಿಠಲ ಗೌಡ, ಸ್ಥಳೀಯ ನಿವಾಸಿ ಪ್ರದೀಪ್ ಬೆಳ್ತಂಗಡಿಯ ಎಸ್‌ಐಟಿ ಕಚೇರಿಯಲ್ಲಿ ವಿಚಾರಣೆ ಎದುರಿಸಿದರು. ಜಯಂತ್ ಜೊತೆ ಅವರ ಸಂಬಂಧಿಕ ಮಹಿಳೆಯೂ ಹಾಜರಾದರು.

ಎಸ್‌ಐಟಿ ಕಚೇರಿ ಬಳಿ ಸುದ್ದಿಗಾರರ ಜೊತೆ ಮಾತನಾಡಿದ ಮುನಾಫ್, ‘ಎಸ್‌ಐಟಿ ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಿದೆ. ಬುರುಡೆ ಪ್ರಕರಣ ಮಾತ್ರ ಅಲ್ಲ; ಬೇರೆ ವಿಚಾರಗಳ ಬಗ್ಗೆಯೂ ವಿಚಾರಣೆ ನಡೆಸುತ್ತಿದೆ. ಸಾಕ್ಷಿ ದೂರುದಾರ ಕೋರ್ಟ್‌ನಲ್ಲಿ ದಾಖಲಿಸಿದ್ದ ಹೇಳಿಕೆ ಕುರಿತೂ ತನಿಖೆ ನಡೆಸುತ್ತಿದೆ’ ಎಂದರು.

‘ಸಾಕ್ಷಿ ದೂರುದಾರ ನ್ಯಾಯಾಲಯ-ದಲ್ಲಿ ಹೇಳಿಕೆ ದಾಖಲಿಸಿದ ಬಳಿಕವಷ್ಟೇ ನಾನು ನನ್ನ ಯೂಟ್ಯೂಬ್ ವಾಹಿನಿಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ವಿಡಿಯೊ ಪ್ರಸಾರ ಮಾಡಿದ್ದೆ. ಆ ದೃಶ್ಯಗಳನ್ನು ಇದೇ ಮೊಬೈಲ್‌ನಲ್ಲೇ ಚಿತ್ರೀಕರಿಸಿದ್ದೆ. ಕಾಡಿನಲ್ಲಿ ಬುರುಡೆಯನ್ನು ಹೊರತೆಗೆದಿದ್ದ ಸಂದರ್ಭದಲ್ಲಿ ನಾನು ಅಲ್ಲಿದ್ದೆನಾ, ಇಲ್ಲವೋ ಎಂಬುದನ್ನು ಎಸ್‌ಐಟಿ ಎದುರು ಹೇಳುತ್ತೇನೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಸೋಮವಾರ ರಾತ್ರಿ 11ರವರೆಗೂ ವಿಚಾರಣೆ ನಡೆಸಿದ್ದರು. ದಶಕಗಳ ಹಿಂದೆ ನಡೆದ ಕೃತ್ಯಗಳ ವಿಚಾರಣೆ ನಾಲ್ಕೇ ದಿನದಲ್ಲಿ ಮುಗಿಯಬೇಕು ಎಂದರೆ ಆಗದು. ಎಸ್‌ಐಟಿ ಮುಂದೆ ನನಗೆ ತಿಳಿದ ಸತ್ಯ ಹೇಳುತ್ತೇವೆ. ಸೌಜನ್ಯಾ ಪರ ಹೋರಾಟಗಾರರ ಜೊತೆಗೆ ಇರುವವರು ನಾವು. ನಮಗೆ ಭಯ ಇಲ್ಲ. ಸಾಕ್ಷಿ ದೂರುದಾರ ಮಾತು ಬದಲಿಸಿರಬಹುದು. ನಾವು ಕೊನೆಯವರೆಗೂ ಸೌಜನ್ಯಾ ಪರವಾಗಿ ನಿಲ್ಲುತ್ತೇವೆ’ ಎಂದರು.

‘ನಾನೂ ಕರ್ನಾಟಕದಲ್ಲೇ ಹುಟ್ಟಿ ಬೆಳೆದವ. ಬೆಳ್ತಂಗಡಿಯ ಅರಣ್ಯ ಇಲಾಖೆ ಡಿಪೊದಲ್ಲೂ ಕೆಲಸ ಮಾಡಿದ್ದೆ. ಕೇರಳದಿಂದ ಒಬ್ಬನೇ ಬಂದಿದ್ದೇನೆ. ಮಾನವ ಹಕ್ಕಿಗೆ ಸಂಬಂಧಿಸಿದ ಸರ್ಕಾರೇತರ ಸಂಘಟನೆಯಲ್ಲಿ ಸಕ್ರಿಯ-ವಾಗಿರುವುದು ನಿಜ. ನನ್ನ ಕೆಲಸದ ಬಗ್ಗೆ ನನಗೆ ಸ್ಪಷ್ಟತೆ ಇದೆ’ ಎಂದು ತಿಳಿಸಿದರು.

ಎಸ್‌ಐಟಿ ಎಸ್‌ಪಿ ಜಿತೇಂದ್ರ ಕುಮಾರ್ ದಯಾಮ, ಸೈಮನ್ ಮತ್ತಿತರರು ವಿಚಾರಣೆ ವೇಳೆ ಕಚೇರಿಯಲ್ಲಿದ್ದರು.

ಕೊಪ್ಪಳದಲ್ಲಿ ಸೋಮವಾರ ಹಿಂದೂ ಮಹಾಮಂಡಳಿಯ 14ನೇ ದಿನದ ಗಣಪತಿ ಮೂರ್ತಿ ವಿಸರ್ಜನಾ ಮೆರವಣಿಗೆಯಲ್ಲಿ ಸುಡುಮದ್ದು ಪ್ರದರ್ಶನ ಗಮನ ಸೆಳೆಯಿತು ಚಿತ್ರ: ಭರತ್ ಕಂದಕೂರ

‘ವೀರಶೈವರಿಂದ ಸಮಾಜ ಒಡೆಯುವ ಕಾರ್ಯ’

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): ‘ವೀರಶೈವರು ಬಸವಣ್ಣ ಅವರನ್ನು ಒಪ್ಪಿಕೊಳ್ಳದೇ ಸಮಾಜ ಒಡೆಯುವ ಕಾರ್ಯ ಮಾಡುತ್ತಿದ್ದಾರೆ. ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗೆ ವೀರಶೈವರೇ ಅಡ್ಡಿ ಆಗಿದ್ದಾರೆ’ ಎಂದು ಕೂಡಲಸಂಗಮ ಬಸವ ಧರ್ಮ ಪೀಠದ ಅಧ್ಯಕ್ಷೆ ಮಾತೆ ಗಂಗಾದೇವಿ ಹೇಳಿದರು.

ಮಂಗಳವಾರ ಸುದ್ದಿಗಾರ-ರೊಂದಿಗೆ ಮಾತನಾಡಿದ ಅವರು, ‘ಲಿಂಗಾಯತ-ವೀರಶೈವ ಎಂದೂ ಒಂದಾಗಲು ಸಾಧ್ಯವಿಲ್ಲ. ಲಿಂಗಾಯತ ಧರ್ಮಕ್ಕೆ ತಳಕು ಹಾಕಿಕೊಳ್ಳುವುದನ್ನು ವೀರಶೈವರು ಬಿಡಬೇಕು. ಬೇಕಾದರೆ ಪ್ರತ್ಯೇಕ ಧರ್ಮ ಕೇಳಲಿ‘ ಎಂದರು.

‘ಹಲವು ವರ್ಷಗಳಿಂದ ಲಿಂಗಾಯತರನ್ನು ದಾರಿ ತಪ್ಪಿಸುವ ಕಾರ್ಯವನ್ನು ವೀರಶೈವರು ಮಾಡಿದ್ದಾರೆ. ಇವರ ಷಡ್ಯಂತ್ರಕ್ಕೆ ಬಸವ ಭಕ್ತರು ಒಳಗಾಗಬಾರದು’ ಎಂದು ದೂರಿದರು.

‘ಬಸವ ಸಂಸ್ಕೃತಿ ಅಭಿಯಾನ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ. ಪ್ರತಿ ಜಿಲ್ಲೆಯಲ್ಲಿ ಯಶಸ್ಸು ಖಂಡಿದೆ. ಇದನ್ನು ಸಹಿಸದ ಕೆಲ ವೀರಶೈವ ಮಠಾಧೀಶರ ಮಾತಿಗೆ ಬೆಲೆ ಕೊಡಬೇಡಿ. ಜಾತಿವಾರು ಸಮೀಕ್ಷೆಯಲ್ಲಿ ಬಸವ ಭಕ್ತರು ಧರ್ಮ ಕಾಲಂನಲ್ಲಿ ಲಿಂಗಾಯತ, ಜಾತಿ ಕಾಲಂನಲ್ಲಿ ತಮ್ಮ ಉಪಜಾತಿ ಬರೆಸಬೇಕು‘ ಎಂದರು.

ಪಾಕ್ ಪರ ಘೋಷಣೆ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಭದ್ರಾವತಿಯಲ್ಲಿ ಸೋಮವಾರ ರಾತ್ರಿ ನಡೆದಿದ್ದ ಈದ್ ಮಿಲಾದ್ ಮೆರವಣಿಗೆ ವೇಳೆ ಪಾಕಿಸ್ತಾನ ಪರ ಘೋಷಣೆ ಕೂಗುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಭದ್ರಾವತಿಯ ಅಂಬೇಡ್ಕರ್ ವೃತ್ತದಲ್ಲಿ ಮೆರವಣಿಗೆ ಸಾಗುವಾಗ ಗದ್ದಲದ ನಡುವೆ ಕೆಲವು ಯುವಕರಿಂದ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೇಳಿಬರುತ್ತದೆ.

ಮೂರು ತಂಡಗಳ ರಚನೆ: ‘ಈ ಕುರಿತು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿದ್ದೇವೆ. ವಿಡಿಯೊ ಎಲ್ಲಿ, ಯಾವಾಗ ಚಿತ್ರೀಕರಣ ಆಗಿದೆ. ಅದರ ಸತ್ಯಾಸತ್ಯತೆ ಪರಿಶೀಲಿಸಲು ಎಫ್‌ಎಸ್‌ಎಲ್ ಪರೀಕ್ಷೆಗೆ ಕಳುಹಿಸಲಾಗುವುದು. ತನಿಖೆಗೆ ಮೂರು ತಂಡಗಳ ರಚನೆ ಮಾಡಿದ್ದೇವೆ' ಎಂದು ಎಸ್‌ಪಿ ಜಿ.ಕೆ. ಮಿಥುನ್ ಕುಮಾರ್ ಮಂಗಳವಾರ ತಿಳಿಸಿದರು.

‘ಮುಸ್ಲಿಮ್ ಆಗಿ ಹುಟ್ಟುವ ಆಸೆಯಿದೆ’

ಬಿ.ಕೆ. ಸಂಗಮೇಶ್ವರ

ಈದ್ ಮಿಲಾದ್ ಅಂಗವಾಗಿ ಉಸ್ಮಾನಿಯಾ ಚಾರಿಟಬಲ್ ಟ್ರಸ್ಟ್ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡಿದ್ದ ಭದ್ರಾವತಿ ಶಾಸಕ ಬಿ.ಕೆ.ಸಂಗಮೇಶ್ವರ, ‘ಮುಸ್ಲಿಮ್ ಜನಾಂಗದ ಪ್ರೀತಿಗೆ ಪಾತ್ರವಾಗಿರುವ ನನಗೆ, ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟುವ ಅಸೆ ಇದೆ’ ಎಂದು ಹೇಳಿರುವ ವಿಡಿಯೊ ಕೂಡ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

20 ವರ್ಷದ ಹಿಂದೆ ಈದ್ ಮಿಲಾದ್ ಮೆರವಣಿಗೆ ರದ್ದಾಗಿತ್ತು. ಧರ್ಮಸಿಂಗ್ ನೇತೃತ್ವದ ಸರ್ಕಾರ ಮತ್ತೆ ಪ್ರಾರಂಭಿಸಿತು. ಅಂದಿನಿಂದ ಶಾಂತಿಯುತವಾಗಿ ಮೆರವಣಿಗೆ ನಡೆಯುತ್ತಿದೆ’ ಎಂದು ಹೇಳಿದ್ದಾರೆ.

ಆ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಬಿ.ಕೆ.ಸಂಗಮೇಶ್ವರ, ‘ಈಶ್ವರ ಅಲ್ಲ ತೇರಾ ನಾಮ್ ಎಂಬ ಆಶಯದಿಂದ ನಾನು ಆಡಿದ ಮಾತಿಗೆ ಬಿಜೆಪಿ-ಜೆಡಿಎಸ್‌ನವರು ರಾಜಕೀಯ ಬಣ್ಣ ನೀಡುತ್ತಿದ್ದಾರೆ’ ಎಂದರು.

ಪಾಕಿಸ್ತಾನ ಜಿಂದಾಬಾದ್ ಘೋಷಣೆ ವಿಚಾರದಲ್ಲಿ ವಿಡಿಯೊ ಸತ್ಯಾಸತ್ಯತೆ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಎಸ್‌ಪಿಗೆ ಹೇಳಿದ್ದೇನೆ. ನಾನೇ ದೂರು ಕೊಡಿಸಿದ್ದೇನೆ

ಬಿ.ಕೆ.ಸಂಗಮೇಶ್ವರ, ಭದ್ರಾವತಿ ಶಾಸಕ

ಭದ್ರಾವತಿಯಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದು ಕಾಂಗ್ರೆಸ್‌ನ ತುಷ್ಟೀಕರಣದ ರಾಜಕೀಯಕ್ಕೆ ಮತ್ತೊಂದು ಕನ್ನಡಿ

ಬಿ.ವೈ.ರಾಘವೇಂದ್ರ, ಸಂಸದ

‘ಕೋಮುವಾದಿಗಳ ಆಡುಂಬೊಲ ಆಗದಿರಲಿ’

ಬೆಂಗಳೂರು: ‘ಮದ್ದೂರಿನಲ್ಲಿ ನಡೆದ ಗಲಭೆ ಕಳವಳಕಾರಿ ಆದುದು. ಶ್ರಮ, ಕೃಷಿಮೂಲ ಸಂಸ್ಕೃತಿ ಜಿಲ್ಲೆಯು ಕೋಮುವಾದಿಗಳ ಆಡುಂಬೊಲ ಆಗದಂತೆ ಮಂಡ್ಯದ ಜನ ಎಚ್ಚರಿಕೆ ವಹಿಸಬೇಕು’ ಎಂದು ಜಾಗೃತ ನಾಗರಿಕರು ಕರ್ನಾಟಕ ಆಗ್ರಹಿಸಿದೆ.

‘ಕೆಲವು ಘಟನೆಗಳು ಉದ್ದೇಶ ಪೂರ್ವಕ ಎನ್ನಿಸುತ್ತಿವೆ. ಮಸೀದಿ ಮುಂದೆ ಮೆರವಣಿಗೆ ನಿಲ್ಲಿಸಿರುವುದು. ಇದೇ ವೇಳೆ ವಿದ್ಯುತ್ ಕಡಿತವಾಗಿದ್ದು ಅನುಮಾನ ಗಟ್ಟಿಗೊಳಿಸಿವೆ. ಮಸೀದಿ ಕಡೆಯಿಂದ ಕಲ್ಲು ತೂರಾಟ ಮಾಡಲಾಗಿದೆ ಎನ್ನುವ ವರದಿಗಳು ಆತಂಕಕಾರಿ ಎಂದು ತಿಳಿಸಿದೆ.

‘ನಾಗಮಂಗಲದಲ್ಲಿ ನಡೆದಿದ್ದ ಘರ್ಷಣೆ, ಹನುಮ ಜಯಂತಿ ಹೆಸರಿನಲ್ಲಿ ಶ್ರೀರಂಗಪಟ್ಟಣದಲ್ಲಿ ಕಲ್ಲಡ್ಕ ಪ್ರಭಾಕರ ಭಟ್ ಮುಸ್ಲಿಂ ಮಹಿಳೆಯರನ್ನು ಗುರಿಯಾಗಿಸಿ ಆಡಿದ ಮಾತುಗಳು ಸಿದ್ಧ ಮಾದರಿ ಸೂಚಿಸುತ್ತವೆ. ಕರಾವಳಿ ಭಾಗದ ಪ್ರಯೋಗಗಳನ್ನು ಮಂಡ್ಯದಲ್ಲೂ ವಿಸ್ತರಿಸುತ್ತಿರುವುದು ಆತಂಕಕಾರಿ. ಸಾಮರಸ್ಯ ರಕ್ಷಣೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ವೇದಿಕೆ ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ವಿಜಯಾ, ಎಸ್.ಜಿ.ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ವಸುಂಧರಾ ಭೂಪತಿ, ಕೆ.ಎಸ್.ವಿಮಲಾ, ಇಂದಿರಾ ಕೃಷ್ಣಪ್ಪ, ಜಾಣಗೆರೆ ವೆಂಕಟರಾಮಯ್ಯ ಆಗ್ರಹಿಸಿದ್ದಾರೆ.

‘ಮತಕಳವು: ಆಳಂದ ಪ್ರಕರಣವೇ ಸಾಕ್ಷಿ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ರಾಹುಲ್ ಗಾಂಧಿ ಅವರು ನಡೆಸುತ್ತಿರುವ ಮತಕಳವು ವಿರುದ್ಧದ ಜಾಗೃತಿ ಅಭಿಯಾನಕ್ಕೆ ಆಳಂದ ಕ್ಷೇತ್ರದಲ್ಲಿ ಮತದಾರರ ಹೆಸರು ತೆಗೆಯಲು ಯತ್ನಿಸಿದ್ದ ಪ್ರಕರಣವೇ ಜೀವಂತ ಸಾಕ್ಷಿ’ ಎಂದು ಕ್ಷೇತ್ರದ ಶಾಸಕರು ಆದ, ರಾಜ್ಯ ಯೋಜನಾ ಮತ್ತು ನೀತಿ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಹೇಳಿದರು.

ಬಿ.ಆರ್. ಪಾಟೀಲ

‘2023ರ ವಿಧಾನಸಭಾ ಚುನಾವಣೆಗೂ ಮುನ್ನ ಆಳಂದ ಕ್ಷೇತ್ರದಲ್ಲಿ 6 ಸಾವಿರದಷ್ಟು ಹೆಸರುಗಳನ್ನು ಮತದಾರರ ಪಟ್ಟಿಯಿಂದ ಅಳಿಸಲು ಯತ್ನಿಸಲಾಗಿತ್ತು. ಸಲ್ಲಿಕೆಯಾಗಿದ್ದ 6,018 ಅರ್ಜಿಗಳಲ್ಲಿ 24 ಮಾತ್ರವೇ ನೈಜ ಆಗಿದ್ದವು. 5,994 ಅರ್ಜಿಗಳು ನಕಲಿ ಎಂದು ಸಾಬೀತಾಗಿತ್ತು’ ಎಂದು ಮಂಗಳವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನನ್ನ ಬೆಂಬಲಿಗರ ಹೆಸರುಗಳನ್ನು ಮತಪಟ್ಟಿಯಿಂದ ಅಳಿಸಿ ಹಾಕಲು ನಕಲಿ ಫಾರಂ–7 ಬಳಸಲಾಗಿತ್ತು. ಆಗಿನ ಚುನಾವಣಾ ಅಧಿಕಾರಿ ದೂರು ನೀಡಿದ್ದು, ಆಳಂದ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಮೊದಲಿಗೆ ಆಳಂದ ಡಿವೈಎಸ್ಪಿ, ನಂತರ ಹೆಚ್ಚುವರಿ ಎಸ್ಪಿ ತನಿಖೆ ನಡೆಸಿದರೂ ತಾರ್ಕಿಕ ಅಂತ್ಯ ಕಾಣಲಿಲ್ಲ. ನಮ್ಮ ಸರ್ಕಾರ ಬಂದ ಬಳಿಕ ಸಿಐಡಿಗೆ ವಹಿಸಿತ್ತು. ಆದರೆ, ಚುನಾವಣಾ ಆಯೋಗದ ಅಧಿಕಾರಿಗಳು ಸಮರ್ಪಕ ಮಾಹಿತಿ ನೀಡದೇ ತನಿಖೆ ಸ್ಥಗಿತಗೊಂಡಿದೆ’ ಎಂದರು.

ತನಿಖೆಗೆ ಸಹಕರಿಸಲಿ: ‘ಚುನಾವಣಾ ಆಯೋಗ ತನಿಖೆಗೆ ಸಹರಿಸಬೇಕು. ನಿಕಟ ಪೈಪೋಟಿ ಇರುವ 30–40 ಕ್ಷೇತ್ರಗಳಲ್ಲಿ ಇಂಥ ಅಕ್ರಮ ನಡೆದರೆ, ಸರ್ಕಾರ ರಚಿಸಬಹುದು ಇಲ್ಲವೇ ಉರುಳಿಸಬಹುದು. ಇಂಥ ಕುತಂತ್ರ ನಡೆಯುತ್ತಿದೆ. ಇದು ಪ್ರಜಾತಂತ್ರವನ್ನು ಹೈಜಾಕ್ ಮಾಡುವ ಯತ್ನ’ ಎಂದು ವಾಗ್ದಾಳಿ ನಡೆಸಿದರು.

‘ಅಗತ್ಯಬಿದ್ದರೆ ಸುಪ್ರೀಂಕೋರ್ಟ್‌ಗೆ’: ‘ಮತಗಳ್ಳತನ ಯತ್ನದ ಬಗೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಲಾಗಿದೆ. ಸಚಿವ ಪ್ರಿಯಾಂಕ್ ಖರ್ಗೆ ಅವರೂ ಸಂಪರ್ಕದಲ್ಲಿದ್ದಾರೆ. ಜೊತೆಗೆ ಈ ಸಂಬಂಧ ಪಕ್ಷದ ದತ್ತಾಂಶ ತಂಡವೂ ಮಾಹಿತಿ ಪಡೆದಿದೆ. ಈ ಪ್ರಕರಣದಲ್ಲಿ ಅಗತ್ಯ ಬಿದ್ದರೆ ಸುಪ್ರೀಂಕೋರ್ಟ್‌ಗೆ ಹೋಗಿ ನ್ಯಾಯ ಕೇಳುವೆ’ ಎಂದರು.

‘ಗೆಲುವಿನ ಅಂತರ ತಗ್ಗಲು ಇವಿಎಂ ಕಾರಣ’



ಚನ್ನಾರೆಡ್ಡಿ ಪಾಟೀಲ

ಯಾದಗಿರಿ: ‘2023ರ ವಿಧಾನಸಭಾ ಚುನಾವಣೆಯಲ್ಲಿ ನನ್ನ ಗೆಲುವಿನ ಮತಗಳ ಅಂತರ ಕಡಿಮೆಯಾಗಲು ಇವಿಎಂ ಪಾತ್ರವೂ ಅಡಗಿದ್ದಿದೆ’ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ದೂರಿದರು.

ಸುದ್ದಿಗಾರರ ಜೊತೆ ಮಾತನಾಡುತ್ತಾ, ‘ಮತಪತ್ರ ಬಳಸಿದ್ದರೆ ಕಾಂಗ್ರೆಸ್ ಇನ್ನಷ್ಟು ಸ್ಥಾನ ಗಳಿಸುತ್ತಿತ್ತು. ಮುಂದೆ ಚುನಾವಣೆಗಳಿಗೆ ಮತಪತ್ರದ ಬಳಕೆಯೇ ಸೂಕ್ತ. ಮತಪತ್ರ ಬಳಸಿದರೆ ಬಿಜೆಪಿಗರಿಗೆ ಏನು ತೊಂದರೆ’ ಎಂದು ಪ್ರಶ್ನಿಸಿದರು.

ಸಂಕ್ಷಿಪ್ತ ಸುದ್ದಿ

ವಿದ್ಯಾರ್ಥಿ ಕಣ್ಣಿಗೆ ಹಾನಿ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): ಸಮೀಪದ ಢವಳೇಶ್ವರ ಗ್ರಾಮದ ಮೊರಬದ ತೋಟದ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 5ನೇ ತರಗತಿಯಲ್ಲಿ ಓದುತ್ತಿರುವ ಬಾಲಕನಿಗೆ 1ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕ ಕಟ್ಟಿಗೆಯಿಂದ ಬಲಗಣ್ಣಿಗೆ ಚುಚ್ಚಿ ಗಾಯಗೊಳಿಸಿದ್ದಾನೆ.

ಪೆನ್ ವಿಚಾರಕ್ಕೆ ವಿದ್ಯಾರ್ಥಿಗಳ ನಡುವೆ ಜಗಳವಾಗಿದೆ. ವಿದ್ಯಾರ್ಥಿಗಳ ಮೇಲೆ ನಿಗಾವಹಿಸದ ಮುಖ್ಯಶಿಕ್ಷಕಿ ಜಯಶ್ರೀ ನಡುವಿನಕೇರಿ ಹಾಗೂ ಅತಿಥಿ ಶಿಕ್ಷಕಿ ಶಿಲ್ಪಾ ಅಂಬಿ ಅವರ ವಿರುದ್ಧ ಗಾಯಗೊಂಡ ಬಾಲಕನ ತಂದೆ ಮಹಾಲಿಂಗಪುರ ಪೊಲೀಸ್ ಠಾಣೆಯಲ್ಲಿ ಸೆ.4 ರಂದು ಪ್ರಕರಣ ದಾಖಲಿಸಿದ್ದಾರೆ.

‘ವಿದ್ಯಾರ್ಥಿ ಬಲಗಣ್ಣಿನ ಕಣ್ಣುಗುಡ್ಡೆಗೆ ಹಾನಿಯಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆದಿದೆ. 40 ದಿನದ ನಂತರ ಹಾನಿ ಸ್ವರೂಪ ತಿಳಿಯಲಿದೆ ಎಂದು ವೈದ್ಯರು ತಿಳಿಸಿದ್ದಾರೆ’ ಎಂದು ಮುಧೋಳ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ. ಮುಲ್ಲಾ ತಿಳಿಸಿದರು. ‘ಶಿಕ್ಷಕರಿಗೆ ನೋಟಿಸ್ ನೀಡಲಾಗಿದೆ’ ಎಂದರು.

ಕುಟುಂಬದ ನಾಲ್ವರ ಆತ್ಮಹತ್ಯೆ

ಭಾಲ್ಕಿ (ಬೀದರ್ ಜಿಲ್ಲೆ): ತಾಲ್ಲೂಕಿನಲ್ಲಿ ಮಂಗಳವಾರ ಕಾರಂಜಾ ಕಾಲುವೆಗೆ ಜಿಗಿದು ಕುಟುಂಬದ ಆರು ಜನರು ಆತ್ಮಹತ್ಯೆಗೆ ಯತ್ನಿಸಿದ್ದು, ನಾಲ್ವರು ಮೃತಪಟ್ಟಿದ್ದಾರೆ.

ಬೀದರ್‌ನ ಮೈಲೂರಿನವರಾದ ಶಿವಮೂರ್ತಿ ಮಾರುತಿ ಬ್ಯಾನರ್ಜಿ(45), ಅವರ ಮಕ್ಕಳಾದ ಶ್ರೀಶಾಂತ (9), ರಿತಿಕ್ (7), ರಾಕೇಶ (7 ತಿಂಗಳು) ಮೃತರು. ಅವರ ಪತ್ನಿ ರಮಾಬಾಯಿ, ಮಗ ಶ್ರೀಕಾಂತ ಬದುಕುಳಿದಿದ್ದಾರೆ. ಸಾಲದ ಹೊರೆ ಆತ್ಮಹತ್ಯೆಗೆ ಕಾರಣ ಎನ್ನಲಾಗಿದೆ.

ಒಳ ಮೀಸಲಾತಿ ದುರ್ಬಳಕೆ ತಡೆಗೆ ಆಗ್ರಹ

ಜಾತಿ ಪ್ರಮಾಣಪತ್ರ ಹಾಜರಿ ಕಡ್ಡಾಯಪಡಿಸಲಿ: ಆಂಜನೇಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಗುರು-ತಿಸಿಕೊಂಡವರಿಂದ ಒಳ ಮೀಸಲಾತಿ ದುರ್ಬಳಕೆ ಸಾಧ್ಯತೆ ಇದೆ. ಇವರು ಅರ್ಜಿ ಜೊತೆಗೆ ಮೂಲ ಜಾತಿ ಪ್ರಮಾಣಪತ್ರ ಸಲ್ಲಿಕೆ ಕಡ್ಡಾಯಗೊಳಿಸಬೇಕು’ ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಒತ್ತಾಯಿಸಿದರು.

‘ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ನಡೆಸಿದ ಸಮೀಕ್ಷೆಯಲ್ಲಿ 4,74,954 ಜನರು ಎ.ಡಿ, ಎ.ಕೆ, ಎ.ಎ ಎಂದು ಬರೆಸಿದ್ದಾರೆ. ಇವರಲ್ಲಿ ಹೊಲೆಯ, ಮಾದಿಗ ಎರಡೂ ಸಮುದಾಯದವರು ಇದ್ದಾರೆ. ಇವರ ಮೂಲ ಯಾವುದು?, ಎಲ್ಲಿಂದ ಬಂದಿದ್ದಾರೆ?, ಏಕೆ ಮೂಲ ಜಾತಿ ಬರೆಸಿಲ್ಲ? ಎಂದು ಪತ್ತೆ ಹಚ್ಚಬೇಕು’ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

ಎಚ್. ಆಂಜನೇಯ

‘ಸಚಿವರಾದ ಡಾ.ಜಿ.ಪರಮೇಶ್ವರ, ಎಚ್.ಮುನಿಯಪ್ಪ ಅವರು ಆದಿ ದ್ರಾವಿಡ, ಎಚ್.ಸಿ.ಮಹದೇವಪ್ಪ ಹಾಗೂ ನಾನು ಆದಿ ಕರ್ನಾಟಕ ಎಂದು ಪ್ರಮಾಣ ಪತ್ರ ಪಡೆದಿದ್ದೇವೆ. ಜೊತೆಗೆ ನಮ್ಮ ಮೂಲ ಜಾತಿಯನ್ನೂ ಬರೆಸಿದ್ದೇವೆ. ಮೂಲ ಜಾತಿ ಪ್ರಮಾಣಪತ್ರ ನೀಡದವರು ಪರಿಶಿಷ್ಟ ಜಾತಿ ಪಟ್ಟಿಯಿಂದ ಹೊರಗುಳಿಯಬೇಕು. ಮೂಲ ಜಾತಿ ಬರೆಸದೇ ಒಳಮೀಸಲಾತಿಯಿಂದ ಉದ್ಯೋಗ ಪಡೆದರೆ ಅದರ ವಿರುದ್ಧ ಹೋರಾಡುತ್ತೇವೆ. ಅದಕ್ಕಾಗಿ ಮಾದಿಗರ ಮೀಸಲಾತಿ ರಕ್ಷಣಾ ಸಮಿತಿ ರಚಿಸುತ್ತೇವೆ’ ಎಂದರು.

‘ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮಾತ್ರವಲ್ಲದೇ ನೌಕರರ ಬಡ್ತಿಯಲ್ಲೂ ಒಳ ಮೀಸಲಾತಿ ಜಾರಿಗೊಳಿಸಬೇಕು. ಒಳ ಮೀಸಲಾತಿಯಲ್ಲಿ ಅಲೆಮಾರಿಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು. ಶೇ 1ರಷ್ಟು ಮೀಸಲಾತಿಯನ್ನು ಹೊಸದಾಗಿ ಸೃಷ್ಟಿಸುವ ಬಗ್ಗೆ ರಾಜ್ಯ ಸರ್ಕಾರ ಚಿಂತಿಸಬೇಕು. ಇರುವ ಮೀಸಲಾತಿಯಲ್ಲೇ ಅವರಿಗೆ ಪಾಲು ನೀಡಲು ಇತರ ಸಮುದಾಯಗಳು ಔದಾರ್ಯ ತೋರಬೇಕು. ಎಲ್ಲರೂ ಹಂಚಿ ತಿನ್ನುವ ಮನೋಭಾವ ಬೆಳೆಸಿಕೊಳ್ಳಬೇಕು’ ಎಂದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.10	12,307	9,693
ಹಾರಂಗಿ	2,859	2,858.64	3,121	2,666
ಕಬಿನಿ	2,284.00	2,283.76	5,799	6,650
ಹೇಮಾವತಿ	2,922	2,921.82	6,953	7,460
ಲಿಂಗನಮಕ್ಕಿ	1,819	1,817.75	6,675	8,975
ಸೂಪಾ (ಮೀ)	564	560.23	4,174.17	4,642.17
ಮಾಣಿ	595	594.11	1,047	642
ತುಂಗಭದ್ರಾ	1,633	1,626.06	29,726	29,224
ಮಲಪ್ರಭಾ	2,079.5	2,079.50	1,165	1,165
ಘಟಪ್ರಭಾ	2,175	2,174.75	4,943	4,140
ಭದ್ರಾ *	186	184.6	10,217	9,014
ಆಲಮಟ್ಟಿ (ಮೀ)	519.6	519.59	27,163	19,038
ನಾರಾಯಣಪುರ (ಮೀ)	492.25	492.24	19,000	34,330

* ನೆಲಮಟ್ಟದಿಂದ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಾಲಯ ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿ(ನಿ), ಜೆ.ಬಿ.ಸಿ.ವಿಭಾಗ ಸಂಖ್ಯೆ. 2 ಭೀಮರಾಯನಗುಡಿ
ಇ–ಮೇಲ್: eejbc2@gmail.com

ಸಂಖ್ಯೆ: ಕೃಭಾಜನಿನಿ/ಜೆಬಿಸಿ/ವಿ–2/ಟಿಎನ್‌ಡಿ/ಯೋಶಾ/2025–26/494 ದಿನಾಂಕ: 06.09.2025

ಟೆಂಡರ್ ತಿದ್ದುಪಡಿ ಪ್ರಕಟಣೆ (ಇ–ಪೋರ್ಟಲ್ ಮೂಲಕ)

ಈ ಕಛೇರಿಯ ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಇಂಡೆಂಟ್ ಸಂ: 1)2459, 2)2464, 3)SE0195 4)SE0188 ಕಾಮಗಾರಿಗಳ ಸಂಕ್ಷಿಪ್ತ ಟೆಂಡರ್ ಪ್ರಕಟಣೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಯಾದಗಿರಿ ಜಿಲ್ಲೆ ಇವರು ದಿನಪತ್ರಿಕೆಗಳಲ್ಲಿ ಪ್ರಕಟಿಸದ ಕುರಿತು, ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಅಪಲೋಡ ಮಾಡಲಾದ ನೋಟಿಫಿಕೆಷನ್ ಮತ್ತು ಪೋರ್ಟಲ್ ನಲ್ಲಿ ನೀಡಿದ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದಪಡಿ ಮಾಡಲಾಗಿದೆ, ಇನ್ನುಳಿದಂತೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕ್ರಸಂ	ಈ ಹಿಂದೆ ಪ್ರಕಟಿಸಿದಂತೆ		ಮಾರ್ಪಾಡಿಸಿದಂತೆ
	1	2	3
1	ಇ–ಟೆಂಡರಿಂಗ ಕೊನೆಯ ದಿನಾಂಕ	08.09.2025 ಸಾಯಂಕಾಲ 05.00 ಗಂಟೆ ವರೆಗೆ.	15.09.2025 ಸಾಯಂಕಾಲ 05.00 ಗಂಟೆ ವರೆಗೆ.
2	ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ತೆರೆಯುವ ದಿನಾಂಕ	10.09.2025 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ(ಕ್ರ.ಸಂ.1 ಮತ್ತು 4 ಕಾಮಗಾರಿಗೆ ಮಾತ್ರ)	17.09.2025 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ (ಕ್ರ.ಸಂ.1 ಮತ್ತು 4 ಕಾಮಗಾರಿಗೆ ಮಾತ್ರ)
3	ಆರ್ಥಿಕ ಟೆಂಡರ್ ತೆರೆಯುವ ದಿನಾಂಕ	15.09.2025 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ	22.09.2025 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿ(ನಿ), ಜೆ.ಬಿ.ಸಿ.ವಿಭಾಗ ಸಂಖ್ಯೆ. 2
ಭೀಮರಾಯನಗುಡಿ

ವಾ.ಸಾ.ಸಂ.ಇ/ಯಾದಗಿರಿ/265/ಕೆ.ಎಸ್.ಎಂ.ಸಿ.ಎ/2025–26

ಮಿಜೋರಾಂ ರಾಜಧಾನಿಗೆ ರೈಲುಮಾರ್ಗ ಸಿದ್ಧ

ದುರ್ಗಮ ಕಣಿವೆಯಲ್ಲಿ 48 ಸುರಂಗ, 133 ಸೇತುವೆಗಳ ನಿರ್ಮಾಣ ಸದ್ಯದಲ್ಲೇ ಚಾಲನೆ ನೀಡಲಿರುವ ಪ್ರಧಾನಿ

• ಬಾಲಕೃಷ್ಣ ಪಿ.ಎಚ್.

ಐಜ್ವಾಲ್ (ಮಿಜೋರಾಂ): ಮಿಜೋರಾಂ ರಾಜ್ಯದ ರಾಜಧಾನಿ ಐಜ್ವಾಲ್‌ಗೆ ಸಂಪರ್ಕಿಸುವ ರೈಲು ಮಾರ್ಗ ಕಣಿವೆಗಳ ನಡುವೆ ಅತ್ಯಧಿಕ ಸೇತುವೆ ಮತ್ತು ಸುರಂಗಗಳೊಂದಿಗೆ ಸಿದ್ಧಗೊಂಡಿದ್ದು, ಉದ್ಘಾಟನೆಗಾಗಿ ಕಾಯುತ್ತಿದೆ.

ಈಶಾನ್ಯ ಭಾರತದ ರಾಜ್ಯಗಳ ರಾಜಧಾನಿಗಳಿಗೆ ರೈಲು ಸಂಪರ್ಕ ಇರಲಿಲ್ಲ. ಅರುಣಾಚಲ ಪ್ರದೇಶವನ್ನು ಹೊರತುಪಡಿಸಿ ಉಳಿದ ಏಳು ರಾಜ್ಯಗಳ ರಾಜಧಾನಿಗಳಿಗೆ ರೈಲು ಸಂಪರ್ಕ ಕಾಮಗಾರಿಗೆ 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದರು. ಮಿಜೋರಾಂನ ರಾಜಧಾನಿ ಐಜ್ವಾಲ್ ಕಡಿದಾದ ಬೆಟ್ಟಗಳ ಮೇಲೆ ಇರುವುದರಿಂದ ರೈಲು ಸಂಪರ್ಕ ಕಾಮಗಾರಿ ನಿಧಾನವಾಗಿ ನಡೆದಿದ್ದು, 11 ವರ್ಷಗಳ ಬಳಿಕ ಪೂರ್ಣಗೊಂಡಿದೆ.

ಅಸ್ಸಾಂನಿಂದ ಮಿಜೋರಾಂನ ಬೈರಾಬಿವರೆಗೆ ಬ್ರಾಡ್‌ಗೇಜ್ ರೈಲು ಮಾರ್ಗ 2016ರಲ್ಲಿ ನಿರ್ಮಾಣವಾಗಿತ್ತು. ಬೈರಾಬಿಗೆ ಮೊದಲ ಸರಕು ರೈಲು ಆ ವರ್ಷ ಬಂದಿತ್ತು. ಇದುವೇ ರಾಜ್ಯದಲ್ಲಿ ಸಂಚರಿಸಿದ ಮೊದಲ ರೈಲು ಆಗಿತ್ತು. ಇದೀಗ ಬೈರಾಬಿಯಿಂದ ಐಜ್ವಾಲ್‌ನ ಸೈರಾಂಗ್‌ವರೆಗೆ ರೈಲು ಮಾರ್ಗವಾಗಿದ್ದು, ಸರಕು ರೈಲುಗಳಲ್ಲದೇ ಪ್ರಯಾಣಿಕರ ರೈಲುಗಳೂ ಸಂಚರಿಸಲಿವೆ.

51.38 ಕಿ.ಮೀ. ಉದ್ದದ ಈ ಮಾರ್ಗದಲ್ಲಿ 48 ಸುರಂಗಗಳು, 55 ದೊಡ್ಡ ರೈಲು ಸೇತುವೆಗಳು, 88 ಸಣ್ಣ ಸೇತುವೆಗಳಿವೆ. 1.86 ಕಿ.ಮೀ. ಉದ್ದದ ಸುರಂಗವು ದೊಡ್ಡ ರೈಲು ಸುರಂಗ ಮಾರ್ಗವಾಗಿದ್ದರೆ, 114 ಮೀಟರ್ ಎತ್ತರದ ದೊಡ್ಡ ಸೇತುವೆಯೂ ಇದೆ. ಒಟ್ಟು ಆರು ಸೇತುವೆಗಳು ದೆಹಲಿಯ ಕುತುಬ್ ಮೀನಾರ್‌ಗಿಂತ (72 ಮೀಟರ್) ಅಧಿಕ ಎತ್ತರವನ್ನು ಹೊಂದಿವೆ.

'ಐಜ್ವಾಲ್ ಮತ್ತು ಕೊಲಸಿಬ್ ಜಿಲ್ಲೆಗಳಲ್ಲಿ ಸಾಗುವ ಈ ಮಾರ್ಗವನ್ನು ₹8,071 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಬೈರಾಬಿ, ಹೋರ್ಟೋಕಿ, ಕವನ್‌ಪುವಿ, ಮುಆಲ್ಖಾಂಗ್ ಮತ್ತು ಸೈರಾಂಗ್ ನಿಲ್ದಾಣಗಳಿವೆ. ಗಂಟೆಗೆ 100 ಕಿ.ಮೀ. ವೇಗದಲ್ಲಿ ಸಾಗಬಹುದಾದ ಸಾಮರ್ಥ್ಯವನ್ನು ಹೊಂದಿದೆ. ಒಂದೆರಡು ವಾರದಲ್ಲಿ ಉದ್ಘಾಟನೆಗೆ ಪ್ರಧಾನಿ ಕಚೇರಿಯಿಂದ ದಿನಾಂಕ ನಿಗದಿಯಾಗಲಿದೆ' ಎಂದು ಈಶಾನ್ಯ ಗಡಿನಾಡು ರೈಲ್ವೆ (ನಾರ್ತ್ ಈಸ್ಟ್ ಫ್ರಾಂಟಿಯರ್ ರೈಲ್ವೆ) ಅಧಿಕಾರಿ ಕಪಿಂಜಲ್ ಕೆ. ಶರ್ಮ ಮಾಹಿತಿ ನೀಡಿದರು.

'ದಟ್ಟ ಅರಣ್ಯ, ಕಠಿಣ ಗುಡ್ಡಗಾಡು, ಆಳವಾದ ಕಣಿವೆಗಳ ಮೂಲಕ ರೈಲು ಮಾರ್ಗ ಸಾಗುವುದರಿಂದ ಕಾಮಗಾರಿಯು ಸವಾಲಿನದ್ದಾಗಿತ್ತು. ಸುರಂಗಗಳಲ್ಲಿ ಬ್ಯಾಲೆಸ್ಟ್‌ಲೆಸ್ ಹಳಿ ಅಳವಡಿಸಲಾಗಿದೆ. ಸುರಂಗಗಳ ಪ್ರವೇಶ ಭಾಗಗಳಲ್ಲಿ ಮಿಜೋರಾಂ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಲಾಕೃತಿಗಳನ್ನು ರಚಿಸಲಾಗಿದೆ. ಮಿಜೋ ಜನರ ಉಡುಪು, ಹಬ್ಬ, ಸಂಪ್ರದಾಯ, ಹಳ್ಳಿಗಳ ಜೀವನ ಶೈಲಿ, ರಾಜ್ಯದ ಸಸ್ಯಜೀವಿ ಮತ್ತು ಪ್ರಾಣಿಜೀವಿಗಳ ಚಿತ್ರಣ ನೀಡಲಾಗಿದೆ' ಎಂದು ಹೇಳಿದರು.

'ಕೇಂದ್ರ ಸರ್ಕಾರದ ಮಹತ್ವದ ಯೋಜನೆ ಇದಾಗಿದ್ದು, ಐಜ್ವಾಲ್‌ನಿಂದ ಗಡಿಭಾಗಗಳಿಗೂ ವಿಸ್ತರಿಸಲು ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ' ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ರಾಧಾರಾಣಿ ಮಾಹಿತಿ ನೀಡಿದರು.

(ರೈಲ್ವೆ ಇಲಾಖೆಯ ಆಮಂತ್ರಣದ ಮೇರೆಗೆ ಪ್ರತಿನಿಧಿ ಮಿಜೋರಾಂಗೆ ತೆರಳಿದ್ದರು)

'ಸನ್ನಿವೇಶ ಬದಲಾಗುವ ನಿರೀಕ್ಷೆ'

'ಸಂಪರ್ಕವು ರಾಜ್ಯದ ಬಹಳ ದೊಡ್ಡ ಸಮಸ್ಯೆಯಾಗಿತ್ತು. ರೈಲು ಸಂಪರ್ಕದಿಂದ ಆರ್ಥಿಕ ಪರಿಸ್ಥಿತಿ ಬದಲಾಗುವ ನಿರೀಕ್ಷೆ ಇದೆ. ಜೊತೆಗೆ ಸಾಮಾಜಿಕ ಪಲ್ಲಟವೂ ಉಂಟಾಗಲಿದೆ. ಎಲ್ಲದಕ್ಕೂ ಅಸ್ಸಾಂ ರಾಜ್ಯವನ್ನು ಅವಲಂಬಿಸುವುದು ಕಡಿಮೆಯಾಗಲಿದೆ' ಎಂದು ಮಿಜೋರಾಂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅಡಾಲ್ಫ್ ಹಿಟ್ಲರ್ ಸೈಟೊ ಅಭಿಪ್ರಾಯ ವ್ಯಕ್ತಪಡಿಸಿದರು.



ಮಿಜೋರಾಂ ರಾಜ್ಯದ ಬೈರಾಬಿ–ಸೈರಾಂಗ್ ನಡುವಿನ ರೈಲು ಮಾರ್ಗದಲ್ಲಿ ನಿರ್ಮಾಣಗೊಂಡಿರುವ ಸೇತುವೆ

20 ಮಂದಿಗೆ ವಾಂತಿಭೇದಿ, ಜ್ವರ

ನವಲಗುಂದ (ಧಾರವಾಡ ಜಿಲ್ಲೆ): ತಾಲ್ಲೂಕಿನ ಗುಡಿಸಾಗರ ಗ್ರಾಮದಲ್ಲಿ 20ಕ್ಕೂ ಹೆಚ್ಚು ಮಂದಿಗೆ ವಾಂತಿಭೇದಿಯಾಗಿದೆ. ಕೆರೆ ನೀರು ಕುಡಿದು ಅಸ್ವಸ್ಥರಾಗಿದ್ದಾರೆ ಎನ್ನಲಾಗಿದೆ.

ನವಲಗುಂದ ಸರ್ಕಾರಿ ಆಸ್ಪತ್ರೆಗೆ 19 ಮಂದಿ ದಾಖಲಾಗಿದ್ದಾರೆ. ಈ ಪೈಕಿ ಒಂಬತ್ತು ಪುರುಷರು, ಎಂಟು ಮಹಿಳೆಯರು ಹಾಗೂ ಇಬ್ಬರು ಮಕ್ಕಳು ಇದ್ದಾರೆ.

'ನೀರಿನ ಮಾದರಿ ಪರೀಕ್ಷೆಗೆ ಕಳಿಸಲಾಗುವುದು. ಕಾಲರಾ, ಡೆಂಗಿ ಪರೀಕ್ಷೆ ಮಾಡಲು ವೈದ್ಯರಿಗೆ ತಿಳಿಸಲಾಗಿದೆ.' ಎಂದು ಜಿಲ್ಲಾ ಪಂಚಾಯಿತಿ ಸಿಇಒ ಭುವನೇಶ ಪಾಟೀಲ ತಿಳಿಸಿದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ
ಕ್ರಸಂ: ಪಂರಾಇಂ/ಬಿಜಿ/ಬಿಎ-3/ಟೆಂಡರ್-36/2025-26/3531 ದಿನಾಂಕ: 9.9.2025
ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)
ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ ಡಾಕ್ಯುಮೆಂಟ್ ಕೆಡಬ್ಲ್ಯು-3 ಒಟ್ಟು 2 (16847/CALL-2, 16844/CALL-2), ಕಾಮಗಾರಿ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಅನುಕ್ರಮವಾಗಿ ಅಂದಾಜು ಮೊತ್ತ ರೂ 100.00 ಲಕ್ಷಗಳ ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ. 2,00,000.00 ಹಾಗೂ 1,00,000.00 ಗಳು ಇರುತ್ತದೆ. ಅರ್ಹತೆಗಳನ್ನುಳ್ಳವರು ವಿದ್ಯುನ್ಮಾನ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 16.09.2025 ಸಂಜೆ 17:28 ರೊಳಗಾಗಿ, ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: 16.09.2025 ಸಂಜೆ 17.30 ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 18.09.2025 ಸಂಜೆ 11:00 ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.09.2025 ರಂದು 11.30 ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್ ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ಬೆಳಗಾವಿ
DIPR/RO No./1985/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ: ಪಿಬಿ/3054 ರಾಹೆ/ಜಿಮುರ/ಅಧಿಸೂಚನೆ: 2025–26/01471 ದಿನಾಂಕ: 04.09.2025
ಇ–ಟೆಂಡರ್ ಅಧಿಸೂಚನೆ IFT-KW-2/3
ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)
ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಒಟ್ಟು 8 ಕಾಮಗಾರಿ
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 15–09–2025 (16.00 ಗಂಟೆಗೆ)
(2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 16–09–2025 (16.00 ಗಂಟೆವರೆಗೆ)
(3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17–09–2025 (16.30 ಗಂಟೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 18–09–2025 (16.00 ಗಂಟೆಗೆ)
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ
ಲೋಕೋಪಯೋಗಿ ಇಲಾಖೆ ವಿಭಾಗ, ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/ADK/KSMCA/461/25-26 dt.09.09.2025

ಕರ್ನಾಟಕ ಸರ್ಕಾರ (ಸ್ವಾಯತ್ತ ಸಂಸ್ಥೆ)
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ಸಂಖ್ಯೆ. SABVMCRI/E-TENDER/FETAL/05/2025-26 ದಿನಾಂಕ: 06.09.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ ಅಧೀನದಲ್ಲಿ ಬರುವ ಸರ್ಕಾರಿ ಹೆಚ್.ಎಸ್.ಐ.ಎಸ್ ಘೋಷಾ ಆಸ್ಪತ್ರೆಗೆ **Smart New Born & Maternal Monitoring Solution** ಉಪಕರಣಗಳನ್ನು ಖರೀದಿಸಿ ಅಳವಡಿಸಲು ಕೆಟಿಪಿಪಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಅರ್ಹ ಆಸಕ್ತ ಸಂಸ್ಥೆಗಳಿಂದ ಇ–ಟೆಂಡರನ್ನು ಆಹ್ವಾನಿಸಲಾಗಿದೆ
1. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭದ ದಿನಾಂಕ: 06.09.2025 2. ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಅಂತಿಮ ದಿನಾಂಕ: 15.09.2025 ರ ಸಂಜೆ 05:30 ಗಂಟೆ. 3. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಅಂತಿಮ ದಿನಾಂಕ: 18.09.2025 ರ ಸಂಜೆ 05.30 ಗಂಟೆ. 4. ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): 20.09.2025 ರ ಬೆಳಗ್ಗೆ 10.30 ಗಂಟೆ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ಡಿಐಪಿಆರ್/ಸಿಪಿ/2721/ಸಿಸಿಎಲ್/2025–26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಕವಿಪ್ರನಿನಿ/ಬಿ16/21723/2021–22(RL) ದಿನಾಂಕ: 09.09.2025
ಅಧಿಸೂಚನೆ
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 01.02.2022ರ ಉದ್ಯೋಗ ಪ್ರಕಟಣೆಗನುಗುಣವಾಗಿ **ಕಿರಿಯ ಸಹಾಯಕ (ಕೆ.ಕೆ/ಎನ್.ಕೆ.ಕೆ)** ಹುದ್ದೆಗೆ ಅಂತಿಮ ಕಾಯ್ದಿರಿಸಿದ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಕಟ್–ಆಫ್(Cut-Off) ಅಂಕಗಳೊಂದಿಗೆ ಕವಿಪ್ರನಿನಿ ಅಂತರ್ಜಾಲ **https://kptcl.karnataka.gov.in/Recruitment** ದಲ್ಲಿ ಪ್ರಕಟಿಸಲಾಗಿದೆ.
ಸಹಿ/– ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ),
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು – 560009.

ಸಮಗ್ರ ಶಿಕ್ಷಣ ಕರ್ನಾಟಕ
ಉಪನಿರ್ದೇಶಕರ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ, ಧಾರವಾಡ.
ದೂರವಾಣಿ: 0836–2740554, ಇ–ಮೇಲ್: egovdharwad@gmail.com
ಸಂಖ್ಯೆ: ಸಶಿಕ/ಟಿ2/ಹೊಗುಸೇ/ಟೆಪಪ್ರ/03/2025–26 ದಿನಾಂಕ: 08–09–2025
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ಧಾರವಾಡ ಜಿಲ್ಲೆಯ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ 2025–26 ನೇ ಸಾಲಿಗೆ ಹೊರಗುತ್ತಿಗೆ ಮೂಲಕ ಅರ್ಹ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಕರಿಯರ್ ಕೌನ್ಸಿಲರ್ ಹುದ್ದೆಗೆ ಟೆಂಡರ್ ಸಂಖ್ಯೆ: **DPI/2025-26/SE0368 ರೂ. 23.10 ಲಕ್ಷಕ್ಕೆ** ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಹಂತದಲ್ಲಿ ಡಾಟಾ ಎಂಟ್ರಿ ಆಪರೇಟರ್, ಬ್ಲಾಕ್ ಲೆಕ್ಕ ಸಹಾಯಕರು, ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ 'ಡಿ' ದರ್ಜೆ ಮಾನವ ಸಂಪನ್ಮೂಲ ಸೇವೆ ಹುದ್ದೆಗೆ ಟೆಂಡರ್ ಸಂಖ್ಯೆ: **DPI/2025-26/SE0369 ರೂ. 66.26 ಲಕ್ಷಕ್ಕೆ** ಹಾಗೂ ನೇತಾಜಿ ಸುಭಾಷ್ ಚಂದ್ರ ಬೋಸ್ ಆವಾಸಿಯ ವಿದ್ಯಾಲಯ ವಸತಿ ಶಾಲೆ ಘಂಟಿಕೇರಿ, ಹುಬ್ಬಳ್ಳಿ ಇಲ್ಲಿಗೆ ಹೊರಗುತ್ತಿಗೆ ಮೂಲಕ ಆಹಾರ ಪೂರೈಕೆ ಸೇವೆಗೆ ಟೆಂಡರ್ ಸಂಖ್ಯೆ: **DPI/2025-26/SE0370 ರೂ. 20.00 ಲಕ್ಷಕ್ಕೆ** ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕ: **16–09–2025 ರ ಸಾಯಂಕಾಲ 4.00 ಗಂಟೆವರೆಗೆ** ಇರುತ್ತದೆ. ಈ ಕುರಿತು ಅಂತರ್ಜಾಲ ತಾಣ ವಿಳಾಸ: **https://kppp.karnataka.gov.in** ನ ಮೂಲಕ ಟೆಂಡರ್ ಬುಕ್‌ಲೆಟ್‌ನ್ನು ಪಡೆಯಬಹುದಾಗಿದೆ.
ಸಹಿ/– ಉಪನಿರ್ದೇಶಕರು (ಆಡಳಿತ)
ಶಾ.ಶಿ.ಇ ಹಾಗೂ ಜಿಲ್ಲಾ ಯೋಜನಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ,
ಧಾರವಾಡ.
ವಾಸಾಸಂಇ/ಧಾರವಾಡ/647/ಅಡ್ವರ್ಟೋ/2025–26

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ
ಆಕಾಶವಾಣಿ ರಸ್ತೆ, ಸಿ.ಕೆ. ಪುರ, ಚಿತ್ರದುರ್ಗ.
e-mail:cuda.cta@rediffmail.com, ದೂರವಾಣಿ ಸಂಖ್ಯೆ: 08194–222984
ಕ್ರ.ಸಂ.ಚಿನಪ್ರಾ/ಟೆಂಡರ್/2025–2026 ದಿನಾಂಕ: 08–09–2025
ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ 10 ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಅನುಸೂಚಿತ ಜಾತಿ ವರ್ಗದವರಿಗೆ 02 ಸಂಖ್ಯೆ ಮತ್ತು CAT-II(A) ವರ್ಗದವರಿಗೆ 02 ಸಂಖ್ಯೆ ಕಾಮಗಾರಿಗಳು ಮೀಸಲಿದ್ದು, ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:22–09–2025 ಸಂಜೆ 5.30 ಗಂಟೆಯವರೆಗೆ, ಹೆಚ್ಚಿನ ವಿವರಗಳು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮುಖಾಂತರ ನೋಡಬಹುದು.
DIPR/CTA/KSMCA/361/2025-26
ಸಹಿ/– ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಪಲ್ಪ್‌ವುಡ್ ವಿಂಗ್, ಶಿವಮೊಗ್ಗ.
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಆರ್.ಟಿ.ಓ ಕಛೇರಿ ಹತ್ತಿರ, ಶಿವಮೊಗ್ಗ
ಸಂ/ಕ.ಅ.ಅ.ನಿ.ನಿ/ಕಾ.ನಿ/ಶಿಮೊ/ಎ–6/ಸಿ.ಆರ್–120/25–26/319 ದಿ:09.09.2025
ಸಂಕ್ಷಿಪ್ತ ಇ–ಬಿಡ್ ಪ್ರಕಟಣೆ
ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಶಿವಮೊಗ್ಗ ಇವರ ಅಧೀನದಲ್ಲಿರುವ ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ ಹಾಗೂ ಬೆಂಗಳೂರು ವಿಭಾಗಗಳ ವಿವಿಧ ನೆಡುತೋಪುಗಳಲ್ಲಿ ದೊರೆಯುವ ನೀಲಗಿರಿ / ಅಕೇಶೀಯಾ / ಸುಬಬೂಲ್ / ಕ್ಯಾಜುರಿನಾ ಮೆದುಮರಗಳನ್ನು ಮಾರಾಟ ಮಾಡುವ ಬಗ್ಗೆ ಕರ್ನಾಟಕ ರಾಜ್ಯದಅಥವಾ ಇನ್ನಿತರೆ, ಪಲ್ಪ್ & ಪೇಪರ್ / ರೇಯಾನ್ ಗ್ರೇಡ್ ಪಲ್ಪ್, ಎಂ.ಡಿ.ಎಫ್ ಬೋರ್ಡ್ ತಯಾರಿಕಾ ಕಾರ್ಖಾನೆಗಳಿಂದ / ಸರಬರಾಜುದಾರರಿಂದ / ಇನ್ನಿತರೆ ಮೆದುಮರ ಬಳಕೆಯ ಕಾರ್ಖಾನೆಗಳಿಂದ / ಇ–ಪೋರ್ಟಲ್ ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ.
1. ಇ–ಟೆಂಡರ್ : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in/ 2. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಇ–ಟೆಂಡರ್ ಸ್ವೀಕರಿಸುವ ದಿನಾಂಕ 30.09.2025 ರ 17.30 ಘಂಟೆಯವರೆಗೆ. ಬಿಡ್ಡಿಗೆ ಸಂಬಂಧಿಸಿದ ಉಳಿದ ಎಲ್ಲಾ ವಿವರಗಳನ್ನು ಕಚೇರಿ ಕೆಲಸದ ದಿನಗಳಲ್ಲಿ ಮೇಲಿನ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಕಚೇರಿ ದೂರವಾಣಿ ಸಂಖ್ಯೆ 080–46010000, 080–68948777 ಅಥವಾ ಈ ಕಚೇರಿಯ ದೂರವಾಣಿ ಸಂಖ್ಯೆ 08182–272155 ಗಳಿಂದ ಪಡೆಯಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/28/09/890

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ವಿಜಯಪುರ ಮಹಾನಗರಪಾಲಿಕೆ, ವಿಜಯಪುರ
ಕೇಂದ್ರ ಕಚೇರಿ. ಬಾಗಲಕೋಟೆ ರಸ್ತೆ, ಜಲನಗರ–586109
ದೂರವಾಣಿ : 08352–200425, 222474
ವೆಬ್‌ಸೈಟ್: www.vijayapuracity.mrc.gov.in
E-mail: itstaff_ulb_bijapur@yahoo.co.in
ಸಂ.ಮನಪಾವಿ/ಸಿಬ್ಬಂದಿ–1/2870/2025–26 ದಿನಾಂಕ:08.09.2025
ತಿದ್ದುಪಡಿ ಸಾರ್ವಜನಿಕ ಪ್ರಕಟಣೆ
ಕರ್ನಾಟಕ ಮಹಾನಗರ ಪಾಲಿಕೆಗಳ (ಅಧಿಕಾರಿ ಮತ್ತು ಸಿಬ್ಬಂದಿಗಳ ಸಾಮಾನ್ಯ ನೇಮಕಾತಿ) ನಿಯಮಗಳು 2011 ರನ್ವಯ ವಿಜಯಪುರ ಮಹಾನಗರ ಪಾಲಿಕೆಗೆ ಮಂಜೂರಾದ ಈ ಕೆಳಕಾಣಿಸಿದ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲಿಸಲಾಗಿದೆ. ಆದ್ದರಿಂದ ಸದರಿ ಹುದ್ದೆಯನ್ನು 03 ವರ್ಷದವರೆಗೆ ಅಥವಾ ತಾತ್ಕಾಲಿಕವಾಗಿ ನೇಮಕಾತಿ ಮಾಡಲು ಈ ಕಛೇರಿ ಸಾರ್ವಜನಿಕ ಪ್ರಕಟಣೆ ಸಂಖ್ಯೆ: ಮನಪಾವಿ/ಸಿಬ್ಬಂದಿ–1/2764/2025–26 ದಿನಾಂಕ: 02.09.2025 ರನ್ವಯ ಅರ್ಜಿಗಳನ್ನು ಆಹ್ವಾನಿಸಲು ದಿನಾಂಕ: 03.09.2025 ರಂದು ಪತ್ರಿಕೆಯಲ್ಲಿ ಪ್ರಕಟಣೆಯ ಹೊರಡಿಸಲಾಗಿದೆ. ಸದರಿ ಪತ್ರಿಕಾ ಪ್ರಕಟಣೆಯಲ್ಲಿ **"ಸಹಾಯಕ ಕಾನೂನು ಅಧಿಕಾರಿ ಹುದ್ದೆಗೆ ವಿದ್ಯಾರ್ಹತೆ ಎಲ್.ಎಲ್.ಎಮ್. ಎಂದು ಪ್ರಕಟಿಸಲಾಗಿದ್ದು, ವಿದ್ಯಾರ್ಹತೆಯನ್ನು ಎಲ್.ಎಲ್.ಬಿ ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು"** ಎಂದು ಪ್ರಕಟಣೆಯನ್ನು ಹೊರಡಿಸಿದೆ.
ಸಹಿ/– ಆಯುಕ್ತರು, ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/325/ಕೆಎಸ್‌ಎಂಸಿಎ/2025–26

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 560 023, ದೂ: 080–29557023 ಇ–ಮೇಲ್: cekhsdrp@gmail.com
ಸಂ: ಆಕುಕ/ಇಂಘ/ಮುಇಂ/ತಾಸ–2/ಸಇಂ–1&8/ಟಿಎನ್‌ಡಿ/15th Finance/2025–26/1932 ದಿನಾಂಕ: 09.09.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ **15th Finance** ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ **ರೂ. 4902.30** ಲಕ್ಷಗಳು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ **(KPP Protal)** ಮೂಲಕ ದ್ವಿಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಕೆಪಿಪಿ–ಪೋರ್ಟಲ್ ಅನ್ನು ಪರಿಶೀಲಿಸುವುದು.
ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **24.09.2025** ರಂದು **16.00** ಗಂಟೆಯವರೆಗೆ (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **25.09.2025** ರಂದು **16.01** ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(Through Karnataka Public Procurement Portal) www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through Karnataka Public Procurement Portal) ನೋಂದಾಯಿಸುವ ಅಗತ್ಯ ಇದೆ.
ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/– ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪರು–2 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052. Email:bswmlee4@gmail.com
ಸಂಖ್ಯೆ: ಡಿಜಿಎಂ–2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/21/25–26 ದಿನಾಂಕ: 09.09.2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ವ್ಯವಸ್ಥಾಪಕ ನಿರ್ದೇಶಕರು, ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್‌ನ ಬೆಂಗಳೂರು ಇವರ ಪರವಾಗಿ ಅರ್ಹ ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಕಾಮಗಾರಿಗೆ ಯೋಜನಾ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸಲು ಟೆಂಡರ್‌ನ್ನು ಆಹ್ವಾನಿಸಿದ್ದಾರೆ. ಟೆಂಡರ್‌ಗಳು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಸೇವೆಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (ಉದಾ. **https://kppp.karnataka.gov.in**). ಟೆಂಡರ್‌ದಾರರು ಪ್ರಮಾಣಿತ ಬಿಡ್ ದಾಖಲೆಯ ಪ್ರಕಾರ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಇತರ ವಿವರಗಳನ್ನು ಬಿಡ್ಡಿಂಗ್ ದಾಖಲೆಗಳಲ್ಲಿ ಕಾಣಬಹುದು.

ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)	ಅವಧಿ (ಮಳೆಗಾಲ ಒಳಗೊಂಡಂತೆ)
ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಯ್ದ ಮೂರು ನಿರ್ದಿಷ್ಟ ಪ್ರದೇಶಗಳಲ್ಲಿ ಕನಿಷ್ಠ 150–200 ಟಿಪಿಡಿ ಪುರಸಭೆಯ ಘನತ್ಯಾಜ್ಯವನ್ನು ನಿರ್ವಹಣೆ ಮಾಡಲು ಮುಚ್ಚಿದ ಕಾಂಪ್ಯಾಕ್ಷನ್ ವ್ಯವಸ್ಥೆಯನ್ನು ಹೊಂದಿರುವ ಟ್ರಾನ್ಸ್‌ಫರ್ ಸ್ಟೇಷನ್‌ಗಳ ವಿನ್ಯಾಸ, ನಿರ್ಮಾಣ, ಸರಬರಾಜು, ಅಳವಡಿಸುವ ಮತ್ತು ಕಾರ್ಯಾಚರಣೆ ಮಾಡುವ ಕಾಮಗಾರಿಗಾಗಿ ಪಿಎಂಸಿ ನೇಮಕಾತಿ (2ನೇ ಕರೆ).	4933.00	1,00,000	12 ತಿಂಗಳುಗಳು

ಟೆಂಡರ್ ವೇಳಾಪಟ್ಟಿ : (1) ಬಿಡ್ ಪೂರ್ವಭಾವಿ ಸಭೆಯ **ದಿನಾಂಕ: 16.09.2025 ರಂದು ಮಧ್ಯಾಹ್ನ 3.00 ಗಂಟೆಗೆ** ಮುಖ್ಯ ಅಭಿಯಂತರರು & ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ರವರ ಕಚೇರಿ, ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು ಕಚೇರಿಯಲ್ಲಿ ನಡೆಸಲಾಗುವುದು. (2) ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 23.09.2025 ರಂದು ಸಂಜೆ 4.00 ಗಂಟೆಯವರೆಗೆ.** (3) ತಾಂತ್ರಿಕ ಬಿಡ್ **ದಿನಾಂಕ: 24.09.2025 ರಂದು ಸಂಜೆ 4.30 ಗಂಟೆಗೆ ತೆರೆಯಲಾಗುವುದು.** (4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹರಾದ ಬಿಡ್ಡರ್‌ಗಳಿಗೆ ತಿಳಿಸಲಾಗುವುದು.
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–2,
ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು.
ವಾಸಾಸಂಇ/ವಾ.ಪ್ರ/2720/ಶಿರಡಿ ಸಾಯಿ/2025–26

ಕರ್ನಾಟಕ ಸರ್ಕಾರ
ರಾಜ್ಯ ಅಭಿಯಾನ ನಿರ್ದೇಶಕರು,
ಸ್ವಚ್ಛ ಭಾರತ ಅಭಿಯಾನ (ನಗರ) ನಗರಾಭಿವೃದ್ಧಿ ಇಲಾಖೆ
10ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು–560001.
ದೂರವಾಣಿ: 080– 22867172 / 22866302, ಫ್ಯಾಕ್ಸ್: 080–22863576 /22861665
ಇ–ಮೇಲ್: smdsbmkar@gmail.com
Ref. No.: 1267569/DMA/SWM/SBM/47/2023 Date: 09-09-2025
ಟೆಂಡರ್ ಪ್ರಕಟಣೆ
ಅಧೀಕ್ಷಕ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರು, ಸಕ್ಷಮ ಪ್ರಾಧಿಕಾರದಲ್ಲಿ ನೊಂದಾಯಿತ ಏಜೆನ್ಸಿಯವರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ 2025–26ನೇ ಸಾಲಿಗೆ ಮಾನವ ಸಂಪನ್ಮೂಲ (Manpower) ವನ್ನು ಬಾಹ್ಯ ಮೂಲ (Out-source)ಗಳಿಂದ ಪಡೆಯಲು INDENT NO:DMA/2025-26/SE6051ನ್ನು ಕೆಟಿಪಿಪಿ ಆಕ್ಟ್ 1999 & ನಿಯಮ 2000ರಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಆಸಕ್ತ ಬಿಡ್ಡುದಾರರು ಟೆಂಡರನ್ನು ಕೆಪಿಪಿ ಪೋರ್ಟಲ್ ಮೂಲಕವೇ ಸಲ್ಲಿಸಬೇಕಾಗಿದ್ದು, ಮುಂಗಡ ಠೇವಣಿ ಮತ್ತು ಪ್ರೊಸೆಸ್ಸಿಂಗ್ ಫೀನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕಿರುತ್ತದೆ ಹಾಗೂ ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ದಿನಾಂಕ: 09.09.2025 ರಿಂದ 24.09.2025ವರೆಗೆ ಪಡೆಯಬಹುದು, ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:24.09.2025 ಸಂಜೆ 05.30 ಗಂಟೆಯ ವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 26.09.2025, ಬೆಳಿಗ್ಗೆ 11.00 ಗಂಟೆಯ ನಂತರ, ತಾಂತ್ರಿಕ ಬಿಡ್ ಅನುಮೋದನೆಗೊಂಡ ತದನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು, ಮೇಲಿನ ಟೆಂಡರ್ ನಿಯಮ ಮತ್ತು ವೇಳಾ ಪಟ್ಟಿಯಲ್ಲಿ ಯಾವುದೇ ಬದಲಾವಣೆಯನ್ನು ಕೆಪಿಪಿಪಿ ಮೂಲಕ ಮಾತ್ರ ತಿಳಿಸಲಾಗುವುದು ಮತ್ತು ಯಾವುದೇ ವಾರ್ತಾ/ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/–
ಅಧೀಕ್ಷಕ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
DIPR/CP/2715/NR/2025-26

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ದೂ: 080–22341230/35 ಇ–ಮೇಲ್: bmicapa@gmail.com
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–03/47/2025–26/896 ದಿನಾಂಕ:09.09.2025
ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]
ಶ್ರೀ ಎಂ.ರವಿಪ್ರಶಾಂತ್ ಬಿನ್ ಮುನಿಕೃಷ್ಣ, ಶ್ರೀಮತಿ ಸುನೀತ ಕೋಂ ಎಂ.ರವಿಪ್ರಶಾಂತ್ ಬಿನ್ ಎ.ಗಣಪತಿ, ಶ್ರೀ ಕೆ.ಎ.ಅಂತೋಣಿ ಬಿನ್ ಕೆ.ಎಂ.ಆಗಸ್ಟೀನ್ ಮತ್ತು ಶ್ರೀಮತಿ ಹನ್ನಾ ಸೆಬಾಸ್ಟಿಯನ್ ಕೋಂ ಕೆ.ಎ.ಜೋಸೆಫ್ ರಾಬಿನ್ ಇವರುಗಳು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಮಹದೇವಪುರ ಗ್ರಾಮದ ಸರ್ವೇ ಸಂಖ್ಯೆ: 126/3ರ 0ಎ–29½ಗು, 127/2ರ 0ಎ–12ಗು ಮತ್ತು 127/3ರ 0ಎ–07ಗು ಒಟ್ಟು 01ಎ–08½ಗು ವಿಸ್ತೀರ್ಣದ ಜಮೀನುಗಳನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "**ವ್ಯವಸಾಯ**" ವಲಯದಿಂದ "**ವಾಣಿಜ್ಯ**" **ಉದ್ದೇಶಕ್ಕೆ** ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಅನುಮೋದಿತ ಮಹಾಯೋಜನೆಯಲ್ಲಿ **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.
1) ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
2) ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ಅವಕಾಶ ಸೃಷ್ಟಿಯಾಗುತ್ತದೆ.
3) ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ, ಸುತ್ತಮುತ್ತಲಿನ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಹಾಗೂ ಸರ್ಕಾರಕ್ಕೆ ವಿವಿಧ ರೀತಿ ಶುಲ್ಕ ದೊರೆಯುತ್ತದೆ.
ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/– ಸದಸ್ಯ–ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/2708/2025–26

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
KUIDFC
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ, ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು–560 038. ದೂರವಾಣಿ: 91–80–25196100, 25196124 ಫ್ಯಾಕ್ಸ್: 080–25196110
ಇ–ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com
ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲೂಎಮ್/37/ಎನ್‌ಟಿಎಫ್‌ಎನ್/2025–26/16/2198 ದಿನಾಂಕ: 08.09.2025
ಇ–ಪ್ರೊಕ್ಯೂರ್‌ಮೆಂಟ್ ಆಹ್ವಾನ
ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಸರ ಪರಿಹಾರ ನಿಧಿ ಹಾಗೂ ಎಸ್.ಬಿ.ಎಂ (ಯು)–2.0 ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್‌ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) ರೂ.ಲಕ್ಷಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	Construction/Upgradation of sewerage system for **Hospete City** under NGT environmental compensation fund on DBOT Model. **Call-3**	2305.65	23.50

1) ಟೆಂಡರ್ ಆಹ್ವಾನಿಸಿರುವ ದಿನಾಂಕ: **09.09.2025.** 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **12.09.2025 ಸಮಯ: 11.30 ಪೂರ್ವಾಹ್ನ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **18.09.2025 ಸಮಯ: 5.30 ಅಪರಾಹ್ನ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **20.09.2025 ಸಮಯ: 11.00 ಪೂರ್ವಾಹ್ನ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **29.09.2025 ಸಮಯ: 11.00 ಪೂರ್ವಾಹ್ನ.**
ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Websiteಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/–
ಕಾರ್ಯಪಾಲಕ ಅಭಿಯಂತರರು, ಯೋಜನಾ ಮೇಲ್ವಿಚಾರಣಾ ಘಟಕ,
ಯುಡಬ್ಲ್ಯೂಎಮ್–ಕೆಯುಐಡಿಎಫ್‌ಸಿ, ಬೆಂಗಳೂರು
ವಾಸಾಸಂಇ/ವಾಪ್ರ/2712/ಎಂಎಎ/2025–26

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನಿಯರ್‌ರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ
ಸಂ: ಕಾನಿಇಂ/ಲೋಇ/ವಿಬಿ/ಕಿ.ಇಂ–3/2025–26/ 1861 ದಿನಾಂಕ: 09.09.2025
EXPRESSION OF INTREST ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಸಮಾಲೋಚಕರು / ಗುತ್ತಿಗೆದಾರರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆ ವಿಭಾಗ ಬೀದರ ಇವರಿಂದ ಟೆಂಡರ್‌ಗಳನ್ನು ಕರೆಯಲಾಗಿದೆ.

Sl. No	Name of Work	Indent Number
1	Selection of Consultant for Providing Transaction Advisory Services for Proposed Ware house / Solar Power plant/ Amusement Park at Gadagi Villagefor Revenue Generation to PWD Department in Bidar	PWD/2025-26/SE0430
2	Selection of Consultant for Providing Transaction Advisory Services for Proposed Karnataka Government Employees Residential Quarters in Halladkeri (K) Bidar City Taluka & District Bidar for Revenue Generation to PWD Department in Bidar	PWD/2025-26/SE0431
3	Pre-bid Meeting date and time	15.09.2025 at 10.30 am
4	Tender Reciept date and time	18.09.2025 at 16.00
5	Opening of Tender date and time	19.09.2025 at 16.00

ಪಬ್ಲಿಕ್–ಪ್ರೊಕ್ಯುರ್‌ಮೆಂಟ್ ಪೋರ್ಟಾಲ್‌ನ ರಿಂದ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ಯುಕೆಯ ವಿಲ್ಟ್‌ಶೈರ್ ಪ್ರದೇಶದಲ್ಲಿ ತ್ಯಾಜ್ಯ ನೀರಿನ ಸೋರಿಕೆಯನ್ನು ಪತ್ತೆ ಹಚ್ಚಲು ನಾಯಿಗಳಿಗೆ ತರಬೇತಿ ನೀಡಲಾಗಿದೆಯಂತೆ



ರೈಲು ಹಳಿಗಳೇ ಸೌರ ವಿದ್ಯುತ್ ಸ್ಥಾವರ

ಸೌರಫಲಕಗಳನ್ನು ಅಳವಡಿಸಿದ 78 ಮೀಟರ್ ಉದ್ದದ ಹಳಿಯ ಮೇಲೆ ರೈಲಿನ ಎಂಜಿನ್ ಅನ್ನು ಆಗಸ್ಟ್ 15ರಂದು ಓಡಿಸಲಾಗಿತ್ತು. ಫಲಕ ಅಳವಡಿಕೆ ನಂತರ ಎದುರಾಗಬಹುದಾದ ಸವಾಲುಗಳನ್ನು ಪರಿಗಣಿಸಿಯೇ ಇದರ ವಿನ್ಯಾಸ ರೂಪಿಸಲಾಗಿದೆ.

• ಸೂರ್ಯನಾರಾಯಣ ವಿ.

ಈ ವರ್ಷದ ಜೂನ್ ಅಂತ್ಯದಲ್ಲಿ ಭಾರತೀಯ ರೈಲ್ವೆಗೆ ಸಂಬಂಧಿಸಿದ ಒಂದು ಪೋಸ್ಟ್ ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡಿತ್ತು. 'ಭಾರತವು ರೈಲು ಹಳಿಗಳನ್ನು ವಿದ್ಯುತ್ ಸ್ಥಾವರನ್ನಾಗಿ ಪರಿವರ್ತಿಸುತ್ತಿದೆ' ಎಂದು ಆ ಪೋಸ್ಟ್ ಹೇಳಿತ್ತು. ಸುಸ್ಥಿರ ಮೂಲಸೌಕರ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರುವಂತಹ ಬೆಳವಣಿಗೆ ಇದಾಗಿದ್ದು, 'ಸನ್ ವೇಸ್' (Sun Ways) ಎಂಬ ಭಾರತದ ಸ್ಟಾರ್ಟ್‌ಅಪ್ ಕಂಪನಿಯು ರೈಲು ಹಳಿಗಳ ಮಧ್ಯೆ ಸೌರಫಲಕಗಳನ್ನು ಅಳವಡಿಸಿ ಸೌರ ವಿದ್ಯುತ್ ಉತ್ಪಾದಿಸಲು ಹೊರಟಿದೆ ಎಂದು ಆ ಪೋಸ್ಟ್‌ನಲ್ಲಿ ಹೇಳಲಾಗಿತ್ತು. ದೇಶದ ಪ್ರಮುಖ ಸುದ್ದಿ ಸಂಸ್ಥೆ ಪಿಟಿಐ, ಜುಲೈ 7ರಂದು ಈ ಪೋಸ್ಟ್ ಬಗ್ಗೆ ಫ್ಯಾಕ್ಟ್‌ಚೆಕ್ ಮಾಡಿತ್ತು. 'ಹಳಿಗಳ ನಡುವೆ ಸೌರಫಲಕಗಳನ್ನು ಅಳವಡಿಸುವ ಯೋಜನೆಯನ್ನು ಭಾರತೀಯ ರೈಲ್ವೆಯು ಕೈಗೆತ್ತಿಕೊಂಡಿಲ್ಲ; ಪೋಸ್ಟ್‌ನಲ್ಲಿರುವ ಚಿತ್ರ ಸ್ವಿಟ್ಜರ್ಲೆಂಡ್‌ಗೆ ಸಂಬಂಧಿಸಿದ್ದಾಗಿದ್ದು, ಸನ್ ವೇ ಕಂಪನಿ ಭಾರತದ್ದಲ್ಲ, ಸ್ವಿಟ್ಜರ್ಲೆಂಡ್‌ನದ್ದು. ಅಲ್ಲಿ ಅದು ಈ ಯೋಜನೆಯನ್ನು ಪ್ರಾಯೋಗಿಕವಾಗಿ ಕೈಗೆತ್ತಿಕೊಂಡಿದೆ' ಎಂದು ಫ್ಯಾಕ್ಟ್‌ಚೆಕ್ ವರದಿ ತಿಳಿಸಿತ್ತು.

ಇದಾಗಿ, ಒಂದೂವರೆ ತಿಂಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಪೋಸ್ಟ್ ನಿಜವಾಗಿರುವ ಸುದ್ದಿ ಉತ್ತರ ಪ್ರದೇಶದಿಂದ ಬಂದಿದೆ. ವಾರಾಣಸಿಯಲ್ಲಿರುವ ಭಾರತೀಯ ರೈಲ್ವೆಯ ಬನಾರಸ್ ಲೋಕೋಮೋಟಿವ್ ವರ್ಕ್ಸ್ (ಬಿಎಲ್‌ಡಬ್ಲ್ಯು) ಘಟಕವು ಸದ್ದಿಲ್ಲದೇ ಹಳಿಗಳ ನಡುವೆ ಸೌರಫಲಕಗಳನ್ನು ಯಶಸ್ವಿಯಾಗಿ ಅಳವಡಿಸಿ ಸೂರ್ಯನ ಶಾಖದಿಂದ ವಿದ್ಯುತ್ ಉತ್ಪಾದಿಸುವ ಪ್ರಾಯೋಗಿಕ ಯೋಜನೆಯನ್ನು ಆರಂಭಿಸಿದೆ. ಸ್ವಾತಂತ್ರ್ಯೋತ್ಸವದ ದಿನದಂದು ಈ ಯೋಜನೆಗೆ ಚಾಲನೆ ನೀಡಲಾಗಿದೆ.

2030ರ ವೇಳೆಗೆ ಇಂಗಾಲ ಹೊರಸೂಸುವಿಕೆ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಗುರಿಯನ್ನು ರೈಲ್ವೆ ಹೊಂದಿದ್ದು, ಆ ದಿಸೆಯಲ್ಲಿ ಈ ಪ್ರಾಯೋಗಿಕ ಯೋಜನೆ ಮಹತ್ವದ ಮೈಲಿಗಲ್ಲು ಎಂದು ರೈಲ್ವೆಯ ಅಧಿಕಾರಿಗಳು ಹೇಳಿದ್ದಾರೆ. ರೈಲ್ವೆ ಮಾತ್ರವಲ್ಲ, 2070ರ ವೇಳೆಗೆ ಇಂಗಾಲ ಹೊರಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸುವ ಗುರಿಯನ್ನು ಭಾರತ ಹಾಕಿಕೊಂಡಿದೆ. ಅದನ್ನು ಸಾಧಿಸುವ ನಿಟ್ಟಿನಲ್ಲೂ ಈ ಯೋಜನೆ ಮಹತ್ವದ್ದು. ಸ್ವಿಟ್ಜರ್ಲೆಂಡ್ ಬಿಟ್ಟು ಬೇರೆ ದೇಶಗಳಲ್ಲಿ ಇಂತಹ ಪ್ರಯತ್ನ ನಡೆದಂತೆ ಕಾಣುತ್ತಿಲ್ಲ. ಭಾರತದಲ್ಲಂತೂ ಇದು ಮೊದಲ ಪ್ರಯತ್ನ.

ಬನಾರಸ್‌ನ ಲೋಕೋಮೋಟಿವ್ ವರ್ಕ್ಸ್‌ನ ಎಂಜಿನಿಯರ್‌ಗಳು ಈ ಯೋಜನೆಯ ರೂವಾರಿಗಳು. ಬಿಎಲ್‌ಡಬ್ಲ್ಯು ವರ್ಕ್‌ಶಾಪ್‌ನ ಲೈನ್–19ರಲ್ಲಿ 70 ಮೀಟರ್‌ನಷ್ಟು ದೂರಕ್ಕೆ 28 ಸೌರಫಲಕಗಳನ್ನು ಅಳವಡಿಸಲಾಗಿದ್ದು, ಇದು 15 ಕಿಲೋ ವಾಟ್‌ನಷ್ಟು ಸೌರ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಒಂದು ಕಿ.ಮೀ ಉದ್ದಕ್ಕೆ ಫಲಕ ಅಳವಡಿಸಿದರೆ 220 ಕಿಲೋ ವ್ಯಾಟ್‌ನಷ್ಟು ಸೌರವಿದ್ಯುತ್ ಉತ್ಪಾದಿಸಬಹುದು. ಪ್ರತಿ ಕಿ.ಮೀನಲ್ಲಿ ಒಂದು ದಿನಕ್ಕೆ 880 ಯುನಿಟ್‌ಗಳಂತೆ ಒಂದು ವರ್ಷದಲ್ಲಿ 3.20 ಲಕ್ಷ ಯುನಿಟ್‌ಗಳಷ್ಟು ವಿದ್ಯುತ್ ಉತ್ಪಾದಿಸಬಹುದು ಎಂಬುದು ಅಧಿಕಾರಿಗಳ ಲೆಕ್ಕಾಚಾರ.

ದೇಶದಲ್ಲಿ ರೈಲ್ವೆಯ ಜಾಲ 1.2 ಲಕ್ಷ ಕಿ.ಮೀನಷ್ಟು ಉದ್ದವಿದೆ. ಈ ತಂತ್ರಜ್ಞಾನವನ್ನು ರೈಲ್ವೆ ಯಾರ್ಡ್‌ಗಳಲ್ಲಿರುವ ಹೆಚ್ಚು ಬಳಕೆಯಲ್ಲಿರದ ಹಳಿಗಳಲ್ಲಿ ಬಳಸಬಹುದು. ಇದರಲ್ಲಿ ಸೌರಫಲಕಗಳ ಅಳವಡಿಕೆಗೆ ಹಳಿಗಳ ನಡುವಿನ ಖಾಲಿ ಜಾಗವನ್ನು ಬಳಸುವುದರಿಂದ ಯೋಜನೆಗಾಗಿ ಭೂಮಿಯನ್ನು ಸ್ವಾಧೀನ ಮಾಡುವ ಅಗತ್ಯವಿಲ್ಲ ಎಂಬುದು ಅಧಿಕಾರಿಗಳ ವಾದ.

ಶೂನ್ಯ ಇಂಗಾಲ ಗುರಿಯೆಡೆಗೆ

ಸುಸ್ಥಿರ ಅಭಿವೃದ್ಧಿ, ನವೀಕರಿಸಬಹುದಾದ ಇಂಧನ ಬಳಕೆಯ ಮೂಲಕ ನಿರ್ವಹಣಾ ವೆಚ್ಚವನ್ನು ಉಳಿತಾಯ ಮಾಡಲು ಯತ್ನಿಸುತ್ತಿರುವ ರೈಲ್ವೆಯು ಸೌರಶಕ್ತಿಯಿಂದ ವಿದ್ಯುತ್ ಉತ್ಪಾದಿಸಿ ಶೂನ್ಯ ಇಂಗಾಲದ ಹೊರಸೂಸುವಿಕೆಯ ಗುರಿಯನ್ನು ಸಾಧಿಸುವತ್ತ ದೃಷ್ಟಿ ನೆಟ್ಟಿದೆ. ಈ ವರ್ಷದ ಫೆಬ್ರುವರಿ ಅಂಕಿ–ಅಂಶಗಳ ಪ್ರಕಾರ, ರೈಲ್ವೆಯು ಈವರೆಗೆ ದೇಶದಾದ್ಯಂತ ಇರುವ 2,249 ರೈಲ್ವೆ ನಿಲ್ದಾಣಗಳು ಹಾಗೂ ಇತರ ಕಟ್ಟಡಗಳಲ್ಲಿ ಒಟ್ಟು 209 ಮೆಗಾ ವಾಟ್ ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಿದೆ.

ಹಳಿಗಳ ನಡುವಿನ ಖಾಲಿ ಜಾಗ ಬಳಸಿ ಸೌರ ವಿದ್ಯುತ್ ಉತ್ಪಾದಿಸುವ ರೈಲ್ವೆಯ ಯೋಜನೆಯು 2030ರ ವೇಳೆಗೆ ಇಂಗಾಲ ಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸುವ ಗುರಿ ಸಾಧನೆಯ ದಿಸೆಯಲ್ಲಿ ಮತ್ತೊಂದು ಪ್ರಯತ್ನ.

ರೈಲು ಹಳಿಗಳ ನಡುವಿನ ಖಾಲಿ ಜಾಗದಲ್ಲಿ ಸೌರಫಲಕ ಅಳವಡಿಸಿರುವುದು
ಚಿತ್ರ: ರೈಲ್ವೆ ಸಚಿವಾಲಯದ 'ಎಕ್ಸ್' ಖಾತೆ

ಫಲಕ ತೆರವುಗೊಳಿಸುವ ತಂತ್ರಜ್ಞಾನ

ಆಗಸ್ಟ್ 15ರಂದು ಯೋಜನೆಗೆ ಚಾಲನೆ ನೀಡುವ ವೇಳೆ ಸೌರಫಲಕಗಳನ್ನು ಅಳವಡಿಸಿದ 78 ಮೀಟರ್ ಉದ್ದದ ಹಳಿಯ ಮೇಲೆ ರೈಲು ಎಂಜಿನ್ ಅನ್ನು ಓಡಿಸಲಾಗಿತ್ತು. ಫಲಕ ಅಳವಡಿಕೆ ನಂತರ ಎದುರಾಗಬಹುದಾದ ಸವಾಲುಗಳನ್ನು ಪರಿಗಣಿಸಿಯೇ ಇದರ ವಿನ್ಯಾಸ ರೂಪಿಸಲಾಗಿದೆ. ದೇಶೀಯವಾಗಿ ವಿನ್ಯಾಸವನ್ನು ಸಿದ್ಧಪಡಿಸಲಾಗಿದೆ. ರೈಲು ಸಂಚರಿಸುವಾಗ ರೈಲು ಹಳಿಗಳು ಅದುರುವುದರಿಂದ, ಇದರ ಪ್ರಭಾವವನ್ನು ಕಡಿಮೆ ಮಾಡುವುದಕ್ಕಾಗಿ ಫಲಕಗಳಿಗೆ ರಬ್ಬರ್ ಚೌಕಟ್ಟುಗಳನ್ನು ಹೊಂದಿರುವ ಪ್ಯಾಡ್ ಬಳಸಲಾಗಿದೆ. ಹಳಿಯ ಕೆಳಗೆ, ಜಲ್ಲಿ ಮೇಲೆ ಹಾಕಲಾಗಿರುವ ಕಾಂಕ್ರೀಟ್ ಪಟ್ಟಿಗೆ ಫಲಕಗಳನ್ನು ಅಂಟಿಸಲಾಗಿದೆ. ಇದಕ್ಕಾಗಿ ಎಪಾಕ್ಸಿ ಅಂಟನ್ನು ಬಳಸಲಾಗಿದೆ. ಹಳಿ ನಿರ್ವಹಣೆ, ಸ್ವಚ್ಛತೆಗಾಗಿ ಫಲಕಗಳನ್ನು ಸುಲಭವಾಗಿ ತೆರವುಗೊಳಿಸಬಹುದು ಎಂಬುದು ಅಧಿಕಾರಿಗಳ ವಿವರಣೆ.

ವಿದ್ಯುತ್ ತಯಾರಿಸುವ ಕಿಟಕಿಗಳು!

• ನೇಸರ ಕಾಡನಕುಪ್ಪೆ



ಗಾಳಿ -ಬೆಳಕು ಬರಲೆಂದು ತಾನೇ ಕಿಟಕಿಗಳನ್ನು ರೂಪಿಸಿರುವುದು? ಜೊತೆಗೆ ಮನೆಯ ಸೌಂದರ್ಯವೃದ್ಧಿಗೂ ಇದರ ಪಾತ್ರ ದೊಡ್ಡದೇ ಇದೆ. ಹಳೆಯ ಕಾಲದಲ್ಲಿ ಚಿಕ್ಕದಾಗಿ ಇರುತ್ತಿದ್ದ ಕಿಟಕಿಗಳು ಈಗ ವಿಶಾಲವಾಗಿ, ಅಂದ–ಚೆಂದ ಹೆಚ್ಚಿಸಿಕೊಂಡು ಆಧುನಿಕ ಸ್ವರೂಪವನ್ನು ಪಡೆದುಕೊಂಡಿವೆ. ಇದೀಗ ಮತ್ತೊಂದು ಸಂಶೋಧನೆಯ ಸೇರ್ಪಡೆ ಈ ಕಿಟಕಿಗಳಿಗಾಗಿದೆ. ಈಗ ಈ ಕಿಟಕಿಗಳು ವಿದ್ಯುತ್ತನ್ನೂ ಉತ್ಪಾದಿಸುತ್ತವೆ!

ಚೀನಾದ ಜಿಯಾಂಗ್ಸು ನಗರದ ನ್ಯಾನ್‌ಜಿಂಗ್ ವಿಶ್ವವಿದ್ಯಾಲಯದಲ್ಲಿ ಈ ಸಂಶೋಧನೆಯಾಗಿದೆ. ಡಾ.ಡೀವಿ ಜ್ಯಾಂಗ್ ನೇತೃತ್ವದ ವಿಜ್ಞಾನಿಗಳ ತಂಡವು ವಿದ್ಯುತ್ ತಯಾರಿಸುವ ಕಿಟಕಿಗಳನ್ನು ತಯಾರಿಸಿದೆ. ಈ ಕಿಟಕಿಗಳಲ್ಲಿ 'ಕೊಲೆಸ್ಟರಿಕ್ ಲಿಕ್ವಿಡ್ ಕ್ರಿಸ್ಟೆಲ್' ಎಂಬ ಬಹೂಪಯೋಗಿ ಪಾರದರ್ಶಕ ಗಾಜಿನ ಮಾದರಿಯ ವಸ್ತುವೊಂದನ್ನು ತಮಗೆ ಬೇಕಾದ ಹಾಗೆ ಪಳಗಿಸಿದ್ದು, ಇವು ನೋಡಲು ಗಾಜಿನಂತೆ ಇರುತ್ತವೆ. ಆದರೆ, ಸೂರ್ಯನ ಬೆಳಕನ್ನು ಹೀರಿಕೊಂಡು ವಿದ್ಯುತ್ತಾಗಿ ಪರಿವರ್ತಿಸುವ ವಿಶೇಷ ಶಕ್ತಿಯನ್ನು ಈ ವಸ್ತು ಹೊಂದಿದೆ. ಈ ಸಂಶೋಧನೆಯನ್ನು ಪ್ರತಿಷ್ಠಿತ ಫೋಟಾನಿಕ್ಸ್ ನಿಯತಕಾಲಿಕೆಯಲ್ಲಿ ಈ ವಿಜ್ಞಾನಿಗಳು ಪ್ರಕಟಿಸಿದ್ದಾರೆ.

ತಂತ್ರಜ್ಞಾನ ಕಾರ್ಯಾಚರಣೆ ಹೇಗೆ?

ಈ ಕಿಟಕಿಯಲ್ಲಿ ಬಳಕೆಯಾಗುವ ಗಾಜಿಗೆ ಶೇ 64.2ರಷ್ಟು ಮಾತ್ರ ಪಾರದರ್ಶಕತೆ ಇರುತ್ತದೆ. ಅಂದರೆ, ನೋಡಲು ಕೊಂಚ ಅರೆಪಾರದರ್ಶಕವಾಗಿ ಇದು ಕಾಣುತ್ತದೆ. ಆದರೆ, ಶೇ 91.1ರಷ್ಟು ವರ್ಣ ವೈವಿಧ್ಯತೆಯನ್ನು ಹೊಂದಿದ್ದ ಬಿಳುಪಿನಿಂದ ಹಿಡಿದು ಯಾವುದೇ ಬಣ್ಣವೂ ಈ ಗಾಜಿಗೆ ಹೊಂದುತ್ತದೆ. ಈ ಗಾಜಿನ ಈ ಗುಣವೇ ವಿದ್ಯುತ್ ಉತ್ಪಾದನೆಗೆ ಕಾರಣವಾಗಿರುವುದು ವಿಶೇಷ.

ಅಂದರೆ, ಈ ವಿಜ್ಞಾನಿಗಳ ನಿರಂತರ ಸಂಶೋಧನೆಯ ಫಲವಾಗಿ ಹಸಿರು ಬೆಳಕು ಎಂದು ನಾವು ಕರೆಯುವ ಸೂರ್ಯನಿಂದ ಭೂಮಿಗೆ ಮುಟ್ಟುವ ಮಾನವರಿಗೆ ಸುರಕ್ಷಿತವಾಗಿರುವ ಬೆಳಕು ಈ ಗಾಜಿನ (ಕೊಲೆಸ್ಟರಿಕ್ ಲಿಕ್ವಿಡ್ ಕ್ರಿಸ್ಟೆಲ್) ಮೇಲೆ ಬಿದ್ದ ಕೂಡಲೇ ವಿದ್ಯುತ್ ಉತ್ಪಾದನೆಯಾಗಲು ಶುರುವಾಗುತ್ತದೆ. ನಮ್ಮ ಸಾಂಪ್ರದಾಯಿಕ ಸೌರಫಲಕಗಳು ಪಾರದರ್ಶಕವಲ್ಲ. ಅವು ಸಿಲಿಕಾನ್‌ಗಳಿಂದ ರಚಿಸಿರುವುದಾದರೂ ಶಕ್ತಿ ಉತ್ಪಾದನೆಯ ಸಾಮರ್ಥ್ಯವನ್ನು ಈಗ ಸುಮಾರು ಶೇ 65ರವರೆಗೂ ಹೆಚ್ಚಿಸಲಾಗಿದೆ. ಆದರೆ, ಈ ಹೊಸ ವಸ್ತುವಿನಿಂದ ಉತ್ಪಾದಿಸುವ ಗಾಜು ಶೇ 90ರಷ್ಟು ಹೆಚ್ಚು ಉತ್ಪಾದನಾ ಸಾಮರ್ಥ್ಯ ಹೊಂದಿರುವುದು ವಿಶೇಷವಾಗಿದೆ.

ಅಲ್ಲದೇ ಸಾಂಪ್ರದಾಯಿಕ ವಿದ್ಯುತ್ ಉತ್ಪಾದನಾ ಫಲಕಗಳು ನೋಡಲು ದಪ್ಪನೆಯ ಗಾಜಿನಂತೆ ಕಂಡರೂ ಅವುಗಳಲ್ಲಿ ಬಹುಪದರಗಳಿರುತ್ತವೆ. ನಮ್ಮ ಮೊಬೈಲ್ ಫೋನ್‌ಗಳ ಮೇಲೆ ಇರುವ ಟ್ಯಾಂಪರ್ಡ್ ಗ್ಲಾಸ್ ಮಾದರಿಯ ಹೊರ ಪದರ, ಅದರ ಅಡಿಯಲ್ಲಿ ಎಥಲೀನ್ ಆಧಾರಿತ ಪಾರದರ್ಶಕ ರಕ್ಷಣಾ ಪದರ, ಅದರ ಅಡಿಯಲ್ಲಿ ಸಿಲಿಕಾನ್ ಫೋಟೋವೋಲ್ಟಾಯಿಕ್ ಸೌರಕೋಶಗಳಿರುವ ಪದರ, ಅದರ ಅಡಿಯಲ್ಲಿ ಅಪಾರದರ್ಶಕ ಗಟ್ಟಿಯಾದ ಪದರ, ಕೊನೆಯಲ್ಲಿ ಅಲ್ಯೂಮಿನಿಯಂ ಆಧಾರಿತ ಪದರ. ಅಂದರೆ, ಸುಮಾರು ಐದು ವಿವಿಧ ಪದರಗಳನ್ನು ಸೇರಿಸಿ ಸೌರಫಲಕಗಳನ್ನು ತಯಾರಿಸಲಾಗುತ್ತದೆ. ಆದರೆ, ಈ ಹೊಸ ಸಂಶೋಧಿತ ಸೌರ ಕಿಟಕಿಗಳಲ್ಲಿ ಬಳಕೆಯಾಗುವ ಗಾಜಿನಲ್ಲಿ ಕೇವಲ ಒಂದೇ ಒಂದು ಪದರ ಇರುತ್ತದೆ.

ಕಡಿಮೆ ವೆಚ್ಚ; ಅಧಿಕ ಲಾಭ

ಇದರಲ್ಲಿ ಬಹುಪದರಗಳು ಇಲ್ಲದೇ ಇರುವ ಕಾರಣ, ಉತ್ಪಾದನಾ ವೆಚ್ಚ ಬಹು ಕಡಿಮೆ ಇರಲಿದೆ. ಜೊತೆಗೆ ಅಲ್ಯೂಮಿನಿಯಂ ಮಾದರಿಯ ಲೋಹಗಳ ಬಳಕೆ ಇರದೇ ಇರುವ ಕಾರಣ, ಕಿಟಕಿಗಳನ್ನು ಮಾಡಲು ಅನುಕೂಲವಾಗುವ ಪಾರದರ್ಶಕತೆ ಬರುತ್ತದೆ. ಎಲ್ಲದಕ್ಕೂ ಮುಖ್ಯವಾಗಿ ಇವು ಬಹು ಹಗುರವಾಗಿರುವ ಕಾರಣ, ಕಿಟಕಿಗಳನ್ನು ಕಡಿಮೆ ಸಂಕೀರ್ಣ ವಿಧಾನದಲ್ಲಿ ನಿರ್ಮಿಸಲೂ ಸಹಾಯವಾಗುತ್ತದೆ.

ಒಂದು ಇಂಚು ಸುತ್ತಳತೆಯ 'ಕೊಲೆಸ್ಟರಿಕ್ ಲಿಕ್ವಿಡ್ ಕ್ರಿಸ್ಟೆಲ್' ಗಾಜು 1 ಮಿಲಿ ವ್ಯಾಟ್ ವಿದ್ಯುತ್ ಉತ್ಪಾದಿಸುತ್ತದೆ. ಅಂದರೆ, ಸುಮಾರು 2 ಮೀಟರ್ ಸುತ್ತಳತೆಯ ಈ ಹೊಸ ಸೌರಫಲಕವು ಸಾಂಪ್ರದಾಯಿಕ ಸೌರಫಲಕಗಳಿಗಿಂತ ಸುಮಾರು 50 ಪಟ್ಟು ಹೆಚ್ಚು ವಿದ್ಯುತ್ ತಯಾರಿಸುತ್ತವೆ. ಸಿಲಿಕಾನ್ ಫೋಟೋವೋಲ್ಟಾಯಿಕ್ ಸೌರಫಲಕಗಳಿಂತ ಈ ಹೊಸ ಸೌರಫಲಕವು ಶೇ 75ರಷ್ಟು ಅಧಿಕ ಕಾರ್ಯಕ್ಷಮತೆಯನ್ನು ಹೊಂದಿರಲಿದೆ ಎನ್ನುವುದು ವಿಶೇಷವಾಗಿದೆ.

ಸ್ಪಷ್ಟತೆಯಲ್ಲೂ ಉತ್ತಮ ಗುಣ

ಸ್ಪಷ್ಟತೆಯಲ್ಲೂ ಈ ಗಾಜಿನಿಂದ ತಯಾರಾದ ಕಿಟಕಿಗಳು ಶ್ರೇಷ್ಠವಾಗಿರುತ್ತವೆ. ಇದರ ಮೂಲಕ ಗೋಚರಿಸುವ ದೃಶ್ಯವು ಸ್ಪಷ್ಟವಾಗಿದ್ದು ಸಾಂಪ್ರದಾಯಿಕ ಗಾಜುಗಳಿಗಿಂತಲೂ ಉತ್ತಮವಾಗಿರುತ್ತವೆ ಎಂದು ಡಾ.ಡೀವಿ ಜ್ಯಾಂಗ್ ಅಭಿಪ್ರಾಯಪಟ್ಟಿದ್ದಾರೆ. ಕೊಲೆಸ್ಟರಿಕ್ ಲಿಕ್ವಿಡ್ ಕ್ರಿಸ್ಟೆಲ್ ಗಾಜು ಸಂಪೂರ್ಣ ಬಣ್ಣರಹಿತ. ಮೊದಲೇ ಹೇಳಿದಂತೆ 64.2ರಷ್ಟು ಪಾರದರ್ಶಕತೆ ಇರುವ ಕಾರಣ ಕೊಂಚ ಕಪ್ಪಾಗಿ ಕಾಣುತ್ತದೆಯಷ್ಟೇ. ಆದರೆ ಅದು ಬಣ್ಣವಲ್ಲ. ಕ್ಯಾಮೆರಾಗಳಲ್ಲಿ ಬಳಕೆಯಾಗುವ ಅಪೆರ್ಚರ್‌ನಂತೆ ಬೆಳಕು ನಿಯಂತ್ರಿತ ಪ್ರಮಾಣದಲ್ಲಿ ಒಳ ಪ್ರವೇಶಿಸುತ್ತದೆ. ಇದರಿಂದಾಗಿ ಬೆಳಕಿನ ಏಕಾಗ್ರತೆ ಹೆಚ್ಚಾಗಿ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಜೊತೆಗೆ, ಇದೇ ಗುಣದಿಂದಾಗಿ ವಿದ್ಯುತ್ ಸಹ ಹೆಚ್ಚು ಪ್ರಮಾಣದಲ್ಲಿ ಉತ್ಪಾದಿತವಾಗುತ್ತದೆ.

ಈ ಗಾಜುಗಳ ಅಂಚಿನಲ್ಲಿ ವಿದ್ಯುತ್ ಉತ್ತಮವಾಗಿ ಹರಿಯುವ ಸಾಮರ್ಥ್ಯ ಹೊಂದಿದೆ. ಆದ್ದರಿಂದ, ಕಿಟಕಿಗಳಿಗೆ ಈ ಗಾಜುಗಳನ್ನು ಅಳವಡಿಸಿದಾಗ ಕಿಟಕಿಯ ಚೌಕಟ್ಟಿನಲ್ಲಿ ವಿದ್ಯುತ್ ತಂತಿಗಳನ್ನು ಅಳವಡಿಸಲಾಗುತ್ತದೆ. ಈ ತಂತಿಗಳ ಮೂಲಕ ವಿದ್ಯುತ್ ಹರಿದು ಬ್ಯಾಟರಿಯಲ್ಲಿ ವಿದ್ಯುತ್ ಸಂಗ್ರಹವಾಗುತ್ತದೆ.

ಕಡಿಮೆ ವೆಚ್ಚದಲ್ಲಿ ಅಧಿಕ ಲಾಭ ನೀಡುವ ವಿದ್ಯುತ್ ಉತ್ಪಾದಿಸುವ ಮಾರ್ಗ ಇದಾಗಿದೆ ಎಂದು ವಿಜ್ಞಾನಿಗಳು ಈ ತಂತ್ರಜ್ಞಾನವನ್ನು ವ್ಯಾಖ್ಯಾನಿಸುತ್ತಿದ್ದಾರೆ. ಮನೆಯಲ್ಲಿ ನಿರ್ಮಾಣವಾಗುವ ಕಿಟಕಿಗಳಲ್ಲಿ ಬಳಕೆಯಾಗುವ ಗಾಜುಗಳಲ್ಲಿ ಈ ತಂತ್ರಜ್ಞಾನದ ಅಳವಡಿಕೆ ಆದರೆ ಸಾಕಷ್ಟೇ. ಪ್ರತ್ಯೇಕವಾದ ಸೌರಫಲಕ, ಅದಕ್ಕೊಂದು ಜಾಗ ಇತ್ಯಾದಿಗಳ ಸೌಲಭ್ಯಗಳ ಅಗತ್ಯ ಇಲ್ಲದೇ ಇರುವ ಕಾರಣ, ಇದು ಸರಳ ವಿದ್ಯುತ್ ಮೂಲವಾಗುವ ಸಾಧ್ಯತೆ ಹೆಚ್ಚಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ಜೀವ ಕ್ರಿಯೆಗಳು

7) ದ್ಯುತಿ ಸಂಶ್ಲೇಷಣೆಗೆ ಅಗತ್ಯವಾದ ಅಂಶಗಳು ಯಾವುವು? ಈ ಪ್ರಕ್ರಿಯೆಯಲ್ಲಿ ಜರುಗುವ ಘಟನೆಗಳನ್ನು ತಿಳಿಸಿ. ಈ ಪ್ರಕ್ರಿಯೆಯನ್ನು ಸರಿದೂಗಿಸುವ ರಾಸಾಯನಿಕ ಸಮೀಕರಣದ ಮೂಲಕ ವ್ಯಕ್ತಪಡಿಸಿ (ಜೂನ್ 2022)

ಉತ್ತರ:– ದ್ಯುತಿ ಸಂಶ್ಲೇಷಣೆಗೆ ಅಗತ್ಯವಾದ ಅಂಶಗಳು:– ಕಾರ್ಬನ್ ಡೈ ಆಕ್ಸೈಡ್, ನೀರು, ಖನಿಜಗಳು, ಸೂರ್ಯನ ಬೆಳಕು, ಮತ್ತು ಪತ್ರಹರಿತ್ತು

ದ್ಯುತಿ ಸಂಶ್ಲೇಷಣೆ ಪ್ರಕ್ರಿಯೆಯಲ್ಲಿ ಜರುಗುವ ಘಟನೆಗಳು

(*) ಕ್ಲೋರೋಫಿಲ್‌ನಿಂದ ಬೆಳಕಿನ ಶಕ್ತಿಯನ್ನು ಹೀರಿಕೊಳ್ಳುವುದು
(*) ಬೆಳಕಿನ ಶಕ್ತಿಯು ರಾಸಾಯನಿಕ ಶಕ್ತಿಯಾಗಿ ಪರಿವರ್ತನೆ ಆಗುವುದು
(*) ನೀರಿನ ಅಣುಗಳ ಹೈಡ್ರೋಜನ್ ಮತ್ತು ಆಕ್ಸಿಜನ್ ಅಣುಗಳಾಗಿ ವಿಭಜಿಸಲ್ಪಡುವುದು
(*) ಕಾರ್ಬನ್ ಡೈ ಆಕ್ಸೈಡ್ ಕಾರ್ಬೋಹೈಡ್ರೇಟ್ ಆಕರ್ಷಿಸಲ್ಪಡುವುದು.

ರಾಸಾಯನಿಕ ಸಮೀಕರಣ

$$6CO_2 + 12H_2O \xrightarrow[\text{ಸೌರಬೆಳಕು}]{\text{ಕ್ಲೋರೋಫಿಲ್}} \underset{\text{(ಗ್ಲುಕೋಸ್)}}{C_6H_{12}O_6} + 6O_2 + 6H_2O$$

****

ನಿಯಂತ್ರಣ ಮತ್ತು ಸಹಭಾಗಿತ್ವ

ಬಹುಆಯ್ಕೆ ಪ್ರಶ್ನೆಗಳು

1.. ಈ ಕೆಳಗಿನವುಗಳಲ್ಲಿ ಯಾವುದು ಸಸ್ಯ ಹಾರ್ಮೋನ್?
(ಎ) ಇನ್ಸುಲಿನ್ (ಬಿ) ಥೈರಾಕ್ಸಿನ್
(ಸಿ) ಈಸ್ಟ್ರೋಜನ್ (ಡಿ) ಸೈಟೋಕೈನಿನ್
ಉತ್ತರ:– ಡಿ

2. ಎರಡು ನರಕೋಶಗಳ ನಡುವಿನ ಅಂತರವನ್ನು ಹೀಗೆಂದು ಕರೆಯುತ್ತಾರೆ.
(ಎ) ಡೆಂಡ್ರೈಟ್ (ಬಿ) ಸಂಸರ್ಗ
(ಸಿ) ಆಕ್ಸಾನ್ (ಡಿ) ಇಂಪಲ್ಸ್
ಉತ್ತರ:– ಬಿ

3. ಮಿದುಳಿನ ಪ್ರಮುಖ ಕಾರ್ಯವೆಂದರೆ,
(ಎ) ಆಲೋಚನೆ (ಸಿ) ದೇಹದ ಸಮತೋಲನ
(ಬಿ) ಹೃದಯದ ಬಡಿತವನ್ನು ನಿಯಂತ್ರಿಸುವಿಕೆ
(ಡಿ) ಮೇಲಿನ ಎಲ್ಲವೂ.
ಉತ್ತರ:–ಡಿ

4. ಮಿದುಳು ಮತ್ತು ಮಿದುಳುಬಳ್ಳಿ ಒಟ್ಟಾಗಿ ಈ ಕೆಳಗಿನ ಯಾವುದನ್ನು ರೂಪಿಸುತ್ತವೆ?
(ಎ) ಕೇಂದ್ರ ನರವ್ಯೂಹ ವ್ಯವಸ್ಥೆ (central nervous system)
(ಬಿ) ವಿಸರ್ಜನಾಂಗ ವ್ಯೂಹ
(ಸಿ) ಹೃದಯ
(ಡಿ) ಮೇಲಿನಯಾವುದೂ ಅಲ್ಲ
ಉತ್ತರ:– ಎ

1) ಬಿಟ್ಟ ಸ್ಥಳ ತುಂಬಿ

ಅ) ನರ ಅಂಗಾಂಶದ ರಚನಾತ್ಮಕ ಮತ್ತು ಕಾರ್ಯನಿರ್ವಾಹಕ ಘಟಕವನ್ನು ....ಎನ್ನುವರು
ಉತ್ತರ:– ನ್ಯೂರಾನ್

ಆ) ನ್ಯೂರಾನ್‌ನಲ್ಲಿ ಕೋಶ ಕೇಂದ್ರವನ್ನು ಹೊಂದಿರುವ ....ಇದೆ.
ಉತ್ತರ:– ಕೋಶಕಾಯ ಅಥವಾ ಸೈಟಾನ್

ಇ) ನರಕೋಶದಲ್ಲಿ ಕೋಶಕಾಯದಿಂದ ಹೊರಚಾಚಿರುವ ಚಿಕ್ಕ ರಚನೆಗಳಿಗೆ .... ಎನ್ನುವರು
ಉತ್ತರ:– ಡೆಂಡ್ರೈಟ್‌ಗಳು

ಈ) ನರಕೋಶದಲ್ಲಿ ನೀಳವಾದ ಶಾಖೆಗೆ .... ಎನ್ನುವರು
ಉತ್ತರ:– ಆಕ್ಸಾನ್

ಇ) ಅಕ್ಸಾನ್ ತನ್ನ ತುದಿಯಲ್ಲಿ ಹೊಂದಿರುವ ಶಾಖೆಗಳಿಗೆ .... ಎನ್ನುವರು
ಉತ್ತರ:– ಟೀಲೋಡೆಂಡ್ರೈಟ್

ಉ) ಅಕ್ಸಾನ್ ಸುತ್ತ ಇರುವ ಕೊಬ್ಬಿನ ಪದರಕ್ಕೆ .... ಹೊದಿಕೆ ಎನ್ನುವರು
ಉತ್ತರ:– ಮಯೋಲಿನ್

ಕೆಳಗಿನ ಹೇಳಿಕೆಗಳಿಗೆ ಉತ್ತರಿಸಿ

1) ಮಾನವನ ಮಿದುಳಿನ ಯಾವ ಭಾಗಗಳು ಈ ಕೆಳಗಿನ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ?
1) ಅನೈಚ್ಛಿಕ ಚಟುವಟಿಕೆಗಳು 2) ಆಲೋಚನೆ ಪ್ರಕ್ರಿಯೆ
3) ದೇಹದ ಭಂಗಿ ಮತ್ತು ಸಮತೋಲನ
ಉತ್ತರ:– 1) ಮೆಡುಲ್ಲಾ 2) ಮಹಾಮಸ್ತಿಷ್ಕ
3) ಅನುಮಸ್ತಿಷ್ಕ (2024 ಮಾರ್ಚ್ ಪ್ರಶ್ನೆಪತ್ರಿಕೆ)

2) ನರವ್ಯೂಹದ ಬಗ್ಗೆ ಬರೆಯಿರಿ

ಉತ್ತರ:– ನರಕೋಶ (neuron)ವೊಂದರ ಡೆಂಡ್ರೈಟ್ (dendrite)ಗಳ ತುದಿಯಲ್ಲಿ ಸಂಗ್ರಹಿತವಾದ ಮಾಹಿತಿಯು ಒಂದು ರಾಸಾಯನಿಕ ಕ್ರಿಯೆಯನ್ನು ಉಂಟುಮಾಡುತ್ತದೆ. ಇದು ಒಂದು ವಿದ್ಯುತ್ ಆವೇಗವನ್ನು ಸೃಷ್ಟಿಸುತ್ತದೆ. ಈ ಆವೇಗವು ಡೆಂಡ್ರೈಟ್‌ಗಳಿಂದ ಕೋಶಕಾಯಕ್ಕೆ ನಂತರ ಆಕ್ಸಾನ್‌ನ ಉದ್ದಕ್ಕೂ ಅದರ ತುದಿಯವರೆಗೆ ಚಲಿಸುತ್ತದೆ. ಆಕ್ಸಾನ್‌ನ ತುದಿಯಲ್ಲಿ ವಿದ್ಯುತ್ ಆ ವೇಗವು ಕೆಲವು ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತದೆ. ಈ ರಾಸಾಯನಿಕಗಳು ಸಂಸರ್ಗವನ್ನು (synapse) ದಾಟುತ್ತವೆ ಮತ್ತು ಮುಂದಿನ ನರಕೋಶದ ಡೆಂಡ್ರೈಟ್‌ಗಳಲ್ಲಿ ಇದೇ ರೀತಿಯ ವಿದ್ಯುತ್ ಆವೇಗವನ್ನು ಪ್ರಾರಂಭಿಸುತ್ತವೆ. ಇದು ನರಾವೇಗಗಳು (nervous impulses) ದೇಹದಲ್ಲಿ ಹೇಗೆ ಸಂಚರಿಸುತ್ತವೆ ಎಂಬುದರ ಸಾಮಾನ್ಯ ನಕ್ಷೆಯಾಗಿದೆ. ಇದೇ ರೀತಿಯ ಸಂಸರ್ಗ ಅಂತಿಮವಾಗಿ ನರಕೋಶಗಳಿಂದ ಸ್ನಾಯುಕೋಶಗಳು ಅಥವಾ ಗ್ರಂಥಿಗಳಂತಹ ಇತರ ಜೀವಕೋಶಗಳಿಗೆ ಇಂತಹ ನರಾವೇಗಗಳನ್ನು ವಿತರಿಸಲು ಅನುವು ಮಾಡಿಕೊಡುತ್ತದೆ. ನರ ಕೋಶದ ರಚನೆ, ನರಸ್ನಾಯುಕ ಸಂಗಮ ಬಿಂದು (Neuromuscular Junction)



(ಮುಂದುವರಿಯುವುದು)

CHEMISTRY

The d- and f-Block Elements

44. The $E^\circ\left(\frac{M^{2+}}{M}\right)$ value for copper is positive (+0.34 V). What is the possible reason for this?

Ans: Copper has high energy of atomization and low hydration energy. The ionization energy needed is not compensated by hydration energy. Hence E° value for copper is +ve.

45. Scandium has less $E^\circ\left(\frac{M^{3+}}{M^{2+}}\right)$ value why?

Ans: This is due to extra stability of Sc^{3+} which has noble gas configuration $[Ar]^{18}3d^0$.

46. Zinc has very high $E^\circ\left(\frac{M^{3+}}{M^{2+}}\right)$ value why?

Ans: The highest $E^\circ\left(\frac{Zn^{3+}}{Zn^{2+}}\right)$ value for Zn is due to the removal of an electron from stable d^{10} configuration of Zn^{2+}.

47. Vanadium has relatively low $E^\circ\left(\frac{M^{3+}}{M^{2+}}\right)$ value. Give reason.

Ans: This is due to extra stability of V^{2+} due to half filled t_{2g}^3 orbital.

48. $E^\circ\left(\frac{M^{3+}}{M^{2+}}\right)$ value of Mn^{2+} is comparatively high. Why?

Ans: Due to d^5 configuration of Mn^{2+}, it is very stable.

49. $E^\circ\left(Fe^{3+}/Fe^{2+}\right)$ value of Fe^{2+} is low. Why?

Ans:This is due to extra stability of $Fe^{3+}\left(d^5\right)$.
i.e., low third ionization enthalpy.

50. How do you explain the relative stability of ions by using standard electrode potential values?

Ans:- Standard electrode potential values, particularly standard reduction potentials (E°), directly indicate the relative tendency for a species to be reduced or oxidized. A higher, more positive E° signifies a greater tendency to be reduced (act as an oxidizing agent) and a greater stability of the reduced form, while a lower, more negative E° indicates a greater tendency to be oxidized (act as a reducing agent) and a more stable oxidized form.

The relative stabilities of cations can be explained on the basic of their standard electrode potential values. For example

$$Cu^{+} + e \longrightarrow Cu \quad E^\circ_{red} = 0.52\ V$$
$$Cu^{2+} + 2e \longrightarrow Cu \quad E^\circ_{red} = 0.34\ V$$

The stability of ion is inversely proportional to E° value. Higher the E° value lesser is the stability. Here $E^\circ_{Cu^{2+}/Cu}$ is less than $E^\circ_{Cu^{+}/Cu}$. Hence Cu^{2+} is more stable than Cu^{+} ion.

51. How would you account for the increasing oxidizing power in the series $VO^{2+} < Cr_2O_7^{2-} < MnO_4^-$.

Ans: **The increasing oxidizing power in the series**

$VO^{2+} < Cr_2O_7^{2-} < MnO_4^-$ is due to the increasing stability of the reduced lower oxidation states and the increasing +ve oxidation state of the central metal atom, which makes it more eager to gain electrons.

52. Which is a strong reducing agent Cr^{2+} or Fe^{2+} and why?

Ans: Cr^{2+} is good reducing agent because of its less standard reduction potential value than Fe^{2+}

53. Many copper (1) compounds are unstable in aqueous solution and the undergo disproportionation. Explain.

Ans: The stability of Cu^{2+} ion is more than Cu^{+} ion. This is due to more negative enthalpy of hydration of Cu^{2+} ion than Cu^{+} ion which more than the second ionization enthalpy of Cu.

54. Explain the magnetic properties or paramagnetic property of transition elements.

Ans: Most of the transition metals and their compounds are paramagnetic (slightly attracted by the magnet).

The paramagnetism is due to the number of unpaired electrons in the d-orbitals.

The main causes of paramagnetism are orbital angular momentum and spin momentum of electron. The magnetic moment is calculated by using spin – only formula i.e., $\mu = \sqrt{n(n+2)}\ BM$,

where μ - Magnetic moment, B.M. – Boohr magneton, the unit of magnetic moment, n = number of unpaired electrons.

The magnetic moment increases as the number of unpaired electrons increases.

55. What are diamagnetic substances?

Ans: The substances, which are repelled or not attracted by an applied magnetic field due to the absence of unpaired electrons are called diamagnetic substances. Example: Zn, Zn^{2+}, Sc^{3+}, Ti^{4+}, Cu^{2+} etc are diamagnetic due to the absence of unpaired electrons.

ಚಿಟಿಕೆ ಸುದ್ದಿ

₹85 ಲಕ್ಷ ಮುಟ್ಟುಗೋಲು

ಬೆಂಗಳೂರು: ವೈದ್ಯಕೀಯ ಪದವಿ ವಿದ್ಯಾರ್ಥಿಗಳ ₹33.34 ಕೋಟಿ ಮೊತ್ತದಷ್ಟು ಸ್ಟೈಫಂಡ್ ಕಬಳಿಸಿದ್ದ ಪ್ರಕರಣದಲ್ಲಿ ಹೈದರಾಬಾದ್ ಎಜುಕೇಶನ್ ಸೊಸೈಟಿಯ ಸೂಪರಿಂಟೆಂಡೆಂಟ್ ಮಲ್ಲಣ್ಣ ಎಸ್. ಮದ್ದಾರ್ಕಿ ಅವರಿಗೆ ಸೇರಿದ ₹85 ಲಕ್ಷ ಮೌಲ್ಯದ ಆಸ್ತಿಯನ್ನು ಇ.ಡಿ ಮುಟ್ಟುಗೋಲು ಹಾಕಿಕೊಂಡಿದೆ.

ಹೈದರಾಬಾದ್ ಎಜುಕೇಶನ್ ಸೊಸೈಟಿಯ ಎಂ. ಆರ್ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳ ಸ್ಟೈಫಂಡ್ ಅನ್ನು ಸೊಸೈಟಿಯ ಅಧ್ಯಕ್ಷ ಭೀಮಾಶಂಕರ್ ಬಿಳಗುಂಡಿ, ಮಲ್ಲಣ್ಣ ಮತ್ತು ಕೆನರಾ ಬ್ಯಾಂಕ್‌ನ ನೌಕರ ಎಸ್. ಎಂ. ಪಾಟೀಲ ಸೇರಿ ಕಬಳಿಸಿದ್ದರು ಎಂದು ಇ.ಡಿ ಹೇಳಿದೆ.

ಆರೋಪಿಗಳು, ಕೋರ್ಸ್‌ಗೆ ದಾಖಲಾತಿ ಸಂದರ್ಭದಲ್ಲೇ ವಿದ್ಯಾರ್ಥಿಗಳಿಂದ ಖಾಲಿ ಚೆಕ್‌ಗಳಿಗೆ ಸಹಿ ಮಾಡಿಸಿಕೊಂಡಿದ್ದರು. ನಂತರ ವಿದ್ಯಾರ್ಥಿಗಳಿಗೆ ಬಂದ ಸ್ಟೈಫಂಡ್ ಅನ್ನು ತಾವೇ ಡ್ರಾ ಮಾಡಿಕೊಂಡಿದ್ದರು. 2018ರಿಂದ 2024ರ ಅವಧಿಯಲ್ಲಿ ಒಟ್ಟು ₹34.34 ಕೋಟಿ ಕಬಳಿಸಿದ್ದರು ಎಂದು ವಿವರಿಸಿದೆ.

ಈ ಪ್ರಕರಣದಲ್ಲಿ ಭೀಮಾಶಂಕರ್ ಗೆ ಸೇರಿದ ₹5.87 ಕೋಟಿ ಮೊತ್ತದ ಆಸ್ತಿ ಮುಟ್ಟುಗೋಲು ಹಾಕಿಕೊಂಡಿತ್ತು.

ಲಾಕರ್‌ನಲ್ಲಿ ಚಿನ್ನಲೇಪಿತ ಬೆಳ್ಳಿ ಬಿಸ್ಕತ್

ಶಾಸಕ ವೀರೇಂದ್ರ ವಿರುದ್ಧದ ಬೆಟ್ಟಿಂಗ್ ಪ್ರಕರಣ: ಬೇಸ್ತುಬಿದ್ದ ತನಿಖಾಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ (ಪಪ್ಪಿ) ಅವರ ಬ್ಯಾಂಕ್ ಲಾಕರ್‌ನಲ್ಲಿ ದೊರೆತ ಚಿನ್ನದ ಬಿಸ್ಕತ್‌ಗಳನ್ನು ಪರಿಶೀಲಿಸುತ್ತಿದ್ದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬೇಸ್ತು ಬಿದ್ದಿದ್ದಾರೆ. ಲಾಕರ್‌ನಲ್ಲಿ ಇದ್ದದ್ದೆಲ್ಲವೂ ಚಿನ್ನ ಎಂದು ಲೆಕ್ಕ ಬರೆದುಕೊಂಡಿದ್ದ ತನಿಖಾಧಿಕಾರಿಗಳಿಗೆ, ಅವೆಲ್ಲವೂ ಚಿನ್ನ ಅಲ್ಲ ಎಂಬುದು ಗೊತ್ತಾಗಿದೆ.

ತಮ್ಮ ಬಂಧನದಲ್ಲಿರುವ ವೀರೇಂದ್ರ ಅವರು ವಿಚಾರಣೆ ವೇಳೆ ನೀಡಿದ್ದ ಮಾಹಿತಿಯ ಆಧಾರದಲ್ಲಿ ಚಳ್ಳಕೆರೆಯಲ್ಲಿನ ಹಲವು ಬ್ಯಾಂಕ್‌ಗಳಲ್ಲಿರುವ ಲಾಕರ್‌ಗಳನ್ನು ಇ.ಡಿ ಅಧಿಕಾರಿಗಳು ಇದೇ 6ರಂದು ಶೋಧ ಕಾರ್ಯ ನಡೆಸಿದ್ದರು.

ಈ ವೇಳೆ ಲಾಕರ್ ಒಂದರಲ್ಲಿ 32.41 ಕೆ.ಜಿಯಷ್ಟು ಚಿನ್ನದ ಬಿಸ್ಕತ್‌ಗಳು ಪತ್ತೆಯಾಗಿದ್ದವು ಎಂದು ಇ.ಡಿ ಅಧಿಕಾರಿಗಳು ಹೇಳಿದ್ದರು.

'ತನಿಖಾಧಿಕಾರಿಗಳು ಮೊದಲಿಗೆ ಅಷ್ಟನ್ನೂ ಚಿನ್ನ ಎಂದೇ ಪರಿಗಣಿಸಿದ್ದರು. ಎಲ್ಲ ಬಿಸ್ಕತ್‌ಗಳ ಬಣ್ಣ ಭಿನ್ನವಾಗಿ ಇದ್ದುದ್ದರಿಂದ, ಕೂಲಂಕಶವಾಗಿ ಪರಿಶೀಲಿಸಲಾಯಿತು. ಅವುಗಳಲ್ಲಿ 10.98 ಕೆ.ಜಿ ತೂಕದ 11 ಬಿಸ್ಕತ್‌ಗಳು ಚಿನ್ನದ್ದಲ್ಲ ಎಂಬುದು ಗೊತ್ತಾಯಿತು. ಆ ಹನ್ನೊಂದೂ ಬೆಳ್ಳಿಯ ಬಿಸ್ಕತ್‌ಗಳಿಗೆ 22 ಕ್ಯಾರಟ್‌ನ ಚಿನ್ನದ ಲೇಪನ ಮಾಡಿರುವುದು ಪತ್ತೆಯಾಯಿತು' ಎಂದು ಮೂಲಗಳು ತಿಳಿಸಿವೆ.

ಬೆಳ್ಳಿಯ ಬಿಸ್ಕತ್‌ಗಳಿಗೆ ಚಿನ್ನದ ಲೇಪನ ಏಕೆ ಮಾಡಲಾಗಿತ್ತು, ಅವುಗಳನ್ನು ಖರೀದಿಸಿದ್ದರೆ ಅಥವಾ ಇತರರು ಅವರಿಗೆ ನೀಡಿದ್ದರೆ ಎಂಬುದರ ತನಿಖೆ ನಡೆಯುತ್ತಿದೆ. ಅವು ಬೆಟ್ಟಿಂಗ್‌ನಲ್ಲಿ ಹಣದ ಬದಲಿಗೆ ನೀಡಿರುವ ಸಾಧ್ಯತೆಯೂ ಇದೆ. ಈ ನಿಟ್ಟಿನಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ವಿವರಿಸಿವೆ.

ಇವುಗಳ ಜತೆಗೆ, ವಜ್ರದ ಹರಳುಗಳಿದ್ದ 17 ಚಿನ್ನದ ಉಂಗುರಗಳು ಸೇರಿ 1 ಕೆ.ಜಿ.ಯಷ್ಟು ಚಿನ್ನಾಭರಣಗಳೂ ಪತ್ತೆಯಾಗಿತ್ತು. ಈ ಚಿನ್ನಾಭರಣ ಮತ್ತು ಚಿನ್ನ-ಬೆಳ್ಳಿಯ ಬಿಸ್ಕತ್ ಖರೀದಿಗೆ ಸಂಬಂಧಿಸಿದ ರಸೀದಿಗಳು, ಹಣ ವರ್ಗಾವಣೆಯ ದಾಖಲೆಗಳು ಪತ್ತೆಯಾಗಿಲ್ಲ. ಚಿನ್ನದ ಬಿಸ್ಕತ್‌ಗಳು ಹವಾಲಾ ಮೂಲಕ ಬಂದಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಮಾಹಿತಿ ನೀಡಿವೆ.

ವೀರೇಂದ್ರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ನೋಂದಣಿಯಾಗಿರುವ ಮತ್ತಷ್ಟು ಬ್ಯಾಂಕ್ ಲಾಕರ್‌ಗಳು ಇದ್ದು, ಅವುಗಳ ಪರಿಶೀಲನೆ ನಡೆಯುತ್ತಿದೆ ಎಂದು ತಿಳಿಸಿವೆ.

ಅಂಕಿ ಅಂಶಗಳು

- ₹103 ಕೋಟಿ — ಈವರೆಗೆ ಆಸ್ತಿ ವಶ
- ₹26 ಕೋಟಿ — ಚಿನ್ನದ ಬಿಸ್ಕತ್, ಚಿನ್ನಲೇಪಿತ ಬೆಳ್ಳಿಯ ಬಿಸ್ಕತ್ ಮತ್ತು ಚಿನ್ನಾಭರಣಗಳ ಒಟ್ಟು ಮೌಲ್ಯ
- ₹55 ಕೋಟಿ ಬ್ಯಾಂಕ್ ಠೇವಣಿ
- ₹12 ಕೋಟಿ ನಗದು ಮತ್ತು ವಿದೇಶಿ ನಗದು
- ₹10 ಕೋಟಿ ವಶಕ್ಕೆ ಪಡೆಯಲಾದ ಕಾರುಗಳ ಈಗಿನ ಮಾರುಕಟ್ಟೆ ಮೌಲ್ಯ

ಶಾಸಕ ಕೆ.ಸಿ.ವೀರೇಂದ್ರ ಅವರ ಬ್ಯಾಂಕ್ ಲಾಕರ್‌ನಲ್ಲಿ ಪತ್ತೆಯಾದ ಚಿನ್ನ ಮತ್ತು ಚಿನ್ನ ಲೇಪಿತ ಬೆಳ್ಳಿಯ ಬಿಸ್ಕತ್ತುಗಳು.

ಹಣದ ಜಾಡು ತಪ್ಪಿಸುವ ತಂತ್ರ

- ಆರೋಪಿ ಮತ್ತು ಅವರ ಕುಟುಂಬದವರು ಹೊಂದಿರುವ 262 ಬೇನಾಮಿ ಖಾತೆಗಳಿಂದ ಸಾವಿರಾರು ಏರ್ ಟಿಕೆಟ್ ಖರೀದಿ
- ವಿದೇಶಿ ಪ್ರಯಾಣಕ್ಕಾಗಿ ವೀರೇಂದ್ರ ಮತ್ತು ಕುಟುಂಬದವರ ಹೆಸರಿನಲ್ಲಿ ವಿಮಾನಯಾನ ಟಿಕೆಟ್ ಮತ್ತು ರೆಸಾರ್ಟ್ ಕೊಠಡಿಗಳ ಬುಕ್ಕಿಂಗ್
- ವಿವಿಧ ಕಂಪನಿಗಳ ಮೂಲಕ ಆಪ್ತರ ಹೆಸರಿನಲ್ಲಿ ಐಷರಾಮಿ ಕಾರುಗಳ ಖರೀದಿ
- ಇ.ಡಿ ವಶಕ್ಕೆ ಪಡೆದ 9 ಕಾರುಗಳಲ್ಲಿ 2018ರ ಸ್ಕಾರ್ಪಿಯೋ ಮಾತ್ರ ವೀರೇಂದ್ರ ಹೆಸರಿನಲ್ಲಿದೆ. ಉಳಿದೆಲ್ಲಾ ಕಾರುಗಳು ಅನ್ಯರ ಹೆಸರಿನಲ್ಲಿವೆ
- ವೀರೇಂದ್ರ ಪಾಲುದಾರ ಅನಿಲ್ ಗೌಡ ಹೆಸರಿನಲ್ಲಿ ಮರ್ಸಿಡೆಸ್ ಬೆಂಜ್ ಕಾರು, ಗುಲ್ಶನ್ ಖಟ್ಟರ್ ಒಡೆತನದ ಫೋನ್‌ಪೈಸಾ ಹೆಸರಿನಲ್ಲಿ ರೇಂಜ್ ರೋವರ್ ಆಟೊಬಯೋಗ್ರಫಿ ಖರೀದಿ
- ಖಾಸಗಿ ಕಂಪನಿಗಳು ಖರೀದಿಸಿರುವ ಕಾರುಗಳಿಗೆ ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಸಹ ಪಡೆಯಲಾಗಿದೆ

ಭೂ ಸ್ವಾದೀನ: ಒಂದೇ ಜಮೀನಿಗೆ ಎರಡು ಪರಿಹಾರ–ಹೆಚ್ಚುವರಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡದ ಗಾಮನಗಟ್ಟಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ, ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಎರಡು ಬಾರಿ ಪರಿಹಾರ ನೀಡಿದ ಪ್ರಕರಣದಲ್ಲಿ 17 ಮಂದಿಯ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಮಂಗಳವಾರ ಹೆಚ್ಚುವರಿ ದೂರು ದಾಖಲಿಸಿದೆ.

ಎರಡನೇ ಬಾರಿ ಪರಿಹಾರ ಪಡೆಯುವಲ್ಲಿ ಪ್ಯಾನ್, ಆಧಾರ್ ವಿವರಗಳನ್ನು ಒದಗಿಸಿದ್ದ ವ್ಯಕ್ತಿಗಳನ್ನು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಜತೆಗೆ ಪರಿಹಾರದ ಹಣವು ಯಾರಿಗೆಲ್ಲ ವರ್ಗಾವಣೆ ಆಗಿದೆಯೋ ಅವರ ವಿರುದ್ಧವೂ ದೂರು ದಾಖಲಿಸಿದೆ. ಕೆಲವೇ ವ್ಯಕ್ತಿಗಳ ಮಧ್ಯೆ ಈ ಹಣದ ವಹಿವಾಟು ನಡೆದಿದ್ದು, ಎಲ್ಲರೂ ಸಂಚು ರೂಪಿಸಿ ಅಕ್ರಮ ಎಸಗಿದ್ದಾರೆ ಎಂಬ ವಿವರ ದೂರಿನಲ್ಲಿದೆ ಎಂದು ಮೂಲಗಳು ಮಾಹಿತಿ ತಿಳಿಸಿವೆ.

2010–12ರ ಅವಧಿಯಲ್ಲಿ ಮಂಡಳಿಯು ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ 2012ರಲ್ಲೇ ಪರಿಹಾರ ಒದಗಿಸಲಾಗಿತ್ತು. ಆದರೆ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ, 2021–22ನೇ ಆರ್ಥಿಕ ವರ್ಷದಲ್ಲಿ ಹಲವು ಜಮೀನುಗಳಿಗೆ ಎರಡನೇ ಬಾರಿಗೆ ಒಟ್ಟು ₹19.99 ಕೋಟಿ ಪರಿಹಾರ ನೀಡಲಾಗಿತ್ತು.

ಈ ಪ್ರಕರಣದಲ್ಲಿ ತನಿಖೆ ಆರಂಭಿಸಿದ್ದ ಇ.ಡಿಯು, ಇದೇ ರೀತಿ ಒಟ್ಟು 31 ಜಮೀನುಗಳಿಗೆ ಎರಡು ಬಾರಿ ಪರಿಹಾರವಾಗಿ ಒಟ್ಟು ₹72 ಕೋಟಿ ಪಾವತಿ ಮಾಡಲಾಗಿದೆ ಎಂಬುದನ್ನು ಪತ್ತೆ ಮಾಡಿತ್ತು. ಅಕ್ರಮ ನಡೆದ ಅವಧಿಯಲ್ಲಿ ಕೆಐಎಡಿಬಿ ಧಾರವಾಡ ವಿಶೇಷ ಭೂಸ್ವಾಧೀನಾಧಿಕಾರಿ ಆಗಿದ್ದ, ನಿವೃತ್ತ ಅಧಿಕಾರಿ ವಸಂತಕುಮಾರ್ ದುರ್ಗಪ್ಪ ಸಜ್ಜನ್ ಮತ್ತು ಭೂ ದಲ್ಲಾಳಿ ಮೈಬೂಬ್ ಅಲ್ಲಾಬಕ್ಷ್ ದುಂಡಾಸಿ ಅವರನ್ನು ಬಂಧಿಸಿತ್ತು.

ಈ ಇಬ್ಬರೂ ಸೇರಿ ಒಟ್ಟು 22 ಮಂದಿಯ ವಿರುದ್ಧ ಈ ಹಿಂದೆಯೇ ಪ್ರಾಸಿಕ್ಯೂಷನ್ ದೂರು ದಾಖಲಿಸಿತ್ತು. 'ಈ ಎಲ್ಲ ಅಕ್ರಮಗಳು ವಸಂತಕುಮಾರ್ ದುರ್ಗಪ್ಪ ಸಜ್ಜನ್ ಅಣತಿಯಂತೆಯೇ ನಡೆದಿದೆ. ಪರಿಹಾರ ಪಡೆದ ನೀಡಿದ ಪ್ರಕರಣಗಳಲ್ಲಿ ಅಕ್ರಮವಾಗಿ ತೆರಿಗೆ ಆದಾಯ ಹಿಂಪಾವತಿ ಪಡೆದಿರುವುದು ಪತ್ತೆಯಾಗಿದೆ' ಎಂದು ನ್ಯಾಯಾಲಯಕ್ಕೆ ತಿಳಿಸಿತ್ತು. ಈಗ ಮೂಲ ಪ್ರಾಸಿಕ್ಯೂಷನ್ ದೂರಿಗೆ ಪೂರಕವಾಗಿ, ಮಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಹೆಚ್ಚುವರಿ ದೂರು ನೀಡಿದೆ.

ಮುಖ್ಯಮಂತ್ರಿ ಮುಂದೆ 'ಕೈ ' ಪರಿಷತ್ ಸದಸ್ಯರ ಅಹವಾಲು

'ಅನುದಾನ, ಮೂವರಿಗೆ ಸಚಿವ ಸ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನಿಷ್ಠ ಮೂರು ಸಚಿವ ಸ್ಥಾನ, ವಿಶೇಷ ಅನುದಾನ ನೀಡಬೇಕು ಹಾಗೂ ನಮ್ಮ ಅಹವಾಲುಗಳಿಗೆ ಸಚಿವರು ಸ್ಪಂದಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಸ್ವಪಕ್ಷೀಯ ವಿಧಾನ ಪರಿಷತ್ ಸದಸ್ಯರು ಅಲವತ್ತುಕೊಂಡಿದ್ದಾರೆ.

ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯರ ಜೊತೆ ಮುಖ್ಯಮಂತ್ರಿ ಬುಧವಾರ ಸಭೆ ನಡೆಸಿದರು. ಈ ವೇಳೆ, ಸದಸ್ಯರು ತಮ್ಮ ಬೇಡಿಕೆಗಳನ್ನು ಅವರ ಮುಂದಿಟ್ಟಿದ್ದಾರೆ. ಶಾಸಕರಿಗೆ ₹ 50 ಕೋಟಿ ವಿಶೇಷ ಅನುದಾನ ನೀಡಿದಂತೆ ತಮಗೂ ಅಭಿವೃದ್ಧಿ ಕೆಲಸಗಳಿಗೆ ಅನುದಾನ ನೀಡಬೇಕು ಎಂದು ಸದಸ್ಯರು ಮನವಿ ಮಾಡಿದ್ದಾರೆ.

ಸಚಿವರ ನಡೆ ವಿರುದ್ಧ ತೀವ್ರ ಅಸಮಾಧಾನ ಹೊರ ಹಾಕಿರುವ ಕೆಲವು ಸದಸ್ಯರು, 'ಸಚಿವರು ನಮ್ಮ ಪತ್ರಗಳಿಗೆ ಮಾನ್ಯತೆ ನೀಡುವುದಿಲ್ಲ. ಭೇಟಿಗೆ ಅವಕಾಶ ನೀಡದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ದೂರವಾಣಿ ಕರೆಯನ್ನೂ ಸ್ವೀಕರಿಸುವುದಿಲ್ಲ' ಎಂದು ಬೇಸರ ತೋಡಿಕೊಂಡಿದ್ದಾರೆ. ತಮ್ಮ ಅಹವಾಲುಗಳಿಗೆ ಸ್ಪಂದಿಸುವಂತೆ ಸಚಿವರಿಗೆ ಸೂಚನೆ ನೀಡುವುದಾಗಿ ಪರಿಷತ್ ಸದಸ್ಯರಿಗೆ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ಗೊತ್ತಾಗಿದೆ.

'ಪರಿಷತ್‌ನಿಂದ ಸದ್ಯ ಒಬ್ಬರಿಗೆ ಮಾತ್ರ ಸಚಿವ ಸ್ಥಾನ ನೀಡಲಾಗಿದೆ. ಮುಂದಿನ ಸಚಿವ ಸಂಪುಟ ಪುನರ್‌ರಚನೆ ಸಂದರ್ಭದಲ್ಲಿ ಕನಿಷ್ಠ ಮೂವರು ಪರಿಷತ್ ಸದಸ್ಯರಿಗೆ ಸಚಿವ ಸ್ಥಾನ ನೀಡಬೇಕು' ಎಂದೂ ಸದಸ್ಯರು ಮನವಿ ಮಾಡಿದ್ದಾರೆ ಎಂದೂ ತಿಳಿದುಬಂದಿದೆ.

ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ, 'ವಿಧಾನ ಪರಿಷತ್ತಿನ ಪಕ್ಷದ ಸದಸ್ಯರೊಂದಿಗೆ ಸಭೆ ನಡೆಸಿದ್ದೇನೆ. ಶಾಸಕರು ತಮ್ಮ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಬಜೆಟ್‌ನಲ್ಲಿ ₹ 8 ಸಾವಿರ ಕೋಟಿ ಮೀಸಲಿರಿಸಲಾಗಿದೆ. ಶಾಸಕರಿಗೆ ನೀಡಿದಂತೆ ಪರಿಷತ್ ಸದಸ್ಯರೂ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡುವಂತೆ ಬೇಡಿಕೆ ಸಲ್ಲಿಸಿದ್ದಾರೆ. ₹ 8 ಸಾವಿರ ಕೋಟಿಯಲ್ಲಿ ಪರಿಷತ್ ಸದಸ್ಯರಿಗೂ ಅನುದಾನ ನೀಡುವ ಬಗ್ಗೆ ಪರಿಶೀಲಿಸುವುದಾಗಿ ಆಶ್ವಾಸನೆ ನೀಡಿದ್ದೇನೆ' ಎಂದರು.

ಬಿ.ಕೆ. ಹರಿಪ್ರಸಾದ್, ನಸೀರ್ ಅಹ್ಮದ್ ಸೇರಿ ಕಾಂಗ್ರೆಸ್‌ನ 28 ವಿಧಾನ ಪರಿಷತ್ ಸದಸ್ಯರು ಸಭೆಯಲ್ಲಿದ್ದರು.

ಮುಖ್ಯಾಂಶಗಳು

- ವಿಧಾನ ಪರಿಷತ್ ಸದಸ್ಯರೊಟ್ಟಿಗೆ ಮುಖ್ಯಮಂತ್ರಿ ಸಭೆ
- ತಮ್ಮ ಪತ್ರಗಳಿಗೆ ಮಾನ್ಯತೆ ನೀಡದ ಸಚಿವರು: ಪರಿಷತ್ ಸದಸ್ಯರ ಆಕ್ಷೇಪ

ಆಡಳಿತ ಪಕ್ಷದ ವಿಧಾನ ಪರಿಷತ್ ಸದಸ್ಯರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆ ನಡೆಸಿದರು

> ಪರಿಷತ್ ಸದಸ್ಯರು ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟ ಅಹವಾಲುಗಳನ್ನು ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದಾರೆ. ಅವರು ಸಮಸ್ಯೆಗಳನ್ನು ಬಗೆಹರಿಸುವ ಆಶ್ವಾಸನೆ ನೀಡಿದ್ದಾರೆ
> **ಎನ್.ಎಸ್. ಬೋಸರಾಜು,** ವಿಧಾನ ಪರಿಷತ್ ಸಭಾ ನಾಯಕ

> ಅನುದಾನ, ಅಭಿವೃದ್ಧಿ ವಿಚಾರಗಳು, ಗ್ಯಾರಂಟಿ ಯೋಜನೆಗಳ ಪ್ರಗತಿ, ಸೇರಿ ಅನೇಕ ವಿಷಯಗಳ ಕುರಿತು ಚರ್ಚಿಸಲಾಯಿತು. ನಮ್ಮ ಬೇಡಿಕೆಗಳಿಗೆ ಸಿ.ಎಂ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ
> **ಸಲೀಂ ಅಹ್ಮದ್,** ವಿಧಾನ ಪರಿಷತ್‌ನ ಸರ್ಕಾರಿ ಮುಖ್ಯ ಸಚೇತಕ

ಹೊರಟ್ಟಿ- ಖಾದರ್ ಪತ್ರ ಸಮರ

ಬೆಂಗಳೂರು: ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಮತ್ತು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಮಧ್ಯೆ ನಡೆಯುತ್ತಿರುವ ಶೀತಲ ಸಮರ, ಈಗ ಪತ್ರ ಸಮರವಾಗಿ ಮಾರ್ಪಟ್ಟಿದೆ.ವಿಧಾನಮಂಡಲದ ಮಹತ್ವದ ಕಾರ್ಯಕ್ರಮಗಳನ್ನು ಆಯೋಜಿಸುವ ಸಂದರ್ಭದಲ್ಲಿ ತಮ್ಮನ್ನು ಉದ್ದೇಶಪೂರ್ವಕವಾಗಿಯೇ ಕಡೆಗಣಿಸಲಾಗುತ್ತಿದೆ ಎಂದು ಹೊರಟ್ಟಿ ಅವರು ಯು.ಟಿ.ಖಾದರ್ ಅವರಿಗೆ ಪತ್ರವೊಂದನ್ನು ಬರೆದು ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಇದಕ್ಕೆ ಯು.ಟಿ.ಖಾದರ್ ಪತ್ರದ ಮೂಲಕವೇ ಹೊರಟ್ಟಿಯವರ ಎಲ್ಲ ಆರೋಪಗಳಿಗೂ ಉತ್ತರ ನೀಡಿದ್ದಾರೆ.

ಬಸವರಾಜ ಹೊರಟ್ಟಿ ಹೇಳಿದ್ದು

- ವಿಧಾನಮಂಡಲದ ಅಧಿಕೃತ ಕಾರ್ಯಕ್ರಮಗಳ ರೂಪುರೇಷೆ ಸಿದ್ಧಪಡಿಸುವ ವೇಳೆ ವಿಧಾನಪರಿಷತ್ತಿನ ಸಭಾಪತಿಯಾದ ನನ್ನನ್ನು ಸೌಜನ್ಯಕ್ಕಾಗಿಯಾದರೂ ಸಂಪರ್ಕಿಸದೇ ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳಲಾಗುತ್ತಿದೆ.
- ವಿಧಾನಸೌಧದ ಆವರಣದಲ್ಲಿ ಪುಸ್ತಕ ಮೇಳ ಆಯೋಜನೆ, ವಿಧಾನಸೌಧ ಕಟ್ಟಡಕ್ಕೆ ಲೇಸರ್ ದೀಪ ಅಳವಡಿಕೆ ಯೋಜನೆ, 11 ನೇ ಸಿಪಿಎ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಭಾರತ ವಲಯದ ಸಮ್ಮೇಳನ ಆಯೋಜನೆ, ಹೀಗೆ ಹಲವು ಕಾರ್ಯಕ್ರಮಗಳ ರೂಪುರೇಷೆ ಸಿದ್ಧಪಡಿಸುವಾಗ ಸೌಜನ್ಯಕ್ಕಾದರೂ ಸಂಪರ್ಕಿಸಿ ಸಲಹೆ ಸೂಚನೆಗಳನ್ನು ಕೇಳಬಹುದಿತ್ತು. ಆ ಕಾರ್ಯಕ್ರಮಗಳ ಸಂಬಂಧ ಏಕಪಕ್ಷೀಯವಾಗಿ ಪತ್ರಿಕಾಗೋಷ್ಠಿ ನಡೆಸಿದ್ದೀರಿ.
- 'ಬಾರ್ಬಡೊಸ್‌ನಲ್ಲಿ ನಡೆಯುವ ಕಾಮನ್‌ವೆಲ್ತ್ ಕಾನ್ಫರೆನ್ಸ್ ಕಾರ್ಯಕ್ರಮದಲ್ಲಿ ಭಾಗವಹಿಸಲು ಸುಮಾರು 21 ದಿನಗಳ ಅಧಿಕೃತ ಪ್ರವಾಸ ಪಟ್ಟಿಯನ್ನು ನನ್ನ ಸಲಹೆ ಪಡೆಯದೇ ತಾವು ತಯಾರಿಸಿದ್ದು, ಅನ್ಯ ಮೂಲಗಳಿಂದ ತಿಳಿದು ಬಂತು. ಈ ಕಾರ್ಯಕ್ರಮದಲ್ಲಿ ಅಧ್ಯಯನ ಪ್ರವಾಸ ಯಾವ ದೇಶಕ್ಕೆ ಹೋಗಬೇಕು ಎಂದು ನಿರ್ಧರಿಸುವ ಹಕ್ಕು ನನಗೆ ಇಲ್ಲವೆಂದು ಭಾಸವಾಗುತ್ತಿದೆ. ನಿಮಗೆ ಅನುಕೂಲವಾಗುವ ರೀತಿ ಕಾರ್ಯಕ್ರಮವನ್ನು ರೂಪಿಸಿ ಒತ್ತಾಯಪೂರ್ವಕವಾಗಿ ನಾನು ಅದರಲ್ಲಿ ಭಾಗವಹಿಸುವಂತೆ ಮಾಡುವ ಸಂದಿಗ್ಧತೆ ಸೃಷ್ಟಿ ಆಯಿತು.



ಯು.ಟಿ. ಖಾದರ್ ಪ್ರತಿಕ್ರಿಯೆ

- ಪುಸ್ತಕ ಮೇಳದ ರೂಪುರೇಷೆ ತಮ್ಮ ಗಮನಕ್ಕೆ ತರಲಾಗಿತ್ತು. ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿಯವರು ಉದ್ಘಾಟಿಸಿದ್ದು, ನಮ್ಮಿಬ್ಬರ ಜಂಟಿ ಅಧ್ಯಕ್ಷತೆಯಲ್ಲಿ ನಡೆಯಿತು.
- ವಿಧಾನಸೌಧ ಕಟ್ಟಡಕ್ಕೆ ಲೇಸರ್ ದೀಪ ಅಳವಡಿಸುವ ಬಗ್ಗೆ ನಾನು ಕಾಳಜಿ ವ್ಯಕ್ತಪಡಿಸಿದ್ದೆ. ಈ ವಿಚಾರವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದೆ. ಅವರ ಆಸಕ್ತಿಯಿಂದ ಮುಖ್ಯಕಾರ್ಯದರ್ಶಿ ಹಾಗೂ ಲೋಕೋಪಯೋಗಿ ಇಲಾಖೆ ಸಹಯೋಗದೊಂದಿಗೆ ಈ ಕಾರ್ಯ ನೆರವೇರಿದೆ.
- 11 ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ ಭಾರತ ವಲಯ ಸಮ್ಮೇಳನಕ್ಕೆ ಲೋಕಸಭೆಯಿಂದ ಕೋರಿಕೆ ಬಂದಿದ್ದು, ನಾವಿಬ್ಬರೂ ಸೇರಿ ಒಪ್ಪಿಗೆ ನೀಡಿದ್ದೇವೆ. ನಾನೇ ನಿಮ್ಮ ಕೊಠಡಿಗೆ ಬಂದು ಪರಸ್ಪರ ಚರ್ಚಿಸಿದ ನಂತರ ಅಧಿವೇಶನ ನಡೆಸಲು ನಿರ್ಧಾರ ತೆಗೆದುಕೊಂಡೆವು. ಈ ಕುರಿತು ಮಾಧ್ಯಮಗೋಷ್ಠಿ ನಡೆಸಿಲ್ಲ, ಸುದ್ದಿಗಾರರ ಪ್ರಶ್ನೆಗಳಿಗೆ ಮಾಹಿತಿ ನೀಡಿದ್ದೇನೆ ಅಷ್ಟೇ.
- ಬಾರ್ಬಡೋಸ್‌ನಲ್ಲಿ ನಡೆಯುವ 68 ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಕಾನ್ಫರೆನ್ಸ್‌ಗೆ ವಿಧಾನಸಭಾ ಕಾರ್ಯದರ್ಶಿ ಸಲ್ಲಿಸಿದ ಕಡತದಲ್ಲಿ ತಾವು ಪ್ರತಿನಿಧಿಯಾಗಿ ನಾನು ವೀಕ್ಷಕನಾಗಿ ಭಾಗವಹಿಸಲು ನಾವಿಬ್ಬರೂ ಒಪ್ಪಿಗೆ ನೀಡಿದ್ದೇವೆ. ನನ್ನ ಆಪ್ತ ಕಾರ್ಯದರ್ಶಿಗೆ ಪ್ರವಾಸದ ಕಾರ್ಯಕ್ರಮ ಪಟ್ಟಿ ಸಿದ್ಧಪಡಿಸಲು ತಿಳಿಸಿದ್ದೆ. ಈ ವಿಚಾರ ತಮಗೂ ಹಾಗೂ ತಮ್ಮ ಇಲಾಖಾ/ ಆಪ್ತ ಕಾರ್ಯದರ್ಶಿಗೆ ಅವರಿಗೆ ವಿವರಿಸಿರುತ್ತಾರೆ.

ಕೊಯಮತ್ತೂರಿನಿಂದ ನವದೆಹಲಿವರೆಗೆ...

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಚಂದ್ರಾಪುರಂ ಪೊನ್ನುಸ್ವಾಮಿ ರಾಧಾಕೃಷ್ಣನ್ (68) ಅವರು ದೇಶದ 15ನೇ ಉಪರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದಾರೆ. ಈ ಉನ್ನತ ಸ್ಥಾನಕ್ಕೆ ರಾಜ್ಯದಿಂದ ಆಯ್ಕೆಯಾದ ಮೂರನೇ ವ್ಯಕ್ತಿ ಎಂಬ ಹಿರಿಮೆಗೆ ಅವರು ಪಾತ್ರರಾಗಿದ್ದಾರೆ.

ಇವರಿಗೂ ಮುನ್ನ ಸರ್ವಪಲ್ಲಿ ರಾಧಾಕೃಷ್ಣನ್ (1962) ಮತ್ತು ಆರ್. ವೆಂಕಟರಾಮನ್ (1987) ಅವರು ಉಪರಾಷ್ಟ್ರಪತಿಯಾಗಿ ತಮಿಳುನಾಡಿನಿಂದ ಆಯ್ಕೆಯಾಗಿದ್ದರು. ಈ ಇಬ್ಬರೂ ಆನಂತರ ರಾಷ್ಟ್ರಪತಿಗಳಾಗಿ ಆಯ್ಕೆಯಾಗಿದ್ದರು. ಇದೇ ರೀತಿಯ ಅವಕಾಶ ಸಿ.ಪಿ. ರಾಧಾಕೃಷ್ಣನ್ ಅವರಿಗೂ ಲಭಿಸುವುದೇ ಎನ್ನುವುದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಅವಧಿ (2027) ಮುಗಿದ ಬಳಿಕವಷ್ಟೇ ತಿಳಿಯಲಿದೆ.

ರಾಧಾಕೃಷ್ಣನ್ ಅವರು ಮಹಾರಾಷ್ಟ್ರದ ರಾಜ್ಯಪಾಲರಾಗಿ ನೇಮಕ ಆಗುವುದಕ್ಕೂ ಮುನ್ನ ಜಾರ್ಖಂಡ್, ತೆಲಂಗಾಣದ ರಾಜ್ಯಪಾಲರಾಗಿ ಮತ್ತು ಪುದುಚೇರಿಯ ಲೆಫ್ಟಿನೆಂಟ್ ಗೌವರ್ನರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ತಮಿಳುನಾಡಿನ ತಿರುಪ್ಪೂರ್‌ನಲ್ಲಿ 1957ರ ಮೇ 4ರಂದು ಅವರು ಜನಿಸಿದರು. 16ನೇ ವಯಸ್ಸಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸ್ವಯಂ ಸೇವಕರಾದರು. ವ್ಯವಹಾರ ಆಡಳಿತದಲ್ಲಿ ಪದವಿ ಪಡೆದ ಅವರು, 1974ರಲ್ಲಿ ಭಾರತೀಯ ಜನಸಂಘದ ರಾಜ್ಯ ಘಟಕದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದರು.

1996ರಲ್ಲಿ ಅವರು ತಮಿಳುನಾಡಿನ ಬಿಜೆಪಿ ಘಟಕದ ಕಾರ್ಯದರ್ಶಿಯಾಗಿ ನೇಮಕ ಆದರು. 1998ರಲ್ಲಿ ಕೊಯಮತ್ತೂರು ಲೋಕಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ಆಯ್ಕೆಯಾಗಿ ಸಂಸತ್ ಪ್ರವೇಶಿಸಿದರು. 1998ರಲ್ಲಿ ಅವರು ಮರು ಆಯ್ಕೆಯಾದರು.

ಅವರು ತಮಿಳುನಾಡಿನಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಪ್ರಬಲವಾದ ಕೊಂಗು ವೆಲ್ಲಲಾರ್ ಗೌಂಡರ್ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

2004ರಿಂದ 2007ರ ಅವಧಿಯಲ್ಲಿ ಅವರು ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ 93 ದಿನಗಳವರೆಗೆ ನಡೆದ 'ರಥಯಾತ್ರೆ' 19,000 ಕಿ.ಮೀ. ಕ್ರಮಿಸಿ ಜನಮನ್ನಣೆ ಪಡೆಯಿತು. ಭಯೋತ್ಪಾದನೆ ನಿರ್ಮೂಲನೆ, ನದಿಗಳ ಜೋಡಣೆ, ಏಕರೂಪ ನಾಗರಿಕ ಸಂಹಿತೆ ಜಾರಿ, ಅಸ್ಪೃಶ್ಯತೆ ನಿವಾರಣೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಈ ಯಾತ್ರೆಯಲ್ಲಿ ಪ್ರತಿಪಾದಿಸಿದ್ದರು.

ಶಿವಸೇನಾ ಕಿಡಿ: ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಪಿತೃಪಕ್ಷದಲ್ಲಿ (ಅಶುಭ ಸಮಯ ಎಂದು ಪರಿಗಣಿಸಲಾಗುತ್ತದೆ) ನಡೆಸಿದ್ದಕ್ಕಾಗಿ ಶಿವಸೇನಾ (ಯುಬಿಟಿ) ತನ್ನ ಮುಖವಾಣಿ ಸಾಮ್ನಾದ ಸಂಪಾದಕೀಯದಲ್ಲಿ ಬಿಜೆಪಿ ವಿರುದ್ಧ ಕಿಡಿಕಾರಿದೆ.

ರಾಧಾಕೃಷ್ಣನ್ ಅವರು ಆರ್‌ಎಸ್‌ಎಸ್‌ನ ಹಿರಿಯ ಕಾರ್ಯಕರ್ತ ಮತ್ತು ಕಟ್ಟಾ ಹಿಂದುತ್ವವಾದಿ. ಆದರೆ ಅವರ ಆಯ್ಕೆಗೆ ನಿಗದಿಪಡಿಸಿದ ಸಮಯ ಆಶ್ಚರ್ಯ ಉಂಟು ಮಾಡಿದೆ ಎಂದು ಅದು ಟೀಕಿಸಿದೆ.

ಮತದಾನ: ವಿಶೇಷಗಳು

- ಪ್ರಧಾನಿ ನರೇಂದ್ರ ಮೋದಿ ಅವರೇ ಮೊದಲಿಗರಾಗಿ ಮತ ಚಲಾಯಿಸಿದರು. ಆ ನಂತರ ಕೇಂದ್ರ ಸಚಿವರು, ಲೋಕಸಭೆ, ರಾಜ್ಯಸಭೆ ಸದಸ್ಯರು ಮತದಾನ ಮಾಡಿದರು
- ಮಾಜಿ ಪ್ರಧಾನಿ, ರಾಜ್ಯಸಭೆ ಸದಸ್ಯ ಎಚ್.ಡಿ.ದೇವೇಗೌಡ ಅವರು ಗಾಲಿ ಕುರ್ಚಿಯಲ್ಲಿ ಬಂದು ಮತ ಚಲಾಯಿಸಿದರು
- ಜಮ್ಮು ಮತ್ತು ಕಾಶ್ಮೀರ ಕ್ಷೇತ್ರದ ಲೋಕಸಭಾ ಸದಸ್ಯ ಎಂಜಿನಿಯರ್ ರಶೀದ್ ಅವರು ಜೈಲಿನಿಂದ ಅನುಮತಿ ಪಡೆದು ಬಂದು ಮತ ಚಲಾಯಿಸಿದರು. ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ ಅಡಿ ಅವರನ್ನು ಎನ್‌ಐಎ 2019ರಲ್ಲಿ ಬಂಧಿಸಿತ್ತು. ಆಗಿನಿಂದ ಅವರು ತಿಹಾರ್ ಜೈಲಿನಲ್ಲಿದ್ದಾರೆ

ಅಮಾನ್ಯ ಮತಗಳು

ಈ ಬಾರಿಯ ಚುನಾವಣೆಯಲ್ಲಿ ಒಟ್ಟು 15 ಮತಗಳು ಅಮಾನ್ಯಗೊಂಡಿವೆ. 2017 ಮತ್ತು 2022ರ ಚುನಾವಣೆಯಲ್ಲಿ ಕ್ರಮವಾಗಿ 11 ಮತ್ತು 15 ಮತಗಳು ಅಮಾನ್ಯವಾಗಿದ್ದವು. 1997ರಲ್ಲಿ ಅತ್ಯಧಿಕ ಅಂದರೆ 46 ಮತಗಳು ಅಮಾನ್ಯಗೊಂಡಿದ್ದವು.

ರಾಧಾಕೃಷ್ಣನ್ ದೇಶದ 15ನೇ ಉಪರಾಷ್ಟ್ರಪತಿ

ಒಂದನೇ ಪುಟದಿಂದ...

ಅಡ್ಡಮತದಾನದ ಲಾಭ ಬಿಜೆಪಿಗೆ: 'ರಾಧಾಕೃಷ್ಣನ್ ಅವರ ಪರವಾಗಿ ಕೆಲ ಅಡ್ಡಮತದಾನ ನಡೆದಿರುವುದನ್ನು ಫಲಿತಾಂಶ ಸೂಚಿಸುತ್ತದೆ. ವಿರೋಧ ಪಕ್ಷಗಳ ಕನಿಷ್ಠ 15 ಸದಸ್ಯರು ಎನ್‌ಡಿಎ ಅಭ್ಯರ್ಥಿಗೆ ಮತ ಚಲಾಯಿಸಿದ್ದಾರೆ' ಎಂದು ಬಿಜೆಪಿ ನಾಯಕರು ಪ್ರತಿಪಾದಿಸಿದ್ದಾರೆ. ಅದಕ್ಕೂ ಮುನ್ನ ಮಾತನಾಡಿದ್ದ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ವಿರೋಧ ಪಕ್ಷಗಳು ಒಗ್ಗಟ್ಟಿನಿಂದ ಇವೆ. ಎಲ್ಲ 315 ಸಂಸದರು ಮತ ಚಲಾಯಿಸಿದ್ದಾರೆ' ಎಂದು ಹೇಳಿದ್ದರು.

ಪರಶುರಾಮ ಪ್ರತಿಮೆ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಉಮಿಕಲ್ ಬೆಟ್ಟದ ಮೇಲೆ ಪರಶುರಾಮನ ಪ್ರತಿಮೆಯನ್ನು ಮರು ಸ್ಥಾಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಉಡುಪಿ ತಾಲ್ಲೂಕಿನ ವರಂಗ ಗ್ರಾಮದ ಉದಯ ಶೆಟ್ಟಿ ಮುನಿಯಾಲು ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಸೇರಿದಂತೆ ಇತರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 10ಕ್ಕೆ ಮುಂದೂಡಿತು.

ಈ ಹಿಂದಿನ ವಿಚಾರಣೆ ವೇಳೆ ನ್ಯಾಯಪೀಠ ಅರ್ಜಿದಾರರಿಗೆ ₹5 ಲಕ್ಷ ಠೇವಣಿ ಇರಿಸುವಂತೆ ಆದೇಶಿಸಲಾಗಿತ್ತು. ಈ ಆದೇಶವನ್ನು ಪಾಲಿಸಿರುವುದಾಗಿ ಅರ್ಜಿದಾರರ ವಕೀಲರು ವಿಚಾರಣೆ ವೇಳೆ ನ್ಯಾಯಪೀಠಕ್ಕೆ ತಿಳಿಸಿದರು.

ಮನವಿಯೇನು?: 'ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಲಾದ 33 ಅಡಿ ಎತ್ತರದ ಪರಶುರಾಮ ಪ್ರತಿಮೆಯನ್ನು 2023ರ ಜನವರಿ 27ರಂದು ಉದ್ಘಾಟನೆ ಮಾಡಲಾಗಿತ್ತು. ಆದರೆ, ಕಂಚಿನ ಪ್ರತಿಮೆ ಬದಲಿಗೆ ಹಿತ್ತಾಳೆ ಪ್ರತಿಮೆ ಅನಾವರಣ ಮಾಡಿ ಅಕ್ರಮ ಎಸಗಲಾಗಿದೆ ಎಂಬ ಆರೋಪ ಎದುರಾಗಿತ್ತು. ಸಾರ್ವಜನಿಕ ಸುರಕ್ಷತೆ ದೃಷ್ಟಿಯಿಂದ ಪ್ರತಿಮೆ ತೆರವುಗೊಳಿಸಲಾಗಿತ್ತು. ಹಾಗಾಗಿ, ಕರಾವಳಿ ಕರ್ನಾಟಕದ ಹಿಂದೂಗಳ ಧಾರ್ಮಿಕ ಭಾವನೆಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವ ಉದ್ದೇಶದಿಂದ ಈ ಪ್ರತಿಮೆಯನ್ನು ಪುನರ್ ನಿರ್ಮಿಸಿ ಮರು ಪ್ರತಿಷ್ಠಾಪನೆ ಮಾಡಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಆರೋಪಿಗಳಿಗೆ ಉದಾರತೆ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳು ಅಕ್ಷಮ್ಯ. ಅದರಲ್ಲೂ ಸಮಾಜದ ದುರ್ಬಲ ವರ್ಗದ ಮಹಿಳೆಯರು ಮತ್ತು ಮಕ್ಕಳ ನಡೆಯುವ ಶೋಷಣೆಗಳನ್ನು ತಡೆಗಟ್ಟಲು ಇದ ಸಕಾಲ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಅಭಿಪ್ರಾಯಪಟ್ಟಿದೆ.

ಪರಿಶಿಷ್ಟ ಜಾತಿಗೆ ಸೇರಿದ ಶಾಲಾ ಬಾಲಕಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ 37 ವರ್ಷದ ಆರೋಪಿಯ ಜಾಮೀನು ಅರ್ಜಿ ತಿರಸ್ಕರಿಸಿರುವ ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಈ ರೀತಿಯ ಕೃತ್ಯಗಳಲ್ಲಿ ಭಾಗಿಯಾಗುವವರಿಗೆ ಕಠಿಣ ಸಂದೇಶ ರವಾನೆಯಾಗಬೇಕಾಗಿದೆ' ಎಂದು ಹೇಳಿದೆ.

'ಪರಿಶಿಷ್ಟ ಜಾತಿಗೆ ಸೇರಿದ ಸಂತ್ರಸ್ತರು ಪ್ರಬಲ ವ್ಯಕ್ತಿಗಳಿಂದ ಸುಲಭವಾಗಿ ಶೋಷಣೆಗೊಳಗಾಗುತ್ತಾರೆ. ಹೀಗಾಗಿ, ಇಂತಹ ವಿಷಯಗಳಲ್ಲಿ ಸಾರ್ವಜನಿಕ ಜಾಗೃತಿ ಅವಶ್ಯವಿದೆ. ಮಹಿಳೆಯರು ಮತ್ತು ಮಕ್ಕಳ ಮನಸ್ಸಿನಲ್ಲಿ ಆತ್ಮವಿಶ್ವಾಸ ಮೂಡುವಂತೆ ಮಾಡಬೇಕಾಗಿದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಶಾಸಕ ವಿನಯ ಕುಲಕರ್ಣಿಗೆ ಎರಡು ದಿನ ತಾತ್ಕಾಲಿಕ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ ಆರೋಪಿಯಾದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಎರಡು ದಿನಗಳ ತಾತ್ಕಾಲಿಕ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ವಿನಯ ಕುಲಕರ್ಣಿ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮಂಗಳವಾರ ಭಾಗಶಃ ಪುರಸ್ಕರಿಸಿ ಆದೇಶಿಸಿದ್ದಾರೆ.

ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ವಾದ ಮಂಡಿಸಿದ್ದ ಪದಾಂಕಿತ ಹಿರಿಯ ವಕೀಲ ಸಿ.ವಿ. ನಾಗೇಶ್, 'ವಿನಯ ಕುಲಕರ್ಣಿ ಅವರ ಪುತ್ರನಿಗೆ ರಸ್ತೆ ಅಪಘಾತದಲ್ಲಿ ಪೆಟ್ಟಾಗಿದ್ದ ಕಾರಣ ಕಾಲಿನ ಮೂಳೆಯ ಶಸ್ತ್ರಚಿಕಿತ್ಸೆ ಗುರುವಾರ (ಸೆ.09) ನಡೆಯಲಿದೆ.

ಈ ಸಂದರ್ಭದಲ್ಲಿ ಅರ್ಜಿದಾರರು ಹಾಜರಿರಲು 10 ದಿನಗಳ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದ್ದರು.

ಇದನ್ನು ಮಾನ್ಯ ಮಾಡಿರುವ ನ್ಯಾಯಾಧೀಶರು, 'ಅರ್ಜಿದಾರರು ಇಬ್ಬರ ಭದ್ರತೆ ನೀಡಬೇಕು. ಬೆಂಗಳೂರು ನಗರವನ್ನು ಬಿಟ್ಟು ಹೊರಗೆ ಹೋಗುವಂತಿಲ್ಲ. ಸಾಕ್ಷಿಗಳಿಗೆ ಬೆದರಿಕೆ ಹಾಕುವಂತಿಲ್ಲ. ಯಾವುದೇ ಕಡತಗಳಿಗೆ ಸಹಿ ಹಾಕುವಂತಿಲ್ಲ. ಯಾವುದೇ ರ‍್ಯಾಲಿ ಸಭೆ–ಸಮಾರಂಭ ನಡೆಸುವಂತಿಲ್ಲ. ಇದೇ 11ರ ಸಂಜೆ 5:00 ಗಂಟೆ ಒಳಗೆ ತಪ್ಪದೇ ನ್ಯಾಯಾಲಯಕ್ಕೆ ಶರಣಾಗತಕ್ಕದ್ದು' ಎಂಬ ಷರತ್ತುಗಳನ್ನು ವಿಧಿಸಿ ಎರಡು ದಿನಗಳ ಜಾಮೀನು ಮಂಜೂರು ಮಾಡಿದ್ದಾರೆ.

ಪ್ರಕರಣವೇನು?: ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೀಶ್‌ಗೌಡ ಗೌಡರ್ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಪ್ರಕರಣದ ಪ್ರಮುಖ ಆರೋಪಿ ವಿನಯ ಕುಲಕರ್ಣಿ ಅವರು 2025ರ ಜೂನ್ 13ರಿಂದ ನ್ಯಾಯಾಂಗ ಬಂಧನದಲ್ಲಿದ್ದು ಪ್ರಕರಣದ ವಿಚಾರಣೆ ಎದುರಿಸುತ್ತಿದ್ದಾರೆ. ನ್ಯಾಯಾಲಯ ನಿತ್ಯವೂ ವಿಚಾರಣೆ ನಡೆಸುತ್ತಿದೆ.

ವಿನಯ ಕುಲಕರ್ಣಿ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಅವರು ವಕಾಲತ್ತು ವಹಿಸಿದ್ದಾರೆ.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕವಿತಾ ಎಸ್.ಮನ್ನಿಕೇರಿ ಅವರನ್ನು ವಿಜಯನಗರ ಜಿಲ್ಲಾಧಿಕಾರಿಯಾಗಿ, ಕೆ.ನಾಗೇಂದ್ರ ಪ್ರಸಾದ್ ಅವರನ್ನು ಬಳ್ಳಾರಿ ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ.

ದಲ್ಜೀತ್ ಕುಮಾರ್ ಅವರನ್ನು ಬೆಂಗಳೂರು ಕೇಂದ್ರ ನಗರಪಾಲಿಕೆ ಹೆಚ್ಚುವರಿ ಆಯುಕ್ತ (ಅಭಿವೃದ್ಧಿ) ಹುದ್ದೆಗೆ, ಹುದ್ದೆ ನಿರೀಕ್ಷಣೆಯಲ್ಲಿದ್ದ ಎಸ್.ನವೀನ್ ಕುಮಾರ್ ರಾಜು ಅವರನ್ನು ಬೆಂಗಳೂರು ದಕ್ಷಿಣ ನಗರಪಾಲಿಕೆ ಹೆಚ್ಚುವರಿ ಆಯುಕ್ತ (ಅಭಿವೃದ್ಧಿ) ಹುದ್ದೆಗೆ ವರ್ಗಾವಣೆ ಮಾಡಿದೆ.

ಪಂಚಾಯತ್ ರಾಜ್ ಕಾರ್ಯದರ್ಶಿ ಡಿ.ರಂದೀಪ್ ಅವರಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಆಯುಕ್ತ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ.

ತಜ್ಞ ವೈದ್ಯರ ಹುದ್ದೆ ಸೃಷ್ಟಿ

ಬೆಂಗಳೂರು: ಆರೋಗ್ಯ ಇಲಾಖೆಯಡಿ ಬರುವ 19 ಜಿಲ್ಲಾ ಆಸ್ಪತ್ರೆಗಳು ಹಾಗೂ 147 ತಾಲ್ಲೂಕು ಆಸ್ಪತ್ರೆಗಳ ಐಸಿಯು ನಿರ್ವಹಣೆಗೆ ತಜ್ಞ ವೈದ್ಯರ ಹುದ್ದೆ ಸೃಜಿಸಿ ಆದೇಶಿಸಿದೆ. ಒಟ್ಟು 185 ಹುದ್ದೆಗಳನ್ನು ಸೃಜಿಸಲಾಗಿದೆ. ಜಿಲ್ಲಾ ಆಸ್ಪತ್ರೆಗಳ ಐಸಿಯುಗಳಿಗೆ ತಲಾ ಇಬ್ಬರು ತಜ್ಞ ವೈದ್ಯರಂತೆ 38 ಹುದ್ದೆಗಳು, ತಾಲ್ಲೂಕು ಆಸ್ಪತ್ರೆಗಳ ಐಸಿಯುಗಳಿಗೆ 147 ಹುದ್ದೆಗಳ ಸೃಜನೆಗೆ ಅನುಮತಿ ದೊರೆತಿದೆ.

ಕಸಾಪ ಅಧ್ಯಕ್ಷ ಮಹೇಶ್ ಜೋಶಿ ವಿರುದ್ಧ ಹೈಕೋರ್ಟ್ ಗರಂ

'ದಂಡ ಹಾಕಿಲ್ಲಾ ಅಂತಾ ಖುಷಿಪಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅವ್ಯವಹಾರಗಳ ಆರೋಪಕ್ಕೆ ಸಂಬಂಧಿಸಿ ವಿಚಾರಣಾಧಿಕಾರಿ ನೇಮಕ ಮಾಡಿರುವುದನ್ನು ಪ್ರಶ್ನಿಸಲಾದ ರಿಟ್ ಅರ್ಜಿಯನ್ನು ಇತ್ಯರ್ಥಪಡಿಸುವಂತೆ ಏಕಸದಸ್ಯ ನ್ಯಾಯಪೀಠಕ್ಕೆ ನಿರ್ದೇಶಿಸಬೇಕು' ಎಂಬ ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ಅಧ್ಯಕ್ಷರ ಮನವಿಗೆ ಗರಂ ಆದ ಹೈಕೋರ್ಟ್, 'ಮೇಲ್ಮನವಿಗೆ ದಂಡ ಹಾಕಿಲ್ಲವಲ್ಲಾ ಅಂತಾ ಖುಷಿಪಡಿ' ಎಂದು ನೀರಿಳಿಸಿತು.

'ಕನ್ನಡ ಸಾಹಿತ್ಯ ಪರಿಷತ್ತಿನ ಅನುದಾನ ಮತ್ತು ಖರ್ಚು-ವೆಚ್ಚಗಳಲ್ಲಿ ಅವ್ಯವಹಾರ ನಡೆದಿದೆ ಎಂಬ ದೂರುಗಳನ್ನು ಆಧರಿಸಿ ಈ ಕುರಿತು ವಿಚಾರಣೆ ನಡೆಸಲು ಬೆಂಗಳೂರು ನಗರ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಆದೇಶ ಹೊರಡಿಸಿದ್ದರು. ಇದನ್ನು ರದ್ದುಪಡಿಸಬೇಕು' ಎಂದು ಕೋರಿ ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 'ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿ ವಿಚಾರಣಾ ಅಧಿಕಾರಿಯನ್ನು ನೇಮಕ ಮಾಡಲಾಗಿರುವ ಸ್ವಪ್ರೇರಣಾ ಕ್ರಮ ಸರಿಯಾಗಿದೆ' ಎಂಬ ಅಭಿಪ್ರಾಯದೊಂದಿಗೆ ವಿಚಾರಣಾ ಅಧಿಕಾರಿ ನೇಮಕ ಮಾಡಿದ್ದ ಆದೇಶ ರದ್ದುಪಡಿಸಲು ನಿರಾಕರಿಸಿದ್ದರು.

ಏಕಸದಸ್ಯ ನ್ಯಾಯಪೀಠದ ಈ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಮಹೇಶ್ ಜೋಶಿ ರಿಟ್ ಮೇಲ್ಮನವಿ ಸಲ್ಲಿಸಿದ್ದರು. ಈ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಕಸಾಪ ಅಧ್ಯಕ್ಷರಿಗೆ ಬೇಕೆಂದೇ ತೊಂದರೆ ಕೊಡಬೇಕೆಂದೇ ವಿಚಾರಣಾ ಅಧಿಕಾರಿ ನೇಮಕ ಮಾಡಲಾಗಿದೆ' ಎಂಬ ಮೇಲ್ಮನವಿದಾರರ ಆರೋಪವನ್ನು ಅಲ್ಲಗಳೆದರು. 'ವಿಚಾರಣಾ ಅಧಿಕಾರಿ ನೇಮಕ ಕಾನೂನುಬದ್ಧವಾಗಿಯೇ ಇದೆ' ಎಂದು ಪ್ರತಿಪಾದಿಸಿದರು.

ಈ ವಾದಾಂಶವನ್ನು ಮಾನ್ಯ ಮಾಡಿದ ನ್ಯಾಯಪೀಠ ಮೇಲ್ಮನವಿ ವಜಾಗೊಳಿಸಿ ಆದೇಶಿಸಿತು. ಈ ವೇಳೆ ಮಹೇಶ್ ಜೋಶಿ ಪರ ವಕೀಲರು, 'ಏಕಸದಸ್ಯ ನ್ಯಾಯಪೀಠದಲ್ಲಿರುವ ರಿಟ್ ಅರ್ಜಿಯನ್ನು ಆದಷ್ಟು ಶೀಘ್ರ ವಿಚಾರಣೆ ನಡೆಸಿ ವಿಲೇವಾರಿ ಮಾಡಲು ನಿರ್ದೇಶಿಸಬೇಕು' ಎಂದರು.

ಇದಕ್ಕೆ ಗರಂ ಆದ ನ್ಯಾಯಪೀಠ, 'ಇದೊಂದು ಸಹಕಾರ ಸಂಘಗಳ ಅಡಿಯಲ್ಲಿನ ವ್ಯಾಜ್ಯ. ನಿಮ್ಮ ಅಧ್ಯಕ್ಷರ ವಿರುದ್ಧ ದೂರುಗಳು ಬಂದಾಗ ಅವರು ಯಾಕೆ ದೂರುದಾರರಿಗೆ ಅಥವಾ ಸದಸ್ಯರಿಗೆ ದಾಖಲೆ ಪ್ರಸ್ತುತಪಡಿಸಿಲ್ಲ? ವಾರ್ಷಿಕ ಮಹಾಸಭೆಯಲ್ಲೇ ಎಲ್ಲವನ್ನೂ ವಿಶದಪಡಿಸುತ್ತೀನಿ ಎಂದು ಅವರು ಹೇಳಿದ್ದೇಕೆ' ಎಂದು ಖಾರವಾಗಿ ಪ್ರಶ್ನಿಸಿತು. ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರೂ ಹಾಜರಿದ್ದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ತ್ಯಾಗದಿಂದ ದೊರಕುವ ಆನಂದವು ಅವರ್ಣನೀಯ. ಅದನ್ನು ನಮ್ಮಿಂದ ಯಾರೂ ಕಿತ್ತುಕೊಳ್ಳಲಾರರು.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಕೋಮು ರಾಜಕೀಯದ ವಿರುದ್ಧ ಸಾಮರಸ್ಯದ ಸಹಪಯಣ ಅಗತ್ಯ

ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದಲ್ಲಿ ಎರಡು ಗುಂಪುಗಳು ಪರಸ್ಪರ ಕಲ್ಲುತೂರಾಟ ನಡೆಸಿದ ಘಟನೆ ಕೋಮು ಉದ್ವಿಗ್ನ ಸ್ಥಿತಿಗೆ ಕಾರಣವಾಗಿದೆ. ಪರಿಸ್ಥಿತಿ ತಿಳಿಗೊಳಿಸಿ, ಎಲ್ಲರನ್ನೂ ಒಂದುಗೂಡಿಸಬಹುದಾಗಿದ್ದ ಕಾನೂನಾತ್ಮಕ ಕ್ರಮವನ್ನು ಜಿಲ್ಲಾಡಳಿತ ಕೈಗೊಂಡಿತು. ಅಷ್ಟರಲ್ಲೇ ರಾಜಕೀಯ ನಾಯಕರು ಮದ್ದೂರಿಗೆ ನುಗ್ಗಿದ್ದರಿಂದಾಗಿ ಪರಿಸ್ಥಿತಿ ಉಲ್ಬಣಗೊಂಡಿತು. ಮದ್ದೂರು ಪಟ್ಟಣದ ಸಿದ್ಧಾರ್ಥ ನಗರದ ಐದನೇ ತಿರುವಿನಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಸೆಪ್ಟೆಂಬರ್ 8ರ ರಾತ್ರಿ ರಾಮ್ ರಹೀಂ ನಗರದ ಮಸೀದಿ ಬಳಿ ಸಾಗುತ್ತಿದ್ದಾಗ, ಅಲ್ಲಿದ್ದ ದೀಪವನ್ನು ನಿಗೂಢ ವ್ಯಕ್ತಿಗಳು ಆರಿಸಿದ್ದಾರೆ. ಆ ವೇಳೆ, ಮೆರವಣಿಗೆ ಮೇಲೆ ಕಲ್ಲು ತೂರಲಾಗಿದೆ. ಮೆರವಣಿಗೆಯಲ್ಲಿದ್ದವರು ಅದಕ್ಕೆ ಪ್ರತಿಯಾಗಿ ಕಲ್ಲುತೂರಾಟ ನಡೆಸಿದ್ದಾರೆ. ಎರಡು ಗುಂಪುಗಳ ಮಧ್ಯೆ ಘರ್ಷಣೆ ನಡೆದಿದೆ. ಘಟನೆಯಲ್ಲಿ ನಾಲ್ವರು ಪೊಲೀಸರು ಸೇರಿದಂತೆ ಒಟ್ಟು 8 ಮಂದಿಗೆ ಗಾಯಗಳಾಗಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಸೆಪ್ಟೆಂಬರ್ 9ರ ಬೆಳಿಗ್ಗೆಯೇ ಮದ್ದೂರು ಪಟ್ಟಣದಲ್ಲಿ ಸೇರಿದ್ದ ಸಾವಿರಾರು ಮಂದಿ ಪ್ರತಿಭಟನೆಗೆ ಮುಂದಾಗಿದ್ದಾರೆ. ಮಸೀದಿಯ ಮುಂದೆ ಪ್ರತಿಭಟನೆ ನಡೆಸಿದ ಕೆಲವರು ಕಲ್ಲುತೂರಾಟ ನಡೆಸಿದ್ದಾರೆ. ಪರಿಸ್ಥಿತಿ ನಿಭಾಯಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದಾರೆ. ಇದು ಅಲ್ಲಿಗೇ ಮುಕ್ತಾಯವಾಗಲು ಸಾಧ್ಯವಿತ್ತು.

ಮದ್ದೂರಿನಲ್ಲಿ ನಡೆದ ಕೋಮುಸಂಘರ್ಷ ಘಟನೆಯ ಹಿಂದೆ ರಾಜಕೀಯ ಹಿತಾಸಕ್ತಿಗಳು ಇರುವಂತೆಯೇ, ಕಾನೂನು ಮತ್ತು ಸುವ್ಯವಸ್ಥೆಯ ಲೋಪವೂ ಇದೆ.

ಆದರೆ, ಅಕ್ಕಪಕ್ಕದ ಜಿಲ್ಲೆಗಳ ಬಿಜೆಪಿ, ಜೆಡಿಎಸ್ ನಾಯಕರು ಮದ್ದೂರಿಗೆ ದೌಡಾಯಿಸಿ ಪ್ರಚೋದನಾಕಾರಿ ಭಾಷಣ ಮಾಡಿದ್ದಲ್ಲದೇ, ಮದ್ದೂರು ಘಟನೆಯನ್ನು ರಾಜಕೀಯಗೊಳಿಸಲು ಮುಂದಾಗಿದ್ದಾರೆ. ಇಂತಹ ಕುತ್ಸಿತ ರಾಜಕಾರಣವನ್ನು ಆಡಳಿತಾರೂಢ ಕಾಂಗ್ರೆಸ್ ಸೇರಿದಂತೆ ಯಾವ ಪಕ್ಷವೂ ಮಾಡಬಾರದು

ವಿವಿಧ ಹೋರಾಟ, ಸೌಹಾರ್ದಕ್ಕೆ ಹೆಸರಾಗಿದ್ದ ಮಂಡ್ಯ ಎಂದೂ ಕೋಮುಸೂಕ್ಷ್ಮ ಜಿಲ್ಲೆ ಎಂಬ ಹಣೆಪಟ್ಟಿ ಕಟ್ಟಿಕೊಂಡಿರಲಿಲ್ಲ. ಉರಿಗೌಡ–ನಂಜೇಗೌಡ ಎಂಬ ಸುಳ್ಳು ಪಾತ್ರಗಳ ಸೃಷ್ಟಿಯ ಹುಸಿ ಸಂಕಥನದಿಂದ ಮಂಡ್ಯದ ಚಿತ್ರಣವೇ ಬದಲಾಗತೊಡಗಿತು. ಬೇರೆ ಜಿಲ್ಲೆಗಳ ಕೋಮುವಾದಿ ನಾಯಕರು ಅಲ್ಲಿಗೆ ಭೇಟಿ ನೀಡಿ, ಪ್ರಚೋದನಕಾರಿ ಭಾಷಣ ಮಾಡತೊಡಗಿದ ಬಳಿಕ, ಕೋಮುಸಂಘರ್ಷದ ಬೆಳೆ ತೆಗೆಯುವ ನೆಲ ಹದಗೊಳ್ಳತೊಡಗಿತು. ಕಳೆದ ವರ್ಷ ನಾಗಮಂಗಲ ಪಟ್ಟಣದಲ್ಲಿ ಗಣೇಶ ಮೂರ್ತಿ ವಿಸರ್ಜನೆ ವೇಳೆ ಮಸೀದಿ ಬಳಿಯೇ ಕಲ್ಲುತೂರಾಟ ನಡೆದು, ಹತ್ತಾರು ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿತ್ತು. ವರ್ಷದಿಂದ ವರ್ಷಕ್ಕೆ ಮಂಡ್ಯ ಜಿಲ್ಲೆಯ ಒಂದೊಂದೇ ತಾಲ್ಲೂಕಿಗೆ ಕೋಮು ಕಿಚ್ಚು ಪಸರಿಸುತ್ತಿರುವುದು ಜಿಲ್ಲೆಯ ಅಭಿವೃದ್ಧಿಗೆ ಅಹಿತಕರವಾಗಿದೆ. ಹಿಂದಿನ ವರ್ಷಗಳ ಕಹಿ ಘಟನೆಗಳನ್ನು ನೆನಪಿಟ್ಟುಕೊಂಡು, ಎಚ್ಚರ ವಹಿಸಬೇಕಾದ ಜಿಲ್ಲಾ ಪೊಲೀಸ್ ಇಲಾಖೆ, ಈ ಬಾರಿ ಗಣೇಶ ಮೂರ್ತಿ ವಿಸರ್ಜನೆಯ ವೇಳೆ ಸಾಕಷ್ಟು ಜಾಗ್ರತವಾಗಿರಬೇಕಾಗಿತ್ತು. ಘಟನೆಯ ಬಳಿಕ, ಮದ್ದೂರಿಗೆ ಭೇಟಿ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಬೇರೆ ಜಿಲ್ಲೆಗಳಿಂದ ಬಂದ ಕೆಲವರಿಂದ ಈ ಕೃತ್ಯ ನಡೆದಿದೆ ಎಂದು ಸಂಶಯ ವ್ಯಕ್ತಪಡಿಸಿದ್ದಾರೆ. ತಮ್ಮ ಸ್ವಕ್ಷೇತ್ರ ನಾಗಮಂಗಲದ ಗಲಭೆ ಬಗ್ಗೆಯೂ ಅವರು ಹೀಗೆಯೇ ಪ್ರತಿಕ್ರಿಯಿಸಿದ್ದರು. ಸಚಿವರಿಗೆ ಗೊತ್ತಿರುವ ಸಂಗತಿ ಜಿಲ್ಲಾಡಳಿತಕ್ಕೆ ಗೊತ್ತಾಗಲಿಲ್ಲವೇ? ಅಥವಾ ಗೊತ್ತಾಗದಷ್ಟು ಪೊಲೀಸ್ ಇಲಾಖೆ ಜಾಗೃತ ಸ್ಥಿತಿಯನ್ನೇ ಕಳೆದುಕೊಂಡಿದೆಯೇ ಎಂಬ ಪ್ರಶ್ನೆ ಮುನ್ನೆಲೆಗೆ ಬರುತ್ತದೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿರುವುದನ್ನು ಈ ಪ್ರಕರಣ ತೋರಿಸುತ್ತದೆ. ಇಂತಹ ಸಂಘರ್ಷಗಳಿಂದ ಹಾನಿ ಅನುಭವಿಸುವವರು ನಿತ್ಯದ ಅನ್ನ ದುಡಿದು ತಿನ್ನುವ ಶ್ರೀಸಾಮಾನ್ಯರು. ಘಟನೆ ಮರುಕಳಿಸದಂತೆ ಎಚ್ಚರ ವಹಿಸಬೇಕಾದುದು ಪೊಲೀಸ್ ಇಲಾಖೆಯ ಆದ್ಯ ಕರ್ತವ್ಯ. ಸ್ಥಳೀಯವಾಗಿ ಸಂಭವಿಸುವ ಘಟನೆಗಳನ್ನು ತಮ್ಮ ರಾಜಕೀಯ ಅನುಕೂಲಕ್ಕೆ, ತಮ್ಮ ನೆಲೆ ವಿಸ್ತರಿಸಿಕೊಳ್ಳಲು ಬಳಸಿಕೊಳ್ಳುವ ರಾಜಕೀಯ ಶಕ್ತಿಗಳು ಹಿಂದೆಂದಿಗಿಂತಲೂ ಈಗ ಪ್ರಬಲವಾಗಿದೆ. ಹೀಗಾಗಿಯೇ, ಇದನ್ನು ಜಾಗತಿಕ ವಿದ್ಯಮಾನವೆಂಬಂತೆ ಬಿಂಬಿಸಲು ಬಿಜೆಪಿ ನಾಯಕರು ಯತ್ನಿಸಿದ್ದಾರೆ. ಇದು ಸಮರ್ಥನೀಯವಲ್ಲ. ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ನಾಯಕರು ತಮ್ಮ ಪಕ್ಷದ ಹಿತಾಸಕ್ತಿಗಾಗಿ ಇಂತಹ ಪ್ರಕರಣಗಳನ್ನು ಬಳಸಿಕೊಳ್ಳುವ ಕುತ್ಸಿತ ರಾಜಕಾರಣವನ್ನು ಬಿಡಬೇಕು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಪೂರ್ಣ ಹೊಣೆ ಹಾಗೂ ಸ್ವಾತಂತ್ರ್ಯವನ್ನು ಜಿಲ್ಲಾಡಳಿತಕ್ಕೆ ನೀಡಬೇಕು. ಕಲ್ಲು ತೂರಿ, ಸಂಘರ್ಷಕ್ಕೆ ಕಾರಣವಾಗುವವರು, ಧರ್ಮದ ಹೆಸರಿನಲ್ಲಿ ಮತ್ತೊಂದು ಸಮುದಾಯವನ್ನು ಹೀನಾಯವಾಗಿ ನಿಂದಿಸುವವರು, ಗಲಭೆಯ ಸಂಚು ನಡೆಸುವ ಯಾರೊಬ್ಬರೂ ಧರ್ಮದ ಶ್ರದ್ಧಾಳುಗಳಾಗಿರಲು ಸಾಧ್ಯವಿಲ್ಲ. ಅವರದು ರಾಜಕೀಯ ಸ್ವಾರ್ಥವಷ್ಟೆ. ಅಂತಹವರನ್ನು ಕಾನೂನಿನಡಿ ತಂದು ಹೆಡೆಮುರಿ ಕಟ್ಟಿದರಷ್ಟೇ ಜನರಿಗೆ ನೆಮ್ಮದಿ ಲಭಿಸಿ, ರಾಜ್ಯ ಪ್ರಗತಿಯತ್ತ ಮುನ್ನಡೆಯಲು ಸಾಧ್ಯ. ಈ ನಿಟ್ಟಿನತ್ತ ಸರ್ಕಾರ ದಿಟ್ಟ ಹೆಜ್ಜೆ ಇಡಬೇಕಿದೆ. ಸಂಘರ್ಷವನ್ನು ಉತ್ತುಂಗಕ್ಕೆ ಒಯ್ಯುವ ಪ್ರಯತ್ನದ ಬದಲು, ಪರಿಸ್ಥಿತಿ ತಿಳಿಗೊಳಿಸುವತ್ತ ಧಾರ್ಮಿಕ, ರಾಜಕೀಯ ನಾಯಕರು ತಮ್ಮ ಶ್ರಮ ಹಾಕಬೇಕಿರುವುದು ಇಂದಿನ ತುರ್ತು.

ಜಾನಪದ ಪ್ರೋತ್ಸಾಹಿಸಿ

ಗಣೇಶ ವಿಸರ್ಜನೆ ಕಾರ್ಯಕ್ರಮಗಳಲ್ಲಿ ಜಾನಪದ ಕಲಾತಂಡಗಳ ಮೆರವಣಿಗೆಯನ್ನು ಪ್ರೋತ್ಸಾಹಿಸಿ, ಡಿ.ಜೆ ಅನ್ನು ನಿಷೇಧಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಪಿಚ್ಚಳ್ಳಿ ಶ್ರೀನಿವಾಸ್, ನಾಯಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಚುನಾವಣಾ ಆಯೋಗ ಮುಕ್ತವಾಗಿಲ್ಲ, ಪಾರದರ್ಶಕ ಆಗಿಲ್ಲ. ಬಿಜೆಪಿ ಪರವಾಗಿ ಕೆಲಸ ಮಾಡುತ್ತಿದ್ದು, ಷಡ್ಯಂತ್ರ ಮಾಡಿ ಬಿಜೆಪಿಯನ್ನು ಅಧಿಕಾರದಲ್ಲಿ ಕೂರಿಸುವ ಕೆಲಸ ಮಾಡುತ್ತಿದೆ.

ಬಿ.ಆರ್. ಪಾಟೀಲ, ಉಪಾಧ್ಯಕ್ಷ, ರಾಜ್ಯ ಯೋಜನಾ ಮತ್ತು ನೀತಿ ಆಯೋಗ

25 ವರ್ಷಗಳ ಹಿಂದೆ

ಭಾನುವಾರ, 10-9-2000

• **ಕಠಿಣ ಅಣ್ವಸ್ತ್ರ ನೀತಿ: ಪ್ರಧಾನಿ ಘೋಷಣೆ**

ನ್ಯೂಯಾರ್ಕ್, ಸೆಪ್ಟೆಂಬರ್ 9 (ಪಿಟಿಐ)– ಭಾರತದ ಹಿತಾಸಕ್ತಿಗೆ ಅವಶ್ಯಕವೆನಿಸಿದರೆ ತಮ್ಮ ಸರ್ಕಾರ ಅಣ್ವಸ್ತ್ರ ಮತ್ತು ವಿದೇಶಿ ನೀತಿಗಳಿಗೆ ಸಂಬಂಧಿಸಿದಂತೆ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ ಎಂದು ಪ್ರಧಾನಿ ವಾಜಪೇಯಿ ಸ್ಪಷ್ಟವಾಗಿ ನುಡಿದರು.

ದೇಶದ ಭದ್ರತೆ ದೃಷ್ಟಿಯಿಂದ 1998ರಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿದಾಗ ಪ್ರಶ್ನೆಗಳು ಎದ್ದವು; ಆದರೆ ಈಗ ಇಡೀ ಜಗತ್ತು ನಿಜಾಂಶವನ್ನು ಒಪ್ಪಿಕೊಂಡಿದೆ ಎಂದು ಅವರು ತಿಳಿಸಿದರು.

ಪ್ರಧಾನಿ ವಾಜಪೇಯಿ ಅವರು, ತಮ್ಮ ಗೌರವಾರ್ಥ ಭಾರತದ ರಾಯಭಾರಿ ನರೇಶ್ ಚಂದ್ರ ಶುಕ್ರವಾರ ರಾತ್ರಿ ಇಲ್ಲಿ ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ ಇಲ್ಲಿನ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

• **ಹಿಂಸಾಚಾರ: ಪಶ್ಚಿಮ ಬಂಗಾಳಕ್ಕೆ ಎಚ್ಚರಿಕೆ**

ನವದೆಹಲಿ, ಸೆಪ್ಟೆಂಬರ್ 9– ಪಶ್ಚಿಮ ಬಂಗಾಳದ ಕೆಲವು ಜಿಲ್ಲೆಗಳಲ್ಲಿ ನಡೆಯುತ್ತಿರುವ ಹಿಂಸಾಚಾರ ಇದೇ ರೀತಿಯಲ್ಲಿ ಮುಂದುವರಿದರೆ ಕಠಿಣ ಕ್ರಮ ಅನಿವಾರ್ಯವಾಗಬಹುದು ಎಂದು ಕೇಂದ್ರ ಸರ್ಕಾರ, ಅಲ್ಲಿನ ರಾಜ್ಯ ಸರ್ಕಾರವನ್ನು ಎಚ್ಚರಿಸಿದೆ.

ಪಶ್ಚಿಮ ಬಂಗಾಳದ ಕೆಲವು ಗಲಭೆಪೀಡಿತ ಪ್ರದೇಶಗಳ ಪ್ರತ್ಯಕ್ಷ ದರ್ಶನ ಮಾಡಿ ಹಿಂದಿರುಗಿದ ಸಚಿವ ಜಾರ್ಜ್ ಫರ್ನಾಂಡಿಸ್, ಗೃಹ ಸಚಿವ ಎಲ್.ಕೆ. ಅಡ್ವಾಣಿ ಅವರೊಡನೆ ಸಮಾಲೋಚನೆ ನಡೆಸಿದ ಸ್ವಲ್ಪ ಹೊತ್ತಿನಲ್ಲಿಯೇ ಗೃಹ ಖಾತೆ ಎರಡು ಪುಟಗಳ ಎಚ್ಚರಿಕೆಯ ಪತ್ರವನ್ನು ಅಲ್ಲಿನ ಸರ್ಕಾರಕ್ಕೆ ಕಳುಹಿಸಿತು.

• **ಕೆರೆಯಲ್ಲಿ ಮುಳುಗಿ ಮೂವರು ಸಾವು**

ಶ್ರೀನಿವಾಸಪುರ, ಸೆಪ್ಟೆಂಬರ್ 9– ಮೂವರು ಶಾಲಾ ಬಾಲಕಿಯರು ಕೆರೆಯಲ್ಲಿ ಮುಳುಗಿ ಸತ್ತಿರುವ ಘಟನೆ ಶ್ರೀನಿವಾಸಪುರ ತಾಲ್ಲೂಕಿನ ಮುತ್ತಕ ಗ್ರಾಮದಲ್ಲಿ ನಡೆದಿದೆ. ಸತ್ತವರನ್ನು ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಎಂಟನೇ ತರಗತಿಯ ವಿದ್ಯಾರ್ಥಿನಿಯರಾದ ರೇಣುಕಾ (14), ಲಾವಣ್ಯ (14) ಹಾಗೂ ರಾಧಿಕಾ (14) ಎಂದು ಗುರುತಿಸಲಾಗಿದೆ.

ಬಾಲಕಿಯರು ಏಳನೇ ತರಗತಿಯ ಅಂಕಪಟ್ಟಿ ತರಲು ಮರಿಯಮ್ಮಪೇಟೆ ಶಾಲೆಗೆ ಹೋಗುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎನ್ನಲಾಗಿದೆ.

ಸಂಶೋಧಕರ 'ಅರಣ್ಯ'ರೋದನ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

> ಕೇಂದ್ರ ಸರ್ಕಾರವು ವನ್ಯಜೀವಿ ಸಂರಕ್ಷಣಾ ಕಾಯ್ದೆಗೆ ತಂದಿರುವ ತಿದ್ದುಪಡಿ, ವನ್ಯಜೀವಿಗಳ ಬಗ್ಗೆ ಅಧ್ಯಯನ ನಡೆಸುತ್ತಿರುವ ಸಂಶೋಧಕರನ್ನು ನಿರುತ್ಸಾಹಗೊಳಿಸುವಂತಿದೆ. ಎರಡು ಮೂರು ವರ್ಷಗಳಾದರೂ ಸಂಶೋಧನೆಗೆ ಅನುಮತಿ ದೊರೆಯದ ಕಾರಣದಿಂದಾಗಿ, ಬಹುತೇಕ ಸಂಶೋಧನಾ ಚಟುವಟಿಕೆಗಳು ಸ್ಥಗಿತಗೊಳ್ಳುವ ಸಾಧ್ಯತೆಯಿದೆ.

'ನಿಮ್ಮ ಉರಗ ಸಂಶೋಧನೆ ಹೇಗೆ ನಡೆಯುತ್ತಿದೆ' ಎನ್ನುವ ಪ್ರಶ್ನೆಗೆ ಬಂಗಾಳದ ಉರಗ ತಜ್ಞ ವಿಶಾಲ್ ಸಾಂತ್ರ, 'ಅಧ್ಯಯನಕ್ಕೆ ಅನುಮತಿ ಸಿಕ್ಕರೆ ತಾನೇ ಮುಂದಿನ ವಿಚಾರ' ಎಂದು ನೋವಿನಿಂದ ಹೇಳಿದರು.

ವನ್ಯಜೀವಿ ಸಂಶೋಧನೆಗೆ ಸಂಬಂಧಿಸಿದಂತೆ ವಿಶಾಲ್ ಒಬ್ಬರೇ ತೊಂದರೆ ಅನುಭವಿಸುತ್ತಿಲ್ಲ; 'ವನ್ಯಜೀವಿ ಸಂರಕ್ಷಣಾ ತಿದ್ದುಪಡಿ ಕಾಯ್ದೆ–2022' ವನ್ಯಜೀವಿ ಸಂಶೋಧನೆಯನ್ನು ನಿರುತ್ಸಾಹಗೊಳಿಸುತ್ತಿದೆ ಎಂದು ಬಹಳಷ್ಟು ವನ್ಯಜೀವಿ ತಜ್ಞರು ದೂರುತ್ತಿದ್ದಾರೆ. ಅವರ ಪ್ರಕಾರ, ಷೆಡ್ಯೂಲ್–1ರಲ್ಲಿನ ಹುಲಿ, ಆನೆ, ಚಿರತೆ ಮತ್ತು ಷೆಡ್ಯೂಲ್–2ರಲ್ಲಿನ ತೋಳ, ನರಿ ಮತ್ತು ಕಿರುಬಗಳ ಅಧ್ಯಯನಕ್ಕೆ ಪರವಾನಗಿ ಪಡೆಯಲು ಎರಡರಿಂದ ಮೂರು ವರ್ಷಗಳ ಸಮಯ ತೆಗೆದುಕೊಳ್ಳುತ್ತಿದೆ. ಅನುಮತಿ ಸಿಗುವಷ್ಟರಲ್ಲಿ ಕೆಲವು ಪ್ರಾಣಿಗಳ ಸಂತತಿಯೇ ಮರೆಯಾಗಬಹುದು ಎಂಬ ಆತಂಕ ಅವರದ್ದು. 'ಸಂತತಿ ನಾಶದ ಭೀತಿಯಲ್ಲಿರುವ ದೊರವಾಯನ ಹಕ್ಕಿ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಜೊತೆಗೆ ರೈತರ ಬೆಳೆ ಹಾನಿ ಮಾಡುವ ನವಿಲುಗಳನ್ನೂ, ಹುಲಿ, ಘೇಂಡಾಮೃಗಗಳ ಜೊತೆಗೆ ಎಲ್ಲೆಲ್ಲೂ ಇರುವ ಕೇರೆ ಹಾವು, ನೀರು ಹಾವು ಮತ್ತು ಅಪಾರ ಸಂಖ್ಯೆಯಲ್ಲಿರುವ ಕೆಂಪು ಕೋತಿಗಳನ್ನೂ ಷೆಡ್ಯೂಲ್–1ಕ್ಕೆ ಸೇರಿಸಿರುವುದು ಸರಿಯಲ್ಲ' ಎನ್ನುತ್ತಾರೆ.

ಇದುವರೆಗೂ ಅಧ್ಯಯನ, ಗಣತಿ, ಪ್ರಯೋಗ, ವಿಶೇಷ ಸಂರಕ್ಷಣಾ ವಿಧಾನಗಳ ಅನುಷ್ಠಾನಕ್ಕೆ ರಾಜ್ಯ ಅರಣ್ಯ ಇಲಾಖೆಗಳೇ ಪರವಾನಗಿ ನೀಡುತ್ತಿದ್ದವು. ಇಲ್ಲಿಯವರೆಗೆ ಯಾರೇ ಅರ್ಜಿ ಸಲ್ಲಿಸಿದರೂ, ರಾಜ್ಯ ವನ್ಯಜೀವಿ ಮಂಡಳಿ ಮತ್ತು ಸಂಶೋಧನಾ ಸಲಹಾ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ, ಸಂದರ್ಶನ ನಡೆಸಿದ ನಂತರ ಅನುಮೋದನೆ ನೀಡುತ್ತಿದ್ದವು. ಇನ್ನು ಮುಂದೆ, ಪ್ರತಿ ಅನುಮತಿಯೂ ಕೇಂದ್ರ ಸರ್ಕಾರದಿಂದಲೇ ಬರಬೇಕಿದೆ.

ರಾಷ್ಟ್ರೀಯ ಉದ್ಯಾನಗಳು, ಅಭಯಾರಣ್ಯಗಳು ಮತ್ತು ಅರಣ್ಯ ಪ್ರದೇಶಗಳಲ್ಲಿ ಸಂಶೋಧನೆ ನಡೆಸಲು ಅನುಮತಿ ಅತ್ಯಗತ್ಯ. ಆದರೆ, ಸಂಶೋಧಕರು ಅನುಮತಿಗಾಗಿ ವರ್ಷಗಟ್ಟಲೆ ಕಾಯುವಂತಾದರೆ ಅಧ್ಯಯನಕ್ಕೆ ನಿಗದಿಪಡಿಸಿದ ಸಮಯ ಮತ್ತು ಹಣ ಎರಡೂ ವ್ಯರ್ಥವಾಗುತ್ತವೆ. ಉದಾಹರಣೆಗೆ, ಮಳೆಗಾಲದಲ್ಲಿ ಅಧ್ಯಯನ ಮಾಡಬೇಕಿದ್ದರೆ, ಅನುಮತಿ ವಿಳಂಬದಿಂದಾಗಿ ಇಡೀ ವರ್ಷ ವ್ಯರ್ಥವಾಗುತ್ತದೆ.

ವನ್ಯಜೀವಿ ಸಂಶೋಧನೆಗಳಿಗೆ ಅನುಮತಿ ಪಡೆಯಲು ಎರಡು ಮುಖ್ಯ ಹಂತಗಳಿವೆ. ಮೊದಲಿಗೆ, ಕೇಂದ್ರ ಸರ್ಕಾರದ ಪರಿಸರ ಸಚಿವಾಲಯದಿಂದ ಅನುಮತಿ ಪಡೆಯಬೇಕು. ನಂತರ, ನಿರ್ದಿಷ್ಟ ಸಂಶೋಧನಾ ಕ್ಷೇತ್ರವು ಇರುವ ರಾಜ್ಯ ಅರಣ್ಯ ಇಲಾಖೆ ಅಥವಾ ಸಂಬಂಧಿತ ಇಲಾಖೆಗಳಿಂದ ಪ್ರತ್ಯೇಕ ಅನುಮತಿ ಪಡೆಯಬೇಕು. ಉದಾಹರಣೆಗೆ, ಹುಲಿ ಸಂರಕ್ಷಿತ ಪ್ರದೇಶ, ರಾಷ್ಟ್ರೀಯ ಉದ್ಯಾನ ಅಥವಾ ವನ್ಯಜೀವಿ ಅಭಯಾರಣ್ಯದಲ್ಲಿ ಅಧ್ಯಯನ ನಡೆಸಲು ಆಯಾ ರಾಜ್ಯದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯ ಅನುಮತಿ ಅಗತ್ಯ. ಕೈಗೊಳ್ಳುವ ಸಂಶೋಧನೆಯು ಪರಿಸರ ವ್ಯವಸ್ಥೆಗಳಿಗೆ, ಪ್ರಾಣಿ ಮತ್ತು ಸಸ್ಯ ಪ್ರಭೇದಗಳಿಗೆ ಯಾವುದೇ ಹಾನಿ ಮಾಡುವುದಿಲ್ಲ ಎಂದು ಖಚಿತಪಡಿಸಿಕೊಳ್ಳುವುದು, ಅನಿಯಂತ್ರಿತ ಸಂಶೋಧನೆಗಳನ್ನು ತಡೆಗಟ್ಟುವುದು, ಅಂತರರಾಷ್ಟ್ರೀಯ ಸಹಭಾಗಿತ್ವದ ಸಂಶೋಧನೆಗಳಲ್ಲಿ ಭಾರತದ ಜೈವಿಕ ಸಂಪನ್ಮೂಲಗಳ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಮತ್ತು ಸಂಶೋಧನೆಯು ನಿಗದಿತ ನಿಯಮಗಳಂತೆ ನಡೆಯುತ್ತಿದೆಯೇ ಎಂದು ಮೇಲ್ವಿಚಾರಣೆ ಮಾಡುವುದು ಈ ತಿದ್ದುಪಡಿಯ ಉದ್ದೇಶವಾಗಿದೆ.

ಸಂರಕ್ಷಿತ ಅರಣ್ಯದೊಳಗಿನ ಮತ್ತು ಹೊರಗಿನ ವನ್ಯಜೀವಿಗಳ ಕುರಿತು ಮತ್ತು ಅವುಗಳ ಸಂಖ್ಯೆಯನ್ನು ಆರೋಗ್ಯಕರ ಮಟ್ಟದಲ್ಲಿ ಕಾಪಾಡಲು ಕೆಲವು ವಿಶೇಷ ಅಧ್ಯಯನಗಳು ನಡೆಯುತ್ತವೆ. ವನ್ಯಜೀವಿ ಸಂರಕ್ಷಣಾ ತಿದ್ದುಪಡಿ ಕಾಯ್ದೆಯ ಷೆಡ್ಯೂಲ್‌ಗಳಲ್ಲಿ ಸ್ಥಾನ ಪಡೆದಿರುವ ಪ್ರಾಣಿಗಳಿಗೆ ಕಿಂಚಿತ್ ಅಪಾಯವಾದರೂ, ಸರ್ಕಾರ ಮತ್ತು ಅರಣ್ಯ ಇಲಾಖೆ ಅದನ್ನು ಗಂಭೀರವಾಗಿ ಪರಿಗಣಿಸುತ್ತದೆ ಮತ್ತು ಸಂರಕ್ಷಣೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ.

ರಾಜ್ಯ ಅರಣ್ಯ ಇಲಾಖೆಯ ಮಾಹಿತಿಯಂತೆ, ಉರಗ ಹಾಗೂ ಬ್ಯಾಕ್ಟೀರಿಯಾ ತಜ್ಞರು ಸಲ್ಲಿಸಿದ ಅರ್ಜಿಗಳು ಕಳೆದ ಎರಡು ವರ್ಷಗಳಿಂದ ಕೇಂದ್ರ ಸರ್ಕಾರದ ಬಳಿ ಇವೆ. ಇದುವರೆಗೂ ಅನುಮೋದನೆ ದೊರೆತಿಲ್ಲ. ಪ್ರಸ್ತಾವವನ್ನು ನಿರಾಕರಿಸಲಾಗಿದೆ ಎಂಬ ಬಗ್ಗೆಯೂ ಮಾಹಿತಿ ನೀಡಿಲ್ಲ. ಏಕಿಷ್ಟು ವಿಳಂಬ ಎಂಬುದರ ಬಗ್ಗೆ ಯಾವ ವಿವರಣೆಯೂ ಇಲ್ಲ. ಪೂರ್ವ ಭಾರತದ ಉರಗಗಳ ಕುರಿತು ಅಧ್ಯಯನ ಮಾಡುತ್ತಿರುವ ಕರ್ನಾಟಕದ ಉರಗ ತಜ್ಞರೊಬ್ಬರು, 'ನಮ್ಮಲ್ಲಿ ಜೀವ ವೈವಿಧ್ಯವಿರುವುದು ಗೊತ್ತೇ ಇದೆ. ಆದರೆ, ಅದರ ನಿಖರ ಮಾಹಿತಿ ಇಲ್ಲ' ಎನ್ನುತ್ತಾರೆ.

ದೇಶದ ಎಲ್ಲ ಬಗೆಯ ಕಾಡುಗಳ ಬಗೆಗಿನ ನಿಖರವಾದ ಮಾಹಿತಿ ಮತ್ತು ದತ್ತಾಂಶಗಳು ಲಭ್ಯವಿದ್ದರೆ, ಸಂರಕ್ಷಣಾ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದು ಸುಲಭವಾಗುತ್ತದೆ. ಪರವಾನಗಿ ಪಡೆಯಲು ವರ್ಷಗಟ್ಟಲೆ ಕಾಯುವುದರಿಂದ ಸಂರಕ್ಷಣೆಯ ಕೆಲಸಗಳಿಗೆ ದೊಡ್ಡ ಅಡ್ಡಿಯಾಗುತ್ತದೆ.

ಅಧ್ಯಯನ ಅಥವಾ ಸಂಶೋಧನೆಯ ಹೆಸರಿನಲ್ಲಿ ಮೂರನೆಯ ಅಥವಾ ಇಲಾಖೆಗೆ ಸಂಬಂಧಪಡದ ವ್ಯಕ್ತಿಯು ಕಾಡನ್ನು ಪ್ರವೇಶಿಸುವುದು ಅರಣ್ಯ ಇಲಾಖೆಗೆ ಇಷ್ಟವಾಗುವುದಿಲ್ಲ. ಅಲ್ಲದೆ, ಅಧ್ಯಯನಕ್ಕಾಗಿ ಅರ್ಜಿ ಸಲ್ಲಿಸುವವರು ಒಂದಲ್ಲಾ ಒಂದು ಬಗೆಯ ಪ್ರಭಾವ ಬೀರುತ್ತಾರೆ ಎಂಬ ಭಾವನೆ ಅರಣ್ಯ ಇಲಾಖೆಯಲ್ಲಿ ಬಲವಾಗಿ ಬೇರೂರಿದೆ. ಕೇಂದ್ರದವರೆಗೂ ಹೋಗಿ ಪ್ರಭಾವ ಬೀರಿ ಕೆಲಸ ಮಾಡಿಸಿಕೊಳ್ಳುವುದು ಸುಲಭವಲ್ಲ ಎಂಬುದನ್ನು ಚೆನ್ನಾಗಿ ಅರಿತಿರುವ ರಾಜ್ಯಗಳ ಅರಣ್ಯ ಇಲಾಖೆಗಳು, ಅದನ್ನೇ ಬಂಡವಾಳ ಮಾಡಿಕೊಂಡು ಸಂರಕ್ಷಣೆಯ ಕೆಲಸಗಳಿಗೆ ಸಮರ್ಪಕ ಬೆಂಬಲ ನೀಡುತ್ತಿಲ್ಲ ಎಂದು ಅಧ್ಯಯನಕಾರರು ಆಪಾದಿಸುತ್ತಿದ್ದಾರೆ. ಸ್ವಿಟ್ಜರ್ಲೆಂಡ್‌ನಲ್ಲಿ ಉನ್ನತ ಸಂಶೋಧನೆ ನಡೆಸುತ್ತಿರುವ ಭಾರತ ಮೂಲದ ಅಶ್ವಿನಿ ಮೋಹನ್, 'ಅಧ್ಯಯನಕ್ಕೆ ಬೇಕಾದ ಪರವಾನಗಿ ಪಡೆಯಲು ಎರಡು ವರ್ಷ ಕಾಯುವುದು ಪ್ರಾಯೋಗಿಕವಲ್ಲ. ವಿದ್ಯಾರ್ಥಿಗಳು ಅನಿವಾರ್ಯವಾಗಿ ತಮ್ಮ ಸಂಶೋಧನೆಯ ವಿಷಯ ಬದಲಾಯಿಸಬೇಕಾಗುತ್ತದೆ ಇಲ್ಲವೇ ಸಂಶೋಧನೆಯ ವಿಧಾನಗಳನ್ನು ಬದಲಿಸಿಕೊಳ್ಳಬೇಕಾಗುತ್ತದೆ' ಎನ್ನುತ್ತಾರೆ.

ಅಭ್ಯರ್ಥಿಯೊಬ್ಬರ ಪಿಎಚ್.ಡಿ ಪದವಿ ಅಧ್ಯಯನದ ಅವಧಿ ಎರಡರಿಂದ ನಾಲ್ಕು ವರ್ಷಗಳು. ಅದರಲ್ಲಿ ಅರ್ಧದಷ್ಟು ಸಮಯ ಸಂಶೋಧನೆಗೆ ಪರವಾನಗಿ ಪಡೆಯುವಲ್ಲಿಯೇ ಕಳೆದುಹೋದರೆ ಅವರು ಕ್ಷೇತ್ರ ಕಾರ್ಯ ಮಾಡುವುದು ಯಾವಾಗ? ಮಾಹಿತಿ ಕಲೆ ಹಾಕುವುದು ಯಾವಾಗ? ಅಧ್ಯಯನದಿಂದ ತಿಳಿದುಬಂದ ಮಾಹಿತಿಯನ್ನು ಸಂಬಂಧಿಸಿದವರಿಗೆ ದಾಖಲೆ ರೂಪದಲ್ಲಿ ಸಲ್ಲಿಸುವುದು ಯಾವಾಗ? ಇದೆಲ್ಲ ರಗಳೆಯೇ ಬೇಡ ಎಂದು ಸಂಶೋಧನಾ ವಿದ್ಯಾರ್ಥಿಗಳು ಆ್ಯಕ್ಟಿವ್ ಸ್ಯಾಂಪ್ಲಿಂಗ್‌ನ ಅವಶ್ಯಕತೆ ಇಲ್ಲದಿರುವ ವಿಷಯಗಳಿಗೆ ಮೊರೆ ಹೋಗುತ್ತಾರೆ. ಈ ಪ್ರವೃತ್ತಿ, ವನ್ಯಜೀವಿ ಅಧ್ಯಯನಗಳಿಗೆ ಹಿನ್ನಡೆ ಉಂಟು ಮಾಡುತ್ತದೆ.

ಹುಲಿ, ಆನೆ, ಚಿರತೆ ಮತ್ತು ಕಾಳಿಂಗ ಸರ್ಪಗಳ ಮಾಹಿತಿಯ ಹೊರತಾಗಿ ಬೇರೆ ವನ್ಯಜೀವಿ ಪ್ರಭೇದಗಳ ಕುರಿತು ಕರಾರುವಕ್ಕಾದ ಮತ್ತು ಗುಣಮಟ್ಟದ ಮಾಹಿತಿ ಇಲ್ಲ. ಹುಲಿ ಅಥವಾ ಆನೆಗಳಂತಹ ಪ್ರಾಣಿ ಪ್ರಭೇದಗಳ ಸಂಶೋಧನೆಗೆ ಹೆಚ್ಚು ಒಲವು ಮೊದಲಿನಿಂದಲೂ ಇದೆ. ಕಡಿಮೆ ಪ್ರಾಮುಖ್ಯತೆಯ ಕೀಟಗಳು, ಉಭಯಚರಿಗಳು, ನಿರ್ದಿಷ್ಟ ಸಸ್ಯಪ್ರಭೇದಗಳ ಮೇಲಿನ ಅಧ್ಯಯನಗಳು ನಿರ್ಲಕ್ಷ್ಯಕ್ಕೊಳಗಾಗಿವೆ. ವಾಯುಗುಣ ವೈಪರೀತ್ಯದ ಈ ದಿನಗಳಲ್ಲಿ ಎಲ್ಲ ಪ್ರಭೇದಗಳ ಅಧ್ಯಯನ ಅನಿವಾರ್ಯವಾಗಿದ್ದು, ಯಾವ ಜೀವಿ ಪ್ರಭೇದವನ್ನೂ ಕಡೆಗಣಿಸುವಂತಿಲ್ಲ.

ಕೇಂದ್ರ ಮತ್ತು ರಾಜ್ಯಮಟ್ಟದ ಅನುಮತಿಗಳ ನಡುವೆ ಸಮನ್ವಯದ ಕೊರತೆ ಇದೆ. ಒಂದು ಕಡೆಯಿಂದ ಅನುಮತಿ ದೊರೆತರೂ, ಇನ್ನೊಂದು ಕಡೆಯಿಂದ ತಿರಸ್ಕೃತವಾಗಬಹುದು. ಕೆಲವು ರಾಜ್ಯಗಳು ಸಂಶೋಧಕರಿಗೆ ಸುಲಭವಾಗಿ ಅನುಮತಿ ನೀಡುತ್ತವೆ. ಕರ್ನಾಟಕ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಕಠಿಣ ನೀತಿಗಳನ್ನು ಅನುಸರಿಸುತ್ತವೆ ಎನ್ನುವ ಅಭಿಪ್ರಾಯವಿದೆ.

ಅನುಮತಿ ನೀಡುವ ಪ್ರಕ್ರಿಯೆಯಲ್ಲಿ ಸ್ಪಷ್ಟ ಮತ್ತು ಏಕರೂಪದ ಮಾನದಂಡಗಳ ಕೊರತೆ ಇದೆ. ಒಂದೇ ರೀತಿಯ ಸಂಶೋಧನಾ ಪ್ರಸ್ತಾವಗಳಿಗೆ ವಿವಿಧ ರಾಜ್ಯಗಳಲ್ಲಿ ವಿವಿಧ ಅಧಿಕಾರಿಗಳಿಂದ ಬೇರೆ ಬೇರೆ ನಿರ್ಧಾರಗಳು ಬರಬಹುದು. ಪ್ರಸ್ತಾವಗಳನ್ನು ಪರಿಶೀಲಿಸುವ ಅಧಿಕಾರಿಗಳಿಗೆ ಪರಿಸರ ವಿಜ್ಞಾನದ ಆಳವಾದ ತಿಳಿವಳಿಕೆ ಇಲ್ಲದಿದ್ದರೆ, ಪ್ರಸ್ತಾವವು ತಿರಸ್ಕೃತವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ವಿದೇಶಿ ಸಂಶೋಧಕರು ಭಾರತದಲ್ಲಿ ಸಂಶೋಧನೆ ಮಾಡಲು ಬಯಸಿದರೆ ಸಮಸ್ಯೆಗಳು ಮತ್ತಷ್ಟು ಜಟಿಲವಾಗುತ್ತವೆ. ಅವರು, ಪರಿಸರ ಸಚಿವಾಲಯದ ಜೊತೆಗೆ, ಗೃಹ ವ್ಯವಹಾರಗಳ ಸಚಿವಾಲಯ ಮತ್ತು ಸಂಬಂಧಿತ ಇಲಾಖೆಗಳಿಂದಲೂ ಅನುಮತಿ ಪಡೆಯಬೇಕಾಗುತ್ತದೆ. ಹಲವು ಹಂತಗಳ ಈ ಪ್ರಕ್ರಿಯೆಯು ಸಂಶೋಧನೆಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಸಹಯೋಗವನ್ನು ಕುಂಠಿತಗೊಳಿಸುತ್ತದೆ ಮತ್ತು ಜಾಗತಿಕ ಮಟ್ಟದಲ್ಲಿ ನಡೆಯಬೇಕಾದ ಪ್ರಮುಖ ಜ್ಞಾನ ವಿನಿಮಯವನ್ನು ತಡೆಗಟ್ಟುತ್ತದೆ.

ಸಂಶೋಧನೆ ಮತ್ತು ವನ್ಯಜೀವಿ ಸಂರಕ್ಷಣೆ ಪರಸ್ಪರ ಪೂರಕ. ಜಟಿಲ ನಿಯಮಗಳ ಮೂಲಕ ಸಂಶೋಧನೆಯನ್ನು ತಡೆಯುವುದಕ್ಕಿಂತ, ಸರಳ ನೀತಿಗಳ ಮೂಲಕ ಪ್ರೋತ್ಸಾಹಿಸುವುದು ದೇಶದ ವೈಜ್ಞಾನಿಕ ಮತ್ತು ಪರಿಸರ ಆರೋಗ್ಯಕ್ಕೆ ಹೆಚ್ಚು ಸಹಕಾರಿ.

ವಾಚಕರ ವಾಣಿ

ದುಬಾರಿ ಸ್ಟ್ಯಾಂಪ್; ಶಿಕ್ಷಕರು ಕಕ್ಕಾಬಿಕ್ಕಿ

ಪ್ರತಿವರ್ಷ ಶಿಕ್ಷಕರಿಗೆ 'ಶಿಕ್ಷಕರ ದಿನಾಚರಣೆ'ಯ ಶುಭಾಶಯ ಇರುವ ಸ್ಟ್ಯಾಂಪ್ ಖರೀದಿಸಲು ನೀಡಲಾಗುತ್ತದೆ. ಎರಡು ವರ್ಷದ ಹಿಂದೆ ₹40 ಇದ್ದ ಇದರ ಬೆಲೆ ಈ ವರ್ಷ ₹200ಕ್ಕೇರಿದೆ. ಈ ಬೆಲೆ ನೋಡಿದಾಗ ಇದರ ಅಗತ್ಯವಾದರೂ ಏನು? ಇದರ ಬೆಲೆ ನಿರ್ಧರಿಸುವವರು ಯಾರು? ಸರ್ಕಾರಿ ಹಾಗೂ ಅನುದಾನಿತ ಶಾಲಾ ಕಾಲೇಜುಗಳ ಶಿಕ್ಷಕರಿಗೆ ಖರೀದಿ ಕಡ್ಡಾಯ ಮಾಡಿರುವುದು ಹಾಗೂ ಅದರಿಂದ ಸಂಗ್ರಹವಾಗುವ ಮೊತ್ತವನ್ನು ಅವರ ಕಲ್ಯಾಣಕ್ಕೆ ಬಳಸಿಕೊಳ್ಳುವುದೇನೋ ಸರಿ. ಆದರೆ, ಅನುದಾನರಹಿತ ಶಾಲಾ–ಕಾಲೇಜಿನ ಶಿಕ್ಷಕರ ವೇತನ ಎಷ್ಟಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಈ ಶಿಕ್ಷಕರೂ ಸ್ಟ್ಯಾಂಪ್ ಖರೀದಿಸಬೇಕು ಎಂದು ಕಡ್ಡಾಯಗೊಳಿಸುವುದು ಸರಿಯಲ್ಲ.

ಅಜಯ್ ಕುಮಾರ್, ಬೆಂಗಳೂರು

ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟ

ದಾವಣಗೆರೆ ವಿಶ್ವವಿದ್ಯಾಲಯವು ಕಳೆದ ಜುಲೈನಲ್ಲಿ ಸ್ನಾತಕ ಪದವಿಯ ಆರನೇ ಸೆಮಿಸ್ಟರ್ ಪರೀಕ್ಷೆಯ ಮೌಲ್ಯಮಾಪನ ಮುಗಿದ ಕೇವಲ ಎರಡು ಗಂಟೆಯಲ್ಲಿ ಫಲಿತಾಂಶ ಪ್ರಕಟಿಸಿತ್ತು. ತುಮಕೂರು ವಿ.ವಿ. ಕೂಡ ಕ್ಷಿಪ್ರವಾಗಿ ಪದವಿ ಫಲಿತಾಂಶ ಹಾಗೂ ಉನ್ನತ ಶ್ರೇಣಿಗಳನ್ನು ಪ್ರಕಟಿಸಿದೆ. ಆದರೆ, ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯ ಮಾತ್ರ ಕಳೆದ ವರ್ಷ ನಡೆದ ಸ್ನಾತಕ ಪದವಿ ಪರೀಕ್ಷೆಗಳ ರ್‍ಯಾಂಕ್‌ಗಳನ್ನು ಒಂದು ವರ್ಷವಾದರೂ ಪ್ರಕಟಿಸಿಲ್ಲ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಇದೊಂದು ಹಿನ್ನಡೆಯ ದಾಖಲೆ ಆಗಬಹುದೇನೊ! ಕಳೆದ ವರ್ಷ ಪದವಿ ಪಾಸಾಗಿ ಮೊದಲ ವರ್ಷದ ಸ್ನಾತಕೋತ್ತರ ಪದವಿ ಮುಗಿಸಿರುವ ಈ ವಿದ್ಯಾರ್ಥಿಗಳು ಇದೀಗ ಕೊನೆಯ ವರ್ಷದ ಶೈಕ್ಷಣಿಕ ವರ್ಷಕ್ಕೆ ಬಂದಿರುತ್ತಾರೆ. ಆದರೂ, ವಿ.ವಿ. ಆಡಳಿತ ವರ್ಗ ಯಾವುದೇ ಕ್ರಮಕೈಗೊಳ್ಳದೆ ಮೌನವಾಗಿದೆ. ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ವಿ.ವಿ.ಯ ಈ ಚೆಲ್ಲಾಟ ಅಮಾನವೀಯ.

ಸರ್ಫ್ರಾಜ್ ಚಂದ್ರಗುತ್ತಿ, ಶಿವಮೊಗ್ಗ

ನಕಲಿ ವೈದ್ಯರಿಗೆ ಲಗಾಮು ಏಕಿಲ್ಲ?

'ರಾಜ್ಯದಲ್ಲಿ ನಕಲಿ ವೈದ್ಯರ ಜಾಲ' ಸುದ್ದಿ (ಪ್ರ.ವಾ., ಸೆಪ್ಟೆಂಬರ್ 8) ಓದಿ ಗಾಬರಿಯಾಯಿತು. ಅದರಲ್ಲೂ ಕಲಬುರಗಿ ಜಿಲ್ಲೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ನಕಲಿ ವೈದ್ಯರಿದ್ದಾರೆ. ಮಾನವನ ಅಭಿವೃದ್ಧಿಯಲ್ಲಿ ಆರೋಗ್ಯ ಸೂಚ್ಯಂಕಕ್ಕೆ ಪ್ರಧಾನ ಸ್ಥಾನ. ಈಗಾಗಲೇ, ಈ ಸೂಚ್ಯಂಕದಲ್ಲಿ ಜಿಲ್ಲೆಯು ಹಿಂದುಳಿದಿದೆ. ನಕಲಿ ವೈದ್ಯರಿಂದ ಜಿಲ್ಲೆಯ ಆರೋಗ್ಯ ಮಟ್ಟ ಮತ್ತಷ್ಟು ಹದಗೆಡಲಿದೆ. ನಕಲಿ ವೈದ್ಯರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕಿದೆ.

ಡಾ. ಗಾನ ಶ್ರುತಿ ಎಂ.ಕೆ., ಬೀದರ್

ವಿದ್ಯುತ್ ಸಂಪರ್ಕ ಇಲ್ಲದೆ ಪೇಚಾಟ

ಸುಪ್ರೀಂ ಕೋರ್ಟ್ ಆದೇಶದನ್ವಯ ಕಟ್ಟಡದ ಸ್ವಾಧೀನಾನುಭವ ಪತ್ರ (ಒಸಿ) ಇಲ್ಲದಿರುವ ಹೊಸ ಮನೆಗಳಿಗೆ ವಿದ್ಯುತ್ ಸಂಪರ್ಕ ಕೊಡುತ್ತಿಲ್ಲ. ಒಸಿ ಹಾಜರುಪಡಿಸಿದವರಿಗೆ ಸಂಪರ್ಕ ಕಲ್ಪಿಸುವಂತೆ ಕೋರ್ಟ್‌ನ ನಿರ್ದೇಶನವಿದೆ. ಆದರೂ, ಸಂಬಂಧಪಟ್ಟ ಇಲಾಖೆಯು ಇದಕ್ಕೆ ಕಿವಿಗೊಡುತ್ತಿಲ್ಲ. ನಾಲ್ಕು ತಿಂಗಳಿಂದಲೂ ನಮ್ಮ ಮನೆಯ ಗೃಹಪ್ರವೇಶ ಮಾಡಲಾರದೆ ಪರದಾಡುವಂತಾಗಿದೆ. ರಾಜ್ಯ ಸರ್ಕಾರ ಈ ಸಮಸ್ಯೆ ಬಗೆಹರಿಸಲು ಮುಂದಾಗಬೇಕಿದೆ.

ನಂಜನಹಳ್ಳಿ ನಾರಾಯಣ, ಬೆಂಗಳೂರು

ತೆರಿಗೆ ಇಳಿಕೆ: ತಗ್ಗಿದ ಜೇಬಿನ ಹೊರೆ

ಕೇಂದ್ರ ಸರ್ಕಾರ ಜಿಎಸ್‌ಟಿ ತೆರಿಗೆ ಹಂತಗಳನ್ನು ಪರಿಷ್ಕರಿಸಿರುವುದು ಒಳ್ಳೆಯ ನಿರ್ಧಾರ. ಇದು ಪುರೋಗಾಮಿ ತೆರಿಗೆ ಮತ್ತು ಪ್ರತಿಗಾಮಿ ತೆರಿಗೆಯ ಸಮ್ಮಿಶ್ರಣ ಎನ್ನಬಹುದು. ದೇಶದ ಆರ್ಥಿಕ ವ್ಯವಸ್ಥೆಯಲ್ಲಿನ ಹೂಡಿಕೆ, ಉತ್ಪಾದನೆ, ಆದಾಯ ಮುಂತಾದ ಚಟುವಟಿಕೆಗಳು ಸಮಗ್ರ ಬೇಡಿಕೆಯನ್ನು ಅವಲಂಬಿಸಿರುತ್ತವೆ. ತೆರಿಗೆ ದರದಲ್ಲಿನ ಇಳಿಕೆಯು ಜನರು ವಿನಿಯೋಗಿಸಬಹುದಾದ ಆದಾಯವನ್ನು ಹೆಚ್ಚಿಸುತ್ತದೆ. ಈ ಆದಾಯದಲ್ಲಿನ ಹೆಚ್ಚಳವು ಬೇಡಿಕೆ ಹೆಚ್ಚಳಕ್ಕೆ ನೆರವಾಗುತ್ತದೆ. ಬೇಡಿಕೆ ಹೆಚ್ಚಳವು ಆರ್ಥಿಕತೆಯಲ್ಲಿನ ಹೂಡಿಕೆ, ಉತ್ಪಾದನೆ, ವಿನಿಮಯ, ವಿತರಣೆಗೆ ಬಲ ನೀಡುತ್ತದೆ. ಈ ದಿಸೆಯಲ್ಲಿ ಜಿಎಸ್‌ಟಿ ಸ್ಲ್ಯಾಬ್‌ಗಳ ಪರಿಷ್ಕರಣೆಯು ದೇಶದ ಸಮಗ್ರ ಆರ್ಥಿಕ ಬೆಳವಣಿಗೆಗೆ ಇಂಬು ನೀಡಲಿದೆ.

ನಿರ್ಮಲಾ ನಾಗೇಶ್, ಕಲಬುರಗಿ

ಅವಘಡ ತಡೆಗೆ ಮುನ್ನೆಚ್ಚರಿಕೆಯೇ ಮದ್ದು

ಮುಂಬೈ, ಮಧ್ಯಪ್ರದೇಶ ಮತ್ತಿತರ ಕಡೆ ಗಣೇಶನ ವಿಸರ್ಜನಾ ಸಮಯದಲ್ಲಿ ಹನ್ನೆರಡು ಜನ ಮೃತಪಟ್ಟಿರುವುದು ವರದಿಯಾಗಿದೆ. ಪ್ರತಿವರ್ಷ ಗಣೇಶ ಮತ್ತು ದೀಪಾವಳಿ ಹಬ್ಬದಲ್ಲಿ ಇಂತಹ ದುರ್ಘಟನೆಗಳು ಸಂಭವಿಸುತ್ತವೆ. ಆದರೂ, ಯುವಜನರು ಮುನ್ನೆಚ್ಚರಿಕೆ ವಹಿಸದೆ ಸಾಯುತ್ತಿರುವುದು ವಿಷಾದನೀಯ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಕಲ್ಲುತೂರಾಟ: ಲಾಭ ಯಾರ ಜೇಬಿಗೆ?

ಮದ್ದೂರು ಪಟ್ಟಣದಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ಸಂದರ್ಭದಲ್ಲಿ ಕಹಿ ಘಟನೆ ನಡೆದಿರುವುದು ದುರದೃಷ್ಟಕರ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ಮೆರವಣಿಗೆ ಮೇಲೆ ಕಲ್ಲುತೂರಾಟ ನಡೆಸಿದವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಈಗಾಗಲೇ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಕಾರಣಕ್ಕಾಗಿ ಹಬ್ಬಗಳ ಮೆರವಣಿಗೆಯಲ್ಲಿ ಡಿ.ಜೆ ನಿಷೇಧಿಸಲಾಗಿದೆ. ಇಂತಹ ಘಟನೆಗಳಿಂದಾಗಿ ಎಲ್ಲಾ ರೀತಿಯ ಧಾರ್ಮಿಕ ಮೆರವಣಿಗೆಗಳಿಗೂ ಸಮಾಜದ ಸ್ವಾಸ್ಥ್ಯದ ಹಿತದೃಷ್ಟಿಯಿಂದ ನಿಷೇಧ ಹೇರುವ ಸಾಧ್ಯತೆ ಇದೆ. ಆದ್ದರಿಂದ ಗಣೇಶ ವಿಸರ್ಜನೆ, ಈದ್ ಮಿಲಾದ್‌ನಂತಹ ಮೆರವಣಿಗೆ ಮೇಲೆ ಕಲ್ಲುತೂರಾಟ ನಡೆದರೆ ಪ್ರಯೋಜನ ಪಡೆಯುವವರು ಯಾರು ಎಂಬ ಬಗ್ಗೆಯೂ ಚಿಂತನೆ ನಡೆಸಬೇಕು.

ಸಲೀಮ್ ಬೋಳಂಗಡಿ, ಮಂಗಳೂರು

ಚುರುಮುರಿ

ವೋಟ್ ಫಾರ್...

• ಮಣ್ಣೆ ರಾಜು

'ನಿನ್ನ ವೋಟ್ ಯಾವುದಕ್ಕೆ, ಇವಿಎಂ ಮೆಷಿನ್ನಿಗೋ ಬ್ಯಾಲೆಟ್ ಪೇಪರ್‌ಗೋ?' ಶಂಕ್ರಿ ಕೇಳಿದ.

'ಮೆಷಿನ್‌ನಲ್ಲಿ ಬಟನ್ ಒತ್ತಬೇಕು, ಮತಪತ್ರದಲ್ಲಿ ಮುದ್ರೆ ಒತ್ತಬೇಕು. ಯಾವುದಕ್ಕೆ ಒತ್ತಿದರೂ ನಮ್ಮ ಮತಮೌಲ್ಯ ವ್ಯತ್ಯಾಸವಾಗುವುದಿಲ್ಲ' ಅಂದಳು ಸುಮಿ.

'ಕಾಂಗ್ರೆಸ್‌ನವರಿಗೆ ಮತಯಂತ್ರದ ಬಗ್ಗೆ ವಿಶ್ವಾಸವಿಲ್ಲವಂತೆ. ಆ ಯಂತ್ರದೊಳಗೆ ಮಾಯಾಮಂತ್ರ ಅಡಗಿದೆ ಅನ್ನೋ ಅನುಮಾನವಂತೆ'.

'ಮತಪತ್ರದಲ್ಲಿ ಮುದ್ರೆ ಒತ್ತಿ ಅಭ್ಯರ್ಥಿ ಹೆಸರಿಗೆ ಮಸಿ ಬಳಿಯುವ ಪದ್ಧತಿ ಬೇಡ ಎನ್ನುವುದು ಬಿಜೆಪಿಯವರ ವಾದ' ಎಂದು ಸುಮಿ ಮಾತು ಬೆಳೆಸಿದಳು.

'ಯಾವ ಪದ್ಧತಿ ಮಾಡಿದರೂ ಮತದಾರರು ಬೆರಳಿಗೆ ಮಸಿ ಬಳಿಸಿಕೊಳ್ಳುವುದು ಬದಲಾಗುವುದಿಲ್ಲ'.

'ಮತಯಂತ್ರ ಬೇಕೊ, ಮತಪತ್ರ ಬೇಕೊ? ಎಂದು ಮತ ಚಲಾಯಿಸುವ ಮತದಾರರ ಅಭಿಮತ ಕೇಳಬೇಕಲ್ವೇನ್ರೀ?'

'ಹಾಗಂತ, ಮತಯಂತ್ರ ವರ್ಸಸ್ ಮತಪತ್ರದ ಚುನಾವಣೆ ನಡೆಸಿ, ಮತದಾರರ ಬಹುಮತದ ಅಭಿಪ್ರಾಯ ಕೇಳುವ ಪರಿಸ್ಥಿತಿ ಇಲ್ಲ. ಕೋಳಿ ಕೇಳಿ ಮಸಾಲೆ ಅರೆಯುವುದಿಲ್ಲ. ಚುನಾವಣೆಗಳು ಮತದಾರರಿಗಿಂಥಾ ರಾಜಕೀಯ ಪಕ್ಷಗಳಿಗೆ ಮುಖ್ಯ'.

'ನಮ್ಮ ಮಕ್ಕಳು ಪರೀಕ್ಷೆಗಳಲ್ಲಿ ಎಬೋ ನೈಂಟಿ ಪರ್ಸೆಂಟ್ ತಗೊಳ್ತಾರೆ, ಚುನಾವಣೆಗಳಲ್ಲಿ ನಮ್ಮ ಮತ ಪ್ರಮಾಣ 50–60 ಪರ್ಸೆಂಟ್ ಆದ್ರೆ ಹೆಚ್ಚು. ಪರೀಕ್ಷೆಗಳಲ್ಲಿ ಕಾಪಿ ಮಾಡುವವರನ್ನು ಡಿಬಾರ್ ಮಾಡುವಂತೆ ಚುನಾವಣೆಗಳಲ್ಲಿ ದುಡ್ಡು ಹಂಚುವವರು, ಈಸ್ಕೊಳ್ಳುವವರ ವಿರುದ್ಧ ಕ್ರಮವಾದರೆ ಚುನಾವಣೆಗಳು ಶಿಸ್ತಿನಿಂದ ನಡೆಯಬಹುದು'.

'ಹಾಗೆಲ್ಲಾ ಸ್ಟ್ರಿಕ್ಟ್ ಮಾಡಿದರೆ ಪೋಲಿಂಗ್ ಪರ್ಸೆಂಟೇಜ್ ಇನ್ನೂ ಕುಸಿದು ಚುನಾವಣೆಗಳು ಫೇಲ್ ಆಗಿಬಿಡಬಹುದು ಅನ್ನೋ ಆತಂಕ ಅಭ್ಯರ್ಥಿಗಳನ್ನು ಕಾಡಬಹುದು!'

'ವಿದ್ಯಾರ್ಥಿಗಳ ಹಾಜರಾತಿ ಕೊರತೆ ಎಂದು ಸರ್ಕಾರಿ ಶಾಲೆ ಮುಚ್ಚುತ್ತಾರಲ್ಲ, ಹಾಗೇ ಮತಗಟ್ಟೆಗಳನ್ನೂ ಮುಚ್ಚುವ ಪರಿಸ್ಥಿತಿ ಬರಬಹುದು ಕಣ್ರೀ!'

'ಹಾಗೇನೂ ಆಗೋದಿಲ್ಲ, ಸರ್ಕಾರಿ ಶಾಲೆಗಳನ್ನು ಮುಚ್ಚಿದರೂ ಶಾಲಾ ಕಟ್ಟಡಗಳು ಮತಗಟ್ಟೆಗಳಾಗಿ ಉಳಿಯುತ್ತವೆ. ನಮ್ಮಲ್ಲಿ ಚುನಾವಣೆಗಳಿಗೆ ಮಹತ್ವ ಜಾಸ್ತಿ...' ಅಂದ ಶಂಕ್ರಿ.

ಸಂಗತ

ಅತಿಥಿ ಉಪನ್ಯಾಸಕ: ಸರ್ಕಾರ ನೆರವಾಗಲಿ

ಬೋಧಕರ ಕೊರತೆಯಿಂದ ವಿದ್ಯಾರ್ಥಿಗಳಿಗೆ ಅಡಚಣೆ ಆಗಬಾರದು. ತೊಂದರೆ ಅನುಭವಿಸುತ್ತಿರುವ ಅತಿಥಿ ಉಪನ್ಯಾಸಕರ ನೆರವಿಗೆ ಸರ್ಕಾರ ಧಾವಿಸಬೇಕು.

• ರಾಜಕುಮಾರ ಕುಲಕರ್ಣಿ

ಉನ್ನತ ಶಿಕ್ಷಣ ಇಲಾಖೆಯು ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸುಮಾರು ಹನ್ನೊಂದು ಸಾವಿರ ಅತಿಥಿ ಉಪನ್ಯಾಸಕರನ್ನು ಕಳೆದ ಆಗಸ್ಟ್ ತಿಂಗಳಿನಲ್ಲಿ ಸೇವೆಯಿಂದ ಬಿಡುಗಡೆಗೊಳಿಸಿದೆ. ಶೈಕ್ಷಣಿಕ ವರ್ಷ ಆರಂಭವಾಗಿ ತಿಂಗಳು ಕಳೆದರೂ ಇದುವರೆಗೂ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿಲ್ಲ. ರಾಜ್ಯದ ಒಟ್ಟು 430 ಸರ್ಕಾರಿ ಪದವಿ ಕಾಲೇಜುಗಳಲ್ಲಿನ ಚಿತ್ರಣವಿದು. ಆತಂಕದ ಸಂಗತಿ ಎಂದರೆ, ಸೇವೆಯಿಂದ ಬಿಡುಗಡೆಗೊಂಡವರಲ್ಲಿ 5,500 ಅತಿಥಿ ಉಪನ್ಯಾಸಕರು ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ) ನಿಯಮಾವಳಿ ಪ್ರಕಾರ ನೇಮಕಾತಿಗೆ ಅರ್ಹತೆ ಹೊಂದಿಲ್ಲ. ಇವರಲ್ಲಿ ಅನೇಕರು ನಿವೃತ್ತಿ ವಯಸ್ಸಿಗೆ ಹತ್ತಿರದಲ್ಲಿದ್ದಾರೆ.

ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ನೀಗಿಸಲು ಅತಿಥಿ ಉಪನ್ಯಾಸಕರೆಂಬ ಪರ್ಯಾಯ ಮಾರ್ಗವನ್ನು ಶಿಕ್ಷಣ ಇಲಾಖೆ ಕಂಡುಕೊಂಡಿದೆ. ಈ ಮೊದಲು ಅರೆಕಾಲಿಕ ಉಪನ್ಯಾಸಕರೆಂದು ಅವರನ್ನು ಕರೆಯಲಾಗುತ್ತಿತ್ತು. ಕಾಯಂ ಉಪನ್ಯಾಸಕರು ಪಡೆಯುತ್ತಿರುವ ಸಂಬಳಕ್ಕೆ ಹೋಲಿಸಿದರೆ ಅತಿಥಿ ಉಪನ್ಯಾಸಕರ ಸಂಬಳ ಅತ್ಯಲ್ಪ. ಗಳಿಕೆ ರಜೆ, ಆರೋಗ್ಯ ವಿಮೆ ಮತ್ತು ನಿವೃತ್ತಿ ವೇತನದಂತಹ ಸೌಲಭ್ಯಗಳು ಅವರಿಗಿಲ್ಲ. ನೇಮಕಾತಿ ಆದೇಶ ಒಂದು ವರ್ಷದ ಅವಧಿಗೆ ಮಾತ್ರ ಸೀಮಿತವಾಗಿದ್ದು, ಪ್ರತಿವರ್ಷ ಹೊಸದಾಗಿ ನಿಯುಕ್ತಿಗೊಳ್ಳಬೇಕಾದ ನಿಯಮದ ಕಾರಣ, ಸದಾಕಾಲ ಅಭದ್ರತೆಯಲ್ಲಿ ಕೆಲಸ ಮಾಡಬೇಕು.

ಈ ನಡುವೆ, ಅತಿಥಿ ಉಪನ್ಯಾಸಕರು ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಇಲ್ಲವೇ ಪಿಎಚ್.ಡಿ ಪದವಿ ಪಡೆದಿರಬೇಕೆನ್ನುವ ನಿಯಮವನ್ನು ಯುಜಿಸಿ ಜಾರಿಗೆ ತಂದಿದೆ. ಸ್ನಾತಕೋತ್ತರ ಪದವಿಯನ್ನು ಮಾತ್ರ ಹೊಂದಿರುವ ಅತಿಥಿ ಉಪನ್ಯಾಸಕರಲ್ಲಿ ಅನೇಕರು ಕಳೆದ ಎರಡು ದಶಕಗಳಿಂದ ಬೋಧನೆಯಲ್ಲಿ ತೊಡಗಿಸಿಕೊಂಡಿರುವವರು. ಯುಜಿಸಿ ನಿಯಮಾವಳಿ ಚಾಲ್ತಿಗೆ ಬಂದರೆ ಕೆಲಸ ಕಳೆದುಕೊಳ್ಳುವ ಆತಂಕವನ್ನು ಅವರು ಎದುರಿಸುತ್ತಿದ್ದಾರೆ. ಕಡಿಮೆ ಸಂಬಳ ಮತ್ತು ಕೆಲಸದ ಒತ್ತಡದಿಂದಾಗಿ ಅತಿಥಿ ಉಪನ್ಯಾಸಕರಿಗೆ ಯುಜಿಸಿ ನಿಗದಿಪಡಿಸಿರುವ ಅರ್ಹತೆಯನ್ನು ಹೊಂದಲು ಸಾಧ್ಯವಾಗುತ್ತಿಲ್ಲ. ಹೆಚ್ಚಿನ ಉಪನ್ಯಾಸಕರು ಈಗಾಗಲೇ ಮಧ್ಯವಯಸ್ಸು ದಾಟಿದ್ದು, ಕುಟುಂಬ ನಿರ್ವಹಣೆ ಹಾಗೂ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಸರಿದೂಗಿಸುವುದರ ನಡುವೆ ಜರ್ಜರಿತರಾಗಿದ್ದಾರೆ. ಮಕ್ಕಳ ಶಿಕ್ಷಣಕ್ಕೆಂದು ಖರ್ಚು ಮಾಡಬೇಕಾದ ವಯಸ್ಸಿನಲ್ಲಿ ತಮ್ಮ ಸ್ವಂತದ ಶಿಕ್ಷಣಕ್ಕೆ, ಅದೂ ಅತ್ಯಲ್ಪ ಸಂಬಳದಲ್ಲಿ ಖರ್ಚು ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ.

ಕಡಿಮೆ ಸಂಬಳದಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ಆರ್ಥಿಕ ಹೊರೆಯನ್ನು ತಪ್ಪಿಸಿದಂತಾಗುತ್ತದೆ ಎಂದು ಯೋಚಿಸಿದರೆ ಅದು ತಪ್ಪು ಆಲೋಚನೆ ಆಗುತ್ತದೆ. ಸರ್ಕಾರದ ಈ ನಡೆ ನೇರವಾಗಿ ಶಿಕ್ಷಣದ ಗುಣಮಟ್ಟದ ಕುಸಿತಕ್ಕೆ ಕಾರಣವಾಗುತ್ತಿದೆ. ಅದೆಷ್ಟೋ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರಿಂದಲೇ ಪಾಠಗಳು ನಡೆಯುತ್ತಿವೆ.

ಪ್ರಸ್ತುತ, ವೃತ್ತಿಪರ ಕೋರ್ಸ್‌ಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿರುವುದರಿಂದ ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಜ್ಞಾನ ಶಾಖೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್‌ಗಳನ್ನು ಅಭ್ಯಸಿಸಲು ಆಸಕ್ತಿ ತೋರುತ್ತಿರುವ ಹೊತ್ತಿನಲ್ಲಿ ವಿಜ್ಞಾನ, ಸಮಾಜ ವಿಜ್ಞಾನ, ಭಾಷೆ ಹಾಗೂ ಲಲಿತ ಕಲೆಗಳನ್ನು ಬೋಧಿಸಲು ಉಪನ್ಯಾಸಕರ ಕೊರತೆ ಎದುರಾಗಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ಈ ಮೊದಲು ಉಪನ್ಯಾಸಕರಿಗಷ್ಟೇ ಸೀಮಿತವಾಗಿದ್ದ 'ಅತಿಥಿ' ಪಟ್ಟ ಈಗ ಗ್ರಂಥಪಾಲಕ ವೃತ್ತಿಗೂ ವಿಸ್ತರಿಸಿದೆ. ಕಳೆದ ಕೆಲವು ವರ್ಷಗಳಿಂದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಗ್ರಂಥಪಾಲಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ನೇಮಕಾತಿಯ ಅವಧಿ ಒಂದು ವರ್ಷಕ್ಕೆ ಸೀಮಿತ. ಈ ಕಡಿಮೆ ಅವಧಿಯಲ್ಲಿ ಗ್ರಂಥಪಾಲಕರು ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸುವುದಾದರೂ ಹೇಗೆ? ಸರ್ಕಾರದ ನಿರ್ಲಕ್ಷ್ಯದಿಂದಾಗಿ ಹೆಚ್ಚಿನ ಪದವಿ ಕಾಲೇಜುಗಳಲ್ಲಿನ ಗ್ರಂಥಾಲಯಗಳು ಶೋಚನೀಯ ಸ್ಥಿತಿಯಲ್ಲಿವೆ.

ಶಿಕ್ಷಕರ ಕೊರತೆ ತೀವ್ರವಾಗಿರುವ ಹೊತ್ತಿನಲ್ಲಿ ಹೊಸ ಸರ್ಕಾರಿ ಕಾಲೇಜುಗಳನ್ನು ಮತ್ತು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಅಗತ್ಯವೇನು? ಹೊಸ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಮಾಡುವ ಖರ್ಚನ್ನು ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾಯಂ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಬಳಸಿಕೊಳ್ಳುವುದು ಉತ್ತಮ.

ನೆಲ್ಸನ್ ಮಂಡೇಲಾ ಶಿಕ್ಷಣದ ಮಹತ್ವವನ್ನು ಹೀಗೆ ಹೇಳಿರುವರು: 'ರಾಷ್ಟ್ರವನ್ನು ನಾಶಪಡಿಸಲು ಅಣುಬಾಂಬ್‌ಗಳಾಗಲೀ ಅಥವಾ ದೀರ್ಘವ್ಯಾಪ್ತಿಯ ಕ್ಷಿಪಣಿಗಳಾಗಲೀ ಬೇಕಿಲ್ಲ. ಶಿಕ್ಷಣದ ಗುಣಮಟ್ಟವನ್ನು ಕಡಿಮೆ ದರ್ಜೆಗೆ ಇಳಿಸಿದರೆ ಸಾಕು, ಅದು ದೇಶದ ನಾಶಕ್ಕೆ ನಾಂದಿ ಹಾಡುತ್ತದೆ'. ಶಿಕ್ಷಣದ ನೀತಿ ನಿಯಮಗಳನ್ನು ರೂಪಿಸುವವರು ಶಿಕ್ಷಕರ ಸ್ಥಿತಿಗತಿ ಕುರಿತು ಯೋಚಿಸಬೇಕಾದದ್ದು ಈ ಸಂದರ್ಭದ ತುರ್ತು ಅಗತ್ಯವಾಗಿದೆ.

ವಿದ್ಯಾರ್ಥಿಗಳಿಗಾಗಿ ತಮ್ಮ ಜೀವನವನ್ನೇ ಸವೆಸಿರುವ ಅತಿಥಿ ಉಪನ್ಯಾಸಕರು ಹೊಸ ನಿಯಮದ ಕಾರಣದಿಂದಾಗಿ ತೊಂದರೆಗೆ ಒಳಗಾಗಬಾರದು. ಅವರಿಗೆ ಎದುರಾಗಿರುವ ಸಂಕಷ್ಟವನ್ನು ಪರಿಹರಿಸಲು ರಾಜ್ಯ ಸರ್ಕಾರ ಮಧ್ಯಮ ಮಾರ್ಗವೊಂದನ್ನು ಕಂಡುಕೊಳ್ಳುವುದು ಅಗತ್ಯ. ಅತಿಥಿ ಉಪನ್ಯಾಸಕರ ಹಿತಾಸಕ್ತಿಯನ್ನು ರಕ್ಷಿಸುವುದು ಸರ್ಕಾರದ ಕರ್ತವ್ಯ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ನೇಪಾಳ ಸರ್ಕಾರದ ಸದ್ದಡಗಿಸಿದ ಯುವ ಕ್ರಾಂತಿ

ನೇಪಾಳ ರಾಜಧಾನಿ ಕಠ್ಮಂಡುವಿನಲ್ಲಿ ಪ್ರತಿಭಟನಕಾರರು ಮಂಗಳವಾರ ಪೊಲೀಸ್ ವಾಹನದಲ್ಲಿ ಸಾಗಿದರು ಎಎಫ್‌ಪಿ ಚಿತ್ರ

ನೇಪಾಳದಲ್ಲಿ ಕ್ಷಿಪ್ರಕ್ರಾಂತಿ ನಡೆದಿದ್ದು, ಪ್ರಧಾನಿ ಕೆ.ಪಿ.ಶರ್ಮಾ ಓಲಿ ಅವರು ರಾಜೀನಾಮೆ ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸಿದ್ದೇ ವಿದ್ಯಾರ್ಥಿಗಳು ಬೀದಿಗಿಳಿಯಲು ಕಾರಣ ಎನ್ನುವುದು ತಕ್ಷಣದ ಕಾರಣ. ಆದರೆ ಭ್ರಷ್ಟಾಚಾರ ಹಗರಣಗಳು, ಯುವಜನರಲ್ಲಿ ಹೆಚ್ಚಿದ ನಿರುದ್ಯೋಗ, ಆಳುವವರ ಸ್ವಜನಪಕ್ಷಪಾತ, ವಿದೇಶಗಳನ್ನು ಅವಲಂಬಿಸಿದ ಆರ್ಥಿಕತೆ, ಸರ್ಕಾರದ ನೀತಿಗಳ ಬಗೆಗಿನ ಅಸಮಾಧಾನ ಮುಂತಾದ ಕಾರಣಗಳು ಕ್ರಾಂತಿಯ ಹಿಂದೆ ಇವೆ

ಪ್ರಜಾವಾಣಿ ವಾರ್ತೆ

ನೇಪಾಳದಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ನಡೆಯುತ್ತಿವೆ. ಹಿಮಾಲಯದ ರಾಷ್ಟ್ರವಾದ ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ಅವರ ಸರ್ಕಾರ ಹಾಕಿದ್ದ ತಡೆಬೇಲಿ, ವಿಧಿಸಿದ್ದ ಕರ್ಫ್ಯೂ ಅನ್ನು ಯುವಜನರು ಧಿಕ್ಕರಿಸಿ ಸರಹದ್ದುಗಳನ್ನು ದಾಟಿದ್ದಾರೆ. ಅವರ ಆಕ್ರೋಶಕ್ಕೆ ನೇಪಾಳ ಕಮ್ಯುನಿಸ್ಟ್ ಪಕ್ಷದ (ಸಿಪಿಎನ್–ಯುಎಂಎಲ್) ಅಧ್ಯಕ್ಷರೂ ಆದ ಪ್ರಧಾನಿ ಶರ್ಮಾ ಅವರು ಹುದ್ದೆ ತೊರೆದಿದ್ದಾರೆ. ವಿದ್ಯಾರ್ಥಿಗಳ ಪ್ರತಿಭಟನೆಯಿಂದ ರಾಷ್ಟ್ರಪತಿಯೂ ರಾಜೀನಾಮೆ ನೀಡಿದರೆ, ಸರ್ಕಾರ ಉರುಳುವುದು ನಿಶ್ಚಿತ ಎನ್ನುವಂತಾಗಿದೆ.

ಮೇಲ್ನೋಟಕ್ಕೆ ಇದು ಸಾಮಾಜಿಕ ಜಾಲತಾಣಗಳ ನಿರ್ಬಂಧದಿಂದ ಪ್ರೇರಿತವಾದ ‘ಜೆನ್ ಝೀ’ (ಸಾಮಾನ್ಯವಾಗಿ 1997ರಿಂದ 2012ರ ನಡುವೆ ಹುಟ್ಟಿದ ತಲೆಮಾರು) ಹೋರಾಟ ಎಂದು ಅನ್ನಿಸುತ್ತದೆಯಾದರೂ, ಈ ಪ್ರತಿಭಟನೆಗಳು, ಆಕ್ರೋಶದ ಹಿಂದೆ ಸರ್ಕಾರದ ದುರಾಡಳಿತ, ಭ್ರಷ್ಟಾಚಾರ, ಆರ್ಥಿಕ ಕುಸಿತ, ಸ್ವಜನಪಕ್ಷಪಾತದಂತಹ ಗಂಭೀರ ಸಮಸ್ಯೆಗಳಿವೆ ಎನ್ನಲಾಗುತ್ತಿದೆ.

ದೇಶದಲ್ಲಿ ಬಡತನ ಹೆಚ್ಚಾಗಿದ್ದು, ಯುವಕರಿಗೆ ಉದ್ಯೋಗ ಸಿಗುತ್ತಿಲ್ಲ. ವರದಿಯೊಂದರ ಪ್ರಕಾರ, 15–29 ವರ್ಷದ ನಡುವಿನ ಯುವಜನರಲ್ಲಿ ಶೇ 19ರಷ್ಟು ನಿರುದ್ಯೋಗ ಇದೆ. ದೇಶದಲ್ಲಿ ಕೆಲಸ ಸಿಗದೇ ಅನೇಕರು ವಿದೇಶಗಳಿಗೆ ಹೋಗಿ ಸಣ್ಣಪುಟ್ಟ ಕೆಲಸ ಮಾಡಿ ಕುಟುಂಬಸ್ಥರಿಗೆ ಹಣ ಕಳುಹಿಸುತ್ತಿದ್ದಾರೆ. ಕೆಲವರು ಉಕ್ರೇನ್–ರಷ್ಯಾ ಯುದ್ಧದಲ್ಲಿ ಬಾಡಿಗೆ ಸೈನಿಕರೂ ಆಗಿದ್ದಾರೆ. ವಿದೇಶಗಳಿಂದ ಬರುವ ಹಣವೇ ದೇಶದ ಆರ್ಥಿಕತೆಗೆ ಮೂಲವಾಗಿದೆ (ಶೇ 33ರಷ್ಟು). ಇವೆಲ್ಲವೂ ಯುವ ಸಮುದಾಯದ ಸಿಟ್ಟಿಗೆ ಕಾರಣಗಳಾಗಿದ್ದವು.

ಮಾಜಿ ಪ್ರಧಾನಿ ಪ್ರಚಂಡ ಅವರು ದಶಕಗಳ ಕಾಲ ರಾಜಪ್ರಭುತ್ವದ ಶೋಷಣೆ, ಅಸಮಾನತೆಯ ವಿರುದ್ಧ ಪ್ರತಿಭಟನೆ ಮಾಡಿ, ದೇಶದ ಅತ್ಯುನ್ನತ ಪದವಿಗೆ ಏರಿದ್ದವರು. ಅವರು ಮತ್ತು ಅವರ ಪಕ್ಷದವರು ಅಸಮಾನತೆ ಹೆಚ್ಚಿಸುವಂಥ, ಅನ್ಯಾಯದ ಕೃತ್ಯಗಳಲ್ಲಿ ತೊಡಗಿದ್ದಾರೆ ಎನ್ನುವುದು ಯುವಜನರ ಅಭಿಪ್ರಾಯವಾಗಿತ್ತು. ಟೀ ಎಸ್ಟೇಟ್ ಅನ್ನು ವಾಣಿಜ್ಯ ಭೂಮಿಯನ್ನಾಗಿ ಬದಲಿಸಿದ ಆರೋಪವೂ ಸೇರಿದಂತೆ ಹಲವು ಆರೋಪಗಳು ಓಲಿ ವಿರುದ್ಧ ಕೇಳಿಬಂದಿದ್ದವು. ಮಾಜಿ ಪ್ರಧಾನಿಗಳಾದ ಮಾಧವ ನೇಪಾಳ್, ಬಾಬೂರಾಮ್ ಭಟ್ಟರಾಯ್, ಮತ್ತು ಖಿಲ್ ರೆಗ್ಮಿ ಅವರು ಸರ್ಕಾರದ ಭೂಮಿಯನ್ನು ಖಾಸಗಿಯವರಿಗೆ ಪರಭಾರೆ ಮಾಡಿದ ಆರೋಪಕ್ಕೆ ಗುರಿಯಾಗಿದ್ದರು; ಶೇರ್ ಬಹದ್ದೂರ್ ದೇವುಬಾ ವಿರುದ್ಧ ಕಮಿಷನ್ ಪಡೆದ ಆರೋಪವಿದ್ದರೆ, ಪ್ರಚಂಡ ವಿರುದ್ಧ ಹಣ ದುರುಪಯೋಗದ ಆರೋಪವಿತ್ತು.

ಸಾಮಾಜಿಕ ಜಾಲತಾಣವೇ ಮಾಧ್ಯಮ: ದೇಶದಲ್ಲಿ ನಡೆದ ಭ್ರಷ್ಟ ಹಗರಣಗಳ ಬಗ್ಗೆ ಯುವ ಸಮುದಾಯದಲ್ಲಿ ಭಾರಿ ಅಸಮಾಧಾನ ಇತ್ತು. 2017ರಲ್ಲಿ ಏರ್‌ಬಸ್ ಖರೀದಿಯಲ್ಲಿ ಅವ್ಯವಹಾರ ನಡೆದು, ಅದರ ಬಗ್ಗೆ ತನಿಖೆಯಾಗಿ ಭ್ರಷ್ಟಾಚಾರ ಸಾಬೀತಾಗಿತ್ತು. ರಾಜಕಾರಣಿಗಳು ಭ್ರಷ್ಟಾಚಾರದಿಂದ ಅಪಾರ ಹಣ ಗಳಿಸುತ್ತಿದ್ದಾರೆ ಎನ್ನುವ ಭಾವನೆ ವ್ಯಾಪಕವಾಗಿತ್ತು. ಮತ್ತೊಂದೆಡೆ, ಹಾಲಿ ಪ್ರಧಾನಿ ಓಲಿ ಮತ್ತು ಮಾಜಿ ಪ್ರಧಾನಿಗಳ ಕುಟುಂಬದ ಸದಸ್ಯರ ಐಷಾರಾಮಿ ಜೀವನಕ್ಕೆ ಸಂಬಂಧಿಸಿದ ಚಿತ್ರಗಳು ಮತ್ತು ವಿವರಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗುತ್ತಿದ್ದವು. ನಾಯಕರ ಮಕ್ಕಳು ವಿದೇಶಗಳಿಂದ ದುಬಾರಿ ಬ್ಯಾಗ್ ಹೊತ್ತು ವಿಮಾನ ಇಳಿದರೆ, ಬಡವರ ಮಕ್ಕಳ ಮೃತದೇಹಗಳು ದೇಶಕ್ಕೆ ವಾಪಸ್ ಬರುತ್ತಿವೆ ಎನ್ನುವಂಥ ವಿಚಾರಗಳು ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದ್ದವು. ಬಡವರ ಬದುಕು ದುರ್ಭರವಾಗುತ್ತಿದ್ದರೆ, ರಾಜಕಾರಣಿಗಳು ಮತ್ತು ಅವರ ಮಕ್ಕಳ ಸಂಪತ್ತು ಹೆಚ್ಚುತ್ತಿರುವ ಬಗ್ಗೆ ಅನೇಕರು ಹೋಲಿಕೆ ಮಾಡಿ ಪೋಸ್ಟ್‌ಗಳನ್ನು ಹಂಚಿಕೊಳ್ಳುತ್ತಿದ್ದರು. ‘ನೆಪೋ ಕಿಡ್ಸ್’, ‘ನೆಪೊ ಬೇಬೀಸ್’ (ಸ್ವಜನಪಕ್ಷಪಾತದ ಶಿಶುಗಳು) ಎನ್ನುವ ಹ್ಯಾಷ್‌ಟ್ಯಾಗ್ ಮತ್ತು ಘೋಷಣೆಗಳು ಮಾರ್ದನಿಸುತ್ತಿದ್ದವು.

ಇಂಥ ಸ್ಥಿತಿಯಲ್ಲಿ ಓಲಿ ಸರ್ಕಾರವು ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸಲು ಮುಂದಾಯಿತು. ಸೈಬರ್ ಅಪರಾಧಗಳು, ಸುಳ್ಳು ಸುದ್ದಿ, ದಾರಿ ತಪ್ಪಿಸುವ ವಿಚಾರಗಳನ್ನು ಹರಡುತ್ತಿರುವ ನೆಪ ಒಡ್ಡಿ ವರ್ಷದ ಹಿಂದೆಯೇ ಸಾಮಾಜಿಕ ಜಾಲತಾಣಗಳನ್ನು ನಿಯಂತ್ರಿಸಲು ಪ್ರಯತ್ನ ಆರಂಭಿಸಿತು. ನೇಪಾಳದ ಅತ್ಯುನ್ನತ ನ್ಯಾಯಾಲಯದ ಆದೇಶ ಪಾಲನೆಯ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳನ್ನು ನಿರ್ವಹಿಸುವ ಕಂಪನಿಗಳು ನೋಂದಣಿ ಮಾಡಿಕೊಳ್ಳಲು ಇತ್ತೀಚೆಗೆ ಗಡುವು ನೀಡಿತು. ಇಲ್ಲದಿದ್ದರೆ ಅವುಗಳನ್ನು ನಿರ್ಬಂಧಿಸುವುದಾಗಿ ಎಚ್ಚರಿಸಿತು. ಅದರಂತೆ, ಸೆಪ್ಟೆಂಬರ್ 4ರಂದು 26 ಆ್ಯಪ್‌ಗಳನ್ನು ನಿಷೇಧಿಸಿತು. ಸಾಮಾಜಿಕ ಜಾಲತಾಣಗಳು ಯುವಜನರ ಪ್ರಮುಖ ಸಂವಹನ ಸಾಧನವಾಗಿ ಬಳಕೆಯಾಗುತ್ತಿದ್ದವು ಮತ್ತು ನೇಪಾಳದ ಆರ್ಥಿಕತೆಯ ಬೆನ್ನೆಲುಬಾದ ಪ್ರವಾಸೋದ್ಯಮಕ್ಕೆ ಮುಖ್ಯ ಆಧಾರವೂ ಆಗಿದ್ದವು. ತಮ್ಮ ಅಭಿವ್ಯಕ್ತಿಯ ಮಾಧ್ಯಮ ನಿರ್ಬಂಧವಾಗಿದ್ದರಿಂದ ಯುವಜನರು ಕನಲಿಹೋದರು. ಸರ್ಕಾರವನ್ನು ತೊಲಗಿಸಬೇಕು ಎನ್ನುವ ನಿಶ್ಚಯದೊಂದಿಗೆ ಬೀದಿಗಿಳಿದರು. ಸದ್ಯ ಪ್ರಧಾನಿ ಮತ್ತು ಕೆಲವು ಸಚಿವರು ರಾಜೀನಾಮೆ ನೀಡಿದ್ದಾರೆ. ಭಾರತವು ನೆರೆಯ ರಾಷ್ಟ್ರದ ರಾಜಕೀಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದೆ.

ಯುವ ಕ್ರಾಂತಿ: ನೇಪಾಳದಲ್ಲಿ ಪ್ರತಿಭಟನೆ ಮಾಡುತ್ತಿರುವವರ ಪೈಕಿ ಬಹುತೇಕರು 30 ವರ್ಷದ ಒಳಗಿನವರಾಗಿದ್ದು, ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳಾಗಿದ್ದಾರೆ. ಅನೇಕರು ತಮ್ಮ ಸಮವಸ್ತ್ರಗಳಲ್ಲಿಯೇ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ರಾಜಕೀಯ ಪಕ್ಷಗಳು ಮತ್ತು ಅವುಗಳ ಯುವಘಟಕಗಳು ಪ್ರತಿಭಟನೆಯಿಂದ ದೂರ ಉಳಿಯುವಂತೆ ಸೂಚಿಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡುವ ಮೂಲಕ ಚುನಾವಣೆಯಲ್ಲಿ ಜಯ ಗಳಿಸಿ ಕಠ್ಮಂಡು ಮೇಯರ್ ಆಗಿರುವ ಬಾಲೇಂದ್ರ ಶಾ, ಮಾಜಿ ಉಪಪ್ರಧಾನಿ ಹಾಗೂ ಟಿವಿ ನಿರೂಪಕ ರಬಿ ಲಮಿಚ್ಛಾನೆ ಅವರಂಥ ಕೆಲವು ಯುವ ಮುಖಂಡರು ಮಾತ್ರ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಬೆಂಬಲಿಸುತ್ತಿದ್ದಾರೆ.

ಆಧಾರ: ಪಿಟಿಐ, ರಾಯಿಟರ್ಸ್, ಮಾಧ್ಯಮ ವರದಿಗಳು

ವಿದೇಶಿ ಕೈವಾಡ?

ಬಾಂಗ್ಲಾದೇಶದಲ್ಲಿ ದಂಗೆ ಉಂಟಾದಾಗ, ಅದರ ಹಿಂದೆ ಚೀನಾ ಇಲ್ಲವೇ ಅಮೆರಿಕದ ಕೈವಾಡ ಇದೆ ಎಂದು ಚರ್ಚೆಯಾಗಿತ್ತು. ಶೇಖ್ ಹಸೀನಾ ಅವರು, ನೇರವಾಗಿ ಅಮೆರಿಕದ ವಿರುದ್ಧ ಆರೋಪ ಮಾಡಿದ್ದರು. ನೇಪಾಳದ ವಿಷಯದಲ್ಲೂ ಅಂತಹುದೇ ಚರ್ಚೆ ನಡೆಯುತ್ತಿದೆ. ಪ್ರಧಾನಿಯಾಗಿದ್ದ ಓಲಿ ಅವರು ಚೀನಾ ಪರ ಒಲವು ಹೊಂದಿದ್ದವರು. ಇತ್ತೀಚೆಗೆ ಚೀನಾದಲ್ಲಿ ನಡೆದಿದ್ದ ಸೇನಾ ಪರೇಡ್‌ನಲ್ಲೂ ಭಾಗವಹಿಸಿದ್ದರು. ಚೀನಾ ಪ್ರಾಬಲ್ಯವನ್ನು ತಗ್ಗಿಸಲು ಏಷ್ಯಾದಲ್ಲಿ ತನ್ನ ಬಲವನ್ನು ಹೆಚ್ಚಿಸಲು ಬಯಸುತ್ತಿರುವ ಅಮೆರಿಕವು, ನೇಪಾಳದಲ್ಲಿ ತನ್ನ ಪರವಾಗಿರುವ ಸರ್ಕಾರ ಅಸ್ತಿತ್ವಕ್ಕೆ ಬರುವಂತೆ ಮಾಡಲು, ಚಳವಳಿಗೆ ಪ್ರೋತ್ಸಾಹ ನೀಡಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ. ಭಾರತದೊಂದಿಗೆ ಸಂಬಂಧ ಹಳಸಿರುವ ಈ ಹೊತ್ತಿನಲ್ಲಿ ಅಮೆರಿಕದ ಕಣ್ಣು ಭಾರತದ ನೆರೆರಾಷ್ಟ್ರಗಳ ಮೇಲೂ ಬಿದ್ದಿರಬಹುದು ಎಂದು ಹೇಳಲಾಗುತ್ತಿದೆ.

ಶ್ರೀಲಂಕಾ, ಬಾಂಗ್ಲಾದೇಶ, ಈಗ ನೇಪಾಳ

ಭಾರತದ ನೆರೆಯ ರಾಷ್ಟ್ರಗಳಾದ ಶ್ರೀಲಂಕಾ ಮತ್ತು ಬಾಂಗ್ಲಾದೇಶಗಳಲ್ಲೂ ಯುವ ಜನರು ಸರ್ಕಾರದ ವಿರುದ್ಧ ದಂಗೆ ಎದ್ದು ಅಧಿಕಾರದಲ್ಲಿದ್ದವರನ್ನು ಕೆಳಗಿಳಿಸಿದ್ದರು. ಈಗ ನೇಪಾಳದಲ್ಲೂ ಅದೇ ರೀತಿ ಆಗಿದೆ. ‘ಜೆನ್–ಝೀ’ ಪೀಳಿಗೆಯವರು ಸರ್ಕಾರದ ಭ್ರಷ್ಟಾಚಾರ, ಅಧಿಕಾರದಲ್ಲಿರುವವರ ಸ್ವಜನಪಕ್ಷಪಾತಕ್ಕೆ ರೋಸಿ ಹೋಗಿ ದೇಶದಾದ್ಯಂತ ದಂಗೆ ಎದ್ದು ಓಲಿ ಅವರು ರಾಜೀನಾಮೆ ನೀಡುವಂತೆ ಮಾಡಿದ್ದಾರೆ.

2022ರ ಜುಲೈ ತಿಂಗಳಲ್ಲಿ ಶ್ರೀಲಂಕಾದಲ್ಲಿ ನಡೆದಿದ್ದ ಸರ್ಕಾರದ ವಿರುದ್ಧದ ಪ್ರತಿಭಟನೆಯಲ್ಲಿ ಮುಂಚೂಣಿಯಲ್ಲಿದ್ದವರು ಯುವ ಸಮುದಾಯದವರು. ಅಧ್ಯಕ್ಷ ಗೊಟಬಯ ರಾಜಪಕ್ಸ ನೇತೃತ್ವದ ಸರ್ಕಾರದ ಭ್ರಷ್ಟಾಚಾರ, ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, ಹಣದುಬ್ಬರ ಹೆಚ್ಚಳದಿಂದಾಗಿ ಉಂಟಾದ ಆಹಾರದ ಕೊರತೆ, ಪೆಟ್ರೋಲ್, ಡೀಸೆಲ್‌ನಂತಹ ಇಂಧನ ಪೂರೈಕೆಯಲ್ಲಿನ ವ್ಯತ್ಯಯವು ಜನರನ್ನು ವಿಶೇಷವಾಗಿ ಯುವಜನರನ್ನು ಕೆರಳಿಸಿತ್ತು. ಸಾಮಾಜಿಕ ಜಾಲತಾಣಗಳ ಮೂಲಕ ಸಂಘಟನೆಗೊಂಡ ಯುವಜನರು ಬೀದಿಗಿಳಿದು ಪ್ರತಿಭಟಿಸಿದರು. ಅದು ಹಿಂಸಾಚಾರಕ್ಕೆ ತಿರುಗಿ ದಂಗೆಯಾಗಿ ಪರಿವರ್ತನೆಯಾಯಿತು. ಅಧ್ಯಕ್ಷರ ನಿವಾಸ, ಪ್ರಧಾನಿಯವರ ನಿವಾಸಗಳಿಗೆ ನುಗ್ಗಿದ ಆಕ್ರೋಶಿತ ಜನರು ದಾಂದಲೆ ನಡೆಸಿ ಕೈಗೆ ಸಿಕ್ಕಿದ್ದನ್ನೆಲ್ಲ ಹೊತ್ತೊಯ್ದರು. ಆಸ್ತಿಯನ್ನು ಧ್ವಂಸ ಮಾಡಿದರು. ಪರಿಣಾಮವಾಗಿ ಸರ್ಕಾರ ಪತನವಾಯಿತು. ಗೊಟಬಯ ರಾಜಪಕ್ಸ ಅವರು ಮಾಲ್ದೀವ್ಸ್‌ಗೆ ಪಲಾಯನ ಮಾಡಿದರು. ಕಳೆದ ವರ್ಷ ಅಲ್ಲಿ ಸಾರ್ವತ್ರಿಕ ಚುನಾವಣೆ ನಡೆದು ಅನುರಕುಮಾರ ದಿಸ್ಸನಾಯಕೆ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಿದೆ.

ಕಳೆದ ವರ್ಷ (2024) ಬಾಂಗ್ಲಾದೇಶದಲ್ಲಿ ಪ್ರಧಾನಿ ಶೇಖ್ ಹಸೀನಾ ನೇತೃತ್ವದ ಸರ್ಕಾರದ ಮೀಸಲಾತಿ ನೀತಿಯನ್ನು ವಿರೋಧಿಸಿ ಯುವಜನರು ಆರಂಭಿಸಿದ ಆಂದೋಲನ ತೀವ್ರ ಸ್ವರೂಪ ಪಡೆದು, ಅದು ದಂಗೆಯಾಗಿ ರೂಪಾಂತರಗೊಂಡಿತ್ತು. ತಿಂಗಳ ಕಾಲ ನಡೆದ ಹೋರಾಟದಲ್ಲಿ 300 ಜನರು ಪ್ರಾಣ ಕಳೆದುಕೊಂಡಿದ್ದರು. ಪ್ರತಿಭಟನೆಯನ್ನು ಹತ್ತಿಕ್ಕಲು ಹಸೀನಾ ಸರ್ಕಾರ ಬಲ ಪ್ರಯೋಗ ಮಾಡಿದ್ದು, ಹೋರಾಟಗಾರರನ್ನು ಕೆರಳಿಸಿತ್ತು. ಹೋರಾಟವು ಹಸೀನಾ ವಿರೋಧಿ ಚಳವಳಿಯಾಗಿ ಪರಿವರ್ತನೆಯಾಯಿತು. ಆಗಸ್ಟ್ 5ರಂದು ಢಾಕಾಗೆ ನುಗ್ಗಿದ ಜನರು ಶೇಖ್ ಹಸೀನಾ ಅವರ ಮನೆಯನ್ನು ಧ್ವಂಸಗೊಳಿಸಿದರು. ಅವರು ರಾಜೀನಾಮೆ ನೀಡಿ, ಭಾರತಕ್ಕೆ ಓಡಿ ಬಂದರು. ಈಗ ಅಲ್ಲಿ ಆರ್ಥಿಕ ತಜ್ಞ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರ ಜಾರಿಯಲ್ಲಿದೆ. ಅಲ್ಲಿ ಸಾರ್ವತ್ರಿಕ ಚುನಾವಣೆ ಇನ್ನಷ್ಟೇ ನಡೆಯಬೇಕಿದೆ.

ರಾಜಕೀಯ ಅಸ್ಥಿರತೆ

ನೇಪಾಳದಲ್ಲಿ 2008ರಲ್ಲಿ ರಾಜರ ಆಡಳಿತ ಕೊನೆಯಾಗಿ, ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದಿತು. ಆದರೆ, ಅಂದಿನಿಂದ ಇಂದಿನವರೆಗೂ ಅಲ್ಲಿ ರಾಜಕೀಯ ಸ್ಥಿರತೆ ಕಂಡು ಬರಲೇ ಇಲ್ಲ. ಈ ಪುಟ್ಟ ರಾಷ್ಟ್ರವು 17 ವರ್ಷಗಳಲ್ಲಿ 14 ಸರ್ಕಾರಗಳನ್ನು ಕಂಡಿದೆ. ಈಗ ರಾಜೀನಾಮೆ ನೀಡಿರುವ ಕೆ.ಪಿ. ಶರ್ಮಾ ಓಲಿ ಅವರು ನಾಲ್ಕು ಬಾರಿ ಪ್ರಧಾನಿಯಾಗಿದ್ದರು.

‘ಹಮಿ ನೇಪಾಳ’

ನೇಪಾಳದಲ್ಲಿ ಪ್ರತಿಭಟನೆಗಳನ್ನು ಆಯೋಜಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದ ಸಂಘಟನೆ ‘ಹಮಿ ನೇಪಾಳ’ ಎಂಬ ಎನ್‌ಜಿಒ. 36 ವರ್ಷದ ಸುಧಾನ್ ಗುರುಂಗ್ ನೇತೃತ್ವದ ಈ ಸಂಘಟನೆಯನ್ನು 2015ರಲ್ಲಿ ಸ್ಥಾಪಿಸಲಾಗಿತ್ತು. ಆದರೆ, ಅಧಿಕೃತವಾಗಿ ನೋಂದಣಿಯಾಗಿದ್ದು 2020ರಲ್ಲಿ.

ಕಠ್ಮಂಡುವಿನ ಸಚಿವರ ಕಚೇರಿಗಳಿರುವ ಕಟ್ಟಡದ ಮೇಲೆ ಮೂವರು ಯುವಕರು ನೇಪಾಳದ ರಾಷ್ಟ್ರಧ್ವಜವನ್ನು ಹಿಡಿದು ಸಂಭ್ರಮಿಸಿದರು ಎಪಿ ಚಿತ್ರ

ರಾಷ್ಟ್ರೀಯ

ಆಂಧ್ರಪ್ರದೇಶ: ರೋಗಿಯಲ್ಲಿ ‘ಮೆಲಿಯೊಯಿಡೊಸಿಸ್’ ದೃಢ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ತುರಕಪಲೆಂ ಗ್ರಾಮದ ರೋಗಿಯೊಬ್ಬರಲ್ಲಿ ‘ಮೆಲಿಯೊಯಿಡೊಸಿಸ್’ (ಬ್ಯಾಕ್ಟೀರಿಯಾದಿಂದ ಹರಡುವ ಸೋಂಕು) ಇರುವುದು ದೃಢಪಟ್ಟಿದೆ.

1,200 ಜನರು ವಾಸಿಸುತ್ತಿರುವ ಈ ಪುಟ್ಟ ಗ್ರಾಮದಲ್ಲಿ ಜುಲೈನಿಂದ ಇದುವರೆಗೆ ನಿಗೂಢ ಆರೋಗ್ಯ ಸಮಸ್ಯೆಗಳಿಂದಾಗಿ 23 ಮಂದಿ ಮೃತಪಟ್ಟಿದ್ದರು. ಸರಣಿ ಸಾವುಗಳ ನಡುವೆಯೇ ಬ್ಯಾಕ್ಟೀರಿಯಾ ಸೋಂಕಿನ ಮೊದಲ ಪ್ರಕರಣ ದೃಢಪಟ್ಟಿದೆ.

ಗುಂಟೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 46 ವರ್ಷದ ರೋಗಿಯಲ್ಲಿ ‘ಮೆಲಿಯೊಯಿಡೊಸಿಸ್’ ಸೋಂಕು ಇರುವುದು ದೃಢಪಟ್ಟಿದೆ ಎಂದು ಗುಂಟೂರು ಜಿಲ್ಲಾಧಿಕಾರಿ ಎಸ್. ನಾಗಲಕ್ಷ್ಮಿ ಮಂಗಳವಾರ ಹೇಳಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದೆ ಮತ್ತು ಯಾವುದೇ ತಕ್ಷಣದ ಅಪಾಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಗ್ರಾಮದಲ್ಲಿ ಜುಲೈ ಮತ್ತು ಆಗಸ್ಟ್‌ನಲ್ಲಿ ತಲಾ 10 ಮಂದಿ ಹಾಗೂ ಸೆಪ್ಟೆಂಬರ್‌ನಲ್ಲಿ ಮೂವರು ಅನಾರೋಗ್ಯದಿಂದ ಮೃತಪಟ್ಟಿದ್ದಾರೆ. ಇವರಲ್ಲಿ ಆರಂಭದಲ್ಲಿ ಜ್ವರದ ಲಕ್ಷಣಗಳು ಕಾಣಿಸಿಕೊಂಡಿದ್ದು, ಬಳಿಕ ಅಂಗಾಂಗ ವೈಫಲ್ಯಗೊಂಡು ಕೆಲವೇ ದಿನಗಳಲ್ಲಿ ಮೃತಪಟ್ಟಿದ್ದಾರೆ. ಮೃತರಲ್ಲಿ ಬಹುತೇಕರು 55 ವರ್ಷದವರಾಗಿದ್ದರು.

ಆರೋಗ್ಯ ಅಧಿಕಾರಿಗಳು ಆರಂಭದಲ್ಲಿ ‘ಬುರ್ಖೋಡೇರಿಯ ಸುಡೊಮೇಲಿಯ’ ಬ್ಯಾಕ್ಟೀರಿಯಾದಿಂದ ಉಂಟಾಗುವ ‘ಮೆಲಿಯೊಯಿಡೊಸಿಸ್’ ಸೋಂಕು ಆಗಿರಬಹುದು ಎಂದು ಶಂಕಿಸಿದ್ದರು. ಸೆಪ್ಟೆಂಬರ್ 3ರಂದು ಗ್ರಾಮದಲ್ಲಿ ಆರೋಗ್ಯ ತುರ್ತುಸ್ಥಿತಿ ಘೋಷಿಸಿ, ನಿಗೂಢ ಸಾವಿನ ಕಾರಣ ಪತ್ತೆಗೆ ಸಮಗ್ರ ತನಿಖೆ ಆರಂಭಿಸಿದ್ದರು. ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟಲು ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದಾರೆ.

‘ಆಪರೇಷನ್ ಸಿಂಧೂರಕ್ಕೆ ಇಸ್ರೊದ 400 ವಿಜ್ಞಾನಿಗಳ ನೆರವು’

ನವದೆಹಲಿ (ಪಿಟಿಐ): ‘ಆಪರೇಷನ್ ಸಿಂಧೂರ’ ಸಂದರ್ಭದಲ್ಲಿ ಸುಮಾರು 400 ವಿಜ್ಞಾನಿಗಳು ದಿನದ 24 ತಾಸೂ ಕೆಲಸ ಮಾಡುವ ಮೂಲಕ ಭಾರತೀಯ ಸೇನೆಗೆ ಬೆಂಬಲ ನೀಡಿದ್ದರು ಎಂದು ಇಸ್ರೊ ಮುಖ್ಯಸ್ಥ ವಿ.ನಾರಾಯಣನ್ ಅವರು ಮಂಗಳವಾರ ತಿಳಿಸಿದರು.

ಆಲ್ ಇಂಡಿಯಾ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್‌ನ (ಎಐಎಂಎ) 52ನೇ ಮ್ಯಾನೇಜ್‌ಮೆಂಟ್ ಶೃಂಗದಲ್ಲಿ ಮಾತನಾಡಿದ ನಾರಾಯಣನ್ ಅವರು, ರಾಷ್ಟ್ರೀಯ ಭದ್ರತಾ ಅಗತ್ಯಗಳಿಗೆ ಅನುಗುಣವಾಗಿ ಇಸ್ರೊ ಉಪಗ್ರಹ ದತ್ತಾಂಶ-ಗಳನ್ನು ಒದಗಿಸಿತ್ತು ಎಂದು ತಿಳಿಸಿದರು.

‘ಆಪರೇಷನ್ ಸಿಂಧೂರ ಸಂದರ್ಭದಲ್ಲಿ ನಮ್ಮ ಎಲ್ಲ ಉಪಗ್ರಹಗಳು ಅಷ್ಟೂ ದಿನ ಹಗಲು–ರಾತ್ರಿ ಕರಾರುವಾಕ್ಕಾಗಿ ಕಾರ್ಯನಿರ್ವಹಿಸಿ ನಮ್ಮ ಎಲ್ಲ ಅಗತ್ಯಗಳನ್ನು ಪೂರೈಸಿದ್ದವು’ ಎಂದು ಹೇಳಿದರು.

13ರಿಂದ ವಿಜಯ್ ರಾಜ್ಯ ಸಂಚಾರ

ಪ್ರಜಾವಾಣಿ ವಾರ್ತೆ

ಚೆನ್ನೈ: ಮದುರೆಯಲ್ಲಿ ನಡೆದ ಪಕ್ಷದ ಎರಡನೇ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಸಿಕ್ಕ ಪ್ರತಿಕ್ರಿಯೆಗಳಿಂದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ನಾಯಕ, ನಟ ವಿಜಯ ಉತ್ಸಾಹ ಹೆಚ್ಚಿಸಿಕೊಂಡಿ-ದ್ದಾರೆ. ಸೆಪ್ಟೆಂಬರ್ 13ರಿಂದ ರಾಜ್ಯದ ತಿರುಚಿರಾಪಳ್ಳಿಯಿಂದ ತಮಿಳುನಾಡಿನ ಎಲ್ಲಾ ಜಿಲ್ಲೆಗಳಿಗೆ ಅವರು ಪ್ರವಾಸ ಕೈಗೊಳ್ಳಲಿದ್ದಾರೆ.

ಅವರ ಈ ಪ್ರವಾಸ ರಾಜ್ಯದ ಎಲ್ಲಾ 38 ಜಿಲ್ಲೆಗಳನ್ನು ಒಳಗೊಳ್ಳಲಿದೆ. ಸೆಪ್ಟೆಂಬರ್ 13ರಿಂದ ಡಿಸೆಂಬರ್ 20ರವರೆಗಿನ ಪ್ರತಿ ಶನಿವಾರ ಅವರು ಎರಡರಿಂದ ನಾಲ್ಕು ಜಿಲ್ಲೆಗಳನ್ನು ಸುತ್ತಾಡಲಿದ್ದು, ಅಕ್ಟೋಬರ್ 5ರ ಭಾನುವಾರ ಒಂದು ಜಿಲ್ಲೆಯಲ್ಲಿ ಪ್ರವಾಸದಲ್ಲಿರಲಿದ್ದಾರೆ.

ಈ ಮಾಹಿತಿಯನ್ನೊಳಗೊಂಡ ಪತ್ರವನ್ನು ಟಿವಿಕೆ ಪ್ರಧಾನ ಕಾರ್ಯದರ್ಶಿ ಎನ್. ಆನಂದ್ ಅವರು ಡಿಜಿಪಿಗೆ ಸಲ್ಲಿಸಿದ್ದು, ಸಾರ್ವಜನಿಕ ಪ್ರವಾಸಕ್ಕೆ ಅನುಮತಿ ಮತ್ತು ರಕ್ಷಣೆ ನೀಡುವಂತೆ ಕೇಳಿಕೊಂಡಿದ್ದಾರೆ.

ಆಗಸ್ಟ್ 21ರಂದು ಮದುರೈನಲ್ಲಿ ಪಕ್ಷದ ರಾಜ್ಯ ಮಟ್ಟದ ಎರಡನೇ ಸಮ್ಮೇಳನ ನಡೆದಿತ್ತು. ಸಭೆಯು ಭಾರಿ ಸಂಖ್ಯೆಯ ಜನರನ್ನು ಸೆಳೆದಿದ್ದು, ತಮ್ಮ ಪ್ರಾಥಮಿಕ ಎದುರಾಳಿ ಆಡಳಿತಾರೂಢ ಡಿಎಂಕೆ ಎಂದು ವಿಜಯ್ ಘೋಷಿಸಿದ್ದರು.

ಭಾವದ ಭಾವ

ನುಡಿ ಬೆಳಗು — ವಾಸುದೇವ ನಾಡಿಗ್

ಅಲೆಮಾರಿ ಋಷಿಯೊಬ್ಬ ಪ್ರಾಂತ್ಯ ಪ್ರಾಂತ್ಯವನ್ನೆಲ್ಲ ಅಲೆದು ಈ ಪ್ರಾಂತ್ಯದ ಗಡಿ ಭಾಗದ ವನದಲ್ಲಿ ಕಣ್ಮುಚ್ಚಿ ಕೂತ. ಬೇರೆ ಬೇರೆ ಕಡೆಯ ಜನರು ದಾನವಾಗಿ ಎಷ್ಟೇ ಹಣ ಕೊಟ್ಟರೂ ಅದನ್ನು ತೆಗೆದುಕೊಂಡು ಅಗತ್ಯ ಇರುವ ಬಡವರಿಗೆ ದಾನ ಮಾಡಿ ಮತ್ತೆ ಸುತ್ತುತ್ತಿದ್ದ.

ಈ ಪ್ರಾಂತ್ಯದ ರಾಜನಿಗೆ ಆಧಿಪತ್ಯವನ್ನು ವಿಸ್ತರಿಸುವ ದಾಹ. ಸೈನಿಕರ ಕೂಡಿಕೊಂಡು ಗಡಿಗಳನ್ನು ದಾಟಿ ಆಕ್ರಮಿಸಿಕೊಳ್ಳುವ ದಾಹ. ತಣಿಯದ ದಾಹವದು. ಮುನಿಯೊಬ್ಬ ಗಡಿಭಾಗದ ವನದಲ್ಲಿ ಕುಳಿತಿದ್ದುದನ್ನು ಕಂಡು ಸೇನೆಯ ಜೊತೆ ಹೊರಟ ರಾಜ ಆಶೀರ್ವಾದ ಪಡೆಯಲು ಬಾಗಿದ. ಆಶೀರ್ವದಿಸಿ ತನ್ನ ಬಳಿ ಉಳಿದಿದ್ದ ಒಂದು ನಾಣ್ಯವನ್ನು ರಾಜನಿಗೆ ಕೊಟ್ಟ. ಋಷಿ ಮುಗುಳ್ನಕ್ಕನು. ಹತ್ತು ಹಲವು ಪ್ರಾಂತ್ಯ, ಸಂಪತ್ತನ್ನು ಗೆದ್ದ ರಾಜನಿಗೆ ಆಶ್ಚರ್ಯ. ತನಗೆ ಒಂದು ರೂಪಾಯಿ ದಾನವಾಗಿ ಕೊಟ್ಟ ಈ ಋಷಿಯ ವರ್ತನೆ ಬಗ್ಗೆ ಯೋಚಿಸಿದ. ತನಗೇಕೆ ಈ ನಾಣ್ಯವನ್ನು ಕೊಟ್ಟದ್ದು ಎಂದು ಕೇಳಿದ.

‘ದೊರೆಯೇ ನಾನು ಒಂದು ವಾರದಿಂದ ನಿನ್ನ ಪ್ರಾಂತ್ಯದ ಹತ್ತು ಹಲವು ಊರು ಜಾಗಗಳನ್ನು ನೋಡಿದೆ. ಅನೇಕರನ್ನು ಮಾತಾಡಿಸಿದೆ. ಎಲ್ಲರ ಮುಖದಲ್ಲಿ ಸಂತಸ ಮತ್ತು ತೃಪ್ತಿ ಸಮಾಧಾನದ ಭಾವವಿತ್ತು. ನೆಮ್ಮದಿಯಿಂದ ಇದ್ದೇವೆ ಎಂದು ಉತ್ತರ ಕೊಟ್ಟರು. ಹಾಗೆ ನೋಡಿದರೆ, ಉಳಿದ ರಾಜ್ಯಗಳಲ್ಲಿ ನಾನು ನೆಲೆಯೂರಿದಾಗ ಸಾವಿರಾರು ಜನ ಬಂದು ಕಷ್ಟ ಕಾರ್ಪಣ್ಯಗಳನ್ನು ಹೇಳಿಕೊಳ್ಳುತ್ತಿದ್ದರು. ಅಲ್ಲಿನ ಆಡಳಿತ ರಾಜನ ಅದಕ್ಷತೆ ಇತ್ಯಾದಿ. ಆದರೆ ಈವರೆಗೂ ಒಬ್ಬರೂ ನನ್ನ ಬಳಿ ಬಂದಿಲ್ಲ. ಅದೇ ನನಗೂ ಸಂತೋಷದ ಸಂಗತಿ. ಆದರೆ, ನೀನು ಮಾತ್ರ ಎಷ್ಟು ಸಂಪತ್ತಿದ್ದರೂ ಅಸಮಾಧಾನದಿಂದ ಭುಸುಗುಡುತ್ತಾ ಪಕ್ಕದ ಪ್ರಾಂತ್ಯಗಳಲ್ಲಿ ದಂಗೆಗೆ ಹೊರಡ್ತಾ ಇದೀಯ’. ರಾಜ ಏನೊಂದೂ ಮಾತನಾಡದೇ ಸೈನಿಕರನ್ನು ಹುರಿದುಂಬಿಸುತ್ತ ಹೊರಟೇ ಹೋದ.

ಈ ಬಾಳೂ ಹೀಗೇ ನೋಡಿ. ಇದ್ದುದರಲ್ಲೇ ಉಂಡುಟ್ಟು ಸುಖ ಪಡದೆ ಮತ್ತಷ್ಟು ದೋಚಲು ಸಂಪಾದನೆ ಮಾಡುತ್ತೇವೆ. ಬಾಳಿನ ಎಲ್ಲೆಯನ್ನು ಅನಗತ್ಯವಾಗಿ ಹಿಗ್ಗಿಸಲು ಹೊಂಚು ಹಾಕುತ್ತೇವೆ. ಗಳಿಸಿದ ಆಸ್ತಿಯನ್ನು ಅನುಭವಿಸುತ್ತೇವೋ ಇಲ್ಲವೋ ಖಚಿತತೆ ಇಲ್ಲ. ಆದರೂ, ವಿಸ್ತರಿಸುವುದರಲ್ಲಿಯೇ ಕಳೆದುಕೊಳ್ಳುತ್ತೇವೆ. ಅಂತಃಪ್ರಜ್ಞೆ ಸತ್ಯ ಹೇಳುತ್ತದೆ ಮತ್ತು ಅದು ಪ್ರಜೆಗಳಂತೆ ಸಮಾಧಾನದಿಂದ ಉಳಿದಿರುತ್ತದೆ. ಆದರೆ, ಆಳುವ ದೊರೆಯ ತರಹದ ಭೌತಿಕ ಲಾಲಸೆ ಮತ್ತೆ ಮತ್ತೆ ದಂಡೆತ್ತಿ ಹೋಗುತ್ತಲೇ ಇರುತ್ತದೆ. ಗಡಿ ಭಾಗದ ವನದಲ್ಲಿ ಕೂತ ತಪಸ್ವಿಯಂತಹ ಸಂಗತಿಯೊಂದು ಬಂದು ತಾಗುವವರೆಗೂ ತಾಕಲಾಟ ಇದ್ದದ್ದೇ.

ಪದಬಂಧ 6160

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಮರಗಿಡಗಳನ್ನು ಹೆಚ್ಚಾಗಿ ಬೆಳೆಸಲು ಪ್ರೋತ್ಸಾಹಿಸಲು ಏರ್ಪಡಿಸುವ ಸಮಾರಂಭ (6)
4.ರಂಗಭೂಮಿಯ ಹತ್ತಿರ ಕಾಣಿಸಿದ ಜಿಂಕೆ (3)
7.ಹಣಕ್ಕಾಗಿ ನಡೆದ ಗೊಂದಲ (4)
8.ಸೈನ್ಯದ ಒಂದು ಭಾಗ (3)
10.ಓಲಗ ಶಾಲೆಯಲ್ಲಿ ಕೇಳಿದ ನಾಗಸ್ವರ (3)
12.ಬದಲಾವಣೆ ಮಾಡುತ್ತಲೇ ಬಳಕೆ! (4)
14.ಅರ್ಧ ಚಂದ್ರಾಕೃತಿಯ ರಚನೆ (3)
15.ವಧೂವರರನ್ನು ಆಶೀರ್ವದಿಸಿ ಅಕ್ಷತೆ ಹಾಕುವುದು (6)

ಮೇಲಿಂದ ಕೆಳಕ್ಕೆ

2.ದೇವಾಲಯದ ಸಭಾ ಮಂಟಪ (4)
3.ವಸತಿ ಹತ್ತಿರವಿರುವ ಪಾಳೆಯ (4)
5.ಗಡಿಯಲ್ಲಿರುವ ವ್ಯಾಯಾಮಶಾಲೆ (3)
6.ವ್ಯಾಕರಣದಲ್ಲಿ ವ್ಯಕ್ತಿ ಅಥವಾ ವಸ್ತುವಿನ ಗುಣವನ್ನು ತಿಳಿಸುವ ಪದ (5)
7.ಭಾರವನ್ನು ಹೊರುವ ಕೂಲಿಯಾಳು (3)
9.ಕಲ್ಲಿನಿಂದ ಬೀಸಿ ಹೊಡೆಯಲು ಮಾಡಿದ ಸಾಧನ (3)
10.ಈತ ಸುದ್ದಿಗಾರ (3)
11.ರಾಗದೊಡನೆ ಮೂಡಿದ ಪ್ರೀತಿ ಉಲ್ಟಾ ಆಗಿದೆ (4)
13.ತಿರುಗಿದಾಗಲೇ ಈ ಸೋಲು! (4)

6159ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಮೂಕ 6.ಹಗರಣ
7.ಸಚ್ಚರಿತ 7.ವಿಶ್ವಾಸಘಾತುಕ
10.ಚಿಕ್ಕಮಗಳೂರು
12.ಮತದಾನ 14.ವಿಭೂಷಣ
16.ಗುಗ್ಗು

ಮೇಲಿಂದ ಕೆಳಕ್ಕೆ:
1.ದಾಹ 2.ವರಕವಿ
4.ಕಸ 5.ಹರಿಣಾಂಕ
9.ಸಲಗ 10.ಚಿರಂತನ
11.ರುದ್ರಭೂಮಿ 13.ನಗು
15.ಣಬಾ

ಸುಡೊಕು 6544

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7	1	5	9				2	
					2			
2		9	3				6	
9		4						2
			4		9	1		
	3					9		6
4					8		7	
		1	7			2		3
8		2		5			1	

6543 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

10 ಸೆಪ್ಟೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ತೃತೀಯ ಗಂ. 15-39 ನಕ್ಷತ್ರ: ರೇವತಿ ಗಂ. 16-03 ಯೋಗ: ವೃದ್ಧಿ ಗಂ. 20-32 ಕರಣ: ವಿಷ್ಟಿ ಗಂ. 15-39 ಸಿಂಹ ಮಾಸದ 24 ನೇ ದಿನ. ಮಳೆ ನಕ್ಷತ್ರ : ಹುಬ್ಬಾ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 01-30 ,ಸೂರ್ಯೋದಯ : 06-23 ಸೂರ್ಯಾಸ್ತ : 06-32, ಮುಸ್ಲಿಂ ದಿನಾಂಕ : 17 ರಬಿಉಲ್ಲಾವಲ್ ,ದಿನ ವಿಶೇಷ : ಸಂಕಷ್ಟಹರ ಚತುರ್ಥಿ, ಅದೃಷ್ಟ ಸಂಖ್ಯೆ : 1, 8

ಮೇಷ: ನೇರ ನುಡಿಯ ಸ್ವಭಾವದಿಂದ ಸಹೋದ್ಯೋಗಿಗಳಲ್ಲಿ ವೈಮನಸ್ಸು ಬರುವ ಲಕ್ಷಣವಿದೆ. ಸ್ವಭಾವತಃ ಖುಷಿಯಾಗಿ ಇರುವುದನ್ನು ಬಯಸುವ ನೀವು ಪರಜನರ ಮಾತುಗಳಿಗೆ ಕಿವಿ ಕೊಟ್ಟು ಬೇಸರಿಸಿಕೊಳ್ಳಬೇಡಿ.

ವೃಷಭ: ಹೊಸ ಕ್ಲಿನಿಕ್ ಆರಂಭದ ಶುಭ ಕಾರ್ಯಗಳ ಬಗ್ಗೆ ಹಿರಿಯರೊಡನೆ ಸಮಾಲೋಚನೆ ನಡೆದು ತೀರ್ಮಾನ ಸಿಗಲಿದೆ. ಕರ-ಕುಶಲ ವಸ್ತುಗಳ ತಯಾರಿಕೆಯಲ್ಲಿ ಆಸಕ್ತಿ ಹೆಚ್ಚುವುದು. ಮಾರಾಟದಲ್ಲಿ ಲಾಭವೂ ಇದೆ.

ಮಿಥುನ: ಜೀವನದ ಬಗ್ಗೆ ಹೆಚ್ಚಿನ ಉತ್ಸಾಹವನ್ನು ತಾಳುವಿರಿ. ಸಂಗೀತಗಾರರಿಗೆ ಹಾಗೂ ನೃತ್ಯ ಕಲೆಗಳಿಗೆ ಪ್ರಾಮುಖ್ಯ ದೊರಕುವುದು. ಸ್ವಸಾಮರ್ಥ್ಯದಿಂದ ಆಗುವ ಕೆಲಸಗಳಿಗೆ ಇತರರ ಸಹಾಯವನ್ನು ಅಪೇಕ್ಷಿಸದೆ ಮಾಡಿ.

ಕರ್ಕಾಟಕ: ಎರಡನೇ ದರ್ಜೆಯ ನೌಕರರಿಗೆ ವರ್ಗಾವಣೆಯಿಂದ ಆರ್ಥಿಕವಾಗಿ ಅನುಕೂಲವಾಗುವುದು. ದಿನಸಿ ವ್ಯಾಪಾರಿಗಳು ಮಾರಾಟದ ಕ್ಷೇತ್ರವನ್ನು ಹೆಚ್ಚಿ-ಸಿಕೊಳ್ಳಬಹುದು. ತೈಲ ಲೇಪನದಿಂದ ನೋವುಗಳು ಮರೆಯಾಗುವುದು.

ಸಿಂಹ: ಜವಾಬ್ದಾರಿಯುತ ಯೋಜನೆಯ ಸ್ಪಷ್ಟ ವಿಷಯ ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಮನಸ್ಸಿಗೆ ಬಂದ ಮಾತುಗಳನ್ನು ಆಡದೆ ಯೋಚನೆ ಮಾಡಿ ತೂಕದ ಮಾತುಗಳನ್ನು ಆಡಿದಲ್ಲಿ ಗೌರವಗಳು ಹೆಚ್ಚಾಗುವುದು.

ಕನ್ಯಾ: ಮಾಡುತ್ತಿರುವ ಕೆಲಸದಲ್ಲಿ ಹಣದ ಕೊರತೆ ಕಂಡುಬಂದರೆ ತುಂಬಾ ಸಂಕೋಚ ಮಾಡಿಕೊಳ್ಳದೆ ಆತ್ಮೀಯರಲ್ಲಿ ಕೇಳಿ, ತೀರಿಸುವ ಸಾಮರ್ಥ್ಯ ಇದೆ. ಉತ್ತಮ ಬುದ್ಧಿಶಕ್ತಿಯಿಂದ ಜನ ಮನ್ನಣೆ ಗಳಿಸಬಹುದು.

ತುಲಾ: ಕಾರ್ಯಗಳಲ್ಲಿ ಜಯಭೇರಿಯು ಎದುರಾಳಿಗಳ ಅಸೂಯೆಗೆ ಕಾರಣವಾಗುವುದು. ತೊಂದರೆಯ ಸಾಧ್ಯತೆ ಇರುವುದಿಲ್ಲ. ದೀರ್ಘಕಾಲದ ಕಾಯುವಿಕೆಯ ಬಳಿಕ ಜೀವನ ಸಂಗಾತಿಯು ಜೊತೆಯಾಗುವರು.

ವೃಶ್ಚಿಕ: ಜಾಗತಿಕವಾಗಿ ವ್ಯವಹಾರವನ್ನು ಹೊಂದಿರುವವರು ಸಣ್ಣ ಮಟ್ಟದ ವ್ಯಾಪಾರಿಗಳ ಚಾಕಚಕ್ಯತೆಯನ್ನು ನೋಡಿ ಕಲಿಯುವಂತಾಗಲಿದೆ. ನೆರೆಹೊರೆಯವರ ಜತೆಗಿನ ಅನಗತ್ಯ ಮಾತುಕತೆ ಸಮಸ್ಯೆ ತರಬಹುದು.

ಧನು: ವಾಹನ ಖರೀದಿಗಾರರಿಗೆ ಸೂಕ್ತ ಸಮಯವಲ್ಲದಿದ್ದರೂ ಮಾರಾಟಗಾರಿಗೆ ಲಾಭದ ದಿನ ಪರಿಣಮಿಸಬಹುದು. ಉನ್ನತ ಅಧಿಕಾರಿಗಳ ಸಂಪರ್ಕ ಉಂಟಾಗುವುದು. ನೀಲಿ ಬಣ್ಣವು ಶುಭ ಉಂಟುಮಾಡುತ್ತದೆ.

ಮಕರ: ಆಪ್ತರ ಕಷ್ಟಗಳ ಕಡೆಗೆ ನೆರವಾಗುವ ತೀರ್ಮಾನಕ್ಕೆ ಬನ್ನಿ. ಸ್ನೇಹಕ್ಕೆ ಅರ್ಥ ಇರುವುದು ಹಾಗೂ ಪುಣ್ಯ ಸಂಪಾದನೆಯಾಗುವುದು. ಹಟವು ಹೆತ್ತವರನ್ನು ಕಂಗಾಲು ಪಡಿಸುತ್ತದೆ.

ಕುಂಭ: ಉರಿಯುವಂಥ ಬೆಂಕಿಗೆ ತುಪ್ಪ ಸುರಿಯುವಂಥ ಮಾತುಗಳನ್ನಾಡಿ ಸಂಗಾತಿಯೊಂದಿಗಿನ ಸಂಬಂಧವನ್ನು ಕೆಡಿಸಿಕೊಳ್ಳಬೇಡಿ. ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಉದಾಸೀನತೆ ತೋರಿಸಿಕೊಳ್ಳಬೇಡಿ.

ಮೀನ: ಸ್ನೇಹಿತರಿಗೆ ನೀಡಿದ ವಾಗ್ದಾನವನ್ನು ಮರೆಯದಿರಿ. ಕಾಮ್ಯಗಳು ಆದಷ್ಟು ಶೀಘ್ರ ಸಿದ್ಧಿಸಲು ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆ ಹಾಕಿ. ವ್ಯವಹಾರಿಕ ವಿಚಾರಕ್ಕಿಂತ ವೈಯಕ್ತಿಕ ವಿಚಾರಗಳನ್ನು ಒಳ್ಳೆಯದು.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,773
ಇಂದಿನ ಅಂತ್ಯ: 24,868
ದಿನದ ಗರಿಷ್ಠ: 24,891
95

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹560
12 ಕ್ಕೆ ₹75
ಮೈಸೂರು: 100 ಕ್ಕೆ ₹565

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹300-650
ದ್ವಿತಳಿ (ಬಿ.ವಿ) ₹550-836

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹189
ಆರ್‌ಎಸ್‌ಎಸ್-5 ₹184
ಗುಡ್ ಲಾಟ್ ₹169

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1370 (1370)
ಸೋಯಾ (ರಿಫೈನ್ಡ್) ₹1275 (1275)
ಸೂರ್ಯಕಾಂತಿ (ರಿಫೈನ್ಡ್) ₹1420 (1420)
ಪಾಮೋಲಿನ್ ₹1275 (1275)

ಈರುಳ್ಳಿ ಧಾರಣೆ
ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1000-1700
ಮಧ್ಯಮ ₹600-1000
ಸಣ್ಣ ₹200-600

ಚಿನ್ನದ ಬೆಲೆ ₹5,000 ಜಿಗಿತ

‘ಜಾಗತಿಕ ಅನಿಶ್ಚಿತತೆಗಳು ಹಳದಿ ಲೋಹದ ಬೆಲೆ ಹೆಚ್ಚಳಕ್ಕೆ ಕಾರಣ’

ನವದೆಹಲಿ (ಪಿಟಿಐ): ಚಿನ್ನದ ಬೆಲೆಯು ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ 10 ಗ್ರಾಂಗೆ ₹5,080ರಷ್ಟು ಹೆಚ್ಚಳ ಕಂಡಿದೆ. ಈ ಮೂಲಕ ಚಿನ್ನದ ಬೆಲೆಯು ಮಂಗಳವಾರದ ಅಂತ್ಯಕ್ಕೆ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹1,12,750ಕ್ಕೆ ತಲುಪಿದೆ.

ಹಳದಿ ಲೋಹದ ಬೆಲೆಯು ಪ್ರತಿ 10 ಗ್ರಾಂಗಳಿಗೆ ಈ ಕ್ಯಾಲೆಂಡರ್ ವರ್ಷದಲ್ಲಿ ₹33,800ರಷ್ಟು (ಅಂದರೆ ಶೇ 43ರಷ್ಟು) ಹೆಚ್ಚಳ ಕಂಡಿದೆ. 2024ರ ಡಿಸೆಂಬರ್ 31ರಂದು ಚಿನ್ನದ ಬೆಲೆಯು 10 ಗ್ರಾಂಗೆ ₹78,950 ಆಗಿತ್ತು.

ಅಖಿಲ ಭಾರತ ಸರಾಫ್ ಒಕ್ಕೂಟ ನೀಡಿರುವ ಮಾಹಿತಿ ಪ್ರಕಾರ ಶೇಕಡ 99.9ರಷ್ಟು ಶುದ್ಧತೆಯ ಚಿನ್ನದ ದರವು ಸೋಮವಾರದ ಅಂತ್ಯಕ್ಕೆ ₹1,07,670 ಆಗಿತ್ತು.

ಕೆ.ಜಿ. ಬೆಳ್ಳಿಯ ಬೆಲೆಯು ₹2,800ರಷ್ಟು ಹೆಚ್ಚಳ ಕಂಡಿದ್ದು, ಮಂಗಳವಾರದ ಅಂತ್ಯಕ್ಕೆ ₹1,28,800 ಆಗಿದೆ. ಹಿಂದಿನ ದಿನದ ವಹಿವಾಟಿನ ಅಂತ್ಯಕ್ಕೆ ಬೆಳ್ಳಿಯ ಬೆಲೆಯು ₹1,26,000 ಆಗಿತ್ತು.

ಜಾಗತಿಕ ಮಾರುಕಟ್ಟೆಯಲ್ಲಿಯೂ ಚಿನ್ನದ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ.

ಅಮೆರಿಕದ ಹಣಕಾಸು ನೀತಿಯಲ್ಲಿ ತುಸು ಸಡಿಲಿಕೆ ತರುವ ಲಕ್ಷಣಗಳಿವೆ. ಹೀಗಾಗಿ ಹೂಡಿಕೆದಾರರು ಸುರಕ್ಷಿತವಾದ ಚಿನ್ನದ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ತೊಡಗಿಸುತ್ತಿದ್ದಾರೆ. ಡಾಲರ್ ಮೌಲ್ಯವು ಇಳಿಕೆ ಕಂಡಿದ್ದುದು ಸಹ ಚಿನ್ನದ ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ವರ್ತಕರು ಹೇಳಿದ್ದಾರೆ.

‘ಚಿನ್ನದ ಬೆಲೆಯು ಮಂಗಳವಾರ ಇನ್ನೊಂದು ದಾಖಲೆಯನ್ನು ಬರೆದಿದೆ. ಈ ವರ್ಷದಲ್ಲಿ ಚಿನ್ನದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇಕಡ 35ಕ್ಕಿಂತ ಜಾಸ್ತಿ ಏರಿಕೆ ಕಂಡಿದೆ. ಕೇಂದ್ರೀಯ ಬ್ಯಾಂಕ್‌ಗಳಿಂದ ಚಿನ್ನಕ್ಕೆ ಹೆಚ್ಚಿನ ಬೇಡಿಕೆ ಇರುವುದು, ಚಿನ್ನದ ಇಟಿಎಫ್‌ಗಳಲ್ಲಿ ಹೂಡಿಕೆ ಹೆಚ್ಚಾಗುತ್ತಿರುವುದು ಈ ಪರಿಯ ಬೆಲೆ ಏರಿಕೆಗೆ ಕಾರಣವಾಗಿವೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸರಕುಗಳ ವಿಭಾಗದ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳು ಹಾಗೂ ಅಮೆರಿಕ ನಡೆಸಿರುವ ಸುಂಕ ಸಮರವು ಜಾಗತಿಕ ಅರ್ಥ ವ್ಯವಸ್ಥೆಯ ಮೇಲೆ ಉಂಟು-ಮಾಡಬಹುದಾದ ಪರಿಣಾಮದ ಕುರಿತಾದ ಕಳವಳ ಕೂಡ ಚಿನ್ನದ ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಅವರು ಹೇಳಿದ್ದಾರೆ.

ಬೆಳ್ಳಿ ಬೆಲೆ ₹1.5 ಲಕ್ಷಕ್ಕೆ?

ನವದೆಹಲಿ (ಪಿಟಿಐ): ಬೆಳ್ಳಿಯ ಬೆಲೆಯು ಮುಂದಿನ ತಿಂಗಳುಗಳಲ್ಲಿ ಕೆ.ಜಿ.ಗೆ ₹1.5 ಲಕ್ಷಕ್ಕೆ ಏರಿಕೆ ಆಗಬಹುದು ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ವರದಿಯೊಂದು ಹೇಳಿದೆ.

ಕೈಗಾರಿಕೆಗಳಿಂದ ಹೆಚ್ಚು ಬೇಡಿಕೆ ಬರುತ್ತಿರುವುದು, ಡಾಲರ್ ದುರ್ಬಲ ಆಗುತ್ತಿರುವುದು, ಜಾಗತಿಕ ಅನಿಶ್ಚಿತತೆಗಳ ನಡುವೆ ಹೂಡಿಕೆದಾರರು ಹಣವನ್ನು ಸುರಕ್ಷಿತ ಕಡೆಗಳಲ್ಲಿ ತೊಡಗಿಸುತ್ತಿರುವುದು ಬೆಳ್ಳಿಯ ಬೆಲೆ ಏರಿಕೆಗೆ ನೆರವಾಗಬಲ್ಲವು ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ.

‘ಬೆಳ್ಳಿಯ ಬೆಲೆಯು ಮುಂದಿನ ಆರು ತಿಂಗಳಲ್ಲಿ ಕೆ.ಜಿ.ಗೆ ₹1.35 ಲಕ್ಷಕ್ಕೆ ತಲುಪಬಹುದು. 12 ತಿಂಗಳುಗಳಲ್ಲಿ ಬೆಲೆಯು ₹1.5 ಲಕ್ಷ ಆಗಬಹುದು ಎಂಬುದು ನಮ್ಮ ನಿರೀಕ್ಷೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 88.5ರ ಮಟ್ಟದಲ್ಲಿ ಇರುತ್ತದೆ ಎಂಬ ಅಂದಾಜಿನಲ್ಲಿ ಈ ಲೆಕ್ಕಾಚಾರ ನೀಡಲಾಗಿದೆ’ ಎಂದು ವರದಿಯು ಹೇಳಿದೆ.

ಕಾರು ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಕಾರುಗಳ ಮೇಲಿನ ಜಿಎಸ್‌ಟಿ ಇಳಿಕೆಯ ಪರಿಣಾಮವಾಗಿ ತನ್ನ ಕಾರುಗಳ ಬೆಲೆಯು ₹95,500ರವರೆಗೆ ಕಡಿಮೆ ಆಗಲಿದೆ ಎಂದು ಹೋಂಡಾ ಕಾರ್ಸ್ ಇಂಡಿಯಾ ಮಂಗಳವಾರ ಹೇಳಿದೆ.

ಅಮೇಜ್ ಕಾರುಗಳ ಬೆಲೆಯು ₹95,500ರಷ್ಟು, ಸಿಟಿ ಮಾದರಿಯ ಬೆಲೆಯು ₹57,500ರಷ್ಟು, ಎಲಿವೇಟ್ ಬೆಲೆ ₹58,400ರಷ್ಟು ಕಡಿಮೆ ಆಗಲಿದೆ ಎಂದು ಕಂಪನಿಯು ಹೇಳಿದೆ. ಬೆಲೆ ಇಳಿಕೆಯು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ.ಜಿಎಸ್‌ಟಿ ಇಳಿಕೆಯ ಪರಿಣಾಮವಾಗಿ ಜೀಪ್ ಕಂಪನಿಯ ಕಾರುಗಳ ಬೆಲೆಯು ₹1.26 ಲಕ್ಷದಿಂದ ₹4.8 ಲಕ್ಷದವರೆಗೆ ಇಳಿಕೆ ಆಗಲಿದೆ. ಈ ಇಳಿಕೆ ಕೂಡ ಸೆಪ್ಟೆಂಬರ್ 22ರಿಂದ ಜಾರಿ ಆಗಲಿದೆ. ಜಾಗ್ವಾರ್ ಲ್ಯಾಂಡ್ ರೋವರ್ (ಜೆಎಲ್‌ಆರ್) ಕಾರುಗಳ ಬೆಲೆಯು ₹4.5 ಲಕ್ಷದಿಂದ ₹30.4 ಲಕ್ಷದವರೆಗೆ ಕಡಿಮೆ ಆಗಲಿದೆ. ಜೆಎಲ್‌ಆರ್ ಕಂಪನಿಯ ಕಾರುಗಳ ಬೆಲೆ ಇಳಿಕೆಯು ತಕ್ಷಣದಿಂದಲೇ ಜಾರಿಗೆ ಬಂದಿದೆ.

ಪರಿಷ್ಕೃತ ಎಂಆರ್‌ಪಿ ಪ್ರಕಟಿಸಿ: ಸೂಚನೆ

ನವದೆಹಲಿ (ಪಿಟಿಐ): ಉತ್ಪನ್ನಗಳ ತಯಾರಕರು ಮತ್ತು ಆಮದುಗಾರರು ಜಿಎಸ್‌ಟಿ ದರದಲ್ಲಿ ಆಗಿರುವ ಪರಿಷ್ಕರಣೆಯನ್ನು ಪ್ರತಿಫಲಿಸುವ ರೀತಿಯಲ್ಲಿ ಹೊಸ ಎಂಆರ್‌ಪಿ ದರವನ್ನು ಉತ್ಪನ್ನಗಳ ಮೇಲೆ ಪ್ರಕಟಿಸಬೇಕು ಎಂದು ಕೇಂದ್ರ ಸರ್ಕಾರವು ಮಂಗಳವಾರ ಸೂಚನೆ ನೀಡಿದೆ.

ಉತ್ಪನ್ನಗಳನ್ನು ಪ್ಯಾಕ್ ಮಾಡಲು ಬಳಸುವ ಪೊಟ್ಟಣಗಳ ಮೇಲೆ ಹಳೆಯ ಎಂಆರ್‌ಪಿ ಇದ್ದರೆ, ಅವುಗಳನ್ನು ಡಿಸೆಂಬರ್ 31ರವರೆಗೆ ಅಥವಾ ಅವುಗಳ ದಾಸ್ತಾನು ಇರುವವರೆಗೆ (ಇವೆರಡರಲ್ಲಿ ಯಾವುದು ಮೊದಲೋ ಅದು ಅನ್ವಯ) ಬಳಕೆ ಮಾಡಬಹುದು ಎಂದು ಹೇಳಿದೆ. ಆದರೆ, ಇಂತಹ ಪೊಟ್ಟಣಗಳ ಮೇಲೆ ಪರಿಷ್ಕೃತ ಎಂಆರ್‌ಪಿಯನ್ನೂ ಪ್ರಕಟಿಸಬೇಕಾಗುತ್ತದೆ.

ವಿವಿಧ ಉತ್ಪನ್ನಗಳು ಹಾಗೂ ಸೇವೆಗಳ ಮೇಲಿನ ಜಿಎಸ್‌ಟಿ ಪ್ರಮಾಣವನ್ನು ಜಿಎಸ್‌ಟಿ ಮಂಡಳಿ ತಗ್ಗಿಸಿದೆ. ಪರಿಷ್ಕೃತ ಜಿಎಸ್‌ಟಿ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರುತ್ತಿದೆ. ಈ ಸಂದರ್ಭದಲ್ಲಿ ಕೇಂದ್ರವು ಕಂಪನಿಗಳಿಗೆ ಈ ಸೂಚನೆ ನೀಡಿದೆ.

‘ತಯಾರಕರು, ಪ್ಯಾಕ್ ಮಾಡುವವರು ಮತ್ತು ಆಮದುದಾರರು ಮಾರಾಟವಾಗದ ಉತ್ಪನ್ನಗಳ ಮೇಲಿನ ಎಂಆರ್‌ಪಿ ದರವನ್ನು ಡಿಸೆಂಬರ್ 31ರವರೆಗೆ (ಅಥವಾ ದಾಸ್ತಾನು ಖಾಲಿಯಾಗುವವರೆಗೆ) ಪರಿಷ್ಕರಿಸಬಹುದು. ಪರಿಷ್ಕರಿಸುವ ದರವು ಜಿಎಸ್‌ಟಿಯಿಂದ ಆದ ಬದಲಾವಣೆಯನ್ನು ಮಾತ್ರ ತೋರಿಸಬೇಕು. ತೆರಿಗೆಯಿಂದ ಆದ ಹೆಚ್ಚಳ ಅಥವಾ ಇಳಿಕೆಯನ್ನು ಮಾತ್ರ ಅದರಲ್ಲಿ ತೋರಿಸಬಹುದು’ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಎಕ್ಸ್ ಮೂಲಕ ತಿಳಿಸಿದ್ದಾರೆ.

ಸ್ಟಿಕ್ಕರ್ ಬಳಸಿ, ಸ್ಟ್ಯಾಂಪ್ ಬಳಸಿ ಅಥವಾ ಆನ್‌ಲೈನ್ ಪ್ರಿಂಟ್ ಮೂಲಕ ಪರಿಷ್ಕೃತ ಎಂಆರ್‌ಪಿಯನ್ನು ತೋರಿಸಬಹುದು. ಜೊತೆಯಲ್ಲೇ, ಮೂಲ ಎಂಆರ್‌ಪಿ ಕೂಡ ಕಾಣುವಂತೆ ಇರಬೇಕು ಎಂದು ಸೂಚಿಸಲಾಗಿದೆ. ಬೆಲೆಯಲ್ಲಿನ ಪರಿಷ್ಕರಣೆಗೆ ಸಂಬಂಧಿಸಿದಂತೆ ತಯಾರಕರು, ಪ್ಯಾಕ್ ಮಾಡುವವರು ಅಥವಾ ಆಮದುದಾರರು ಕನಿಷ್ಠ ಎರಡು ಜಾಹೀರಾತುಗಳನ್ನು ಒಂದು ಅಥವಾ ಅದಕ್ಕಿಂತ ಹೆಚ್ಚಿನ ಪತ್ರಿಕೆಗಳ ಮೂಲಕ ನೀಡಬೇಕಿದೆ.

ಬೆಲೆ ಪರಿಷ್ಕರಣೆ ಬಗ್ಗೆ ಗ್ರಾಹಕರಿಗೆ ಜಾಹೀರಾತು ಹಾಗೂ ಸಾರ್ವಜನಿಕ ನೋಟಿಸ್ ಮೂಲಕ ಮಾಹಿತಿ ನೀಡಬೇಕು. ಇದರಿಂದಾಗಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು, ಗ್ರಾಹಕರ ಹಕ್ಕುಗಳನ್ನು ರಕ್ಷಿಸಲು ಸಾಧ್ಯವಾಗುತ್ತದೆ ಎಂದು ಜೋಶಿ ಅವರು ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

09-09-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1380 (-)
ಒಂದು ವಾರದ ಡೆಲಿವರಿ	1375 (-)
ಪಾಮ್ ವಾರದ ಡೆಲಿವರಿ	1273 (-)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (-)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,09,350 (-)
ಬೆಳ್ಳಿ ಕೆ.ಜಿಗೆ	1,24,700 (-)

ಹಿಂದಿನ ವಹಿವಾಟಿನ ಧಾರಣೆ ಲಭ್ಯವಿಲ್ಲ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸುನಿತಾ, ಊರು ತಿಳಿಸಿಲ್ಲ

- **ಪ್ರಶ್ನೆ: ನಾನು ಕಾಂಟ್ರಾ ವರ್ಗದ ರೆಗ್ಯುಲರ್ ಗ್ರೋತ್ ಫಂಡ್ ಆಯ್ಕೆ ಮಾಡಿದ್ದು, ಅದರಲ್ಲಿ ಮಾಸಿಕ ₹2,000 ಮೊತ್ತವನ್ನು ಪ್ರತಿ ತಿಂಗಳೂ ಎಸ್‌ಐಪಿ ಮೂಲಕ ಹೂಡಿಕೆ ಮಾಡುತ್ತಿದ್ದೇನೆ. ಇದು ನನ್ನ ಮೊದಲ ಹೂಡಿಕೆ. ಪ್ರಸ್ತುತ ಈ ಹೂಡಿಕೆಯ ಮೌಲ್ಯ ಋಣಾತ್ಮಕ ಸ್ಥಿತಿಯಲ್ಲಿ ಇದೆ. ಇದರಿಂದ ನನಗೆ ನಷ್ಟವಾಗುತ್ತದೆಯೇ ಎಂಬ ಆತಂಕ ಆಗಾಗ ಕಾಡುತ್ತದೆ. ಈ ಹೂಡಿಕೆಯಿಂದ ನನಗೆ ಭವಿಷ್ಯದಲ್ಲಿ ಲಾಭ ದೊರೆಯುವ ಸಾಧ್ಯತೆ ಇದೆಯೇ? ನಾನು ತೊಡಗಿಸಿರುವ ಮೊತ್ತಕ್ಕೆ ಬಡ್ಡಿ ಅಥವಾ ಲಾಭವನ್ನು ಯಾವಾಗ ಸೇರಿಸಲಾಗುತ್ತದೆ? ಮ್ಯೂಚುವಲ್ ಫಂಡ್‌ನ ಎನ್‌ಎವಿ ದಿನನಿತ್ಯ ಏರಿಕೆ–ಇಳಿಕೆ ಆಗುವ ಪ್ರಕ್ರಿಯೆ ನನ್ನ ಹೂಡಿಕೆಗೆ ಯಾವ ರೀತಿಯಲ್ಲಿ ಪರಿಣಾಮ ಬೀರುತ್ತದೆ?**

ಉತ್ತರ: ನೀವು ನಿಮ್ಮ ಹೂಡಿಕೆಯ ಕುರಿತು ಹೆಚ್ಚು ಆತಂಕಗೊಂಡಂತೆ ಕಾಣುತ್ತದೆ. ಕಾಂಟ್ರಾ ವರ್ಗದ ಮ್ಯೂಚುವಲ್ ಫಂಡ್‌ಗಳು ಈಕ್ವಿಟಿ ಆಧಾರಿತವಾಗಿರುವುದರಿಂದ ಮಾರುಕಟ್ಟೆಯ ಏರುಪೇರಿನಿಂದಾಗಿ ಹೂಡಿಕೆಯ ಮೌಲ್ಯವು ಕೆಲವೊಮ್ಮೆ ಋಣಾತ್ಮಕವಾಗಬಹುದು. ಇದು ನಿಜವಾದ ನಷ್ಟವಲ್ಲ. ಮಾರುಕಟ್ಟೆ ಏರಿಳಿತದ ತಾತ್ಕಾಲಿಕ ಫಲ ಮಾತ್ರ. ಇಂತಹ ಫಂಡ್‌ಗಳಲ್ಲಿ ದೀರ್ಘಾವಧಿಗೆ ಹೂಡಿಕೆ ಮಾಡಿದಾಗ ಉತ್ತಮ ಫಲಿತಾಂಶ ಸಿಗುವ ಸಾಧ್ಯತೆ ಹೆಚ್ಚು. ಸಾಮಾನ್ಯವಾಗಿ ಐದರಿಂದ ಏಳು ವರ್ಷಗಳ ಅವಧಿಗೆ ನಿರಂತರವಾಗಿ ಹೂಡಿಕೆ ಮುಂದುವರಿಸಿದರೆ ಮಾರುಕಟ್ಟೆಯ ಏರಿಳಿತಗಳನ್ನು ಸಮತೋಲನಗೊಳಿಸಿ ಲಾಭ ಪಡೆಯುವ ಸಾಧ್ಯತೆ ಹೆಚ್ಚುತ್ತದೆ.

ನೀವು ಪ್ರತಿ ತಿಂಗಳು ₹2,000ವನ್ನು ಎಸ್‌ಐಪಿ ಮೂಲಕ ಹೂಡಿಕೆ ಮಾಡುತ್ತಿರುವುದು ಹೂಡಿಕೆ ಶಿಸ್ತನ್ನು ಕಾಯ್ದುಕೊಳ್ಳಲು ಸಹಾಯಕ. ನೀವು ಪ್ರಶ್ನೆಯಲ್ಲಿ ಕೇಳಿರುವಂತೆ, ಮ್ಯೂಚುವಲ್ ಫಂಡ್‌ಗಳು ಬ್ಯಾಂಕ್ ಠೇವಣಿಯಂತೆ ನಿಗದಿತ ಬಡ್ಡಿ ಅಥವಾ ಲಾಭ ನೀಡುವುದಿಲ್ಲ. ಬದಲಾಗಿ, ನಿಮ್ಮ ಹೂಡಿಕೆಯ ಮೌಲ್ಯವು ಪ್ರತಿದಿನದ ಮಾರುಕಟ್ಟೆ ಚಲನೆಯ ಪ್ರಕಾರ ಬದಲಾಗುತ್ತದೆ. ಮೌಲ್ಯದಲ್ಲಿನ ಏರಿಳಿತವು ಎನ್‌ಎವಿ ಬೆಲೆಯಲ್ಲಿ ಗೊತ್ತಾಗುತ್ತದೆ. ಲಾಭ ಅಥವಾ ನಷ್ಟವು ಎನ್‌ಎವಿ ಏರಿಕೆ ಅಥವಾ ಇಳಿಕೆಯಿಂದ ನಿರ್ಧಾರವಾಗುತ್ತದೆ.

ಮಾರುಕಟ್ಟೆಯ ಅಲ್ಪಾವಧಿಯ ಅಸ್ಥಿರತೆಯಿಂದ ಅಸಮಾಧಾನಗೊಂಡು ಹೂಡಿಕೆಯಿಂದ ವಿಮುಖರಾಗುವ ಅಥವಾ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ನೀವು ಅಗತ್ಯವಾಗಿ ಮಾಡಬೇಕಾದ ಕೆಲಸವೆಂದರೆ, ಹೂಡಿಕೆಯ ಬಗ್ಗೆ ತಿಳಿವಳಿಕೆ ಬೆಳೆಸಿಕೊಳ್ಳಿ. ಮ್ಯೂಚುವಲ್ ಫಂಡ್‌ಗಳನ್ನು ವೃತ್ತಿಪರ ನಿಧಿ ನಿರ್ವಾಹಕರು ನಿರ್ವಹಿಸುತ್ತಾರೆ. ಅವರು ಮಾರುಕಟ್ಟೆಯ ಚಲನೆ ಗಮನಿಸಿ ದೀರ್ಘಾವಧಿಯಲ್ಲಿ ಹೂಡಿಕೆದಾರರಿಗೆ ಲಾಭ ತರಲು ಯತ್ನಿಸುತ್ತಾರೆ. ಆದ್ದರಿಂದ ನಿಮ್ಮ ಹೂಡಿಕೆಯನ್ನು ಧೈರ್ಯದಿಂದ ಮುಂದುವರಿಸಿ, ನಿಯಮಿತವಾಗಿ ಖಾತೆಯನ್ನು ಪರೀಕ್ಷಿಸಿ, ಅಗತ್ಯವಿದ್ದರೆ ನಿಮ್ಮ ಆರ್ಥಿಕ ಸಲಹೆಗಾರರೊಂದಿಗೆ ಚರ್ಚಿಸಿ ತಿದ್ದುಪಡಿ ಮಾಡಿಕೊಳ್ಳಿ. ದೀರ್ಘ ಅವಧಿಗೆ ಹೂಡಿಕೆ ಮುಂದುವರಿಸಿದಲ್ಲಿ ಭವಿಷ್ಯದಲ್ಲಿ ಬ್ಯಾಂಕ್ ಬಡ್ಡಿಗಿಂತ ಉತ್ತಮ ಲಾಭದ ನಿರೀಕ್ಷೆ ಮಾಡಬಹುದು.

ಎಚ್.ಎಸ್. ಸುರೇಶ, ಮಂಗಳೂರು

- **ಪ್ರಶ್ನೆ: ನಾನು ಕೇಂದ್ರ ಸರ್ಕಾರದ ಉದ್ಯೋಗಿಯಾಗಿ 2020ರಲ್ಲಿ ನಿವೃತ್ತಿ ಹೊಂದಿದ್ದೇನೆ. ಈಗ ನಿವೃತ್ತಿ ವೇತನ ಪಡೆಯುತ್ತಿದ್ದೇನೆ. ನಾನು 1999ರಲ್ಲಿ ಇಲಾಖೆಯಿಂದ ಅನುಮತಿ ಪಡೆದು ಒಂದು ಮನೆ ಕಟ್ಟಿಸಿ ಅದರಲ್ಲಿ ವಾಸವಾಗಿದ್ದೇನೆ. 1998ನೇ ಇಸವಿಯಿಂದ ಆದಾಯ ತೆರಿಗೆ ಕಟ್ಟುತ್ತಿದ್ದೇನೆ. ಆದರೆ ನಾನು ವಾಸ ಮಾಡುವ ಮನೆಯನ್ನು ಆದಾಯ ತೆರಿಗೆ ಭರ್ತಿ ಮಾಡುವಾಗ ತೋರಿಸಿರಲಿಲ್ಲ, ಅದನ್ನು ಈಗ ತೋರಿಸಬಹುದೇ? ಅಲ್ಲದೆ 2017ನೇ ಇಸವಿಯಲ್ಲಿ ನನಗೆ ತಂದೆಯಿಂದ ಗದ್ದೆ ಹಾಗೂ ಅಡಿಕೆ ತೋಟ ಬಂದಿರುತ್ತದೆ. ಅದನ್ನು ಆದಾಯ ತೆರಿಗೆ ವಿವರ ಸಲ್ಲಿಸುವಾಗ ಉಲ್ಲೇಖಿಸಲಿಲ್ಲ. ಎರಡೂ ಸ್ಥಿರಾಸ್ತಿಗಳ ವಿವರಗಳನ್ನು ಪ್ರತಿ ವರ್ಷ ಇಲಾಖೆಗೆ ಸಲ್ಲಿಸಿದ್ದೇನೆ. ಈಗ ಎರಡೂ ಸ್ಥಿರಾಸ್ತಿಗಳ ವಿವರಗಳನ್ನು ಆದಾಯ ತೆರಿಗೆ ಇಲಾಖೆಗೆ ವಿವರ ಸಲ್ಲಿಸುವಾಗ ತೋರಿಸಬಹುದೇ?**

ಉತ್ತರ: ಆದಾಯ ತೆರಿಗೆ ವಿವರ ಸಲ್ಲಿಸುವಾಗ ವ್ಯಕ್ತಿಯ ಆದಾಯ, ಸಂಬಂಧಿತ ಆಸ್ತಿ ಮತ್ತು ಅನ್ವಯಿಸುವ ವಿನಾಯಿತಿಗಳ ವಿವರಗಳನ್ನು ಸರಿಯಾಗಿ ನೀಡುವುದು ಕಾನೂನುಬದ್ಧ ಜವಾಬ್ದಾರಿ. ಕೆಲವೊಮ್ಮೆ ಇಂತಹ ವಿಚಾರದಲ್ಲಿ ಲೋಪಗಳಾಗಬಹುದು. ಆದರೆ ತೆರಿಗೆ ವಂಚಿಸುವ ಉದ್ದೇಶ ಅಥವಾ ಉದ್ದೇಶಪೂರ್ವಕವಾಗಿ ಮಾಹಿತಿ ಗೋಪ್ಯವಾಗಿಟ್ಟು ಅದು ತೆರಿಗೆ ವಿಚಾರದಲ್ಲಿ ಯಾವುದೇ ಪರಿಣಾಮ ಬೀರಿದರೆ ಮಾತ್ರ ಸಮಸ್ಯೆ ಉದ್ಭವಿಸುತ್ತದೆ. ನೀವು ನಿಮ್ಮ ಉದ್ಯೋಗದ ಸಂದರ್ಭದಲ್ಲಿ ಪಡೆದ ಅನುಮತಿ ನಿಮ್ಮ ಉದ್ಯೋಗ ಸಂಬಂಧಿತ ವಿಚಾರವಾಗಿದ್ದು ಆದಾಯ ತೆರಿಗೆಗೆ ನೇರ ಸಂಬಂಧ ಇಲ್ಲ.

ನೀವು ಈಗಾಗಲೇ ಸಕಾಲಿಕವಾಗಿ ವಿವರ ಸಲ್ಲಿಸುತ್ತಿದ್ದೀರಿ. ಸ್ವಂತ ಮನೆಯಲ್ಲಿ ವಾಸಿಸುತ್ತಿರುವ ಕಾರಣ ಆ ಆಸ್ತಿಯಿಂದ ಯಾವುದೇ ಆದಾಯ ಇಲ್ಲ. ಹೀಗಾಗಿ ತೆರಿಗೆ ಪಾವತಿ ವಿಚಾರದಲ್ಲಿ ಯಾವುದೇ ಸಮಸ್ಯೆ ಇಲ್ಲ. ಮುಂದಿನ ವಿವರ ಸಲ್ಲಿಸುವಾಗ ‘ಹೌಸ್ ಪ್ರಾಪರ್ಟಿ’ ವಿಭಾಗದಲ್ಲಿ ಸ್ವಂತ ವಾಸಕ್ಕಾಗಿರುವ ಮನೆ ಹೊಂದಿರುವ ವಿವರ ಭರ್ತಿ ಮಾಡಿಕೊಳ್ಳಿ. ಇದರಿಂದ ಯಾವುದೇ ಸಮಸ್ಯೆ ಇಲ್ಲ.

ನಿಮಗೆ ನಿಮ್ಮ ತಂದೆಯಿಂದ ಕೃಷಿ ಭೂಮಿ ಈಗಾಗಲೇ ಬಂದಿದೆ. ಸಾಮಾನ್ಯವಾಗಿ ₹5 ಸಾವಿರಕ್ಕಿಂತ ಅಧಿಕ ಮೊತ್ತದ ನಿವ್ವಳ ಕೃಷಿ ಆದಾಯ ಇದ್ದಾಗ ಅದನ್ನು ವಿವರಗಳಲ್ಲಿ ತೋರಿಸಬೇಕಾಗಿರುವುದು ಆದಾಯ ತೆರಿಗೆ ನಿಯಮ. ಅದೇ ರೀತಿ ಒಟ್ಟು ₹5 ಲಕ್ಷಕ್ಕಿಂತ ಅಧಿಕ ನಿವ್ವಳ ಕೃಷಿ ಆದಾಯ ಇದ್ದಾಗ ಎಲ್ಲಾ ಕೃಷಿ ಭೂಮಿಯ ವಿವರಗಳನ್ನು ನೀಡಬೇಕಾಗಿರುವುದು ಅಗತ್ಯ. ಆದರೆ ಈ ಮೊತ್ತಕ್ಕಿಂತ ಕಡಿಮೆ ಆದಾಯ ಇದ್ದಾಗ ಈ ರೀತಿಯ ಆಸ್ತಿ ವಿವರ ನೀಡುವುದು ಕಡ್ಡಾಯವಲ್ಲ.

ಹೀಗಾಗಿ, ನಿಮಗೆ ಹೆಚ್ಚಿನ ಕೃಷಿ ಆದಾಯ ಇದ್ದರೆ, ಅದನ್ನು ಯಾವ ರೀತಿ ನಿಮ್ಮ ಐ.ಟಿ. ವಿವರದಲ್ಲಿ ತೋರಿಸಬೇಕು, ನಿವ್ವಳ ಕೃಷಿ ಆದಾಯ ಹೇಗೆ ನಿರ್ಧರಿಸಬೇಕು ಇತ್ಯಾದಿ ವಿವರಗಳ ಮಾಹಿತಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ ಹಾಗೂ ಅಗತ್ಯ ಕ್ರಮ ಕೈಗೊಳ್ಳಿ. ಆದರೆ ಒಂದು ವಿಚಾರ ಗಮನಿಸಿ, ಯಾವುದೇ ಮೊತ್ತದ ಕೃಷಿ ಆದಾಯವಿದ್ದರೂ ಅದಕ್ಕೆ ತೆರಿಗೆ ಇಲ್ಲ. ಆದರೆ ವೈಯಕ್ತಿಕ ತೆರಿಗೆ ಮಿತಿಗಿಂತ ಹೆಚ್ಚಿನ ಕೃಷಿಯೇತರ ಆದಾಯವಿದ್ದಾಗ, ಹಾಗೂ ಕೃಷಿ ಆದಾಯ ₹5000ದ ಮೇಲಿದ್ದಾಗ, ಆ ಬಗೆಗಿನ ಮಾಹಿತಿ ಸೇರಿಸಿ ವಿವರ ಸಲ್ಲಿಕೆ ಅನಿವಾರ್ಯ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಅಡಿಕೆ ಧಾರಣೆ

ಮಾರುಕಟ್ಟೆ	ತಳಿ	ಧಾರಣೆ
ಕುಮಟಾ	ಚಾಲಿ	38646-42000
	ಬೆಟ್ಟೆ	34649-35099
	ಕೆಂಪುಗೋಟು	24600-25000
	ರಾಶಿ	56739-57169
ಕಾರ್ಕಳ	ಹೊಸತು	32500-49000
	ಹಳತು	32500-53000
ಸಿದ್ದಾಪುರ	ಬಿಳಿಗೋಟು	24399-32629
	ಚಾಲಿ	36099-43099
	ಕೋಕ	17619-26589
	ಕೆಂಪುಗೋಟು	24319-25110
	ರಾಶಿ	42129-48699
	ತಟ್ಟಿಬೆಟ್ಟೆ	30319-41699
ಕುಮಟಾ	ಚಾಲಿ	38646-42000
	ಚಿಪ್ಪು	26269-32869
	ಕೋಕ	7099-24999
	ಫ್ಯಾಕ್ಟರಿ	4569-29129
	ಹೊಸಚಾಲಿ	36569-43909
ಪುತ್ತೂರು	ಕೋಕ	20000-28000
	ಹೊಸತು	26000-49000
	ಹಳತು	37500-53000
ಶಿರಸಿ	ಬೆಟ್ಟೆ	30699-38690
	ಬಿಳಿಗೋಟು	35899-31311
	ಚಾಲಿ	38114-44299
	ಕೆಂಪುಗೋಟು	25099-28609
	ರಾಶಿ	44099-49601
ಯಲ್ಲಾಪುರ	ಅಪಿ	67999-67999
	ಬಿಳಿಗೋಟು	18199-34199
	ಚಾಲಿ	34569-44199
	ಕೋಕ	10909-20912
	ಕೆಂಪುಗೋಟು	18099-27713
	ರಾಶಿ	40699-57688
	ತಟ್ಟಿಬೆಟ್ಟೆ	28506-38789
ಶಿವಮೊಗ್ಗ	ಬೆಟ್ಟೆ	50000-65682
	ಗೊರಬಲು	19499-35550
	ರಾಶಿ	48009-60299
	ಸರಕು	54500-85210

‘ಬ್ರಿಕ್ಸ್ ರಾಷ್ಟ್ರಗಳು ‘ರಕ್ತಪಿಶಾಚಿ’ಗಳಂತೆ’



ಪೀಟರ್ ನವರೊ

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ‘ಬ್ರಿಕ್ಸ್’ ಗುಂಪಿನ ರಾಷ್ಟ್ರಗಳು ಪರಸ್ಪರ ದ್ವೇಷಿಸುತ್ತವೆ. ಅಲ್ಲದೇ ಅಮೆರಿಕದೊಂದಿಗೆ ವ್ಯಾಪಾರ ನಡೆಸುವ ವೇಳೆ ಅವು ‘ರಕ್ತಪಿಶಾಚಿ’ಗಳಂತೆ ವರ್ತಿಸುತ್ತವೆ. ಹೀಗಾಗಿ ಈ ಮೈತ್ರಿ ಬಹಳ ದಿನ ಉಳಿಯದು ಎಂದು ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವರೊ ಹೇಳಿದ್ದಾರೆ.

‘ರಿಯಲ್ ಅಮೆರಿಕ’ಸ್ ವಾಯ್ಸ್’ಗೆ ಸೋಮವಾರ ನೀಡಿರುವ ಸಂದರ್ಶನದಲ್ಲಿ ಅವರು ಈ ಮಾತು ಹೇಳಿದ್ದಾರೆ.

‘ಐತಿಹಾಸಿಕವಾಗಿ ನೋಡಿದಾಗ, ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಪರಸ್ಪರ ದ್ವೇಷಿಸುತ್ತಾ, ಒಂದು ಮತ್ತೊಂದು ರಾಷ್ಟ್ರವನ್ನು ನಾಶ ಮಾಡುತ್ತಾ ಬಂದಿರುವುದು ಗೊತ್ತಾಗುತ್ತದೆ. ಹೀಗಾಗಿ, ಈ ಮೈತ್ರಿ ಗಟ್ಟಿಯಾಗಿ ಇರುತ್ತದೆ ಎಂದು ನನಗೆ ಅನಿಸುತ್ತಿಲ್ಲ’ ಎಂದು ನವರೊ ಹೇಳಿದ್ದಾರೆ.

ಭಾರತದ ವಿರುದ್ಧ ನಿರಂತರ ಟೀಕೆ ಮಾಡುತ್ತಿರುವ ನವರೊ,‘ಭಾರತ ಕೂಡ ದಶಕಗಳಿಂದ ಚೀನಾದೊಂದಿಗೆ ಯುದ್ಧ ನಡೆಸುತ್ತಿದೆ’ ಎಂದು ಹೇಳಿದ್ದಾರೆ.

ಮುಂಬೈ: ನೌಕಾ ನೆಲೆಯಲ್ಲಿ ಭಾರಿ ಭದ್ರತಾ ಲೋಪ

ಮುಂಬೈ: ಮುಂಬೈನ ನೌಕಾ ನೆಲೆಯಲ್ಲಿ ಭಾರಿ ಭದ್ರತಾ ಲೋಪ ಉಂಟಾಗಿದ್ದು, ನೌಕಾ ಸಿಬ್ಬಂದಿ ಎಂದು ಹೇಳಿಕೊಂಡು ಬಂದಿದ್ದ ವ್ಯಕ್ತಿಯೊಬ್ಬ ರೈಫಲ್ ಮತ್ತು ಸ್ಫೋಟಕಗಳೊಂದಿಗೆ ಪರಾರಿಯಾಗಿದ್ದಾನೆ.

ಕಿರಿಯ ಸಿಬ್ಬಂದಿಯೊಬ್ಬರು ತಮ್ಮ ಕೆಲಸವನ್ನು ನೌಕಾಪಡೆಯ ಸಮವಸ್ತ್ರದಲ್ಲಿದ್ದ ವ್ಯಕ್ತಿಗೆ ವಹಿಸಿದ್ದರು. ಕೆಲಸ ವಹಿಸಿಕೊಂಡಿದ್ದ ವ್ಯಕ್ತಿ ಐಎನ್‌ಎಸ್‌ಎಸ್ ರೈಫಲ್ ಮತ್ತು ಮದ್ದುಗುಂಡುಗಳೊಂದಿಗೆ ನಾಪತ್ತೆಯಾಗಿದ್ದಾನೆ.

ನೇಪಾಳ ನಿಗಿ ಕೆಂಡ, ಓಲಿ ತಲೆದಂಡ

ಒಂದನೇ ಪುಟದಿಂದ...

ಗುರುಂಗ ಅವರು ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಿ ಆದೇಶಿಸಿದ್ದರು. ಕಾನೂನುರೀತ್ಯ, ನೋಂದಣಿ ಮಾಡಿಸುವಲ್ಲಿ ವಿಫಲವಾಗಿದ್ದಕ್ಕಾಗಿ ಫೇಸ್‌ಬುಕ್, ಎಕ್ಸ್ ಸೇರಿ 26 ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಿ ಸರ್ಕಾರ ಆದೇಶಿಸಿತ್ತು.

ಅಧ್ಯಕ್ಷ ಪೌದೆಲ್ ಅವರ ಖಾಸಗಿ ನಿವಾಸದ ಮೇಲೂ ಪ್ರತಿಭಟನಕಾರರು ದಾಳಿ ನಡೆಸಿದರು. ‘ದೇಶವು ಅಸಾಧಾರಣ ಸನ್ನಿವೇಶ ಗಳನ್ನು ಎದುರಿಸುತ್ತಿದೆ. ಪ್ರಸಕ್ತ ಸನ್ನಿವೇಶ ಹಿನ್ನೆಲೆಯಲ್ಲಿ ಸಾಂವಿಧಾನಿಕ ಮತ್ತು ರಾಜಕೀಯ ನಿರ್ಧಾರವೊಂದನ್ನು ತೆಗೆದುಕೊಳ್ಳುವುದಕ್ಕಾಗಿ ದಾರಿ ಮಾಡಿಕೊಡುವ ಉದ್ದೇಶದಿಂದ ರಾಜೀನಾಮೆ ನೀಡುತ್ತಿದ್ದೇನೆ’ ಎಂದು ಅವರು ಅಧ್ಯಕ್ಷ ರಾಮಚಂದ್ರ ಪೌದೆಲ್ ಅವರಿಗೆ ಸಲ್ಲಿಸಿರುವ ರಾಜೀನಾಮೆ ಪತ್ರದಲ್ಲಿ ವಿವರಿಸಿದ್ದಾರೆ.

ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಿದ ಕ್ರಮ ವಿರೋಧಿಸಿ ಹಾಗೂ ಭ್ರಷ್ಟಾಚಾರ ತಡೆಯಬೇಕು ಎಂದು ಆಗ್ರಹಿಸಿ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ‘ಜೆನ್–ಝಿ’ ಯುವ ಜನತೆ ನೇತೃತ್ವದಲ್ಲಿ ಸೋಮವಾರ ಭಾರಿ ಪ್ರತಿಭಟನೆ ನಡೆದಿತ್ತು. ದೇಶದಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರಕ್ಕೆ ಉತ್ತರದಾಯಿತ್ವ ನಿಗದಿ ಮಾಡಬೇಕು ಎಂದೂ ಒತ್ತಾಯಿಸಿ ನಡೆಸಿದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತಲ್ಲದೇ, 19 ಜನರು ಮೃತಪಟ್ಟಿದ್ದರು. ಇದರ ಬೆನ್ನಲ್ಲೆ, ಸಾಮಾಜಿಕ ಜಾಲತಾಣಗಳ ಮೇಲಿನ ನಿಷೇಧವನ್ನು ಸರ್ಕಾರ ಹಿಂಪಡೆದಿತ್ತು.

ಆಗ್ರಹ: ‘ಪಕ್ಷವು ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಕೂಡಲೇ ಹಿಂತೆಗೆದುಕೊಂಡು, ನೂತನ ಸರ್ಕಾರ ರಚಿಸಲು ಕ್ರಮ ಕೈಗೊಳ್ಳಬೇಕು. ಪ್ರತಿಭಟನೆ ನಡೆಸುತ್ತಿರುವ ಜೆನ್–ಝಿ ಗುಂಪಿನೊಂದಿಗೆ ಕೂಡಲೇ ಮಾತುಕತೆ ಆರಂಭಿಸಬೇಕು’ ಎಂದು ನೇಪಾಳಿ ಕಾಂಗ್ರೆಸ್‌ನ ಹಿರಿಯ ನಾಯಕರಾದ ವಿಮಲೇಂದ್ರ ನಿಧಿ ಹಾಗೂ ಅರ್ಜುನ್ ನರಸಿಂಗ್ ಕೆಸಿ ಒತ್ತಾಯಿಸಿದ್ದರು.

ಸಂಯಮಕ್ಕೆ ಸೇನೆ ಮನವಿ: ‘ದೇಶದಲ್ಲಿ ಸ್ಥಿರತೆ ಮತ್ತು ಕಾನೂನುಸುವ್ಯವಸ್ಥೆ ಮರುಸ್ಥಾಪಿಸಲು ಮಾತುಕತೆ ಮೂಲಕ ಪರಿಹಾರ ಕಂಡುಕೊಳ್ಳುವುದೇ ನಮ್ಮ ಮುಂದಿರುವ ಏಕೈಕ ಮಾರ್ಗ. ಜನರು ಸಂಯಮ ಕಾಪಾಡಿಕೊಳ್ಳಬೇಕು, ಜನರ ಜೀವ ಮತ್ತು ಸ್ವತ್ತುಗಳಿಗೆ ಮತ್ತಷ್ಟು ಹಾನಿ ಮಾಡುವುದನ್ನು ನಿಲ್ಲಿಸಬೇಕು’ ಎಂದು ನೇಪಾಳಿ ಸೇನೆ ಹಾಗೂ ವಿವಿಧ ಭದ್ರತಾ ಪಡೆಗಳು ಮನವಿ ಮಾಡಿವೆ.

ಈ ಕುರಿತು ಅವು ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದು, ಸೇನೆ ಮುಖ್ಯಸ್ಥ ಅಶೋಕರಾಜ್ ಸಿಗ್ದೆಲ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಏಕನಾರಾಯಣ ಆರ್ಯಲ್, ಗೃಹ ಕಾರ್ಯದರ್ಶಿ ಗೋಕರ್ಣ ಡಿ. ಹಾಗೂ ಇತರರು ಈ ಹೇಳಿಕೆಗೆ ಸಹಿ ಹಾಕಿದ್ದಾರೆ.

ಮಾಜಿ ಪ್ರಧಾನಿ ಪತ್ನಿ ಸಜೀವ ದಹನ: ಮಾಜಿ ಪ್ರಧಾನಿ ಝಲಾ ನಾಥ್ ಖನಾಲ್ ಅವರ ಮನೆಗೂ ಪ್ರತಿಭಟನಕಾರರು ಬೆಂಕಿ ಹಚ್ಚಿದರು. ಮನೆಯಲ್ಲಿದ್ದ ಖನಾಲ್ ಅವರ ಪತ್ನಿ ರಾಜ್ಯಲಕ್ಷ್ಮಿ ಚಿತ್ರಕರ್ ಅವರು ಸಜೀವ ದಹನವಾಗಿದ್ದಾರೆ.

ಪ್ರಮುಖ ಅಂಶಗಳು

- ಕಠ್ಮಂಡುವಿನ ಬಾನೇಶ್ವರ, ಕಲಂಕಿ, ಕಲಿಮತಿ, ತಹಚಾಲ್, ಲಲಿತ್‌ಪುರ ಜಿಲ್ಲೆಯ ಚಪಗೌ, ಚ್ಯಾಸಲ್ ಮತ್ತು ಥೇಚೊ ಪ್ರದೇಶಗಳಲ್ಲಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ‘ವಿದ್ಯಾರ್ಥಿಗಳನ್ನು ಕೊಲ್ಲಬೇಡಿ’ ಎಂಬ ಘೋಷಣೆಗಳನ್ನು ಕೂಗಿದರು
- ಕಲಂಕಿಯಲ್ಲಿ ಟೈರುಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಕಾರರು, ರಸ್ತೆಗಳನ್ನು ಬಂದ್ ಮಾಡಿದರು
- ಕಠ್ಮಂಡುವಿನಲ್ಲಿರುವ ಮಾಜಿ ಪ್ರಧಾನಿ ಶೇರ್ ಬಹಾದೂರ್ ದೇವುಬಾ ಅವರ ನಿವಾಸ ಧ್ವಂಸ
- ಕಠ್ಮಂಡುವಿನ ತ್ರಿಭುವನ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ವಿಮಾನಗಳ ಸೇವೆ ಭಾಗಶಃ ರದ್ದು
- ಸುಪ್ರೀಂ ಕೋರ್ಟ್ ಹಾಗೂ ಅಟಾರ್ನಿ ಜನರಲ್ ಕಚೇರಿಗಳಿರುವ ‘ಸಿಂಘ ದರ್ಬಾರ್’ ಕಟ್ಟಡಕ್ಕೂ ಬೆಂಕಿ ಹಚ್ಚಿದ ಪ್ರತಿಭಟನಕಾರರು

ಸರ್ವಾಧಿಕಾರಿಯಂತೆ ವರ್ತನೆ, ಭ್ರಷ್ಟಾಚಾರ ನಿಗ್ರಹಿಸುವಲ್ಲಿ ವಿಫಲ: ಆರೋಪ

ಪ್ರಧಾನಿ ಕುರ್ಚಿಗೆ ಕುತ್ತು ತಂದ ‘ನಿಷೇಧ’

ಓಲಿ

ಕಠ್ಮಂಡು (ರಾಯಿಟರ್ಸ್/ಎಎಫ್‌ಪಿ): ದೇಶದಲ್ಲಿ ಆರ್ಥಿಕ ಸ್ಥಿರತೆ ಮರುಸ್ಥಾಪನೆ ಹಾಗೂ ಉದ್ಯೋಗ ಸೃಷ್ಟಿಯ ಭರವಸೆಯೊಂದಿಗೆ ಕಳೆದ ವರ್ಷ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದ ಕೆ.ಪಿ.ಶರ್ಮಾ ಓಲಿ ಅವರು, ಸಾಮಾಜಿಕ ಜಾಲತಾಣಗಳ ಮೇಲೆ ಹೇರಿದ ನಿಷೇಧ ಖಂಡಿಸಿ ಭುಗಿಲೆದ್ದ ಆಕ್ರೋಶಕ್ಕೆ ಗುರಿಯಾಗಿ, ಮಂಗಳವಾರ ಹಠಾತ್ ರಾಜೀನಾಮೆ ನೀಡಿದ್ದಾರೆ.

ದೇಶದಲ್ಲಿನ ಬಡತನ ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಡುವುದಾಗಿ ಓಲಿ ಶಪಥ ಮಾಡಿದ್ದರು. ಆದರೆ, ಅವರು ಸರ್ವಾಧಿಕಾರಿಯಂತೆ ವರ್ತಿಸುತ್ತಾರೆ ಮತ್ತು ಭ್ರಷ್ಟಾಚಾರ ನಿಗ್ರಹಿಸುವಲ್ಲಿ ವಿಫಲರಾಗಿದ್ದಾರೆ ಎಂಬ ಆರೋಪಗಳಿಗೆ ಓಲಿ ಗುರಿಯಾಗಿ, ಈಗ ಅಧಿಕಾರ ಕಳೆದುಕೊಂಡಿದ್ದಾರೆ.

ಕೆ.ಪಿ.ಶರ್ಮಾ ಓಲಿ ಈ ಹಿಂದೆ ಮೂರುಬಾರಿ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ. ಓಲಿ ಅವರು ಚೀನಾಕ್ಕೆ ಹತ್ತಿರವಾಗಿದ್ದಾರೆ ಎಂದು ಕೆಲ ರಾಜಕೀಯ ವಿಶ್ಲೇಷಕರು ಹೇಳುತ್ತಾರೆ. ಆದರೆ, ಇದನ್ನು ಅವರು ಅಲ್ಲಗಳೆಯುತ್ತಿದ್ದರು.

‘ನನ್ನ ಆಡಳಿತ ಯಾವಾಗಲೂ ತಟಸ್ಥ ಮತ್ತು ಅಲಿಪ್ತ ನೀತಿ ಅನುಸರಿಸುತ್ತದೆ’ ಎಂದು ಅವರು 2022ರಲ್ಲಿ ರಾಯಿಟರ್ಸ್‌ಗೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು.

ಕಳೆದ ವರ್ಷ ಚುನಾವಣೆ ನಂತರ, ನೇಪಾಳಿ ಕಾಂಗ್ರೆಸ್ ಬೆಂಬಲದೊಂದಿಗೆ, ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ-ಯುನಿಫೈಡ್ ಮಾರ್ಕ್ಸಿಸ್ಟ್ ಲೆನಿನಿಸ್ಟ್ (ಸಿಪಿಎನ್- ಯುಎಂಎಲ್) ನೇತೃತ್ವದ ಸರ್ಕಾರ ರಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಪ್ರತಿಭಟನಕಾರರೊಬ್ಬರು ಪೊಲೀಸರ ಜಾಕೆಟ್ ಹಾಕಿಕೊಂಡು ಮುನ್ನುಗ್ಗಿದರು ಎಪಿ/ಪಿಟಿಐ ಚಿತ್ರ

ಕಷ್ಟದ ಹಾದಿ...

1952ರಲ್ಲಿ ಜನಿಸಿರುವ ಓಲಿ ಅವರು ಬಾಲ್ಯದಲ್ಲಿ ಸಾಕಷ್ಟು ಸಂಕಷ್ಟಗಳನ್ನು ಎದುರಿಸಿದವರು. ಅವರು ನಾಲ್ಕು ವರ್ಷದವರಿದ್ದಾಗ, ಅವರ ತಾಯಿ ಸಿಡುಬು ರೋಗದಿಂದ ಮೃತಪಟ್ಟಿದ್ದರು. ನಂತರದ ದಿನಗಳಲ್ಲಿ ಕಾಣಿಸಿಕೊಂಡ ಪ್ರವಾಹದಿಂದಾಗಿ ಕುಟುಂಬವೇ ಚದುರಿ ಹೋಗಿತ್ತು. ಓಲಿ ಅವರು ತಮ್ಮ ಅಜ್ಜ–ಅಜ್ಜಿ ಅವರ ಆಶ್ರಯದಲ್ಲಿ ಬೆಳೆದರು.

ನೇಪಾಳ ರಾಜಕೀಯದಲ್ಲಿ ‘ಕೆಪಿ’ ಎಂದೇ ಖ್ಯಾತರಾಗಿರುವ 73 ವರ್ಷದ ಖಡ್ಗ ಪ್ರಸಾದ ಶರ್ಮಾ ಓಲಿ, ನೇರ ಮಾತಿಗೂ ಹೆಸರಾದವರು. ಸಿಪಿಎನ್–ಯುಎಂಎಲ್ ಪಕ್ಷದ ಸರ್ವೋಚ್ಚ ನಾಯಕರಾಗಿ ಹೊರಹೊಮ್ಮಿದ್ದಾರೆ.

‘ಸಿಪಿಎನ್–ಯುಎಂಎಲ್ ಎಂಬುದು ಓಲಿ ಅವರ ಪಕ್ಷ ಎಂದೇ ಪರಿಗಣಿಸುವಷ್ಟರ ಮಟ್ಟಿಗೆ ಅವರು ಪಕ್ಷವನ್ನು ಕಟ್ಟಿ, ಬೆಳೆಸಿದ್ದಾರೆ’ ಎಂದು ರಾಜಕೀಯ ಪತ್ರಕರ್ತ ಬಿನು ಸುವೇದಿ ಹೇಳುತ್ತಾರೆ.

> **ಓಲಿ ನೇತೃತ್ವದ ಸರ್ಕಾರ ಹಾಗೂ ದೇಶದ ರಾಜಕೀಯ ನೇತೃತ್ವದ ಬಗ್ಗೆ ಜನರಲ್ಲಿ ವ್ಯಾಪಕ ಅಸಮಾಧಾನ ಇತ್ತು. ಇದು ನಿನ್ನೆ ಸ್ಫೋಟಗೊಂಡಿದೆ**
> **ಬಿಪಿನ್ ಅಧಿಕಾರಿ,** ಸಂವಿಧಾನ ತಜ್ಞ

‘ತಮ್ಮ ಮಾತೇ ಅಂತಿಮ ಎಂಬುದು ಓಲಿ ಅವರ ನಿಲುವಾಗಿತ್ತು. ಇತರರು ನೀಡುವ ಸಲಹೆಗಳನ್ನು, ಟೀಕೆಗಳನ್ನು ಓಲಿ ಸ್ವೀಕರಿಸುತ್ತಿದ್ದು ಅಪರೂಪ. ಸ್ವತಃ ಪಕ್ಷದ ಮುಖಂಡರು ನೀಡುತ್ತಿದ್ದ ಸಲಹೆಗಳನ್ನು ಸಹ ಸ್ವೀಕರಿಸುತ್ತಿರಲಿಲ್ಲ’ ಎಂದು ಸುವೇದಿ ಹೇಳಿದರು.

ಅವರ ರಾಜಕೀಯ ಜೀವನಕ್ಕೆ ಹಲವು ದಶಕಗಳ ಹೋರಾಟದ ಹಿನ್ನೆಲೆ ಇದೆ. ದೇಶದಲ್ಲಿನ ಅರಸೊತ್ತಿಗೆಯನ್ನು ಕಿತ್ತೊಗೆಯಲು 1973ರಲ್ಲಿ ಆಂದೋಲನ ಮುನ್ನಡೆಸುತ್ತಿದ್ದ ವೇಳೆ ಅವರನ್ನು ಬಂಧಿಸಲಾಯಿತು. ಆಗ ಅವರಿಗೆ 21 ವರ್ಷ.

‘ನನಗೆ ಕಠಿಣವಾದ ಜೈಲುಶಿಕ್ಷೆ ವಿಧಿಸಲಾಗಿತ್ತು. ಈ ಪೈಕಿ ನಾಲ್ಕು ವರ್ಷ ಒಬ್ಬನನ್ನೇ ಸೆರೆಮನೆಯ ಕೊಠಡಿಯೊಂದರಲ್ಲಿ ಕೂಡಿಹಾಕಲಾಗಿತ್ತು’ ಎಂದು ಅವರ ಆಯ್ದ ಭಾಷಣಗಳ ಕೃತಿಯಲ್ಲಿ ಉಲ್ಲೇಖವಿದೆ.

‘ಸರ್ವಾಧಿಕಾರ ಆಡಳಿತ ವಿರುದ್ಧ ಹೋರಾಟ ನಡೆಸಿದ್ದೇ ನಾನು ಮಾಡಿದ ಅಪರಾಧ’ ಎಂದೂ ಅವರು ಬರೆದುಕೊಂಡಿದ್ದಾರೆ.

1987ರಲ್ಲಿ ಸೆರೆವಾಸದಿಂದ ಬಿಡುಗಡೆಗೊಂಡ ನಂತರ ಅವರು ಸಿಪಿಎಂ–ಯುಎಂಎಲ್ ಸೇರಿದರು. ಪಕ್ಷದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಅವರು, ಮೊದಲ ಬಾರಿಗೆ 2015ರಲ್ಲಿ ಪ್ರಧಾನಿಯಾದರು. 2018ರಲ್ಲಿ ಮತ್ತೆ ಪ್ರಧಾನಿಯಾಗಿ ಚುನಾಯಿತರಾದರು. ರಾಜಕೀಯ ಅಸ್ಥಿರತೆ ಪರಿಣಾಮ 2021ರಲ್ಲಿ ಅವರನ್ನು ಪ್ರಧಾನಿಯಾಗಿ ಪುನಃ ನೇಮಕ ಮಾಡಲಾಗಿತ್ತು.

ರಾಜಕೀಯ ಅಸ್ಥಿರತೆಯ ನೋಟ

ನವದೆಹಲಿ (ರಾಯಿಟರ್ಸ್): 2008ರಿಂದ ಈಚೆಗೆ ನೇಪಾಳದಲ್ಲಿ 14 ಸರ್ಕಾರಗಳು ರಚನೆಯಾಗಿವೆ. ಈ ಯಾವ ಸರ್ಕಾರವೂ 5 ವರ್ಷದ ಆಡಳಿತ ಅವಧಿಯನ್ನು ಪೂರ್ಣಗೊಳಿಸಿಲ್ಲ. ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದವರೆಗೆ ದೇಶದಲ್ಲಿ ನಡೆದ ರಾಜಕೀಯ ಅಸ್ಥಿರತೆಯ ಕುರಿತು ಪ್ರಮುಖ ಘಟನಾವಳಿಗಳ ಸಣ್ಣ ಪರಿಚಯ ಇಲ್ಲಿದೆ:

1951: ಇದಕ್ಕೂ ಮೊದಲು ನೇಪಾಳವನ್ನು ವಿವಿಧ ರಾಜಮನೆತನಗಳು ಆಳಿವೆ. ರಾಣಾ ರಾಜಮನೆತನವು ಪ್ರಧಾನಿಯನ್ನು ಆಡಳಿತದ ಪ್ರಮುಖನನ್ನಾಗಿಸಿಕೊಂಡು ಆಡಳಿತ ನಡೆಸಿತ್ತು. ವಂಶಪಾರಂಪರ್ಯವಾಗಿ ರಾಜಮನೆತನದವರೇ ಈ ಹುದ್ದೆ ಗೇರುತ್ತಿದ್ದರು. ಪ್ರಜಾಪ್ರಭುತ್ವಾದಿ ಚಳವಳಿಯ ಮೂಲಕ 1951ರಲ್ಲಿ ಈ ರಾಜಮನೆತನವನ್ನು ಆಡಳಿತದಿಂದ ಕೆಳಗಿಳಿಸಿ, ಪ್ರಜಾಪ್ರಭುತ್ವಾದಿ ಸರ್ಕಾರ ರಚನೆಯಾಯಿತು

1961-1990: ದೇಶದಲ್ಲಿದ್ದ ರಾಜಕೀಯ ಪಕ್ಷಗಳನ್ನು ರಾಜ ಮಹೇಂದ್ರ ಅವರು 1961ರಲ್ಲಿ ತೆಗೆದು ಹಾಕಿದರು. ಮತ್ತೊಮ್ಮೆ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡರು. ಈ ಆಡಳಿತ ವೈಖರಿಗೆ ‘ಪಂಚಾಯತ್’ ಎಂದು ಅವರೇ ಹೆಸರಿಟ್ಟರು. ರಾಜನ ಆಡಳಿತವು ಮತ್ತೊಮ್ಮೆ ಜನರನ್ನು ಉಸಿರು ಕಟ್ಟಿಸುವಂತೆ ಮಾಡಿತು.

ಈ ಆಕ್ರೋಶವು 1990ರಲ್ಲಿ ಸ್ಫೋಟಗೊಂಡಿತು. ವಿವಿಧ ರಾಜಕೀಯ ಪಕ್ಷಗಳು, ಜನರು ಅಭಿಯಾನ ಆರಂಭಿಸಿದರು. ಮತ್ತೊಮ್ಮೆ ಪ್ರಜಾಪ್ರಭುತ್ವವಾದಿ ಸರ್ಕಾರ ರಚನೆಗೆ, ಬಹುಪಕ್ಷೀಯ ವ್ಯವಸ್ಥೆ ಸ್ಥಾಪನೆಗೆ ಚಳವಳಿ ನಡೆಸಿದರು. ಇದನ್ನು ‘ಜನರ ಚಳವಳಿ’ ಎಂದೇ ಕರೆಯಲಾಗುತ್ತದೆ. ಬಳಿಕ ಪಕ್ಷಗಳ ಮೇಲಿದ್ದ ರದ್ದತಿಯನ್ನು ರಾಜ ಬೀರೇಂದ್ರ ಅವರು ತೆರವು ಮಾಡಿದರು. ‘ಪಂಚಾಯತ್’ ವ್ಯವಸ್ಥೆಯು ಅವಸಾನ ಕಂಡಿತು

1996: ಸಿರಿತನದಿಂದ ಕೂಡಿದ್ದ ಸಂಸದೀಯ ವ್ಯವಸ್ಥೆಯನ್ನು ಜನರ ಕೈಗೆಟಕುವ ವ್ಯವಸ್ಥೆಯನ್ನಾಗಿ ಮರುರೂಪಿಸಲು ಮಾವೋವಾದಿಗಳು ಹಿಂಸಾತ್ಮಕವಾಗಿ ಚಳವಳಿಯನ್ನು ಆರಂಭಿಸಿದರು. ನಾಗರಿಕ ಯುದ್ಧದ ರೀತಿಯಲ್ಲಿ ಈ ಚಳವಳಿಯು 10 ವರ್ಷ ನಡೆಯಿತು. ಇದರಲ್ಲಿ 17 ಸಾವಿರಕ್ಕೂ ಅಧಿಕ ಮಂದಿ ಮೃತಪಟ್ಟರು

2006-2015: ರಾಜಪ್ರಭುತ್ವದ ವಿರುದ್ಧ 2006ರಲ್ಲಿ ಜನರು ಪ್ರತಿಭಟನೆ ಆರಂಭಿಸಿದರು. 2008ರಲ್ಲಿ ರಾಜಪ್ರಭುತ್ವವು ಕೊನೆಗೊಂಡಿತು. ಈ ಬಳಿಕ ನೇಪಾಳವು ಸಂಪೂರ್ಣ ಪ್ರಜಾಪ್ರಭುತ್ವ ವಾದಿ ದೇಶವಾಯಿತು. ರಾಜ ಜ್ಞಾನೇಂದ್ರ ಅವರೇ ಕೊನೆಯ ರಾಜ. ಕಠ್ಮಂಡುವಿನಲ್ಲಿ ಇವರು ಸಾಮಾನ್ಯ ಪ್ರಜೆಯಂತೆ ಜೀವಿಸತೊಡಗಿದರು. 2015ರಲ್ಲಿ ದೇಶವು ನೂತನ ಸಂವಿಧಾನವನ್ನು ಅಳವಡಿಸಿಕೊಂಡಿತು

2015-2025: 2015ರ ಅಕ್ಟೋಬರ್‌ನಲ್ಲಿ ಪ್ರಥಮ ಬಾರಿಗೆ ಕೆ.ಪಿ. ಓಲಿ ಶರ್ಮ ಅವರು ದೇಶದ ಪ್ರಧಾನಿಯಾದರು. ಒಂದು ವರ್ಷದವರೆಗೆ ಈ ಸರ್ಕಾರವು ಆಡಳಿತ ನಡೆಸಿತು. ಬಳಿಕ ಎರಡನೇ ಬಾರಿಗೆ 2018ರಲ್ಲಿ ಮತ್ತು ಮೂರನೇ ಬಾರಿಗೆ 2021ರಲ್ಲಿ ಮರುಆಯ್ಕೆಗೊಂಡರು. 2024ರಲ್ಲಿ ಓಲಿ ಅವರು ನಾಲ್ಕನೇ ಬಾರಿಗೆ ಪ್ರಧಾನಿ ಹುದ್ದೆಗೇರಿದರು

‘ಬಿಕ್ಕಟ್ಟು ಶಮನ: ಚರ್ಚೆಗೆ ಮುಂದೆ ಬನ್ನಿ’

ಕಠ್ಮಂಡು (ಪಿಟಿಐ): ‘ಎಲ್ಲ ಪಕ್ಷಗಳು ಸಂಯಮದಿಂದ ವರ್ತಿಸಿ, ದೇಶದಲ್ಲಿ ತಲೆದೋರಿರುವ ಈ ಬಿಕ್ಕಟ್ಟು ಶಮನಗೊಳಿಸಲು ಮಾತುಕತೆಗೆ ಮುಂದೆ ಬನ್ನಿ’ ಎಂದು ಅಧ್ಯಕ್ಷ ರಾಮಚಂದ್ರ ಪೌದೆಲ್ ಮಂಗಳವಾರ ಎಲ್ಲ ಪಕ್ಷಗಳಿಗೆ ಕರೆ ನೀಡಿದರು. ಪ್ರತಿಭಟನೆ ನಡೆಸುತ್ತಿರುವ ಯುವ ಸಮೂಹಕ್ಕೂ ಇದೇ ಮನವಿ ಮಾಡಿದರು.

‘ದೇಶವು ಸಂಕಷ್ಟದ ಸಮಯದಲ್ಲಿದೆ. ಓಲಿ ಶರ್ಮ ಅವರು ರಾಜೀನಾಮೆಯನ್ನು ಅಂಗೀಕರಿಸಲಾಗಿದೆ. ಈ ದೇಶ, ದೇಶದ ಜನರನ್ನು ಮತ್ತು ಪ್ರಜಾಪ್ರಭುತ್ವವನ್ನು ಪ್ರೀತಿಸುವ ಎಲ್ಲರಿಂದ ಸಹಕಾರ ಬೇಕಿದೆ. ಈ ಬಿಕ್ಕಟ್ಟು ಶಮನಕ್ಕೆ ಪರಿಹಾರ ಕಂಡುಕೊಳ್ಳಬೇಕಿದೆ’ ಎಂದರು.

ನೇಪಾಳ ಪ್ರವಾಸ ಮುಂದೂಡಿ: ಸೂಚನೆ

ನವದೆಹಲಿ (ಪಿಟಿಐ): ನೇಪಾಳದಲ್ಲಿ ಅಸ್ಥಿರತೆ ಸೃಷ್ಟಿಯಾಗಿರುವ ಬೆನ್ನಲ್ಲೇ, ಪರಿಸ್ಥಿತಿ ಹತೋಟಿಗೆ ಬರುವ ತನಕವೂ ನೆರೆ ರಾಷ್ಟ್ರಕ್ಕೆ ಭೇಟಿ ನೀಡುವುದನ್ನು ಮುಂದೂಡುವಂತೆ ನಾಗರಿಕರಿಗೆ ಸರ್ಕಾರ ಸೂಚಿಸಿದೆ.

‘ಈಗಾಗಲೇ ನೇಪಾಳದಲ್ಲಿರುವ ಭಾರತೀಯರು ಯಾವುದೇ ಕಾರಣಕ್ಕೂ ರಸ್ತೆಗಿಳಿಯಬಾರದು, ಸಂಘರ್ಷದ ಸ್ಥಳದತ್ತ ಹೋಗಬಾರದು’ ಎಂದು ಕೇಂದ್ರ ವಿದೇಶಾಂಗ ಇಲಾಖೆ (ಎಂಇಎ) ಬಿಡುಗಡೆಗೊಳಿಸಿರುವ ಸಲಹಾ ಪ್ರಕಟಣೆಯಲ್ಲಿ ತಿಳಿಸಿದೆ.

‘ನೇಪಾಳದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿಕೊಂಡು, ಪರಿಸ್ಥಿತಿ ತಿಳಿಯಾಗುವವರೆಗೂ ಭಾರತದ ನಾಗರಿಕರು ತಮ್ಮ ಪ್ರವಾಸವನ್ನು ಮುಂದೂಡಬೇಕು. ಈಗಾಗಲೇ ಆ ದೇಶದಲ್ಲಿದ್ದರೆ, ತಾವು ಇರುವ ಜಾಗದಲ್ಲೇ ಉಳಿಯಬೇಕು. ಯಾವುದೇ ಕಾರಣಕ್ಕೂ ಬೀದಿಗಿಳಿಯಬಾರದು’ ಎಂದು ಎಂಇಎ ಹೇಳಿದೆ.

ತುರ್ತು ಸಹಾಯವಾಣಿ ಸ್ಥಾಪನೆ: ನೇಪಾಳದಲ್ಲಿರುವ ಭಾರತೀಯರು ಯಾವುದೇ ಸಮಸ್ಯೆ ಎದುರಾದರೆ, ಕಠ್ಮಂಡುವಿನಲ್ಲಿ ಭಾರತೀಯ ರಾಯಭಾರ ಕಚೇರಿಯನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ.

ನೆರವಿಗಾಗಿ +977 – 980 860 2881, +977 – 981 032 6134 ಸಂಪರ್ಕಿಸಬಹುದಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾಜಾಜಿನಗರ ಮಹಿಳಾ ಪಿಜಿಯಲ್ಲಿ ಅಡುಗೆ ಕೆಲಸಕ್ಕೆ ಮಹಿಳೆ (ಊಟ ವಸತಿಯೊಂದಿಗೆ) ಸೆಕ್ಯೂರಿಟಿ ಏಜೆನ್ಸಿಗೆ ಮಾರ್ಕೆಟಿಂಗ್ ಮ್ಯಾನೇಜರ್ ಬೇಕಾಗಿದ್ದಾರೆ.7349533999/ 9964361800

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ರಿಯಾಯಿತಿ ದರದಲ್ಲಿ ಪ್ರವಾಸಗಳು 7/11 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್. 6 ದಿನಗಳ ಬಾಲಿ (ಇಂಡೋನೇಷ್ಯಾ) 9ದಿನಗಳ ಗುಜರಾತ್ ಸ್ಪೆಷಲ್. 7 ದಿನಗಳ ನಾರ್ತ್ ಈಸ್ಟ್ 11 ದಿನಗಳ ವಿಯೆಟ್ನಾಂ, ಕಾಂಬೋಡಿಯ ಸಂಪರ್ಕಿಸಿ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900080793 9900099252

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕನ್ನಡ ಹಾಡುಗಳ ಲಹರಿಗೆ ಸುವರ್ಣ ಸಂಭ್ರಮ

• ವಿನಾಯಕ ಕೆ.ಎಸ್

ದಕ್ಷಿಣ ಭಾರತದಲ್ಲಿಯೇ ಅತಿದೊಡ್ಡ ಆಡಿಯೊ ಸಂಸ್ಥೆ ಎನಿಸಿಕೊಂಡಿರುವ 'ಲಹರಿ'ಗೀಗ ಸುವರ್ಣ ಸಂಭ್ರಮ. ಸಾವಿರಾರು ಕನ್ನಡ ಸಿನಿಮಾ ಹಾಡುಗಳನ್ನು ಜನರಿಗೆ ತಲುಪಿಸಿದ ಸಂಸ್ಥೆಯ ಏಳುಬೀಳುಗಳ ಕುರಿತು ಸಂಸ್ಥೆಯ ಮುಖ್ಯಸ್ಥ ವೇಲು ಮಾತನಾಡಿದ್ದಾರೆ.

'ಐವತ್ತು ವರ್ಷಗಳ ಹಿಂದೆ ಅಣ್ಣ ಮನೋಹರ್ ನಾಯ್ಡು ಅವರು ₹500ನಿಂದ ಪ್ರಾರಂಭಿಸಿದ ಸಂಸ್ಥೆಯಿದು. ಜೀವನದಲ್ಲಿ ಏನಾದರೂ ಮಾಡಲೇಬೇಕೆಂಬ ಹಠದಿಂದ ಇದನ್ನು ಶುರು ಮಾಡಿದರು. 'ಲಹರಿ' ಎಂಬ ಹೆಸರು ನೀಡಿದ್ದು ಸಾಹಿತಿ ದಿವಂಗತ ವಿಜಯನಾರಸಿಂಹ ಅವರು. ನಮ್ಮ ಮೊದಲ ಕ್ಯಾಸೆಟ್ 'ವಿವಾಹ ಗೀತೆಗಳು'. ನಂತರ ಮಂಜುಳಾ ಗುರುರಾಜ್ ಆರ್ಕೆಸ್ಟ್ರಾದ 'ಅಷ್ಟದೇವಿ ದರ್ಶನ' ಎಂಬ ಭಕ್ತಿಗೀತೆಗಳನ್ನು ಬಿಡುಗಡೆಗೊಳಿಸಿ-ದೆವು. 'ಚಾಮುಂಡೇಶ್ವರಿ ಪೂಜಾ ಮಹಿಮೆ' ನಮ್ಮ ಸಂಸ್ಥೆಯಿಂದ ಬಿಡುಗಡೆಗೊಂಡ ಮೊದಲ ಸಿನಿಮಾ ಧ್ವನಿಸುರಳಿ' ಎಂದು ಮಾತು ಪ್ರಾರಂಭಿಸಿದರು ವೇಲು.

ಕ್ಯಾಸೆಟ್‌ಗಳ ಬಳಿಕ ಸಂಸ್ಥೆಯಿಂದ ಕನ್ನಡ ಖವ್ವಾಲಿ ಗೀತೆಗಳು, ಕನ್ನಡ ಜನಪದ ಗೀತೆಗಳು ಹೊರಬಂದವು. ಸಂಸ್ಥೆಗೆ ತಿರುವು ನೀಡಿದ್ದು 1987ರಲ್ಲಿ ತೆರೆಕಂಡ 'ಪ್ರೇಮಲೋಕ' ಸಿನಿಮಾ. ಈ ಸಿನಿಮಾದ 36 ಲಕ್ಷ ಕ್ಯಾಸೆಟ್‌ಗಳನ್ನು ಲಹರಿ ಈತನಕ ಮಾರಾಟ ಮಾಡಿದೆ. 'ಸಂಸ್ಥೆ ಇತಿಹಾಸದಲ್ಲಿ ಅತಿಹೆಚ್ಚು ಮಾರಾಟಗೊಂಡ ಕ್ಯಾಸೆಟ್ ಇದು. ಇಲ್ಲಿವರೆಗೂ ಏನಿಲ್ಲವೆಂದರೂ ಒಂದೂವರೆ ಲಕ್ಷ ಹಾಡುಗಳನ್ನು ಬಿಡುಗಡೆಗೊಳಿಸಿದ್ದೇವೆ. 1992ರ ನಂತರ ಕ್ಯಾಸೆಟ್ ಭರಾಟೆ ಕಡಿಮೆಯಾಯಿತು. 2000ದ ಹೊತ್ತಿಗೆ ಪೂರ್ತಿಯಾಗಿ ನಿಂತಿತು. ಆಮೇಲೆ ಸಿ.ಡಿಗಳು ಪ್ರಾರಂಭಗೊಂಡವು. ಸಿ.ಅಶ್ವತ್ಥ ಅವರ 'ಮುಂಬೈನಲ್ಲಿ ಸಿ.ಅಶ್ವತ್ಥ' ನಮ್ಮ ಕೊನೆಯ ಕ್ಯಾಸೆಟ್. ಐದು ದಶಕಗಳಲ್ಲಿ ಕೋಟ್ಯಂತರ ಕ್ಯಾಸೆಟ್ ಮಾರಾಟ ಮಾಡಿದ್ದೇವೆ' ಎನ್ನುತ್ತಾರೆ ವೇಲು.

'ಸಿ.ಡಿ ಬಳಿಕ ಪೆನ್‌ಡ್ರೈವ್, ಎಂಪಿ3ಗಳು ಬಂದವು. ಸಿ.ಡಿ ಇರುವ ತನಕವೂ ಆಡಿಯೊ ಮಾರುಕಟ್ಟೆ ಚೆನ್ನಾಗಿತ್ತು. 2004ರಲ್ಲಿ ಡಿಜಿಟಲ್ ಮಾರುಕಟ್ಟೆ ತೆರೆದುಕೊಂಡಿತು. ಆಗ ಆಡಿಯೊ ಕಂಪನಿಗಳ ದುಸ್ಥಿತಿ ಪ್ರಾರಂಭವಾಯಿತು. ಸಾಕಷ್ಟು ಆಡಿಯೊ ಕಂಪನಿಗಳು ಬಾಗಿಲು ಹಾಕಿದವು. 3600 ಕ್ಯಾಸೆಟ್ ಅಂಗಡಿಗಳು ಬಾಗಿಲು ಹಾಕಿದವು. ಆ ಎರಡು ವರ್ಷ ನಮಗೆ ಕಠಿಣ ದಿನಗಳು. ಅಂಥ ಕಾxxಲದಲ್ಲಿಯೂ ಧೈರ್ಯ ಮಾಡಿ ಮುಚ್ಚಿದ ಕಂಪನಿಗಳ ಹಾಡುಗಳನ್ನು ಖರೀದಿ ಪ್ರಾರಂಭಿಸಿದೆವು. ಅದಾದ ಬಳಿಕ ಯೂಟ್ಯೂಬ್, ಸ್ಪಾಟಿಫೈ, ಗಾನಾ ಮೊದಲಾದ ಸುಮಾರು 30 ಡಿಜಿಟಲ್ ವೇದಿಕೆಗಳ ಉಗಮವಾಯಿತು. ಮತ್ತೆ ಆಡಿಯೊಗೆ ಬೇಡಿಕೆ ಪ್ರಾರಂಭವಾಯಿತು. ಈಗ ಮಾರುಕಟ್ಟೆ ಸ್ಥಿರವಾಗಿದೆ. ಅಂದು ಕ್ಯಾಸೆಟ್‌ಗಳ ಮೂಲಕ ಹಾಡುಗಳು ನಮ್ಮ ರಾಜ್ಯ ಅಥವಾ ಪಕ್ಕದ ರಾಜ್ಯಗಳಿಗೆ ಮಾತ್ರ ತಲುಪುತ್ತಿದ್ದವು. ಈಗ ಹಾಗಲ್ಲ, ಹಾಡುಗಳನ್ನು ಅಮೇಜಾನ್ ಕಾಡಿನಿಂದ, ಬಿಳಿಗಿರಿರಂಗನ ಬೆಟ್ಟದವರೆಗೆ ಎಲ್ಲಿ ಬೇಕಾದರೂ ಕುಳಿತು ಕೇಳಬಹುದು ಎಂಬಂತಾಗಿದೆ. ಮಾರುಕಟ್ಟೆ ವಿಸ್ತರಿಸಿಕೊಂ-ಡಿದೆ' ಎನ್ನುತ್ತಾರೆ ಅವರು.

'ನಮ್ಮ ಸಹೋದರ ಸಂಸ್ಥೆ ಎಂಆರ್‌ಟಿ ಮ್ಯೂಸಿಕ್ ಕೂಡ ಮೊದಲಿನಿಂದಲೂ ಇತ್ತು. ಕರೋನಾ ಬಳಿಕ ತಮಿಳುನಾಡಿನ ಸಂಗೀತ ಕಂಪನಿ ಖರೀದಿಸಿದೆವು. ಅದನ್ನು ಎಂಆರ್‌ಟಿ ಜೊತೆ ವಿಲೀನಗೊಳಿಸಿದ ನಂತರ ಈ ಸಂಸ್ಥೆ ಕೂಡ ಮುನ್ನೆಲೆಗೆ ಬಂತು 'ಎ', 'ಅಂಜದ ಗಂಡು', 'ರಣಧೀರ', 'ಯುದ್ಧಕಾಂಡ', 'ದೇವತಾ ಮನುಷ್ಯ'ದಿಂದ 'ಕೆಜಿಎಫ್'ವರೆಗೆ ಸಾಕಷ್ಟು ಸಿನಿಮಾಗಳ ಹಿಟ್ ಹಾಡುಗಳು ನಮ್ಮಲ್ಲಿವೆ' ಎಂದು ಕಂಪನಿಯ ಹಳೆಯ ನೆನಪುಗಳೊಂದಿಗೆ ಮಾತಿಗೆ ವಿರಾಮವಿತ್ತರು.

ದಿಗ್ಗಜ ಸಂಗೀತಗಾರರ ಹಾಡುಗಳು

'1992ರಲ್ಲಿ ಮಣಿರತ್ನಂ ಅವರ 'ರೋಜಾ' ಚಿತ್ರದ ಆಡಿಯೊ ಹಕ್ಕುಗಳು ₹75 ಲಕ್ಷಗಳ ದುಬಾರಿ ಮೊತ್ತಕ್ಕೆ ಖರೀದಿಸಿದ್ದು ಲಹರಿ. ಈ ಚಿತ್ರದಿಂದಲೇ ಎ.ಆರ್.ರೆಹಮಾನ್ ಸಂಗೀತ ನಿರ್ದೇಶಕರಾಗಿ ಜನಪ್ರಿಯರಾಗಿದ್ದು. 1991ರಲ್ಲಿ ಮಣಿರತ್ನಂ ನಿರ್ದೇಶನದ 'ದಳಪತಿ' ಚಿತ್ರಕ್ಕೆ ಅತಿ ಹೆಚ್ಚು ರಾಯಧನ ನೀಡಿ ಖರೀದಿಸಿದ್ದೆವು. ಎನ್‌ಟಿಆರ್ ಅವರ 'ಬ್ರಹ್ಮರ್ಷಿ ವಿಶ್ವಾಮಿತ್ರ' ಚಿತ್ರದ ಆಡಿಯೊ ಖರೀದಿಸಿದ್ದೆವು. ಆಗ ಮುಖ್ಯಮಂತ್ರಿ-ಯಾಗಿದ್ದ ಅವರೇ ಈ ಚಿತ್ರದ ಧ್ವನಿಸುರುಳಿ ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು. ಕನ್ನಡದಲ್ಲಿ 'ಕೆಜಿಎಫ್' ಚಿತ್ರದ ಆಡಿಯೊವನ್ನು ಅತಿ ಹೆಚ್ಚು ಹಣ ನೀಡಿ ಖರೀದಿಸಿದ್ದು. ವಿ.ಮನೋಹರ್ ಅವರ 'ಓ ಕುಸುಮಾ ಬಾಲೆ', ಗುರುಕಿರಣ್ ಅವರ 'ಎ' ಮುಂತಾದ ಚಿತ್ರಗಳ ಹಾಡುಗಳು ಸೇರಿದಂತೆ ಸುಮಾರು 30–35 ದಿಗ್ಗಜ ಸಂಗೀತ ನಿರ್ದೇಶಕರುಗ-ಳಿಗೆ ಲಹರಿ ವೇದಿಕೆ ಒದಗಿಸಿದೆ. 4500 ಸಿನಿಮಾಗಳ ಸಿನಿಮಾ ಆಡಿಯೊ ಖರೀದಿಸಿದ್ದೇವೆ. ಮನೆಯಲ್ಲಿ ಇಬ್ಬರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ. ಸಂಸ್ಥೆಗೆ ಎರಡು ಗ್ರ್ಯಾಮಿ ಬಂದಿದೆ. ನಮ್ಮ ಆಡಿಯೊ ಸಂಸ್ಥೆಯ 'ನಾಟು ನಾಟು' ಹಾಡಿಗೆ ಆಸ್ಕರ್ ಬಂದಿದೆ' ಎಂದು ಸಂಸ್ಥೆಯ ಸಿನಿಧ್ವನಿಪಯಣವನ್ನು ಅವರು ಮೆಲುಕು ಹಾಕಿದರು.

ಪ್ರೇಮಲೋಕ ಕ್ಯಾಸೆಟ್

ಕಾಂತಾರಕ್ಕೆ ಪೃಥ್ವಿರಾಜ್‌ಸಾಥ್

ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ' ಪ್ರೀಕ್ವೆಲ್ ಅ.2ರಂದು ತೆರೆಕಾಣುತ್ತಿದೆ. ಸಿನಿಮಾವನ್ನು ಕೇರಳದಲ್ಲಿ ನಟ ಪೃಥ್ವಿರಾಜ್ ಬಿಡುಗಡೆ ಮಾಡಲಿದ್ದಾರೆ.

ರಿಷಬ್ ಶೆಟ್ಟಿ, ರುಕ್ಮಿಣಿ ವಸಂತ್ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾವನ್ನು ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಮಾಡಿದ್ದು, ಕೇರಳದಲ್ಲಿ ಪೃಥ್ವಿರಾಜ್ ಪ್ರೊಡಕ್ಷನ್ಸ್ ಈ ಸಿನಿಮಾವನ್ನು ಬಿಡುಗಡೆ ಮಾಡಲಿದೆ. ನೇಪಾಳ ಸೇರಿದಂತೆ ಉತ್ತರ ಭಾರತದಲ್ಲಿ ಈ ಸಿನಿಮಾವನ್ನು ಎಎ ಫಿಲ್ಮ್ಸ್ ಬಿಡುಗಡೆ ಮಾಡಲಿದ್ದು, ವಿದೇಶಗಳಲ್ಲಿ ಪಿಎಚ್‌ಎಫ್ ಸಂಸ್ಥೆಯು ರಿಲೀಸ್ ಮಾಡಲಿದೆ. ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಲ್ಲಿ ಸಿನಿಮಾವನ್ನು ಡ್ರೀಮ್ ಸ್ಕ್ರೀನ್ಸ್ ಇಂಟರ್‌ನ್ಯಾಷನಲ್ ಬಿಡುಗಡೆ ಮಾಡಲಿದೆ.

ಪ್ರೀಕ್ವೆಲ್ ಅನ್ನು ಈಗಾಗಲೇ ಪ್ರೈಂ ವಿಡಿಯೊ ದೊಡ್ಡ ಮೊತ್ತಕ್ಕೆ ಖರೀದಿಸಿದೆ. ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಇದಾಗಿದ್ದು, ಕನ್ನಡ, ಇಂಗ್ಲಿಷ್ ಸೇರಿದಂತೆ ಏಳು ಭಾಷೆಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಅರವಿಂದ್ ಎಸ್.ಕಶ್ಯಪ್ ಅವರ ಛಾಯಾಚಿತ್ರಗ್ರಹಣ ವಿದೆ. ಸಿನಿಮಾದಲ್ಲಿ 'ಕುಲಶೇಖರ' ಎಂಬ ಪಾತ್ರದಲ್ಲಿ ಬಾಲಿವುಡ್ ನಟ ಗುಲ್ಶನ್ ದೇವಯ್ಯ ನಟಿಸಿದ್ದಾರೆ.

ಸುಮುಖನ ಹೊಸ ಪಯಣ

ನಟ ಸುಮುಖ ನಟನೆಯ ಹೊಸ ಪ್ರಾಜೆಕ್ಟ್ ಘೋಷಣೆಯಾಗಿದೆ. ಸಂಜಯ್ ಕೆ.ಕೆ. ನಿರ್ದೇಶಿಸುತ್ತಿರುವ ಹೊಸ ಸಿನಿಮಾದಲ್ಲಿ ಸುಮುಖ ಹೀರೊ ಆಗಿದ್ದಾರೆ.

ರಂಗಭೂಮಿಯ ಮೂಲಕ ಚಿತ್ರರಂಗಕ್ಕೆ ಹೆಜ್ಜೆ ಇಟ್ಟ ಸುಮುಖ ಮುಂಬೈನಲ್ಲಿ ನಟನೆಯ ತರಬೇತಿ ಪಡೆದವರು. 'ಫಿಸಿಕ್ಸ್ ಟೀಚರ್' ಎಂಬ ಸಿನಿಮಾವನ್ನು ನಿರ್ದೇಶಿಸಿ ಮುಖ್ಯಭೂಮಿಕೆಯಲ್ಲಿ ನಟಿಸಿದ ಅವರು, ಬಳಿಕ ಯೋಗರಾಜ್ ಭಟ್ ನಿರ್ದೇಶನದ 'ಮನದ ಕಡಲು' ಸಿನಿಮಾದಲ್ಲಿ ನಾಯಕನಾಗಿ ನಟಿಸಿದ್ದರು. ಲವರ್ ಬಾಯ್ ಆಗಿ ಕಾಣಿಸಿಕೊಂಡಿದ್ದ ಸುಮುಖ ಇದೀಗ ರಗಡ್ ಲುಕ್‌ನಲ್ಲಿ ಪ್ರೇಕ್ಷಕರೆದುರಿಗೆ ಬರಲಿದ್ದಾರೆ. ಅವರ ಜನ್ಮದಿನದಂದು ಸಿನಿಮಾದ ಪೋಸ್ಟರ್ ಬಿಡುಗಡೆಯಾಗಿದೆ. 'ಅವನ ನಿಷ್ಠೆ ತಲೆಬಾಗುವುದಿಲ್ಲ. ಅದು ಜ್ವಾಲೆಯಂತೆ ಹತ್ತಿ ಉರಿಯುತ್ತದೆ' ಎಂಬ ಅಡಿ ಬರಹ ಈ ಸಿನಿಮಾಗಿದೆ.



ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವವಿರುವ ಸಂಜಯ್ ಕೆ.ಕೆ. ಈ ಸಿನಿಮಾ ಮೂಲಕ ನಿರ್ದೇಶಕನ ಕ್ಯಾಪ್ ಧರಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದ ನೈಜ ಘಟನೆ ಸಿನಿಮಾ ರೂಪ ಪಡೆದಿದೆ ಎಂದಿದೆ ಚಿತ್ರತಂಡ. ಈ ಪ್ರಾಜೆಕ್ಟ್‌ಗೆ ರಾಯಲ್ ಫೈ ಎಂಟರ್‌ಟೇನ್ಮೆಂಟ್ ಬಂಡವಾಳ ಹೂಡುತ್ತಿದೆ. ಶೀಘ್ರದಲ್ಲೇ ಸಿನಿಮಾ ಬಗ್ಗೆ ಹೆಚ್ಚಿನ ಮಾಹಿತಿ ನೀಡಲಾಗುವುದು ಎಂದಿದೆ ಚಿತ್ರತಂಡ.

'ಇರೋದೊಂದು ಜೀವನ'ದ ಮುಹೂರ್ತ

'ಸೋಮು ಸೌಂಡ್ ಇಂಜಿನಿಯರ್' ಸಿನಿಮಾ ಖ್ಯಾತಿಯ ನಟ ಶ್ರೇಷ್ಠ ನಟನೆಯ ಹೊಸ ಸಿನಿಮಾ 'ಇರೋದೊಂದು ಜೀವನ'ದ ಮುಹೂರ್ತ ಇತ್ತೀಚೆಗೆ ನಡೆಯಿತು. ನಟ ನವೀನ್ ಶಂಕರ್ ಕ್ಲ್ಯಾಪ್ ಮಾಡಿ ಚಿತ್ರೀಕರಣಕ್ಕೆ ಚಾಲನೆ ನೀಡಿದರು.

'ಸಲಗ' ಸಿನಿಮಾದಲ್ಲಿ ನಟಿಸಿದ್ದ ಶ್ರೇಷ್ಠ ಇದೀಗ ವಿನೂತನ ಪ್ರೇಮಕಥೆಯೊಂದರ ಮೂಲಕ ತೆರೆ ಮೇಲೆ ಬರಲಿದ್ದಾರೆ. ಶ್ರೇಷ್ಠ ಅವರಿಗೆ ಜೋಡಿಯಾಗಿ ನಂದು ರಾಜ್ ಅಭಿನಯಿಸುತ್ತಿದ್ದಾರೆ. ಚಿತ್ರದಲ್ಲಿ ಉದಯ್ ಜಾಗ್ವಾರ್ ಖಳನಾಯಕನ ಪಾತ್ರಕ್ಕೆ ಬಣ್ಣಹಚ್ಚಲಿದ್ದಾರೆ. ಸಿನಿಮಾವನ್ನು ಎಸ್. ಕುಮಾರ್ ನಿರ್ದೇಶಿಸುತ್ತಿದ್ದು, ನವೀನ್ ವಾಸುದೇವ್ ಸಂಗೀತ ಸಂಯೋಜಿಸುತ್ತಿದ್ದಾರೆ. ಧನು ಛಾಯಾಚಿತ್ರಗ್ರಹಣವಿರುವ ಈ ಸಿನಿಮಾವನ್ನು ಎಲ್. ನಾಗಭೂಷಣ್ ನಿರ್ಮಿಸಲಿದ್ದಾರೆ. ಚಿತ್ರೀಕರಣ ಆರಂಭಿಸಿರುವ ಚಿತ್ರತಂಡ ಎರಡು ಹಂತದಲ್ಲಿ ಚಿತ್ರೀಕರಣ ಮುಗಿಸಿ ಹೊಸ ವರ್ಷದ ಹೊತ್ತಿಗೆ ತೆರೆಗೆ ಬರುವ ಯೋಜನೆ ಹಾಕಿಕೊಂಡಿದೆ.

ಮಾನಹಾನಿ ಪ್ರಕರಣ: ಸಾಕ್ಷಿದಾರನ ಪಾಟೀಸವಾಲು ವಿಚಾರಣೆ

ಸುಲ್ತಾನ್‌ಪುರ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ದಾಖಲಾಗಿರುವ ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿ-ದಾರನನ್ನು ರಾಹುಲ್ ಪರ ವಕೀಲರು ಮಂಗಳವಾರ ಪಾಟೀಸವಾಲು ವಿಚಾರಣೆಗೆ ಒಳಪಡಿಸಿದ್ದಾರೆ.

ರಾಹುಲ್ ಗಾಂಧಿ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ರಾಹುಲ್ ಮಾನಹಾನಿ ಹೇಳಿಕೆ ನೀಡಿದ್ದಾರೆ ಎನ್ನುವ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕ ವಿಜಯ್ ಮಿಶ್ರಾ ಅವರು ನೀಡಿದ್ದ ದೂರಿನ ಅನ್ವಯ ಈ ಪ್ರಕರಣ ದಾಖಲಾಗಿದೆ.

ಮಿಶ್ರಾ ಪರ ವಕೀಲರಾದ ಸಂತೋಷ್ ಕುಮಾರ್ ಪಾಂಡೆ ಈ ಬಗ್ಗೆ ಮಾಹಿತಿ ನೀಡಿದ್ದು, 'ಪಿತಾಂಬರಪುರ ಕಾಲಾ ನಿವಾಸಿ ಅನಿಲ್ ಮಿಶ್ರಾ ಎಂಬವರು ಪ್ರಕರಣದ ಸಾಕ್ಷಿದಾರರಾಗಿ-ದ್ದು, ಅವರು ನ್ಯಾಯಾಲಯದ ಮುಂದೆ ಹಾಜರಾಗಿದ್ದರು. ರಾಹುಲ್ ಪರ ವಕೀಲರು ಅವರನ್ನು ಪಾಟೀಸವಾಲು ವಿಚಾರಣೆಗೆ ಒಳಪಡಿಸಿದ್ದಾರೆ' ಎಂದಿದ್ದಾರೆ.

ನ್ಯಾಯಾಲಯವು ವಿಚಾರಣೆಯನ್ನು ಸೆ.23ಕ್ಕೆ ಮುಂದೂಡಿದ್ದು, ಅದೇ ದಿನ ಪಾಟೀಸವಾಲು ಮುಂದುವರಿಯಲಿದೆ.

ಭಯೋತ್ಪಾದನೆ ಪಿತೂರಿ 21 ಕಡೆ ಎನ್‌ಐಎ ಶೋಧ

ನವದೆಹಲಿ (ಪಿಟಿಐ): ಐಎಸ್ ಮತ್ತು ಇತರ ಉಗ್ರ ಸಂಘಟನೆಗಳೊಂದಿಗೆ ನಂಟು ಹೊಂದಿದ್ದು ಭಯೋತ್ಪಾದನೆ ಪಿತೂರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸೇರಿದಂತೆ ಐದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದ 21 ಸ್ಥಳಗಳಲ್ಲಿ ಎನ್‌ಐಎ ಶೋಧ ನಡೆಸಿತು.

ಕರ್ನಾಟಕ ಅಲ್ಲದೆ ಬಿಹಾರ, ಉತ್ತರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಸೋಮವಾರ ಶೋಧ ನಡೆಸಲಾಯಿತು ಎಂದು ಅಧಿಕಾರಿಗಳು ತಿಳಿಸಿದರು.

ಈ ವರ್ಷ ಜೂನ್‌ನಲ್ಲಿ ತಮಿಳುನಾಡು ಚೆಂಗಲ್‌ಪಟ್ಟು ಜಿಲ್ಲೆಯ ಕಾಯರ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣದ ತನಿಖೆಯ ಹೊಣೆಯನ್ನು ಎನ್‌ಐಎ ವಹಿಸಿಕೊಂಡಿದೆ. ಸೋಮವಾರ ನಡೆದ ಶೋಧ ಕಾರ್ಯಾಚರಣೆಯಲ್ಲಿ ಮೊಬೈಲ್ ಫೋನ್ ಸೇರಿದಂತೆ ಹಲವು ಡಿಜಿಟಲ್ ಸಾಧನಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ಎನ್‌ಐಎ ತಿಳಿಸಿದೆ.

ದೇಶದಲ್ಲಿ ಭಯೋತ್ಪಾದಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಆರೋಪದ ಮೇಲೆ ಅಖ್ಲಾಥೂರ್ ಅಲಿಯಾಸ್ ಮೊಹಮ್ಮದ್ ಅಖ್ಲಾಕ್ ಮುಜಾಹಿದ್ ಬಂಧನದೊಂದಿಗೆ ಪ್ರಕರಣ ಬೆಳಕಿಗೆ ಬಂದಿತ್ತು. ಆತ ಪಾಕಿಸ್ತಾನ ಮತ್ತು ಸಿರಿಯಾದಲ್ಲಿನ ಅನೇಕ ಸಂಸ್ಥೆಗಳೊಂದಿಗೆ ನಂಟು ಹೊಂದಿದ್ದಾಗಿ ತನಿಖೆ ವೇಳೆ ಗೊತ್ತಾಗಿದೆ.

'ನಾಮಕಾವಸ್ಥೆ ಮುಖ್ಯಸ್ಥರು'

ನಿಯಮಗಳ ಪ್ರಕಾರ ರಾಜ್ಯಪಾಲರಿಗೆ ವಿಟೋ ಅಧಿಕಾರ ಇಲ್ಲ: ಕರ್ನಾಟಕ ವಾದ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಗಡುವು
- ರಾಷ್ಟ್ರಪತಿ ಕೇಳಿರುವ ಸಲಹೆ ಕುರಿತು ವಿಚಾರಣೆ

ನವದೆಹಲಿ: ಸಂವಿಧಾನದ ಪ್ರಕಾರ, ರಾಷ್ಟ್ರಪತಿ ಹಾಗೂ ರಾಜ್ಯಪಾಲರು ಕೇವಲ ನಾಮಕಾವಸ್ಥೆ ಮುಖ್ಯಸ್ಥರು. ಕೇಂದ್ರ ಹಾಗೂ ರಾಜ್ಯ ಸಚಿವ ಸಂಪುಟದ ಸಲಹೆ ಮೇರೆಗೆ ಕಾರ್ಯನಿರ್ವಹಿಸಲು ಬದ್ಧರು ಎಂದು ಕರ್ನಾಟಕದ ಕಾಂಗ್ರೆಸ್ ಸರ್ಕಾರ ಪ್ರತಿಪಾದಿಸಿದೆ.

ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ನ್ಯಾಯಾಲಯ ಗಡುವು ನಿಗದಿ ಮಾಡಬಹುದೇ ಎಂಬ ವಿಷಯದ ಕುರಿತು ರಾಷ್ಟ್ರಪತಿ ದ್ರೌಪದಿ ಮುರ್ಮು ಕೇಳಿರುವ ಸಲಹೆಗೆ ಸಂಬಂಧಿಸಿದ ವಿಚಾರಣೆ ವೇಳೆ ಕರ್ನಾಟಕ ಈ ಅಭಿಪ್ರಾಯ ವ್ಯಕ್ತಪಡಿಸಿತು. ರಾಜ್ಯ ಸರ್ಕಾರದ ಪರ ಹಿರಿಯ ವಕೀಲ ಗೋಪಾಲ್ ಸುಬ್ರಹ್ಮಣ್ಯನ್ ವಾದ ಮಂಡಿಸಿದರು.

'ರಾಷ್ಟ್ರಪತಿ ಹಾಗೂ ರಾಜ್ಯಪಾಲರು ಸಚಿವ ಸಂಪುಟದ ನೆರವು ಮತ್ತು ಸಲಹೆಗೆ ಬದ್ಧರಾಗಿದ್ದಾರೆ. ಇದು ಭಾರತದಲ್ಲಿ ಆಡಳಿತದ ಮೂಲಭೂತ ಕಲ್ಪನೆಯಾಗಿದೆ ಮತ್ತು ಸುಪ್ರೀಂ ಕೋರ್ಟ್ ಇದನ್ನು ಅನುಮೋದಿಸಿದೆ' ಎಂದು ಅವರು ವಾದಿಸಿದರು.

'ನಿಯಮಗಳ ಪ್ರಕಾರ ರಾಜ್ಯಪಾಲರಿಗೆ ವಿಟೋ ಅಧಿಕಾರ ಇಲ್ಲ. ರಾಜ್ಯಪಾಲರು ಮಸೂದೆಯನ್ನು ಮರುಪರಿಶೀಲನೆಗಾಗಿ ವಿಧಾನಸಭೆಗೆ ಮರಳಿಸುವ ಉದ್ದೇಶದಿಂದ ಅಂಕಿತ ಹಾಕುವುದನ್ನು ತಡೆಹಿಡಿಯುವ ಅಧಿಕಾರವನ್ನಷ್ಟೇ ಹೊಂದಿದ್ದಾರೆ. ಆದರೆ, ವಿಧಾನಸಭೆಯಲ್ಲಿ ಮತ್ತೊಮ್ಮೆ ಮಸೂದೆ ಅನುಮೋದನೆಗೊಂಡಲ್ಲಿ ರಾಜ್ಯಪಾಲರು ಅಂಕಿತ ನೀಡಲೇಬೇಕ' ಎಂದು ವಾದಿಸಿದರು. 'ಸಂಸದೀಯ ಪ್ರಜಾಪ್ರಭುತ್ವವು ಶಾಸಕಾಂಗದ ಮೂಲಕ ವ್ಯಕ್ತವಾಗುವ ಸಾಮೂಹಿಕ ಅಭಿವ್ಯಕ್ತಿಯಾಗಿದೆ. ಕಾರ್ಯಾಂಗವು ಶಾಸಕಾಂಗದಿಂದ ರೂಪುಗೊಳ್ಳುತ್ತದೆ ಮತ್ತು ಅದಕ್ಕೆ ಉತ್ತರದಾಯಿಯಾಗಿರು-ತ್ತದೆ. ಕಾನೂನನ್ನು ರೂಪಿಸುವ ಅಂತಿಮ ಜವಾಬ್ದಾರಿ ಶಾಸಕಾಂಗದ ಮೇಲಿದೆ' ಎಂದು ಅವರು ಹೇಳಿದರು.

ಸೂಕ್ತ ಸಮಯದಲ್ಲಿ ಮಸೂದೆಗೆ ಅಂಗೀಕಾರ: ಸುಪ್ರೀಂ ಸಲಹೆ

ರಾಜ್ಯ ವಿಧಾನಸಭೆಯಲ್ಲಿ ಅನುಮೋದನೆಗೊಂಡ ಮಸೂದೆಗಳಿಗೆ ಅಂಕಿತ ಹಾಕುವ ಅಧಿಕಾರ ನೀಡುವ ಸಂವಿಧಾನದ 200 ನೇ ಪರಿಚ್ಛೇದದಲ್ಲಿ 'ಸಾಧ್ಯವಾದಷ್ಟು ಬೇಗ' ಎಂಬ ಅಂಶ ಇಲ್ಲದೆ ಇದ್ದರೂ ಕೂಡ ರಾಜ್ಯಪಾಲರು 'ಸೂಕ್ತ ಸಮಯ'ದಲ್ಲಿ ಕ್ರಮ ಕೈಗೊಳ್ಳುವುದನ್ನು ನಿರೀಕ್ಷಿಸಲಾಗುತ್ತಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಎಂಟನೇ ದಿನದ ವಿಚಾರಣೆಯ ಸಂದರ್ಭದಲ್ಲಿ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐದು–ಸದಸ್ಯರ ಸಾಂವಿಧಾನಿಕ ಪೀಠ, 'ಕೇವಲ ಸಂವಿಧಾನವನ್ನಷ್ಟೇ ವಿಶ್ಲೇಷಿಸಲಾಗುವುದು, ವೈಯಕ್ತಿಕ ಪ್ರಕರಣಗಳನ್ನಲ್ಲ' ಎಂದು ಸ್ಪಷ್ಟಪಡಿಸಿದೆ.

'ತುರ್ತು ಪ್ರಕರಣಗಳಲ್ಲಿ ರಾಜ್ಯಪಾಲರು 24 ಗಂಟೆಗಳ ಒಳಗೆ ಕಾರ್ಯ ನಿರ್ವಹಿಸಬೇಕಾಗಬಹುದು' ಎಂದು ಪೀಠ ಹೇಳಿದೆ.

ಸಂವಿಧಾನ 200 ಪರಿಚ್ಛೇದವು ರಾಜ್ಯಪಾಲರಿಗೆ ವಿಧಾನಸಭೆಯಲ್ಲಿ ಅನುಮೋದನೆಗೊಂಡ ಮಸೂದೆಗಳಿಗೆ ಅಂಕಿತ ನೀಡುವ, ಮಸೂದೆ ತಡೆ ಹಿಡಿಯುವ ಅಥವಾ ಮಸೂದೆಯನ್ನು ಮರಳಿ ಕಳುಹಿಸುವ ಅಥವಾ ಮಸೂದೆಯನ್ನು ರಾಷ್ಟ್ರಪತಿಗಳ ಪರಿಗಣನೆಗೆ ಮೀಸಲಿರಿಸುವ ಅಧಿಕಾರ ನೀಡುತ್ತದೆ.

ಪರಿಚ್ಛೇದ 200ರ ಮೊದಲ ನಿಯಮದ ಅನುಸಾರ, ರಾಜ್ಯಪಾಲರು ತಮಗೆ ಬಂದ ಮಸೂದೆಯನ್ನು ಸಾಧ್ಯವಾಷ್ಟು ಶೀಘ್ರದಲ್ಲಿ ಅಂಕಿತ ಹಾಕಬೇಕು ಅಥವಾ ಮರುಪರಿಶೀಲನೆಗಾಗಿ ಸದನಕ್ಕೆ ಮರಳಿ ಕಳುಹಿಸಬೇಕು (ಹಣಕಾಸಿನ ಮಸೂದೆ ಹೊರತುಪಡಿಸಿ). ವಿಧಾನಸಭೆಯಲ್ಲಿ ಅದನ್ನು ಮರುಪರಿಶೀಲಿಸಿ ಕಳುಹಿಸಿದ ನಂತರ ಅದಕ್ಕೆ ಅಂಕಿತ ಹಾಕುವುದಕ್ಕೆ ವಿಳಂಬ ಮಾಡಬಾರದು.

ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ ಕರಿಷ್ಮಾ ಕಪೂರ್ ಮಕ್ಕಳು

ನವದೆಹಲಿ (ಪಿಟಿಐ): ದಿವಂಗತ ಸಂಜಯ್ ಕಪೂರ್ ಅವರ ಆಸ್ತಿಯಲ್ಲಿ ಪಾಲು ಕೇಳಿ ಬಾಲಿವುಡ್ ನಟಿ ಕರಿಷ್ಮಾ ಕಪೂರ್ ಅವರ ಇಬ್ಬರು ಮಕ್ಕಳು ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಕಪೂರ್ ಅವರ ಉಯಿಲು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಸೆಪ್ಟೆಂಬರ್ 10ರಂದು ವಿಚಾರಣೆ ನಡೆಸುವ ಸಾಧ್ಯತೆ ಇದೆ.

'ಸಂಜಯ್ ಕಪೂರ್ ಅಥವಾ ಮಲತಾಯಿ ಪ್ರಿಯಾ ಕಪೂರ್ ಅಥವಾ ಬೇರೆ ಯಾವುದೇ ವ್ಯಕ್ತಿ ಉಯಿಲು ಇದೆ ಎಂಬ ಬಗ್ಗೆ ಎಲ್ಲೂ ಪ್ರಸ್ತಾಪಿಸಿಲ್ಲ' ಎಂದು ದೂರುದಾರರು ಹೇಳಿದ್ದಾರೆ. ಸಂಜಯ್ ಅವರಿಗೆ ₹30 ಸಾವಿರ ಕೋಟಿ ಮೌಲ್ಯದ ಆಸ್ತಿ ಇದೆ ಎನ್ನಲಾಗಿದೆ. ಸಂಜಯ್ ಮತ್ತು ಕರಿಷ್ಮಾ ಅವರು 2003ರಲ್ಲಿ ಮದುವೆಯಾಗಿ 2016ರಲ್ಲಿ ವಿಚ್ಛೇದನ ಪಡೆಯುತ್ತಾರೆ.

ವಾಯುಮಾಲಿನ್ಯ ತಡೆಗೆ ಪ್ರಯತ್ನ
ಇಂದೋರ್, ಅಮರಾವತಿ, ದೇವಾಸ್ ನಗರ ಪ್ರಥಮ

ನವದೆಹಲಿ (ಪಿಟಿಐ): ಇಂದೋರ್, ಅಮರಾವತಿ ಮತ್ತು ದೇವಾಸ್ ನಗರಗಳು ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮದ (ಎನ್‌ಸಿಎಪಿ) ಅಡಿಯಲ್ಲಿ ವಾಯುಮಾಲಿನ್ಯ ತಡೆಗಟ್ಟುವಲ್ಲಿ ಅತ್ಯುತ್ತಮ ಪ್ರಯತ್ನ ನಡೆಸಿ ಅಗ್ರಸ್ಥಾನ ಪಡೆದಿವೆ.



ದೇಶದ ಹಲವಾರು ನಗರಗಳು ಕೈಗಾರಿಕಾ ಕೇಂದ್ರಗಳಾಗಿ ಇದ್ದರೂ ಅಥವಾ ಕಲ್ಲಿದ್ದಲು ಗಣಿಗಾರಿಕೆಯನ್ನು ಹೊಂದಿದ್ದರೂ ಭಾರಿ ಪ್ರಗತಿಯನ್ನು ಸಾಧಿಸಿವೆ. ಮುಂದಿನ ವರ್ಷದಿಂದ ನಗರಗಳ ವಾರ್ಡ್‌ಗಳಲ್ಲಿ ಕೂಡ ವಾಯುಮಾಲಿನ್ಯ ತಡೆಗಟ್ಟುವ ಪ್ರಯತ್ನಗಳನ್ನು ಮೌಲ್ಯಮಾಪನ ಮಾಡುವ ನಿರ್ಧಾರ ತೆಗೆದು ಕೊಂಡಿದ್ದೇವೆ
ಭೂಪೇಂದರ್ ಯಾದವ್, ಕೇಂದ್ರ ಪರಿಸರ ಸಚಿವ

10 ಲಕ್ಷಕ್ಕೂ ಅಧಿಕ ಜನಸಂಖ್ಯೆಯ ವಿಭಾಗ (ಅಗ್ರ ನಗರಗಳು)
1.ಇಂದೋರ್ (ಮಧ್ಯಪ್ರದೇಶ)
2.ಜಬಲ್‌ಪುರ (ಮಧ್ಯಪ್ರದೇಶ)
3.ಆಗ್ರಾ (ಉತ್ತರ ಪ್ರದೇಶ) ಮತ್ತು ಸೂರತ್ (ಗುಜರಾತ್)

3-10 ಲಕ್ಷ ಜನಸಂಖ್ಯೆಯ ವಿಭಾಗ (ಅಗ್ರ ನಗರಗಳು)
1.ಅಮರಾವತಿ (ಮಹಾರಾಷ್ಟ್ರ)
2.ಝಾನ್ಸಿ ಮತ್ತು ಮೊರಾದಾಬಾದ್ (ಉತ್ತರಪ್ರದೇಶ) 3.ಅಲ್ವರ್ (ರಾಜಸ್ಥಾನ)

3 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ವಿಭಾಗ (ಅಗ್ರ ನಗರಗಳು)
1.ದೇವಾಸ್ (ಮಧ್ಯಪ್ರದೇಶ)
2.ಪರ್ವಾನೋ (ಹಿಮಾಚಲ ಪ್ರದೇಶ)
3.ಅನುಗುಲ್ (ಒಡಿಶಾ)

ಬಾಕ್ಸಿಂಗ್: ಎಂಟರ ಘಟ್ಟಕ್ಕೆ ನಿಖತ್

ಲಿವರ್‌ಪೂಲ್ (ಪಿಟಿಐ): ಎರಡು ಬಾರಿಯ ಚಾಂಪಿಯನ್ ನಿಖತ್ ಜರೀನ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 51 ಕೆ.ಜಿ. ವಿಭಾಗದಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಶ್ರೇಯಾಂಕ ರಹಿತ ನಿಖತ್ ಅವರು ಮಂಗಳವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ 5–0ಯಿಂದ ಜಪಾನ್‌ನ ಯೂನಾ ನಿಶಿನಾಕಾ ಅವರನ್ನು ಮಣಿಸಿದರು. 29 ವರ್ಷ ವಯಸ್ಸಿನ ನಿಖತ್ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ ಬೆಳ್ಳಿ ಪದಕ ವಿಜೇತೆ ಬೂಸೆ ನಾಜ್ ಛಕುರೊಲೂ (ಟರ್ಕಿ) ಅವರ ಸವಾಲು ಎದುರಿಸಲಿದ್ದಾರೆ.

ಸುಮಿತ್ ಕುಂದು ನಿರ್ಗಮನ: ಪುರುಷರ 75 ವಿಭಾಗದಲ್ಲಿ ಸ್ಪರ್ಧಿಸಿರುವ ಸುಮಿತ್ ಕುಂದು, ಸಚಿನ್ ಸಿವಾಚ್ (60 ಕೆ.ಜಿ.) ಹಾಗೂ ನರೇಂದ್ರ ಬರ್ವಾಲ್ (90 + ಕೆ.ಜಿ.) ಅವರು ಪ್ರಿ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಸೋತು ಅಭಿಯಾನ ಮುಗಿಸಿದರು.

ಮಹಿಳೆಯರ 65 ಕೆ.ಜಿ. ವಿಭಾಗದಲ್ಲಿ ನೀರಜ್ ಪೋಗಟ್ ಅವರು 2–3ರಿಂದ ಇಂಗ್ಲೆಂಡ್‌ನ ಸಚಾ ಹಿಕಿ ಎದುರು ಪರಾಭವಗೊಂಡರು.

ಎರಡನೇ ಸುತ್ತಿಗೆ ಸಾತ್ವಿಕ್–ಚಿರಾಗ್

ಹಾಂಗ್ ಕಾಂಗ್ (ಪಿಟಿಐ): ಭಾರತದ ಅಗ್ರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಹಾಂಗ್ ಕಾಂಗ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಕಿರಣ್ ಜಾರ್ಜ್ ಪುರುಷರ ಸಿಂಗಲ್ಸ್ ಮುಖ್ಯ ಸುತ್ತಿನಲ್ಲಿ ಆಡುವ ಅರ್ಹತೆ ಸಂಪಾದಿಸಿದರು.

ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಸಾತ್ವಿಕ್- ಚಿರಾಗ್ ಜೋಡಿ, ಇಲ್ಲಿ ಮೊದಲ ಸುತ್ತಿನಲ್ಲಿ ತೈವಾನ್‌ನ ಚಿಯು ಸಿಯಾಂಗ್ ಚೀಯ–ವಾಂಗ್ ಚಿ ಲಿನ್ ಜೋಡಿಯನ್ನು 21–13, 18–21, 21–10 ರಿಂದ ಸೋಲಿಸಿತು.

ಸಿಂಗಲ್ಸ್ ಕ್ವಾಲಿಫೈಯರ್ಸ್‌ನಲ್ಲಿ ಕಿರಣ್ ಜಾರ್ಜ್ ಸತತ ಎರಡು ಪಂದ್ಯಗಳನ್ನು ಗೆದ್ದು ಪ್ರಧಾನ ಸುತ್ತಿಗೆ ಅರ್ಹತೆ ಪಡೆದರು. ವಿಶ್ವ ಕ್ರಮಾಂಕದಲ್ಲಿ 38ನೇ ಸ್ಥಾನದಲ್ಲಿರುವ ಮೊದಲು ಮಲೇಷ್ಯಾದ ಚಿಯಾಮ್ ಅವರು ಜೂನ್ ವೀ ಅವರನ್ನು 21–14, 21–13 ರಿಂದ ಸೋಲಿಸಿದರು. ನಂತರ ಸ್ವದೇಶದ ಎಸ್.ಶಂಕರ ಮುತ್ತುಸ್ವಾಮಿ ಸುಬ್ರಮಣಿಯನ್ ಅವರನ್ನು 21–18, 21–14 ರಿಂದ ಸೋಲಿಸಿದರು.

ಕಿರಣ್ ಜಾರ್ಜ್ ಮೊದಲ ಸುತ್ತಿನಲ್ಲಿ ಸಿಂಗಪುರದ ಜಿಯಾ ಹೆಂಗ್ ಜೇಸನ್ ತೇ ಅವರನ್ನು ಎದುರಿಸಲಿದ್ದಾರೆ.

ಭಾರತದ ತರುಣ್ ಮನ್ನೇಪಲ್ಲಿ ಅವರು ಅನಿರೀಕ್ಷಿತ ಫಲಿತಾಂಶದಲ್ಲಿ ಸ್ವದೇಶದ ಕಿದಂಬಿ ಶ್ರೀಕಾಂತ್ ಅವರನ್ನು ಅರ್ಹತಾ ವಿಭಾಗದ ಮೊದಲ ಸುತ್ತಿನಲ್ಲಿ 28–26, 21–13 ರಿಂದ ಹಿಮ್ಮೆಟ್ಟಿಸಿದರು. ಆದರೆ, 20 ವರ್ಷ ವಯಸ್ಸಿನ ತರುಣ್ ಮುಂದಿನ ಸುತ್ತಿನಲ್ಲೇ 21–23, 13–21, 18–21 ರಲ್ಲಿ ಮಲೇಷ್ಯಾದ ನಾಲ್ಕನೇ ಶ್ರೇಯಾಂಕದ ಜಸ್ಟಿನ್ ಹೋಹ್ ಅವರನ್ನು ಸೋಲಿಸಿದರು.

ಸಂಕ್ಷಿಪ್ತ ಸುದ್ದಿ

ಹೈಕೋರ್ಟ್ ಮೆಟ್ಟಿಲೇರಿದ ಸಂತ್ರಸ್ತರು

ಮುಂಬೈ (ಪಿಟಿಐ): ಬಿಜೆಪಿಯ ಮಾಜಿ ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್ ಸೇರಿದಂತೆ ಎಲ್ಲ ಆರೋಪಿಗಳನ್ನು ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಖುಲಾಸೆಗೊಳಿಸಿದ್ದನ್ನು ಪ್ರಶ್ನಿಸಿ, ಸಂತ್ರಸ್ತ ಕುಟುಂಬಗಳು ಹೈಕೋರ್ಟ್ ಮೆಟ್ಟಿಲೇರಿವೆ.

ವಿಶೇಷ ನ್ಯಾಯಾಲಯದ ತೀರ್ಪು ರದ್ದುಗೊಳಿಸುವಂತೆ ಕೋರಿ ನಿಸಾರ್ ಅಹ್ಮದ್ ಸಯ್ಯದ್ ಬಿಲಾಲ್ ಹಾಗೂ ಐದು ಮಂದಿ ಸಂತ್ರಸ್ತರ ಪರವಾಗಿ ವಕೀಲ ಮತೀನ್ ಶೇಖ್ ಅವರು ಅರ್ಜಿ ಸಲ್ಲಿಸಿದ್ದಾರೆ.

'ಜುಲೈ 31ರಂದು ಎನ್‌ಐಎ ವಿಶೇಷ ನ್ಯಾಯಾಲಯವು ಪ್ರಕಟಿಸಿರುವ ತೀರ್ಪಿನಲ್ಲಿ ಎಲ್ಲ ಏಳು ಮಂದಿ ಆರೋಪಿಗಳನ್ನು ಖುಲಾಸೆಗೊಳಿಸಿರುವುದು ಕಾನೂನು ಪ್ರಕಾರ ತಪ್ಪಾಗಿದ್ದು, ತೀರ್ಪು ರದ್ದುಗೊಳಿಸಲು ಅರ್ಹವಾಗಿದೆ' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

2008ರ ಸೆಪ್ಟೆಂಬರ್ 29ರಂದು ಮಹಾರಾಷ್ಟ್ರದ ಮಾಲೇಗಾಂವ್ ಪಟ್ಟಣದ ಮಸೀದಿ ಸಮೀಪ ಮೋಟರ್ ಸೈಕಲ್‌ನಲ್ಲಿ ಇಟ್ಟಿದ್ದ ಸ್ಫೋಟಕ ಸಿಡಿದು ಆರು ಮಂದಿ ಮೃತಪಟ್ಟು, 101 ಮಂದಿ ಗಾಯಗೊಂಡಿದ್ದರು.

ಹಿಮಪಾತ: ಮೂವರು ಸೈನಿಕರು ಸಾವು

ಲೇಹ್ (ಪಿಟಿಐ): ಲಡಾಖ್‌ನಲ್ಲಿರುವ ವಿಶ್ವದ ಅತಿ ಎತ್ತರದ ಯುದ್ಧಭೂಮಿ ಸಿಯಾಚಿನ್‌ನಲ್ಲಿ ಸಂಭವಿಸಿದ ಹಿಮಪಾತದಿಂದಾಗಿ ಇಬ್ಬರು ಅಗ್ನಿವೀರರು ಸೇರಿ ಮೂವರು ಸೈನಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

12,000 ಅಡಿ ಎತ್ತರದ ಸಿಯಾಚಿನ್‌ನ ಸೇನಾ ಶಿಬಿರ ಇರುವ ಪ್ರದೇಶದಲ್ಲಿ ಭಾನುವಾರ ಸಂಭವಿಸಿದ ಹಿಮಪಾತಕ್ಕೆ ಅವರು ಸಿಲುಕಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಹ ಸಂತ್ರಸ್ತರಿಗೆ ಸಿಜೆಐ ದೇಣಿಗೆ

ನವದೆಹಲಿ (ಪಿಟಿಐ): ಸಿಜೆಐ ಬಿ.ಆರ್.ಗವಾಯಿ ಮತ್ತು ಸುಪ್ರೀಂ ಕೋರ್ಟ್‌ನ ಇತರೆ ನ್ಯಾಯಮೂರ್ತಿಗಳು ಪ್ರಧಾನ ಮಂತ್ರಿ ಪ್ರವಾಹ ಪರಿಹಾರ ನಿಧಿಗೆ ತಲಾ ₹25 ಸಾವಿರ ದೇಣಿಗೆ ನೀಡಿದ್ದಾರೆ.

'ದೇಶದ ವಿವಿಧ ಭಾಗಗಳಲ್ಲಿ ಪ್ರವಾಹದಿಂದ ಜನ–ಜೀವನ ಅಸ್ತವ್ಯಸ್ತಗೊಂಡಿದೆ. ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ಮತ್ತು ದೇಶ ಸೇವೆಯಲ್ಲಿ ನ್ಯಾಯಾಂಗದ ಬದ್ಧತೆಯು ಅಚಲವಾಗಿದೆ' ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

'ಹಿಮಾಚಲಕ್ಕೆ ₹1,500 ಕೋಟಿ ನೆರವು'

ಶಿಮ್ಲಾ/ಧರ್ಮಶಾಲಾ (ಪಿಟಿಐ): ಭಾರಿ ಮಳೆಯಿಂದಾಗಿ ತೀವ್ರ ಹಾನಿಗೆ ಒಳಗಾಗಿರುವ ಹಿಮಾಚಲ ಪ್ರದೇಶಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಭೇಟಿ ನೀಡಿದರು. ರಾಜ್ಯಕ್ಕೆ ತಕ್ಷಣಕ್ಕೆ ₹1,500 ಕೋಟಿ ಬಿಡುಗಡೆ ಮಾಡುವುದಾಗಿ ಅವರು ಘೋಷಣೆ ಮಾಡಿದರು.

ಜೂನ್ 20ರಿಂದ ಸೆಪ್ಟೆಂಬರ್ 8ರವರೆಗೆ ರಾಜ್ಯಕ್ಕೆ ಸುಮಾರು ₹4,122 ಕೋಟಿ ನಷ್ಟವಾಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಮೃತಪಟ್ಟವರ ಕುಟುಂಬಗಳಿಗೆ ₹2 ಲಕ್ಷ ಮತ್ತು ಗಾಯಗೊಂಡವರಿಗೆ ₹50 ಸಾವಿರ ಪರಿಹಾರ ನೀಡುವುದಾಗಿ ಪ್ರಧಾನಿ ಹೇಳಿದರು. ಹೆಲಿಕಾಪ್ಟರ್ ಮೂಲಕ ಪ್ರಧಾನಿ ಮೋದಿ ಅವರು ವೈಮಾನಿಕ ಸಮೀಕ್ಷೆ ನಡೆಸಿ ಹಾನಿಯ ಮಾಹಿತಿ ಪಡೆದುಕೊಂಡರು.

ರಾಜ್ಯ ವಿಪತ್ತು ನಿರ್ವಹಣೆ ಪಡೆ ನಿಧಿಗೆ ಮತ್ತು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿಗೆ ಕೇಂದ್ರ ಸರ್ಕಾರವು ನೀಡುವ ಹಣವನ್ನೇ ಮುಂಗಡವಾಗಿ (₹1,500 ಕೋಟಿ) ನೀಡಲಾಗುತ್ತಿದೆ. ಈ ನಿಧಿಗಳಿಗೆ ಎರಡನೇ ಕಂತಿನಲ್ಲಿ ಕೇಂದ್ರವು ಹಣ ಪಾವತಿ ಮಾಡಬೇಕಿತ್ತು.

ಮಳೆಹಾನಿ ಅಂದಾಜಿಸಲು ಕೇಂದ್ರ ಸರ್ಕಾರವು ರಾಜ್ಯಕ್ಕೆ ಈಗಾಗಲೇ ಸಚಿವರ ತಂಡವನ್ನು ರಾಜ್ಯಕ್ಕೆ ಕಳುಹಿಸಿದೆ. ಈ ತಂಡದ ವರದಿ ಬಂದ ಬಳಿಕ, ಕೇಂದ್ರ ಸರ್ಕಾರವು ಮುಂದಿನ ಹಂತದ ಆರ್ಥಿಕ ನೆರವು ನೀಡಲಿದೆ ಎನ್ನಲಾಗುತ್ತಿದೆ. ಮಳೆ ಸಂಬಂಧಿತ ಅವಘಡ-ಗಳಲ್ಲಿ ಮೃತಪಟ್ಟ ಕುಟುಂಬದವರನ್ನು ಪ್ರಧಾನಿ ಮೋದಿ ಭೇಟಿ ಮಾಡಿದರು.

'ಶಿಕ್ಷಣ, ಕೃಷಿ ಸೇರಿದಂತೆ ರಾಜ್ಯದಲ್ಲಿ ಹಲವು ಕ್ಷೇತ್ರಗಳಿಗೆ ಭಾರಿ ನಷ್ಟವಾಗಿದೆ. ಜನರ ಜೀವನ ಸಹಜಸ್ಥಿತಿಗೆ ಮರಳುವಂತೆ ಮಾಡಬೇಕಿದೆ ಇದಕ್ಕಾಗಿ ಬಹು ಆಯಾಮದ ಯೋಜನೆಗಳನ್ನು ರೂಪಿಸಬೇಕು' ಎಂದು ಪ್ರಧಾನಿ ಹೇಳಿದರು.

ರಾಜ್ಯಗಳಿಗೆ ವಿಪತ್ತು ನಿರ್ವಹಣೆಯ ಅಡಿ ನೀಡಲಾಗುವ ಸೌಲಭ್ಯವನ್ನು ಮುಂಚಿತವಾಗಿಯೇ ನೀಡುವ ಬಗ್ಗೆ ನಿಯಮಗಳನ್ನು ರೂಪಿಸಲಾಗುತ್ತಿದೆ
ನರೇಂದ್ರ ಮೋದಿ, ಪ್ರಧಾನಿ

ಜೂನ್ 30ರಂದು ತಲ್ವಾರಾ ಗ್ರಾಮದಲ್ಲಿ ಸಂಭವಿಸಿದ ಮೇಘಸ್ಫೋಟದಲ್ಲಿ ಇಡೀ ಕುಟುಂಬವೇ ಮೃತಪಟ್ಟಿತ್ತು. ಆದರೆ, ಪವಾಡಸದೃಶ ಎನ್ನುವಂತೆ 11 ತಿಂಗಳ ನಿಖಿತಾ ಮಾತ್ರವೇ ಬದುಕುಳಿದಳು. ಪ್ರಧಾನಿ ಮೋದಿ ಅವರು ಮಂಗಳವಾರ ಅವಳನ್ನು ಎತ್ತಿಕೊಂಡು ಮುದ್ದಾಡಿದರು. ಈ ಫೋಟೊವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ — ಪಿಟಿಐ ಚಿತ್ರ

ಪಂಜಾಬ್‌ಗೆ ₹1,600 ಕೋಟಿ ನೆರವು

ಪ್ರವಾಹದಿಂದ ತೀವ್ರ ಹಾನಿಗೆ ಒಳಗಾಗಿರುವ ಪಂಜಾಬ್‌ಗೆ ಪ್ರಧಾನಿ ಮೋದಿ ಅವರು ₹1,600 ಕೋಟಿ ನೆರವು ಘೋಷಣೆ ಮಾಡಿದರು. ರಾಜ್ಯಕ್ಕೆ ಈಗಾಗಲೇ ₹12 ಸಾವಿರ ಕೋಟಿ ನೆರವನ್ನು ಕೇಂದ್ರ ಸರ್ಕಾರ ನೀಡಿದೆ. ರಾಜ್ಯಕ್ಕೆ ಸುಮಾರು ₹13 ಸಾವಿರ ಕೋಟಿ ನಷ್ಟವಾಗಿದೆ' ಎಂದು ರಾಜ್ಯ ಸರ್ಕಾರ ಅಂದಾಜಿಸಿದೆ. ಮನೆ ಸಂಬಂಧಿತ ಅವಘಡಗಳಲ್ಲಿ ಮೃತಪಟ್ಟವರಿಗೆ ₹2 ಲಕ್ಷ ಮತ್ತು ಗಾಯಗೊಂಡವರಿಗೆ ₹50 ಸಾವಿರ ಪರಿಹಾರ ನೀಡುವುದಾಗಿ ಘೋಷಿಸಲಾಯಿತು.

ಸೂರ್ಯ ಬಳಗಕ್ಕೆ 'ಪ್ರಯೋಗ'ದ ವೇದಿಕೆ

ಆಲ್‌ರೌಂಡರ್‌ಗಳ ಆಯ್ಕೆಯತ್ತ ಒತ್ತು ಯುಎಇ ಎದುರು ಪಂದ್ಯ ಇಂದು

ಅಭ್ಯಾಸನಿರತ ಭಾರತದ ಆಟಗಾರರಾದ ಅಭಿಷೇಕ್ ಶರ್ಮಾ, ಜಸ್‌ಪ್ರೀತ್ ಬೂಮ್ರಾ ಮತ್ತು ಅಕ್ಷರ್ ಪಟೇಲ್ –ಎಎಫ್‌ಪಿ ಚಿತ್ರ

ದುಬೈ (ಪಿಟಿಐ): ಈಗಾಗಲೇ ಪರೀಕ್ಷೆಗೊಳಪಟ್ಟು ಯಶಸ್ವಿ ಎನಿಸಿರುವ ಆಲ್‌ರೌಂಡರ್ ಆಟಗಾರರನ್ನು ಆಯ್ಕೆ ಮಾಡಿ, ಸಮತೋಲನದ ತಂಡವನ್ನು ಕಣಕ್ಕಿಳಿಸುವ ಸವಾಲು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಮುಂದಿದೆ.

ಬೇರೆ ಬೇರೆ ಮಾದರಿಗಳಲ್ಲಿ ಆಡುವ ಬಹುಕೌಶಲಗಳ ಆಟಗಾರರಲ್ಲಿಯೇ ಬ್ಯಾಟಿಂಗ್‌ನಲ್ಲಿಯೂ ಪ್ರಾವಿಣ್ಯ ಇರುವವರ ಮೇಲೆ ಅವರ ಚಿತ್ತ ನೆಟ್ಟಿರುವುದಂತೂ ಖಚಿತ. ಏಕೆಂದರೆ; 8ನೇ ಕ್ರಮಾಂಕದವರೆಗೂ ಬ್ಯಾಟರ್‌ಗಳು ಇದ್ದರೆ ತಂಡಕ್ಕೆ ಹೆಚ್ಚಿನ ಬಲ.

ಆದ್ದರಿಂದ ಬುಧವಾರ ಇಲ್ಲಿ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ನಡೆಯಲಿರುವ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ವಿರುದ್ಧದ ಪಂದ್ಯವನ್ನು 'ಪೂರ್ವಾಭ್ಯಾಸ'ಕ್ಕಾಗಿ ಭಾರತ ತಂಡವು ಪರಿಗಣಿಸಲಿದೆ. ತನ್ನ ಎರಡನೇ ಪಂದ್ಯದಲ್ಲಿ ಕಟ್ಟಾ ಎದುರಾಳಿ ಪಾಕಿಸ್ತಾನ ತಂಡವನ್ನು (ಸೆ.14) ಎದುರಿಸುವ ಮುನ್ನ ಯುಎಇ ವಿರುದ್ಧದ ಪಂದ್ಯವನ್ನು ಪ್ರಯೋಗದ ವೇದಿಕೆಯನ್ನಾಗಿ ಬಳಸಿಕೊಳ್ಳುವತ್ತ ಗಮನ ಇರಿಸಿದೆ.

ಭಾರತ ಮತ್ತು ಪಾಕಿಸ್ತಾನ ಮೂಲದ ಆಟಗಾರರೇ ಹೆಚ್ಚಿನ ಸಂಖ್ಯೆಯಲ್ಲಿರುವ ಯುಎಇ ತಂಡಕ್ಕೆ ಇದು ದೊಡ್ಡ ಪಂದ್ಯ. ಏಕೆಂದರೆ ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಎಸೆತಗಳನ್ನು ಎದುರಿಸುವುದು ಮತ್ತು ಶುಭಮನ್ ಗಿಲ್ ಅವರಂತಹ ಉತ್ತಮ ಬ್ಯಾಟರ್‌ಗೆ ಬೌಲಿಂಗ್ ಮಾಡುವುದು ಯುಎಇಗೆ ಹೊಸ ವಿಷಯವೇ ಸರಿ. ಸದ್ಯ ಐಸಿಸಿಯ ಸಹ ಸದಸ್ಯತ್ವ ರಾಷ್ಟ್ರವಾಗಿರುವ ಯುಎಇ ತಂಡಕ್ಕೆ ಏಷ್ಯಾ ಕಪ್ ಅನುಭವವು ಮಹತ್ವದ್ದಾಗಲಿದೆ.

ಭಾರತ ತಂಡದಲ್ಲಿ ಸದ್ಯ ವಿಕೆಟ್ ಕೀಪರ್ ಸ್ಥಾನಕ್ಕೆ ಸಂಜು ಸ್ಯಾಮ್ಸನ್ ಅಥವಾ ಜಿತೇಶ್ ಶರ್ಮಾ ಅವರನ್ನು ಕಣಕ್ಕಿಳಿಸುವ ಕುರಿತ ಜಿಜ್ಞಾಸೆ ನಡೆಯುತ್ತಿದೆ. ವಿದರ್ಭದ ಶರ್ಮಾ ಅವರ 'ಫಿನಿಷಿಂಗ್' ಕೌಶಲ ಮತ್ತು ಆರಂಭಿಕನಾಗಿ ಅಬ್ಬರಿಸುವ ಕೇರಳದ ಸಂಜು ಅವರಲ್ಲಿ ಒಬ್ಬರನ್ನು ಕಣಕ್ಕಿಳಿಸುವ ನಿರ್ಧಾರ ಕುತೂಹಲ ಕೆರಳಿಸಿರುವುದು ಸುಳ್ಳಲ್ಲ.

ಮುಖ್ಯಾಂಶಗಳು

- ಭಾರತ ತಂಡಕ್ಕೆ ಗಿಲ್, ಅಭಿಷೇಕ್ ಆರಂಭಿಕ ಜೋಡಿ
- ಜಿತೇಶ್ ಶರ್ಮಾಗೆ ಕೀಪಿಂಗ್ ಹೊಣೆ ಸಾಧ್ಯತೆ
- ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್ ಕಣಕ್ಕೆ

ಭಾರತದ ಎದುರು ಆಡುವುದು ನಮಗೆ ಕಠಿಣ ಸವಾಲಾಗಿದೆ. ಆದರೆ ಇದು ನಮ್ಮನ್ನು ಪರೀಕ್ಷೆಗೆ ಒಡ್ಡಿಕೊಳ್ಳಲು ಉತ್ತಮ ಅವಕಾಶವೂ ಆಗಿದೆ.
ಲಾಲ್‌ಚಂದ್ ರಜಪೂತ್
ಯುಎಇ ತಂಡದ ಕೋಚ್

ಟಿ20 ತಂಡಕ್ಕೆ ಮರಳಿರುವ ಶುಭಮನ್ ಗಿಲ್ ಅವರನ್ನು ಆರಂಭಿಕ ಬ್ಯಾಟರ್ ಸ್ಥಾನದಲ್ಲಿ ಕಣಕ್ಕಿಳಿಸುವುದರಿಂದ ಸಂಜುಗೆ ಅವಕಾಶ ಸಿಗುವುದು ಖಚಿತವಿಲ್ಲ. ಅವರು ಬೆಂಚ್ ಕಾಯುವ ಸಾಧ್ಯತೆಯೇ ಹೆಚ್ಚಿದೆ. ಗಿಲ್ ಅವರೊಂದಿಗೆ ಅಭಿಷೇಕ್ ಶರ್ಮಾ ಅವರು ಇನಿಂಗ್ಸ್ ಆರಂಭಿಸಿದರೆ ಮೂರನೇ ಸ್ಥಾನದಲ್ಲಿ ತಿಲಕ್ ವರ್ಮಾ ಅವರ ದಾಖಲೆಗಳು ಅಮೋಘವಾಗಿವೆ. ಐಸಿಸಿ ಟಿ20 ಬ್ಯಾಟರ್‌ಗಳ ಯಾದಿಯಲ್ಲಿ ಎರಡನೇ ಸ್ಥಾನಕ್ಕೇರಿರುವ ತಿಲಕ್ ಅವರು ಮೂರನೇ ಕ್ರಮಾಂಕದಲ್ಲಿ ಆಡುವುದು ಬಹುತೇಕ ಖಚಿತ. ನಾಲ್ಕರಲ್ಲಿ ನಾಯಕ ಸೂರ್ಯಕುಮಾರ್ ಯಾದವ್ ಆಡುವರು.

ಇವರ ನಂತರ 'ಬಹುಕೌಶಲ'ದ ಆಟಗಾರರಾದ ಹಾರ್ದಿಕ್ ಪಾಂಡ್ಯ, ಶಿವಂ ದುಬೆ ಅವರಿಬ್ಬರೂ ಮಧ್ಯಮವೇಗದ ಬೌಲಿಂಗ್ ಮತ್ತು ಕೊನೆಯ ಹಂತದ ಓವರ್‌ಗಳಲ್ಲಿ ಅಬ್ಬರದ ಬ್ಯಾಟಿಂಗ್ ಮಾಡಬಲ್ಲರು. ಇದರಿಂದಾಗಿ 7ನೇ ಕ್ರಮಾಂಕದಲ್ಲಿ ಜಿತೇಶ್ ಸೂಕ್ತವಾಗುತ್ತಾರೆ ಎನ್ನುವ ಅಭಿಪ್ರಾಯ ತಂಡದ ಮ್ಯಾನೇಜ್‌ಮೆಂಟ್‌ಗೆ ಮೂಡಿದರೆ ಅಚ್ಚರಿಯೇನಿಲ್ಲ.

ಏಷ್ಯಾ ಕಪ್ 2025

ಪಂದ್ಯ ಆರಂಭ: ರಾತ್ರಿ 8
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

8ನೇ ಸ್ಥಾನದಲ್ಲಿ ಕೋಚ್ ಗಂಭೀರ್ ಅವರು ಬ್ಯಾಟಿಂಗ್ ಕೌಶಲ ಇರುವವರನ್ನೇ ಕಣಕ್ಕಿಳಿಸುವತ್ತ ಹೆಚ್ಚು ಗಮನ ನೀಡುವ ಸಾಧ್ಯತೆ ಇದೆ. ಅದಕ್ಕಾಗಿ ಎಡಗೈ ಸ್ಪಿನ್ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರು ಆಡುವುದು ಬಹುತೇಕ ಖಚಿತ.

ಅವರ ನಂತರ ಅಗ್ರಮಾನ್ಯ ವೇಗಿ ಬೂಮ್ರಾ ಮತ್ತು ಟಿ20 ಮಾದರಿಯಲ್ಲಿ ಯಶಸ್ವಿ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರಿರುತ್ತಾರೆ. ಮತ್ತೊಬ್ಬ ಸ್ಪಿನ್ನರ್ ಆಗಿ ವರುಣ್ ಚಕ್ರವರ್ತಿ ಅಥವಾ ಕುಲದೀಪ್ ಯಾದವ್ ಆಡುವ ಅವಕಾಶ ಇದೆ. ನಾಲ್ವರು ಸ್ಪಿನ್ನರ್‌ಗಳನ್ನು ಕಣಕ್ಕಿಳಿಸ ಬಹುದಾದ ಪರಿಸ್ಥಿತಿ ಎದುರಾದರೆ; ಅಕ್ಷರ್, ಕುಲದೀಪ್ ಮತ್ತು ವರುಣ್ ಸಿದ್ಧರಾಗಿದ್ದಾರೆ.

ಸೋಮವಾರ ತಂಡದ ತಾಲೀಮಿನಲ್ಲಿ ಎಲ್ಲ ಆಟಗಾರರೂ ಭಾಗವಹಿಸಿದ್ದರು. ಸಾಂದರ್ಭಿಕವಾಗಿ ಎಡಗೈ ಸ್ಪಿನ್ನರ್ ಆಗಿರುವ ಅಭಿಷೇಕ್ ಕೂಡ ನೆಟ್ಸ್‌ನಲ್ಲಿ ಬೌಲಿಂಗ್ ಅಭ್ಯಾಸ ಮಾಡಿದರು.

ಯುಎಇ ತಂಡಕ್ಕೆ ಭಾರತದ ಮಾಜಿ ಆಟಗಾರ ಲಾಲಚಂದ್ ರಜಪೂತ್ ಮಾರ್ಗದರ್ಶನ ನೀಡುತ್ತಿದ್ದಾರೆ. ಮೊಹಮ್ಮದ್ ವಾಸೀಂ, ರಾಹುಲ್ ಚೋಪ್ರಾ ಮತ್ತು ಸಿಮ್ರನ್‌ಜೀತ್ ಸಿಂಗ್ ಅವರು ತಂಡದ ಭರವಸೆಯ ಆಟಗಾರರಾಗಿದ್ದಾರೆ. ಅವರೆಲ್ಲರಿಗೂ ತಮ್ಮ ಸಾಮರ್ಥ್ಯವನ್ನು ತೋರಲು ಇದೊಂದು ಸುವರ್ಣಾವಕಾಶವಾಗಲಿದೆ.

ಬಾಲಕ ಶುಭಮನ್‌ಗೆ ಬೌಲಿಂಗ್ ಮಾಡಿದ್ದ ಸಿಮ್ರನ್‌ಜೀತ್!

ದುಬೈ (ಪಿಟಿಐ): 'ಶುಭಮನ್ ಗಿಲ್ ಅವರು ಚಿಕ್ಕವರಿದ್ದಾಗಿನಿಂದಲೂ ನನಗೆ ಪರಿಚಯ. ಆದರೆ ಅವರಿಗೆ ನನ್ನ ನೆನಪು ಇದೆಯೋ ಇಲ್ಲವೋ ಗೊತ್ತಿಲ್ಲ. 2011–12ರ ಸಮಯ ಇರಬಹುದು. ಶುಭಮನ್ ಅವರು 11 ಅಥವಾ 12 ವರ್ಷದವರಿರಬೇಕು. ಆಗ ಮೊಹಾಲಿಯ ಪಿಸಿಎ ಅಕಾಡೆಮಿಯಲ್ಲಿ ಬೆಳಿಗ್ಗೆ 6 ರಿಂದ 11ರವರೆಗೆ ಬ್ಯಾಟಿಂಗ್ ಅಭ್ಯಾಸ ಮಾಡುತ್ತಿದ್ದರು. ನಾನು ಮತ್ತು ಅವರ ತಂದೆ ಬೌಲಿಂಗ್ ಮಾಡುತ್ತಿದ್ದೆವು' ಎಂದು ಯುಎಇಯ ಎಡಗೈ ಸ್ಪಿನ್ನರ್ ಸಿಮ್ರನ್‌ಜೀತ್ ಸಿಂಗ್ ಸ್ಮರಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ನಿಗದಿತ ಅಭ್ಯಾಸದ ವೇಳೆಯ ನಂತರವೂ ಹೆಚ್ಚು ಹೊತ್ತು ಬೌಲಿಂಗ್ ಅಭ್ಯಾಸದಲ್ಲಿ ತೊಡಗಿರುತ್ತೇನೆ. ಶುಭಮನ್ ಅವರಿಗೆ ನೆಟ್ಸ್‌ನಲ್ಲಿ ಬಹಳಷ್ಟು ಬೌಲಿಂಗ್ ಮಾಡಿದ್ದೇನೆ' ಎಂದರು.

ಸಿಮ್ರನ್‌ಜೀತ್ ಅವರು ಪಂಜಾಬ್ ರಾಜ್ಯದ ಲುಧಿಯಾನದವರು. 35 ವರ್ಷದ ಎಡಗೈ ಸ್ಪಿನ್ನರ್ ಯುಎಇ ತಂಡದ ಪ್ರಮುಖ ಆಟಗಾರರಾಗಿದ್ದಾರೆ.

ಏಷ್ಯಾ ಕಪ್ ಕ್ರಿಕೆಟ್: ಅಟಲ್, ಒಮರ್‌ಝೈ ಅರ್ಧಶತಕ

ಅಫ್ಗನ್‌ಗೆ ಮಣಿದ ಹಾಂಗ್‌ಕಾಂಗ್

ಅಫ್ಗಾನಿಸ್ತಾನದ ಬ್ಯಾಟರ್ ಸೆದಿಕುಲ್ಲಾ ಅಟಲ್ ಎಎಫ್‌ಪಿ ಚಿತ್ರ

ಅಬುಧಾಬಿ (ಪಿಟಿಐ): ಸೆದಿಕುಲ್ಲಾ ಅಟಲ್ (ಔಟಾಗದೇ 73;52ಎ) ಮತ್ತು ಅಜ್ಮತ್‌ವುಲ್ಲಾ ಒಮರ್‌ಝೈ (53; 21ಎ) ಅವರ ಅರ್ಧಶತಕಗಳ ಬಲದಿಂದ ಅಫ್ಗಾನಿಸ್ತಾನ ತಂಡವು ಮಂಗಳವಾರ ಆರಂಭವಾದ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಹಾಂಗ್‌ಕಾಂಗ್ ತಂಡವನ್ನು 94 ರನ್‌ಗಳಿಂದ ಸುಲಭವಾಗಿ ಮಣಿಸಿ ಶುಭಾರಂಭ ಮಾಡಿತು.

ಶೇಖ್ ಝೈದ್ ಕ್ರೀಡಾಂಗಣದಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಬಲಿಷ್ಠ ಅಫ್ಗನ್ ತಂಡ ನೀಡಿದ್ದ 189 ರನ್‌ಗಳ ಕಠಿಣ ಗುರಿಯನ್ನು ಬೆನ್ನತ್ತಿದ 'ಅನನುಭವಿ' ಹಾಂಗ್‌ಕಾಂಗ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗೆ 94 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಬಾಬರ್ ಹಯಾತ್ (39;43ಎ) ಮತ್ತು ನಾಯಕ ಯಾಸಿಮ್ ಮುರ್ತಾಜಾ (16) ಮಾತ್ರ ಎರಡಂಕಿ ರನ್ ಗಳಿಸಿದರು.

ಇದಕ್ಕೂ ಮುನ್ನ ಟಾಸ್ ಗೆದ್ದ ಅಫ್ಗನ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಹಾಂಗ್‌ಕಾಂಗ್ ತಂಡದ ಬೌಲರ್‌ಗಳಾದ ಆಯುಷ್ ಶುಕ್ಲಾ, ಕಿಂಚಿತ್ ಶಾ ಮತ್ತು ಅತೀಕ್ ಇಕ್ಬಾಲ್ ಅವರ ಪ್ರಭಾವಿ ದಾಳಿಯಿಂದಾಗಿ ಬೇಗನೆ ವಿಕೆಟ್ ಪತನವಾದವು.

ಈ ಹಂತದಲ್ಲಿ ಅಜೇಯ ಅರ್ಧಶತಕ ಗಳಿಸಿದ ಅಟಲ್ ಮತ್ತು ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಒಮರ್‌ಝೈ ಅವರ ಬ್ಯಾಟಿಂಗ್ ಬಲದಿಂದ ಅಫ್ಗನ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 188 ರನ್ ಗಳಿಸಿತು.

ಅಟಲ್ ಮತ್ತು ಮೊಹಮ್ಮದ್ ನಬಿ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 51 ರನ್ ಸೇರಿಸಿದರು. ಕೊನೆಯ ಹಂತದ ಓವರ್‌ಗಳಲ್ಲಿ ಒಮರ್‌ಝೈ ಅಬ್ಬರಿಸಿದರು. ಅಟಲ್ ಮತ್ತು ಒಮರ್‌ಝೈ ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ 82 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 6ಕ್ಕೆ188 (ಸೆದಿಕುಲ್ಲಾ ಅಟಲ್ ಔಟಾಗದೇ 73, ಮೊಹಮ್ಮದ್ ನಬಿ 33, ಅಜ್ಮತ್‌ವುಲ್ಲಾ ಒಮರ್‌ಝೈ 53, ಆಯುಷ್ ಶುಕ್ಲಾ 54ಕ್ಕೆ2, ಕಿಂಚಿತ್ ಶಾ 24ಕ್ಕೆ2). ಹಾಂಗ್‌ಕಾಂಗ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 94 (ಬಾಬರ್ ಹಯಾತ್ 39, ಫಜಲ್‌ಹಕ್ ಫಾರೂಕಿ 16ಕ್ಕೆ 2, ಗುಲ್ಬದಿನ್ ನೈಬ್ 8ಕ್ಕೆ 2). ಫಲಿತಾಂಶ: ಅಫ್ಗಾನಿಸ್ತಾನ ತಂಡಕ್ಕೆ 94 ರನ್‌ಗಳ ಜಯ.

ಫೆ.7ರಿಂದ ಟಿ20 ವಿಶ್ವಕಪ್ ಟೂರ್ನಿ?

ನವದೆಹಲಿ (ಪಿಟಿಐ): ಭಾರತ ಮತ್ತು ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ನಡೆಯುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯು ಮುಂದಿನ ವರ್ಷದ ಫೆಬ್ರುವರಿ 7ರಿಂದ ಮಾರ್ಚ್ 8ರವರೆಗೆ ನಡೆಯುವ ಸಾಧ್ಯತೆಯಿದೆ. ಇದಕ್ಕಾಗಿ ಭಾರತದ ಕನಿಷ್ಠ ಐದು ಮತ್ತು ಶ್ರೀಲಂಕಾದ ಎರಡು ತಾಣಗಳನ್ನು ಗುರುತಿಸಲಾಗಿದೆ.

ಫೈನಲ್ ಪಂದ್ಯಕ್ಕೆ ಅಹಮದಾಬಾದ್ ಅಥವಾ ಕೊಲಂಬೊ ಕ್ರೀಡಾಂಗಣವನ್ನು ಗುರುತಿಸಲಾಗಿದೆ. ಟೂರ್ನಿಯಲ್ಲಿ ಪಾಕಿಸ್ತಾನ ತಂಡವು ಫೈನಲ್ ಪ್ರವೇಶಿಸಿದರೆ ಮಾತ್ರ ಆ ಪಂದ್ಯವು ಕೊಲಂಬೊದಲ್ಲಿ ನಡೆಯಲಿದೆ. ಐಸಿಸಿ ಮತ್ತು ಬಿಸಿಸಿಐ ಮಾಡಿಕೊಂಡ ಒಪ್ಪಂದದ ಭಾಗವಾಗಿ ಪಾಕ್ ತನ್ನ ಎಲ್ಲಾ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಡಲಿದೆ. ಪೂರ್ಣ ವೇಳಾಪಟ್ಟಿಯನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೊ ವರದಿ ಮಾಡಿದೆ.

2024ರ ಆವೃತ್ತಿಯ ಸ್ವರೂಪದಲ್ಲೇ ಈ ಬಾರಿಯೂ ಟೂರ್ನಿ ನಡೆಯಲಿದೆ. 20 ತಂಡಗಳನ್ನು ತಲಾ ಐದರಂತೆ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ನಂತರ ಸೂಪರ್ ಎಂಟು ಹಂತ, ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ನಡೆಯುತ್ತವೆ.

ಮಲಿಕ್ ಮಿಂಚು, ಡೆಲ್ಲಿಗೆ ಜಯ

PRO KABADDI

ವಿಶಾಖಪಟ್ಟಣ: ನಾಯಕನಿಗೆ ತಕ್ಕ ಆಟವಾಡಿದ ಆಶು ಮಲಿಕ್ ಅವರ ರೇಡಿಂಗ್ ನೆರವಿನಿಂದ ದಬಾಂಗ್ ಡೆಲ್ಲಿ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಗೆಲುವು ದಾಖಲಿಸಿತು.

ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್ ಒಳಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು 45–34ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಜಯಿಸಿತು.

ಡೆಲ್ಲಿ ತಂಡವು ಆರಂಭದಿಂದಲೇ ಪಾರಮ್ಯ ಮೆರೆಯಿತು. ಪ್ರಥಮಾರ್ಧದಲ್ಲಿ 23–14ರಿಂದ ಮುನ್ನಡೆ ಸಾಧಿಸಿತ್ತು. ಪ್ರಭಾವಶಾಲಿ ಆಟವಾಡಿದ ರೇಡರ್ ಆಶು ಮಲಿಕ್ 16 ಅಂಕಗಳನ್ನು ಗಳಿಸಿದರು. ಅದರಲ್ಲಿ 11 ಟಚ್ ಪಾಯಿಂಟ್ ಪಡೆಯುವಲ್ಲಿ ಯಶಸ್ವಿಯಾದರು. 5 ಬೋನಸ್ ಅಂಕ ತಮ್ಮ ಬುಟ್ಟಿಗೆ ಹಾಕಿಕೊಂಡು ಬಂದರು.

ಅವರಿಗೆ ಉತ್ತಮ ಜೊತೆ ನೀಡಿದ ಅಜಿಂಕ್ಯ ಪವಾರ್ ಕೂಡ ಎಂಟು ಅಂಕಗಳ ಕಾಣಿಕೆ ನೀಡಿದರು. ಅದರಲ್ಲಿ ಅವರು ಐದು ಟಚ್ ಪಾಯಿಂಟ್ ಮತ್ತು 3 ಟ್ಯಾಕಲ್ ಪಾಯಿಂಟ್ಸ್ ಸಂಗ್ರಹಿಸಿದರು.

ಬೆಂಗಾಲ್ ತಂಡದ ನಾಯಕ ದೇವಾಂಕ್ ಕೂಡ ದಾಳಿಯಲ್ಲಿ 12 ಅಂಕಗಳನ್ನು ಗಳಿಸಿದರು. ಅವರೊಂದಿಗೆ ಎಸ್. ವಿಶ್ವಾಸ್ ಕೂಡ (9 ಪಾಯಿಂಟ್) ಮಿಂಚಿದರು.

ಜೈಪುರಕ್ಕೆ ಗೆಲುವು: ರೋಚಕವಾಗಿದ್ದ ದಿನದ ಎರಡನೇ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಟೈಬ್ರೇಕರ್‌ನಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು. ನಿಗದಿತ ಅವಧಿಯ ಪಂದ್ಯವು 30–30ರಿಂದ ಸಮಬಲಗೊಂಡಿತ್ತು. 'ಗೋಲ್ಡನ್ ರೇಡ್'ನಲ್ಲಿ ಜೈಪುರ ತಂಡವು 1–0ಯಿಂದ ಮೇಲುಗೈ ಸಾಧಿಸಿತು.

ಕೊರಿಯಾ ವಿರುದ್ಧ ಪಂದ್ಯ ಇಂದು

ಹಾಂಗ್‌ಝೌ (ಚೀನಾ) (ಪಿಟಿಐ): ಮಹಿಳಾ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಅಜೇಯವಾಗಿರುವ ಭಾರತ ತಂಡವು ಬುಧವಾರ ನಡೆಯಲಿರುವ ಸೂಪರ್ ಫೋರ್ ಹಂತದ ಮೊದಲ ಪಂದ್ಯದಲ್ಲಿ ಕೊರಿಯಾ ತಂಡವನ್ನು ಎದುರಿಸಲಿದೆ.

ಸಲೀಮಾ ಟೇಟೆ ಬಳಗವು ಗುಂಪು ಹಂತದಲ್ಲಿ ಎರಡು ಪಂದ್ಯ ಗೆದ್ದಿದ್ದರೆ, ಮತ್ತೊಂದು ಪಂದ್ಯದಲ್ಲಿ ಡ್ರಾ ಸಾಧಿಸಿದೆ. ಕೊರಿಯಾ ಎರಡು ಜಯ ಹಾಗೂ ಒಂದು ಸೋಲು ಕಂಡಿದೆ.

ಭಾರತ ಹಾಗೂ ಕೊರಿಯಾ ನಡುವಣ ಕೊನೆಯ ಐದು ಪಂದ್ಯಗಳಲ್ಲಿ ಭಾರತ ಮೂರರಲ್ಲಿ ಗೆಲುವು ಕಂಡಿದ್ದರೆ, ಕೊರಿಯಾ ಕೇವಲ ಒಂದು ಪಂದ್ಯದಲ್ಲಿ ಜಯ ಸಾಧಿಸಿದೆ. ಮತ್ತೊಂದು ಪಂದ್ಯ ಡ್ರಾ ಆಗಿದೆ. ಹೀಗಾಗಿ, ಈ ಪಂದ್ಯದಲ್ಲಿ ಮೇಲ್ನೋಟಕ್ಕೆ ಭಾರತವೇ ಗೆಲ್ಲುವ ಫೇವರಿಟ್ ಆಗಿದೆ. ಭಾರತದ ವನಿತೆಯರು ಆತ್ಮವಿಶ್ವಾಸದೊಂದಿಗೆ ಕಣಕ್ಕಿಳಿಯಲಿದ್ದು, ಫೈನಲ್ ಮೇಲೆ ಕಣ್ಣಿಟ್ಟಿದ್ದಾರೆ.

ಅಗ್ರಸ್ಥಾನದಲ್ಲಿ ಮಘಸೂಡ್ಲು, ವೈಶಾಲಿ

ಐಲ್ ಆಫ್ ಮ್ಯಾನ್ (ಪಿಟಿಐ): ಭಾರತದ ವೈಶಾಲಿ ಆರ್. ಮತ್ತು ರಷ್ಯಾದ ಕ್ಯಾತರಿನಾ ಲಾಗ್ನೊ ಅವರು ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯ ಆರನೇ ಸುತ್ತಿನ ನಂತರ ತಲಾ ಐದು ಅಂಕಗಳೊಂದಿಗೆ ಮಹಿಳಾ ವಿಭಾಗದಲ್ಲಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಓಪನ್ ವಿಭಾಗದಲ್ಲಿ ಇರಾನ್‌ನ ಪರ್ಹಾಮ್ ಮಘಸೂಡ್ಲು ಅರ್ಧ ಪಾಯಿಂಟ್ ಅಂತರದಿಂದ ಅಗ್ರಸ್ಥಾನದಲ್ಲಿದ್ದಾರೆ.

25 ವರ್ಷ ವಯಸ್ಸಿನ ಮಘಸೂಡ್ಲು (5) ಮೊದಲ ಬೋರ್ಡ್‌ನಲ್ಲಿ ಭಾರತದ ಅರ್ಜುನ್ ಇರಿಗೇಶಿ ಜೊತೆ ಅಂಕ ಹಂಚಿಕೊಂಡರು. ಅರ್ಜುನ್ ಜೊತೆ, ವಿಶ್ವದ ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್ ಅಮೆರಿಕದ ಅಭಿಮನ್ಯು ಮಿಶ್ರಾ, ನೆದರ್ಲೆಂಡ್ಸ್‌ನ ಅನಿಶ್ ಗಿರಿ, ಭಾರತದ ನಿಹಾಲ್ ಸರಿನ್ ತಲಾ 4.5 ಅಂಕ ಗಳಿಸಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಗುಕೇಶ್ (3) ಅವರ ಹಿನ್ನಡೆ ಮುಂದುವರಿಯಿತು. ಈ ಬಾರಿ ಅವರು ಗ್ರೀಸ್‌ನ ನಿಕೋಲಸ್ ಥಿಯೋಡರ್ (4) ಅವರಿಗೆ ಮಣಿದರು. ಪ್ರಜ್ಞಾನಂದ (3.5) ಅವರು ಅಜರ್‌ಬೈಜಾನ್ ರವೂಫ್ ಮೆಮೆಡೋವ್ ಜೊತೆ ಡ್ರಾ ಮಾಡಿಕೊಂಡರು. ಕಪ್ಪು ಕಾಯಿಗಳಲ್ಲಿ ಆಡಿದ ನಿಹಾಲ್ ಸರಿನ್, ಪೋಲೆಂಡ್‌ನ ಜಿಮೊನ್ ಗುಮುಲರ್ಝ್ ಅವರನ್ನು ಸೋಲಿಸಿದರು.

ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ

ಕಾರ್ತಿಕೇಯ ಶತಕ: ಸುಸ್ಥಿತಿಯಲ್ಲಿ ಕೋಲ್ಟ್ಸ್

ಪ್ರಜಾವಾಣಿ ವಾರ್ತೆ

ಐದು ವಿಕೆಟ್ ಪಡೆದ ಅರ್ಜುನ್ ತೆಂಡೂಲ್ಕರ್

ಮೈಸೂರು: ಕೆ.ಪಿ. ಕಾರ್ತಿಕೇಯ ಶತಕದ ಬಲದಿಂದ (115; 152 ಎ, 4X15, 6X1) ಕೆಎಸ್‌ಸಿಎ ಕೋಲ್ಟ್ಸ್ ತಂಡವು ಕ್ಯಾ. ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯಲ್ಲಿ ಆಂಧ್ರ ಕ್ರಿಕೆಟ್ ಸಂಸ್ಥೆ ಎದುರಿನ ಪಂದ್ಯದಲ್ಲಿ ಮೊದಲ ದಿನದಾಟದ ಅಂತ್ಯಕ್ಕೆ 6 ವಿಕೆಟ್‌ಗೆ 373 ರನ್ ಗಳಿಸಿ ಸುಸ್ಥಿತಿಯಲ್ಲಿದೆ.

ಎಸ್‌ಜೆಸಿಇ ಕ್ರೀಡಾಂಗಣದಲ್ಲಿ ಮಂಗಳವಾರ ಟಾಸ್ ಸೋತು ಇನಿಂಗ್ಸ್ ಆರಂಭಿಸಿದ ಕೋಲ್ಟ್ಸ್‌ಗೆ ಮಧ್ಯಮ ಕ್ರಮಾಂಕದಲ್ಲಿ ಕಾರ್ತಿಕೇಯ ಉತ್ತಮ ಬ್ಯಾಟಿಂಗ್ ಮೂಲಕ ಬಲ ತುಂಬಿದರು. 5ನೇ ವಿಕೆಟ್‌ಗೆ ಸಂಜಯ್ ಅಶ್ವಿನ್ (80) ಜೊತೆಗೂಡಿ 149 ರನ್ ಕಲೆ ಹಾಕುವ ಮೂಲಕ ತಂಡವನ್ನು ಉತ್ತಮ ಮೊತ್ತದತ್ತ ಒಯ್ದರು. ಅರ್ಧ ಶತಕ ಸಿಡಿಸಿದ ಅಶ್ವಿನ್ ಅಜೇಯರಾಗಿ ಉಳಿಸಿದ್ದು, ಬುಧವಾರಕ್ಕೆ ಆಟ ಕಾಯ್ದುಕೊಂಡರು. ನಾಯಕ ಅನೀಶ್ವರ್ ಗೌತಮ್ (47) ಉಪಯುಕ್ತ ಕಾಣಿಕೆ ನೀಡಿದರು.

ಶತಕಗಳ ಸೊಬಗು: ಎಸ್‌ಡಿಎನ್ ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ಆರಂಭಗೊಂಡ ಬರೋಡ ಕ್ರಿಕೆಟ್ ಸಂಸ್ಥೆ ವಿರುದ್ಧದ ಪಂದ್ಯದಲ್ಲಿ ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆಯ ಅಂಕುಶ್ ಬೈನ್ಸ್ (109) ಹಾಗೂ ಕೆ. ಅಂಕಿತ್ (106) ಶತಕ ಸಿಡಿಸುವ ಮೂಲಕ ತಂಡವನ್ನು ಉತ್ತಮ ಮೊತ್ತದತ್ತ ಒಯ್ದರು.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಕ್ರೀಡಾಂಗಣ: ಮೊದಲ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 89 ಓವರ್‌ಗಳಲ್ಲಿ 6ಕ್ಕೆ 373 (ಕೆ.ಪಿ. ಕಾರ್ತಿಕೇಯ 115, ಸಂಜಯ್ ಅಶ್ವಿನ್ ಔಟಾಗದೇ 80, ಅನೀಶ್ವರ್ ಗೌತಮ್ 47. ಮಹೀಪ್ ಕುಮಾರ್ 41ಕ್ಕೆ 2, ಕೆಎಸ್‌ಎನ್ ರಾಜು 64ಕ್ಕೆ 2)

ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ, ಮೈಸೂರು: ಮೊದಲ ಇನಿಂಗ್ಸ್: ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 90 ಓವರ್‌ಗಳಲ್ಲಿ 3 ವಿಕೆಟ್‌ಗೆ 265 ಅಂಕುಶ್ ಬೈನ್ಸ್ 109, ಕೆ. ಅಂಕಿತ್ 106. ಭಾರ್ಗವ್ ಭಟ್ 60ಕ್ಕೆ 2)

ಚಿನ್ನಸ್ವಾಮಿ ಕ್ರೀಡಾಂಗಣ: ಮಧ್ಯಪ್ರದೇಶ ಕ್ರಿಕೆಟ್ ಸಂಸ್ಥೆ: 64.1 ಓವರ್‌ಗಳಲ್ಲಿ 162 (ರಿಷಭ್ ಚೌಹಾನ್ 48; ವಿದ್ವತ್ ಕಾವೇರಪ್ಪ 21ಕ್ಕೆ 3, ಅಭಿಲಾಷ್ ಶೆಟ್ಟಿ 18ಕ್ಕೆ 5). ಕೆಎಸ್‌ಸಿಎ ಇಲೆವೆನ್: 14.4 ಓವರ್‌ಗಳಲ್ಲಿ 2 ವಿಕೆಟ್‌ಗೆ 38 (ಆರ್ಯನ್ ಪಾಂಡೆ 15ಕ್ಕೆ).

ಬಿಜಿಎಸ್ ಕ್ರೀಡಾಂಗಣ: ವಿದರ್ಭ ಕ್ರಿಕೆಟ್ ಸಂಸ್ಥೆ: 90 ಓವರ್‌ಗಳಲ್ಲಿ 4 ವಿಕೆಟ್‌ಗೆ 320 (ಅಥರ್ವ ತೈಡೆ 170, ಅಮನ್ ಮೊಖಡೆ 60, ಶಿವಂ ದೇಶಮುಖ್ ಔಟಾಗದೇ 58; ಆದಿತ್ಯ ನಾಯರ್ 47ಕ್ಕೆ 2). ವಿರುದ್ಧ ಕೆಎಸ್‌ಸಿಎ ಅಧ್ಯಕ್ಷರ ಇಲೆವೆನ್.

ಆಲೂರು 2 ಕ್ರೀಡಾಂಗಣ: ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ: 41 ಓವರ್‌ಗಳಲ್ಲಿ 136 (ಮೆಹುಲ್ ಪಟೇಲ್ 54; ಅರ್ಜುನ್ ತೆಂಡೂಲ್ಕರ್ 36ಕ್ಕೆ 5, ಲಕ್ಮೇಶ್ ಪವಾನೆ 35ಕ್ಕೆ 2). ಗೋವಾ ಕ್ರಿಕೆಟ್ ಸಂಸ್ಥೆ: 46 ಓವರ್‌ಗಳಲ್ಲಿ 5 ವಿಕೆಟ್‌ಗೆ 158 (ಅಭಿನವ್ ತೇಜ್ರಾನಾ 77; ನಿಕಿತ್ ಧುಮಾಲ್ 22ಕ್ಕೆ 2, ಅಕ್ಷಯ್ ವೈಕರ್ 69ಕ್ಕೆ 2).

ಆಲೂರು 3 ಕ್ರೀಡಾಂಗಣ: ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್: 90 ಓವರ್‌ಗಳಲ್ಲಿ 7 ವಿಕೆಟ್‌ಗೆ 284 (ಲೋಚನ್ ಎಸ್. ಗೌಡ 59, ಕೃತಿಕ್ ಕೃಷ್ಣ ಔಟಾಗದೇ 73; ಮುಖ್ತರ್ ಹುಸೇನ್ 52ಕ್ಕೆ 2, ರಿಯಾನ್ ಪರಾಗ್ 88ಕ್ಕೆ 3) ವಿರುದ್ಧ ಅಸ್ಸಾಂ ಕ್ರಿಕೆಟ್ ಸಂಸ್ಥೆ.